CENTRAL OFFICES : BANGALORE 27.

(9)

NO-KST/CO/TR/COM/GEN/1385 /97-98 Date. 6 .6.97

General Standing Order No. 430
(Issued by the Traffic (Commercial Dept)

Sub: Free Travel facilities to the Blind persons in Express buses of KSRTC.

Ref: 1.GSO No.340 dated 15-1-1986.
2.GSO No.399 dated 8-3-1994.
3.CBR No.7400 dated 5-5-1997.

oOOOo

The KSRTC has extended free Travel facilities to the totally Blind persons on the strength of Identity-cum-free passes issued to them by the KSRTC.

The Blind persons at present are premitted to travel by
a) City Services b) Suburban Services c) Mofussil-ordinary Buses.

In view of the requests received from the blind persons to permit them to travel in mofussil Express Buses, the Corporation Board has accorded approvel to permit free travel to the blind persons in mofussil Express buses of KSRTC also.

Regarding other related matter the instructions contained in the GSO No.340/86 & GSO No.399/94 remains unchanged.

This GSO will come in to force with immediate effect.

Receipt of the GSO may please be acknowledged.

SD/- N.GOKULRAM
VICE-CHAIRMAN AND MANAGING DIRECTOR.

To,

All the Senior/Divisional Controller.
All the Divisional Traffic Officers of the Divisions/Bus Stations.
All the Depot Managers.

Copy to: All the Departmental Heads in Central Offices for information.
The Sr.Ps to the Vice Chairman & MD/Director (S&V)/Director(BTS)/
Executive Director/General Manager (Technical) for information.

GENERAL MANAGER (TRAFFIC).

For kind Attn to: Sri Amarnath.

Karnataka State Government Disabled Employees Association
Renukaradhya S
Indresh R

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 353 ಪಿಹೆಚ್‌ಪಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಗೇಟ್ ನಂ.3, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:06-08-2014
ಫ್ಯಾಕ್ಸ್: 080-22251011.

## ಸುತ್ತೋಲೆ

ವಿಷಯ: ಎಲ್ಲಾ ಇಲಾಖೆಗಳಲ್ಲಿರುವ ವಿವಿಧ ಯೋಜನೆಗಳಡಿ ಶೇ.3 ರಷ್ಟು ನಿಧಿಯನ್ನು ಮೀಸಲಿರಿಸಿ ಅಂಗವಿಕಲರಿಗಾಗಿ ಉಪಯೋಗಿಸುವ ಬಗ್ಗೆ.

ಉಲ್ಲೇಖ:1) ಅಂಗವಿಕಲರ ಅಧಿನಿಯಮ -1995 ರ ಅಧ್ಯಾಯ 4 ಎ ನಿಯಮ 28 ಎ ಪ್ರಕಾರ.
2) ಅಧಿಸೂಚನೆ ಸಂಖ್ಯೆ: ಸಿಆಸುಇ 104 ಎಸ್‌ಆರ್‌ಆರ್ 2005, ದಿನಾಂಕ:13-09-2005
3) ಅಧಿಸೂಚನೆ ಸಂಖ್ಯೆ: ಸಿಆಸುಇ 21 ಎಸ್‌ಆರ್‌ಆರ್ 2008, ದಿನಾಂಕ:03-08-2009
4) ಅಧಿಸೂಚನೆ ಸಂಖ್ಯೆ: ಸಿಆಸುಇ 179 ಎಸ್‌ಆರ್‌ಆರ್ 2012, ದಿನಾಂಕ: 07-09-2012
5) ಅಧಿಸೂಚನೆ ಸಂಖ್ಯೆ: ಸಿಆಸುಇ 179 ಎಸ್‌ಆರ್‌ಆರ್ 2012, ದಿನಾಂಕ: 09-10-2012
6) ಅಧಿಸೂಚನೆ ಸಂಖ್ಯೆ: ಸಿಆಸುಇ 196 ಎಸ್‌ಆರ್‌ಆರ್ 2013, ದಿನಾಂಕ: 07-12-2013
7) ಸುತ್ತೋಲೆ ಸಂಖ್ಯೆ:ಮಮಇ 14 ಪಿಹೆಚ್‌ಪಿ 2010, ದಿನಾಂಕ: 20-09-2010
8) ಸುತ್ತೋಲೆ ಸಂಖ್ಯೆ: ಅ:ಪ:74:ಜಿಸಸ:2011, ದಿನಾಂಕ:01-04-2011
9) ಸುತ್ತೋಲೆ ಸಂಖ್ಯೆ: ನಅಇ 93 ಪಿಎಸ್‌ಎಸ್ 2009, ದಿನಾಂಕ: 28-10-2010

*******

Karnataka State Government Disabled Employees Association
Renukaradhya S
Indresh R

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾವಹಿಸುವಿಕೆ) ಅಧಿನಿಯಮ -1995 ಅಧ್ಯಾಯ 4 (ಎ) ನಿಯಮ 28 (ಎ) ರ ಉಪ ನಿಯಮ (ii) ರಲ್ಲಿ ಎಲ್ಲಾ ರಾಜ್ಯವಲಯ/ಜಿಲ್ಲಾ ವಲಯಗಳಲ್ಲಿ ಅನುಷ್ಠಾನಗೊಳಿಸಲಾಗುವ ಎಲ್ಲಾ ಬಡತನ ನಿರ್ಮೂಲನಾ ಯೋಜನೆ/ಅಭಿವೃದ್ಧಿ ಯೋಜನೆ/ಕಲ್ಯಾಣ ಯೋಜನೆ, ವಿದ್ಯಾಭ್ಯಾಸ, ಆರೋಗ್ಯ ಹಾಗೂ ಸಂಶೋಧನಾ ಯೋಜನೆಗಳಿಗೆ ಕೇಂದ್ರ/ಬಾಹ್ಯ ನೆರವಿನ ಯೋಜನೆಗಳನ್ನು ಒಳಗೊಂಡಂತೆ ಎಲ್ಲಾ ಯೋಜನೆಗಳ ಅನುದಾನದಲ್ಲಿ ಶೇ. 3 ರಷ್ಟು ಅನುದಾನವನ್ನು ಅಂಗವಿಕಲರ ಪುನರ್ವಸತಿಗಾಗಿ ವಿನಿಯೋಗಿಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು ಕಡ್ಡಾಯವಾಗಿದೆ.

ಅದರಂತೆ ಉಲ್ಲೇಖ (2)ರಿಂದ (3) ರ ಸರ್ಕಾರದ ಅಧಿಸೂಚನೆಗಳಲ್ಲಿ ಎಲ್ಲಾ ಇಲಾಖೆಗಳಲ್ಲಿ ವೃಂದ 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇ.3 ರಷ್ಟು ಹುದ್ದೆಗಳನ್ನು ಹಾಗೂ ಉಲ್ಲೇಖ(4) ಮತ್ತು (5) ರಲ್ಲಿ ವೃಂದ 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಶೇಕಡಾ 5 ರಷ್ಟು ಹುದ್ದೆಗಳನ್ನು ವಿಕಲಚೇತನ ವ್ಯಕ್ತಿಗಳಿಗಾಗಿ ಮೀಸಲಿರಿಸಲಾಗಿದೆ. ಉಲ್ಲೇಖ (6) ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ:37434/2009 ರಲ್ಲಿ ಕರ್ನಾಟಕ ಉಚ್ಚ ನ್ಯಾಯಲಯ ನೀಡಿರುವ ತೀರ್ಪಿನಂತೆ ಅಂಗವಿಕಲರಿಗೆ ಸಾರ್ವಜನಿಕ ಕಚೇರಿಗಳಲ್ಲಿ ತಡೆರಹಿತ ವಾತಾವರಣ ನಿರ್ಮಿಸುವ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಯು ವಹಿಸತಕ್ಕದ್ದು ಹಾಗೂ ಸಂಬಂಧಪಟ್ಟ ಇಲಾಖೆಯಾದ ಅಂಗವಿಕಲ ಅಧಿನಿಯಮ ಕಚೇರಿಯು ಅನುಸರಣಾ ಪ್ರಾಧಿಕಾರವಾಗಿರತಕ್ಕದ್ದು ಎಂದು

-----2

ಹಾಗೂ ಎಲ್ಲಾ ಇಲಾಖೆಗಳಲ್ಲಿ ಅಂಗವಿಕಲರ ಅಧಿನಿಯಮ ಅನುಷ್ಠಾನಗೊಂಡ ಕಾರ್ಯಕ್ರಮಗಳ ಬಗ್ಗೆ ಆಗ್ಗಿಂದಾಗ್ಗೆ ಪರಿಶೀಲಿಸಿ ನೋಡಿಕೊಳ್ಳುವಂತೆ ಸೂಚನೆಗಳನ್ನು ನೀಡಲಾಗಿದೆ. ಮತ್ತು ಲೋಕೋಪಯೋಗಿ ಇಲಾಖೆಯು ಸರ್ಕಾರಿ ಕಚೇರಿಗಳ ಕಟ್ಟಡ ನಿರ್ಮಿಸುವ ನಕ್ಷೆಯಲ್ಲಿ ವಿಕಲಚೇತನರಿಗಾಗಿ ಇಳಿಜಾರು ವ್ಯವಸ್ಥೆ ಹಾಗೂ ವಾಹನ ನಿಲುಗಡೆಗೆ ಸೂಕ್ತ ಸ್ಥಳವನ್ನು ಕಲ್ಪಿಸುವಂತೆ ಸೂಚಿಸಲಾಗಿದೆ. ಉಲ್ಲೇಖ (7) ಮತ್ತು (8) ರಲ್ಲಿ ಕ್ರಮವಾಗಿ ನಗರಾಭಿವೃದ್ಧಿ **ಹಾಗೂ** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಸುತ್ತೋಲೆ ಹೊರಡಿಸಿ, ಸಂಬಂಧಿಸಿದ ಇಲಾಖೆಗಳು ಶೇ. 3 ರಷ್ಟು ಅನುದಾನವನ್ನು ಮೀಸಲಿರಿಸಿ ವಿಕಲಚೇತನರ ಪುನರ್ವಸತಿಗಾಗಿ ಉಪಯೋಗಿಸತಕ್ಕದೆಂದೂ ತಿಳಿಸಲಾಗಿರುತ್ತದೆ.

ಆದರೆ ಅನೇಕ ಇಲಾಖೆಗಳು ಸರ್ಕಾರದ ಅಧಿಸೂಚನೆ/ಸುತ್ತೋಲೆಗಳ ಪ್ರಕಾರ ಶೇ. 3 ರಷ್ಟು ಅನುದಾನವನ್ನು ಅಂಗವಿಕಲರ ಪುನರ್ವಸತಿಗಾಗಿ ಮೀಸಲಿರಿಸಿ ಉಪಯೋಗಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995 ರನ್ವಯ ಎಲ್ಲಾ ಇಲಾಖೆ/ನಿಗಮ/ಮಂಡಳಿಗಳು ಆಯಾ ಇಲಾಖೆಗಳ ಯೋಜನೆಗಳ ಅನುಷ್ಠಾನದ ಕ್ರಿಯಾ ಯೋಜನೆಗಳನ್ನು ರೂಪಿಸುವಾಗ ಅಂಗವಿಕಲರ ಪುನರ್ವಸತಿಗಾಗಿ ಶೇ.3 ರಷ್ಟು ಅನುದಾನ/ನಿಧಿಯನ್ನು ಕಡ್ಡಾಯವಾಗಿ ಮೀಸಲಿರಿಸಲು ಈ ಅನುದಾನ/ನಿಧಿಯನ್ನು ವಿಕಲಚೇತನರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ವೈದ್ಯಕೀಯ ಪುನರ್ವಸತಿ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಕಟ್ಟುನಿಟ್ಟಿನ ಕ್ರಮವಹಿಸಲು ಸೂಚಿಸಿದೆ.

ಆಯಾ ಇಲಾಖೆ/ನಿಗಮ/ಮಂಡಳಿಗಳು ವಾರ್ಷಿಕ ಕ್ರಿಯಾ ಯೋಜನೆಗಳನ್ನು ರೂಪಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸುವುದು.

Karnataka State Government Disabled Employees Association
Renukaradhya S
Indresh R

- <u>ಶೈಕ್ಷಣಿಕ ಪುನರ್ವಸತಿ:-</u> ಅಂಧ ವಿದ್ಯಾರ್ಥಿಗಳಿಗೆ ಬೋಧನಾ ಮತ್ತು ಕಲಿಕಾ ಸಾಮಾಗ್ರಿಗಳು / ವಸತಿ ಸೌಕರ್ಯ / ಶಾಲೆಗಳಲ್ಲಿ ಅಂಗವಿಕಲ ಸ್ನೇಹಿ ವಾತಾವರಣ ನಿರ್ಮಿಸಲು ಇತ್ಯಾದಿಗಳಿಗೆ ಧನ ಸಹಾಯ ಮತ್ತು ತೀವ್ರ ತರನಾದ ವಿಕಲಚೇತನತೆ ಮಕ್ಕಳಿಗೆ ಹಗಲು ಯೋಗ ಕ್ಷೇಮ ಕೇಂದ್ರಗಳನ್ನು ನಡೆಸುವ, ಕೌಶಲ್ಯ / ಸ್ಪರ್ಧಾತ್ಮಕ ತರಬೇತಿ ನೀಡುವ ನೊಂದಾಯಿತ ಸಂಸ್ಥೆಗಳಿಗೆ ಧನ ಸಹಾಯ, ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆಗೆ ಧನ ಸಹಾಯ.
- <u>ಸಾಮಾಜಿಕ ಪುನರ್ವಸತಿ:-</u> ವಿಕಲಚೇತನ ವ್ಯಕ್ತಿಗಳು ಇರುವ ಕುಟುಂಬಗಳಲ್ಲಿ ಅಂಗವಿಕಲ ಸ್ನೇಹಿ ಶೌಚಾಲಯ ನಿರ್ಮಿಸಲು / ವಿಕಲಚೇತನ ಸ್ವ ಸಹಾಯ ಗುಂಪುಗಳ ರಚನೆ ಮತ್ತು ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು / ವಿವಿಧ ಇಲಾಖೆಗಳ ಯೋಜನೆಗಳ ಹಾಗೂ ವಿಕಲಚೇತನರಿಗೆ ಇರುವ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು / ನಗರ ಪ್ರದೇಶಗಳಲ್ಲಿರುವ ವಿಕಲಚೇತನರಿಗೆ ಸೌಲಭ್ಯಗಳನ್ನು ಒದಗಿಸುವ ನಗರ ಪುನರ್ವಸತಿ ಕಾರ್ಯಕರ್ತರಗಳನ್ನು ಗೌರವಧನ ನೀಡಲು / ಅಂಗವಿಕಲರು ನಿವೇಶನ ಹೊಂದಿದಲ್ಲಿ ಹೊಸದಾಗಿ ಮನೆ ನಿರ್ಮಿಸಲು / ವಿಕಲಚೇತನರು ಸ್ವತಃ ಮನೆ ಮತ್ತು ನೀರಿನ ಸಂಪರ್ಕ ಹೊಂದಲು / ವಿಕಲಚೇತನರ ಸಹಾಯವಾಣಿ ಕೇಂದ್ರ ಪ್ರಾರಂಭಿಸಲು / ವಿಕಲಚೇತನ ಮಕ್ಕಳ ಹಾಗೂ ಪೋಷಕರಿಗೆ ವಿಕಲತೆಯನ್ನು ಸಣ್ಣವಯಸ್ಸಿನಲ್ಲಿ (ಹುಟ್ಟಿದ ಅಂದಿನನಿಂದಲೇ ಪತ್ತೆ ಹಚ್ಚಲು ತರಬೇತಿ ನಡೆಸಲು ಸಹಾಯ ಧನ ನೀಡುವುದು ಮತ್ತು ಜಿಲ್ಲೆಗಳಲ್ಲಿರುವ ಜಿಲ್ಲಾ ಪುನರ್ವಸತಿ ಕೇಂದ್ರಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ನೀಡುವುದು ಉದಾ:- ವಾಹನ, ವಿ.ಆರ್.ಡಬ್ಲ್ಯೂ, ಮತ್ತು ಎಂ.ಆರ್.ಡಬ್ಲ್ಯೂ ಗಳಿಗೆ ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

-----3

- <u>ಆರ್ಥಿಕ ಪುನರ್ವಸತಿ:-</u> ಸ್ವಂತ ಉದ್ಯೋಗ ನಡೆಸಲು ಹಾಗೂ ತರಬೇತಿ ನಡೆಸಲು / ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸಲು ಹಾಗೂ ಕಚ್ಚಾ ಸಾಮಾಗ್ರಿಗಳನ್ನು ಖರೀದಿಸಲು / ನಗರ ಪ್ರದೇಶಗಳಲ್ಲಿ ವ್ಯಾಪಾರ ನಡೆಸಲು ಅನುಕೂಲವಾಗುವಂತೆ ವಿವಿಧ ಯೋಜನೆಗಳಲ್ಲಿ ನಿರ್ಮಿಸಲು ಮತ್ತು ಹಂಚಲು / ಯಂತ್ರಚಾಲಿತ ತ್ರಿಚಕ್ರವಾಹನ ಖರೀದಿಸಲು ಮತ್ತು ಅಂಥ ವ್ಯಕ್ತಿಗಳಿಗೆ ಚಲನವಲನ ತರಬೇತಿ ಹಾಗೂ ಬುದ್ಧಿಮಾಂದ್ಯ ಮಕ್ಕಳು/ವ್ಯಕ್ತಿಗಳು ದೈನಂದಿನ ಚಟುವಟಿಗಳನ್ನು ಕೈಗೊಳ್ಳಲು ತರಬೇತಿ ನಡೆಸಲು ಧನ ಸಹಾಯ.

- <u>ವೈದ್ಯಕೀಯ ಪುನರ್ವಸತಿ:-</u> ಹೊಸ ಹೊಸ ತಂತ್ರಜ್ಞಾನದಿಂದ ಕೂಡಿದ ಸಾಧನ ಸಲಕರಣೆಗಳ ಖರೀದಿಸಲು / ವೈದ್ಯಕೀಯ ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳಲು ಹಾಗೂ ಔಷಧಿ ವೆಚ್ಚ ಭರಿಸಲು / ಸ್ಥಳೀಯ ಸಂಸ್ಥೆಗಳು ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಬಡರೋಗಿಗಳಿಗೆ ಯಶಸ್ವಿನಿ ಯೋಜನೆಯಲ್ಲಿ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು / ಅಂಗವಿಕಲತೆಯನ್ನು ಪ್ರಾರಂಭದಲ್ಲೇ ಗುರುತಿಸಿ ತಡೆಗಟ್ಟುವಿಕೆ ಕಾರ್ಯಕ್ರಮಗಳಿಗೆ ನಡೆಸಲು / ಸಾಧನ ಸಲಕರಣೆಗೆ ದುರಸ್ಥಿಗಾಗಿ / ಫಿಜಿಯೋಥೆರಪಿ/ ಮಾತಿನ ಥೆರಪಿಗಳಿಗಾಗಿ ಮತ್ತು ಇತರೆ ಪುನರ್ವಸತಿ ಕಾರ್ಯಕ್ರಮಗಳಿಗಾಗಿ ಅವಶ್ಯವೆಂದು ಕಂಡುಬಂದಲ್ಲಿ ಅಂತಹ ಉದ್ದೇಶಕ್ಕಾಗಿ ಧನ ಸಹಾಯ.

ಎಲ್ಲಾ ಇಲಾಖೆ/ನಿಗಮ/ಮಂಡಳಿಗಳು ಮುಖ್ಯಸ್ಥರು ಆಯಾ ವರ್ಷದ ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಂಗವಿಕಲರ ಜಿಲ್ಲಾ ಪುನರ್ವಸತಿ ಕೇಂದ್ರ ಮತ್ತು ವಿಕಲಚೇತನರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ನುರಿತ ಪ್ರತಿನಿಧಿಗಳನ್ನೊಳಗೊಂಡಂತೆ ಸಭೆಯನ್ನು ನಡೆಸಿ, ಜಿಲ್ಲೆಯ ವಿಕಲಚೇತನರ ಪುನರ್ವಸತಿಗೆ ಅಗತ್ಯಗನುಗುಣವಾಗಿ ಕ್ರಿಯಾ ಯೋಜನೆಯನ್ನು ರೂಪಿಸುವುದು ಮತ್ತು ಕ್ರಿಯಾ ಯೋಜನೆಯಂತೆ ಪ್ರತಿ ಮಾಹೆ ಪ್ರಗತಿ ವರದಿಯನ್ನು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಮತ್ತು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸುವುದು. ವಿಕಲಚೇತನರಿಗಾಗಿ ಮೀಸಲಿಟ್ಟಿರುವ ಶೇ.3 ರಷ್ಟು ಅನುದಾನ/ನಿಧಿಯನ್ನು ಆಯಾ ವರ್ಷವೇ ಉಪಯೋಗಿಸಲು ಕ್ರಮವಹಿಸತಕ್ಕದ್ದು,

ಕೆ.ಡಿ.ಪಿ ಸಭೆಗಳಲ್ಲಿ ಕಡ್ಡಾಯವಾಗಿ ಎಲ್ಲಾ ಇಲಾಖೆಯಲ್ಲಿ ಶೇ.3 ರಷ್ಟು ಅನುದಾನ ಬಳಕೆ ಬಗ್ಗೆ ಚರ್ಚಿಸುವುದು. ವಿಕಲಚೇತನರ ಅಭಿವೃದ್ಧಿ/ಪುನರ್ವಸತಿಗಾಗಿ ಅಗತ್ಯವಿರುವ ತರಬೇತಿಗಾಗಿ ಉಪಕರಣಗಳು, ಬೋಧನಾ ಕಲಿಕಾ ಉಪಕರಣಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

(ಡಾ. ಅಮಿತಾ ಪ್ರಸಾದ್)
ಪ್ರಧಾನ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಇವರಿಗೆ,

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿರಿಯ ನಾಗರೀಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಪಡೆಯಲು ಇದ್ದ ವಯಸ್ಸನ್ನು 65 ರಿಂದ 60 ಕ್ಕೆ ಇಳಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ:ಸಾರಿಇ 11 ಸಾಸಂಇ 2012,ಬೆಂಗಳೂರು,ದಿನಾಂಕ:24.12.2012.**
**ಯೂನಿಕ್ ಸಂಖ್ಯೆ:69/2012,ದಿನಾಂಕ:24.12.2012.**

ಓದಲಾಗಿದೆ :- 1) ಸರ್ಕಾರದ ಆದೇಶ ಸಂಖ್ಯೆ:ಸಾರಿಇ 45 ನಸಾಇ 2008. ದಿನಾಂಕ:08.09.2012.
2) ವ್ಯವಸ್ಥಾಪಕ ನಿರ್ದೇಶಕರು.ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ.ಬೆಂಗಳೂರು ರವರ ಪತ್ರ ಸಂಖ್ಯೆ:ಕರಾಸಾ:ಕೇಕ:ಸಂ:ಸಿ2:952:332:2012-13. ದಿ:17.4.2012.
3) ವ್ಯವಸ್ಥಾಪಕ ನಿರ್ದೇಶಕರು.ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.ಬೆಂಗಳೂರು ರವರ ಪತ್ರ ಸಂಖ್ಯೆ:ಬೆಂ.ಮ.ಸಾ.ಸಂಸ್ಥೆ:ಕೇಕ:ಸಂವ್ಯ:ಆ:689:2012-13.ದಿ:28.5.2012.
4) ವ್ಯವಸ್ಥಾಪಕ ನಿರ್ದೇಶಕರು.ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.ಹುಬ್ಬಳ್ಳಿ ರವರ ಪತ್ರ ಸಂಖ್ಯೆ:ವಾಕರಸಾ:ಕೇಕ:ಸಂ:ಹು:ಪಾಸ:1109. ದಿ:10/11.4.2012.
5) ವ್ಯವಸ್ಥಾಪಕ ನಿರ್ದೇಶಕರು.ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.ಗುಲಬರ್ಗಾ ರವರ ಪತ್ರ ಸಂಖ್ಯೆ:ಈಕರಸಾ:ಕೇಕ:ಸಂ:ಪಾಸ್:108:2011-12. ದಿ:10.4.2012.

* * * * *

Karnataka State Government Disabled Employees Association
Renukaradhya S
Indresh R

ಪ್ರಸ್ತಾವನೆ :-

ಮೇಲೆ ಓದಲಾದ (1)ರ ಆದೇಶದಲ್ಲಿ ಆಯವ್ಯಯದಲ್ಲಿ ಘೋಷಿಸಿರುವಂತೆ 65 ಹಾಗೂ ಹೆಚ್ಚು ವಯಸ್ಸಿನ ಹಿರಿಯ ನಾಗರೀಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ.ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಪ್ರಯಾಣಿಸಲು ಅವರು ಪಡೆದ ಟಿಕೇಟಿನ ದರದಲ್ಲಿ ಶೇ.25ರಷ್ಟು ರಿಯಾಯಿತಿ ನೀಡಲು ವಾಸ್ತವವಾಗಿ ಸದರಿ ಹಿರಿಯ ನಾಗರೀಕರಿಗೆ ವಿತರಿಸಲಾಗುವ ಟಿಕೇಟುಗಳ ಪ್ರಯಾಣ ಮತ್ತು ಮೌಲ್ಯದ ವಿವರಗಳನ್ನು ಪಡೆದು ಮರುಪಾವತಿ ಮಾಡುವ ಷರತ್ತಿಗೊಳಪಟ್ಟು ಜಾರಿಗೆ ಬರುವಂತೆ ಆದೇಶವನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (2) ರಿಂದ (5) ರವರೆಗಿನ ಸದರಿ ಸಾರಿಗೆ ಸಂಸ್ಥೆಗಳ ಪತ್ರದಲ್ಲಿ ಹಿರಿಯ ನಾಗರೀಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ ಪಡೆಯಲು ಇದ್ದ ವಯಸ್ಸಿನ ಮಿತಿಯನ್ನು 65 ರಿಂದ 60ಕ್ಕೆ ಇಳಸುವ ಕುರಿತು ಪರಿಗಣಿಸಿದಲ್ಲಿ ಆರ್ಥಿಕ ವೆಚ್ಚ ಹಾಲಿ ಇರುವುದಕ್ಕಿಂತ ಕನಿಷ್ಟ ಮೂರು ಪಟ್ಟು ಹೆಚ್ಚಾಗುವ ಸಂಭವವಿರುತ್ತದೆ. ಸದರಿ ಪ್ರಯಾಣಿಕರು ಆರೋಗ್ಯವಂತರಾಗಿ ಮತ್ತು ದೃಢಕಾಯರಾಗಿದ್ದು. ಸಾಕಷ್ಟು ಬಸ್ ಪ್ರಯಾಣ ಮಾಡಲು ಶಕ್ತರಾಗಿರುವುದರಿಂದ 65 ರಿಂದ 60 ವರ್ಷಕ್ಕೆ ಮಿತಿಯನ್ನು ಇಳಿಸಿದಲ್ಲಿ ಹಾಲಿ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆಯು ಮೂರುಪಟ್ಟು ಆಗಬಹುದು. ಸದರಿ ಪ್ರಯಾಣದ ವೆಚ್ಚವು ಸಂಸ್ಥೆಗಳಿಗೆ ಸೇರಿ ಸದ್ಯ ಸರಾಸರಿ ವರ್ಷಕ್ಕೆ 2.7 ಕೋಟಿ ಜನ ಈ ಸೌಲಭ್ಯ ಪಡೆಯುತ್ತಿದ್ದು. ವಯಸ್ಸಿನ ಮಿತಿ ಇಳಿಸಿದರೆ ಈ ಸೌಲಭ್ಯ ಪಡೆಯುವವರ ಸಂಖ್ಯೆ 6 ಕೋಟಿಗೆ ತಲುಪುವುದಾಗಿ ಹಾಗೂ ವೆಚ್ಚ ರೂ.60 ರಿಂದ 65 ಕೋಟಿಗೆ ತಲುಪುವುದಾಗಿ ಅಂದಾಜಿಸಲಾಗಿದ್ದು. ಈ ವೆಚ್ಚವನ್ನು ಸರ್ಕಾರ ಪೂರ್ಣ ಪ್ರಮಾಣದಲ್ಲಿ ಸಾರಿಗೆ ಸಂಸ್ಥೆಗಳಿಗೆ ಮರುಪಾವತಿ ಮಾಡುವುದಾದಲ್ಲಿ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಸದರಿ ಸಂಸ್ಥೆಯವರು ಪ್ರಸ್ತಾಪಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ. ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

The Maintenance and Welfare of Parents and Senior Citizens Act 2007ರನ್ವಯ ಹಿರಿಯ ನಾಗರಿಕರ ಬಸ್ ಪಾಸ್ ಪಡೆಯಲು ನಿಗಧಿಗೊಳಿಸಿರುವ 65 ವರ್ಷ ವಯೋಮಿತಿಯನ್ನು ಮಾರ್ಪಡಿಸಿ, 60 ವರ್ಷಕ್ಕೆ ಇಳಿಸಿ, ಇದಕ್ಕೆ ತಗಲುವ ವೆಚ್ಚದ ಶೇ.75ರಷ್ಟನ್ನು ಹಿರಿಯ ನಾಗರೀಕ ಪ್ರಯಾಣಿಕರಿಂದ ಭರಿಸಲು, ಉಳಿದ ಶೇ.25ರಲ್ಲಿ ಶೇ.50ರಷ್ಟು, ಅಂದರೆ ಶೇ.12.5ರಷ್ಟನ್ನು ಸರ್ಕಾರದಿಂದಲೂ, ಶೇ.12.5ರಷ್ಟನ್ನು ರಾಜ್ಯ ಸಾರಿಗೆ ಸಂಸ್ಥೆಗಳು ಭರಿಸುವ ಷರತ್ತಿಗೊಳಪಟ್ಟು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 1065 ವೆಚ್ಚ-12/2012, ದಿನಾಂಕ:22.12.2012ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಬೀರೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಾರಿಗೆ ಇಲಾಖೆ.
ದೂ:22032292

Karnataka State Government Disabled Employees Association
Renukaradhya S
Indresh R

ಗೆ:-

1) ಮಹಾಲೇಖಪಾಲರು,ಕರ್ನಾಟಕ,ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ,ಆರ್ಥಿಕ ಇಲಾಖೆ,ವಿಧಾನ ಸೌದ,ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು,ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು,ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.
6) ವ್ಯವಸ್ಥಾಪಕ ನಿರ್ದೇಶಕರು,ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲಬರ್ಗಾ.
7) ಆಯುಕ್ತರು,ಸಾರಿಗೆ ಮತ್ತು ರಸ್ತೆ ಸುರಕ್ಷತೆ,ಬೆಂಗಳೂರು.
8) ಜಂಟಿ ನಿರ್ದೇಶಕರು,ರಾಜ್ಯ ಹುಜೂರು ಖಜಾನೆ ಇಲಾಖೆ,ಬೆಂಗಳೂರು.
9) ಮಾನ್ಯ ಉಪಮುಖ್ಯಮಂತ್ರಿಯವರು (ಗೃಹ ಮತ್ತು ಸಾರಿಗೆ) ರವರ ಆಪ್ತ ಕಾರ್ಯದರ್ಶಿ.
10) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,ಸಾರಿಗೆ ಇಲಾಖೆ.
11) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು,ಸಾರಿಗೆ ಇಲಾಖೆ.
12) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಮಮಇ 33 ಪಿಹೆಚ್‌ಪಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16-3-2015

## ಸೇರ್ಪಡೆ

ಸರ್ಕಾರದ ಆದೇಶ ಸಂಖ್ಯೆ: ಮಮಇ 109 ಪಿಹೆಚ್‌ಪಿ 2010, ದಿನಾಂಕ: 14.12.2010 ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಮಮಇ 109 ಪಿಹೆಚ್‌ಪಿ 2010, ದಿನಾಂಕ: 29.12.2010ರ ಯೋಜನೆಯ ರೂಪುರೇಷೆಗಳಲ್ಲಿ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನ ಯೋಜನೆಯ ಉದ್ದೇಶದ ಕ್ರಸಂ.11ರ ನಂತರ ಈ ಕೆಳಕಂಡಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

"12. ಬುದ್ಧಿಮಾಂದ್ಯ, ಆಟಿಸಂ, ಮೆದುಳಿನ ಪಾರ್ಶ್ವವಾಯು ಹಾಗೂ ಬಹುವಿಧ ಅಂಗವಿಕಲತೆ ಹೊಂದಿರುವ ಮಕ್ಕಳ ವಿಶೇಷ ಶಾಲೆಗಳಲ್ಲಿ 6 ರಿಂದ 18 ರವರೆಗಿನ ಮಕ್ಕಳು ಹಾಗೂ 18 ರಿಂದ 25 ವಯೋಮಾನದ ವ್ಯಕ್ತಿಗಳು ವ್ಯಾಸಂಗ/ತರಬೇತಿ ಪಡೆಯಲು ಅರ್ಹರಿರುತ್ತಾರೆ."

Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

17/03/15

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ &ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
2) ಪ್ರಧಾನ ಮಹಾಲೇಖಪಾಲರು ( ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3) ಪ್ರಧಾನ ಮಹಾಲೇಖಪಾಲರು ( ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು..
5) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
6) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಶಾಖಾಧಿಕಾರಿ, ಸ್ವೀಮರ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
11) ಶಾಖಾ ರಕ್ಷಾ ಕಡತ/ಒ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

SL.22

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಅಂಗವಿಕಲರು, ಗುರುತಿನ ಚೀಟಿಯ ಮೇಲೆ ಪಡೆಯಬಹುದಾದ ಪ್ರಯೋಜನಗಳ ಕುರಿತು.

ಓದಲಾಗಿದೆ:-[೧]ಸರ್ಕಾರದ ಆದೇಶ ಸಂಖ್ಯೆ/ಮಮಾಅ/೩೩/ಪಿಹೆಚ್‌ಪಿ/೨೦೦೨.
ದಿ.೦೨-೦೩-೦೨.
[೨]ಸರ್ಕಾರದ ಆದೇಶಸಂಖ್ಯೆ.ಮಮಾಇ/೧೦೭/ಪಿಹೆಚ್‌ಪಿ/೨೦೦೩. ದಿ/೧೧-೦೭-೨೦೦೩.
[೩]ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ಪತ್ರಸಂಖ್ಯೆ/ಸಿಅಕಇ/ಗು.ಚೀ/ವಾ.೨೦೦೩-೦೪ ೧೬೪೫೦/ದಿನಾಂಕ.೧೬-೦೩-೨೦೦೪.

======

ಪ್ರಸ್ತಾವನೆ:- ಮೇಲೆ ಕ್ರಮಸಂಖ್ಯೆ[೧]ರಲ್ಲಿ ... ನೀಡಲು ಮಾರ್ಗದರ್ಶನ ಹಾಗೂ ವಿತರಿಸುವ ವಿಧಾನವನ್ನು ತಿಳಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ತಜ್ಞ ಸರ್ಕಾರಿ ವೈದ್ಯಾಧಿಕಾರಿಗಳು ಖಾಸಗಿ ವೈದ್ಯಾಧಿಕಾರಿಗಳೊನ್ನೊಳಗೊಂಡ ಆರೋಗ್ಯ ತಪಾಸಣಾ ಶಿಬಿರವನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಏರ್ಪಡಿಸಿ ,ಈ ಶಿಬಿರದಲ್ಲಿ ತಜ್ಞ ವೈದ್ಯಾಧಿಕಾರಿಗಳು ಅಂಗವಿಕಲತೆಯನ್ನು ದೃಢೀಕರಸಿ ಪ್ರಮಾಣಪತ್ರ ನೀಡತಕ್ಕದ್ದೆಂದು ಸೂಚಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ[೨]ರಲ್ಲಿ ಓದಲಾದ ಆದೇಶದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವಿವಿಧ ಬಗೆಯ ಅಂಗವಿಕಲತೆಗಳನ್ನು ಗುರುತಿಸಿ ಅಂಗವಿಕಲ ಪ್ರಮಾಣ ಪತ್ರ ನೀಡಲು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚಿಸಲಾಗಿದೆ.

ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ[೩]ರಲ್ಲಿ ಓದಲಾದ ಪತ್ರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಂಗವಿಕಲರಿಗೆ ಗುರುತಿನ ಚೀಟಿ ಇದ್ದರೂ ಸಹ ಸರ್ಕಾರದ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರಿಂದ ಸರ್ಟಿಫಿಕೇಟ್ ಕೇಳುತ್ತಿದ್ದು, ಇದರಿಂದ ಅಂಗವಿಕಲರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿ, ಅಂಗವಿಕಲರಿಗೆ ನೀಡಲಾದ ಗುರುತಿನ ಚೀಟಿಯ ಮೇಲೆ ಅವರು ಸರ್ಕಾರದಿಂದ ಯಾವ ಯಾವ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ ಎಂಬುದನ್ನು ನಮೂದಿಸಲು ಸರ್ಕಾರದ ಮಂಜೂರಾತಿ ಕೇಳಿದ್ದಾರೆ, ಅಲ್ಲದೇ ಈಗಾಗಲೇ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಗಳನ್ನು ರಚಿಸಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರ ಹುದ್ದೆಗಳನ್ನು ನಮೂದಿಸಿ ಕನಿಷ್ಟ ಇಬ್ಬರು ಸದಸ್ಯರು ಸಹಿ ಮಾಡಲು ಸೂಚಿಸಿ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಪರಿಶೀಲಿಸಿ ಈ ಕೆಳಗಿನ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶಸಂಖ್ಯೆ:ಮಮಾಇ:೧೮೪:ಪಿಹೆಚ್‌ಪಿ:೨೦೦೪:ಬೆಂಗಳೂರು:**
**ದಿನಾಂಕ:28-೦೬-೨೦೦೪.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಅಂಗವಿಕಲರಿಗೆ ನೀಡಲಾಗುತ್ತಿರುವ ಗುರುತಿನ ಚೀಟಿಯಲ್ಲಿ ಈ ಕೆಳಗಿನ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರು ಅರ್ಹರಿರುತ್ತಾರೆಂದು ನಮೂದಿಸಲು ಸರ್ಕಾರದ ಅನುಮತಿ ನೀಡಿದೆ.

[೧]ಉಚಿತ/ರಿಯಾಯಿತಿ ಬಸ್ ಪಾಸ್ ಸೌಲಭ್ಯ ಪಡೆಯಲು.
[೨]ರೈಲ್ವೆ ರಿಯಾಯಿತಿ ಪಡೆಯಲು.
[೩]ಏರೋಪ್ಲೇನ್‌ನಲ್ಲಿ ಪ್ರಯಾಣಿಸಲು ರಿಯಾಯಿತಿ ಪಡೆಯಲು.
[೪]ಆದಾಯ ತೆರಿಗೆ ಪ್ರಯೋಜನ ಪಡೆಯಲು.
[೫]ಸರ್ಕಾರದ ವಿವಿಧ ಯೋಜನೆಗಳಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕಾದ

೨/-



Karnataka State Government Disabled Employees Association
Renukaradhya S
Indresh R

ಸಂದರ್ಭಗಳಲ್ಲಿ ಗುರುತಿನ ಚೀಟಿಯನ್ನು ತೋರಿಸಿ/ನಕಲನ್ನು ನೀಡಿ ಪ್ರಯೋಜನ ಪಡೆಯಬಹುದು.

[೬]ರಾಜೀವ್‌ಗಾಂಧಿ,ಸ್ವರ್ಣರೋಜ್ಗಾರ್ ಯೋಜನೆ ಮುಂತಾದ ನಿವೇಶನ ಮತ್ತು ಮನೆಗಳನ್ನು ಪಡೆಯಲು.

ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚನೆ ಮಾಡಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರ ಹುದ್ದೆಗಳನ್ನು ನಮೂದಿಸಿ ಕನಿಷ್ಟ ಇಬ್ಬರು ಸದಸ್ಯರು ಸಹಿ ಮಾಡಲು ಹಾಗೂ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಗುರುತಿನ ಚೀಟಿಯನ್ನು ಮುದ್ರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

[ಆರ್.ಎಂ.ಚಂದ್ರಮ್ಮ],

ಸರ್ಕಾರದ ಅಧೀನ ಕಾರ್ಯದರ್ಶಿಗಳು,

ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,

ಇವರಿಗೆ:

ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ,ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕಳುಹಿಸಿದೆ.

ಪ್ರತಿಯನ್ನು:-

[೧]ಮಹಾಲೇಖಪಾಲರು,ಕರ್ನಾಟಕ ಬೆಂಗಳೂರು,

[೨]ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

[೩]ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಸಾರಿಗೆ ಭವನ,ಬೆಂಗಳೂರು.

[೩]ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

[೪]ಆಯುಕ್ತರು ಅಂಗವಿಕಲರ ಅಧಿನಿಯಮ ಬೆಂಗಳೂರು,

[೪]ಆಯುಕ್ತರು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆನಂದರಾವ್ ವೃತ್ತ, ಬೆಂ

[೫]ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು.

[೬]ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ,

[೭]ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

[೮]ಎಲ್ಲಾ ಜಿಲ್ಲಾಧಿಕಾರಿಗಳು

[೯]ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

೧೦]ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಿಂದುಳಿದ ಅಭಿವೃದ್ಧಿ ನಿಗಮ ಬೆಂಗಳೂರು [ಕೆ.ಬಿ.ಸಿ.ಡಿಸಿ]

೧೧]ನಿರ್ದೇಶಕರು,ರಾಜ್ಯ ಹುಜೂರ್ ಖಜಾನೆ ಬೆಂಗಳೂರು.

೧೨]ಎಲ್ಲಾ ಜಿಲ್ಲಾ ಸರ್ಜನಗಳು

೧೩]ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,

೧೪]ಎಲ್ಲಾ ಉಪ ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,ಬೆಂಗಳೂರು.

೧೫]ಎಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು,

ಪ್ರತಿ:-

[೧]ಪ್ರಧಾನ ಕಾರ್ಯದರ್ಶಿಗಳು;ಉಪಕಾರ್ಯದರ್ಶಿಗಳು;ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತಶಾಖೆ.

[೨]ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ''ಅಂಧರಿಗಾಗಿ ಶಬ್ದಗ್ರಂಥಾಲಯ'' ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಸಕಇ 266 ಪಿಹೆಚ್‌ಪಿ 93, ದಿನಾಂಕ: 23-3-1995.

2) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ: ಯೋಜನೆ:ಸಾ:ಲೈ:95-96:226 ದಿನಾಂಕ: 19-4-96.

### ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ (1)ರಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಯ ಅಂಧವಿದ್ಯಾರ್ಥಿಗಳ ಶೈಕ್ಷಣಿಕ ಉಪಯೋಗಕ್ಕಾಗಿ ಶಬ್ದಗ್ರಂಥಾಲಯವನ್ನು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಯೋಜನೆಗೆ ಮಂಜೂರಾತಿ ನೀಡುವಾಗ ಸದರಿ ಗ್ರಂಥಾಲಯಕ್ಕೆ ಈ ಕೆಳಕಂಡ ಕೆಲವು ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡಲಾಗಿದೆ.

1. ಗ್ರೂಪ್ 'ಡಿ' ಶ್ರೇಣಿಯ ಗ್ರಂಥಪಾಲಕ - ಒಂದು ಹುದ್ದೆ
2. ರಿಕಾರ್ಡಿಸ್ಟ್ - ಒಂದು ಹುದ್ದೆ
3. ರೀಡರ್ - ಒಂದು ಹುದ್ದೆ
4. ಅರೆಕಾಲಿಕ ರೀಡರ್ (ಸಂಚಿತ ವೇತನ ಒಪ್ಪಂದದ ಮೇರೆಗೆ) - ಎರಡು ಹುದ್ದೆ
5. ಅಟೆಂಡರ್‌ಕಂ ಡಬ್ಬಿಂಗ್ ಅಸಿಸ್ಟೆಂಟ್ - ಒಂದು ಹುದ್ದೆ.

2. ಮೇಲಿನಂತೆ ಹುದ್ದೆಗಳನ್ನು ಭರಿಸಲು ಇಲಾಖೆಯು ಪ್ರಯತ್ನಿಸಿದ್ದು ಎರವಲು ಸೇವೆ ಆಧಾರದ ಮೇಲೆ ಈ ಹುದ್ದೆಗಳನ್ನು ಭರಿಸುವಲ್ಲಿ ಇಲಾಖೆಯ ಪ್ರಯತ್ನ ಫಲಕಾರಿಯಾಗಿಲ್ಲವೆಂದು ತಿಳಿಸಿ ಒಂದು ವೇಳೆ ಈ ಸಿಬ್ಬಂದಿ ವರ್ಗವನ್ನು ಭರ್ತಿಮಾಡಿದ್ದಲ್ಲಿ, ಯೋಜನೆಯಲ್ಲಿ ಪ್ರಯೋಜನಕ್ಕಿಂತ ಸಿಬ್ಬಂದಿ ವೆಚ್ಚವೇ ಅಧಿಕವಾಗಿ ಸರ್ಕಾರಕ್ಕೆ ಹೊರೆಯಾಗುವುದರಿಂದ ಸದರಿ ಯೋಜನೆಯನ್ನು ಪರಿಷ್ಕರಿಸಿ ಸಿಬ್ಬಂದಿ ವೆಚ್ಚವನ್ನು ಕನಿಷ್ಟ ಮಟ್ಟಕ್ಕೆ ಇಳಿಸಿ ಅದರಿಂದ ಉಂಟಾಗುವ ಹಣವನ್ನು ಗ್ರಂಥಾಲಯದ ಉಪಯೋಗಕ್ಕಾಗಿ ಬಳಸುವ ಉದ್ದೇಶದಿಂದ ಸದರಿ ಪ್ರಸ್ತಾವನೆಯನ್ನು ನಿರ್ದೇಶಕರು ಓದಲಾಗಿದೆ. ಪತ್ರ (2) ರಲ್ಲಿ ಪರಿಷ್ಕರಿಸಿ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಿದ್ದಾರೆ. ಪರಿಷ್ಕರಿಸಿದ ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

| ಕ್ರಮ.ಸಂಖ್ಯೆ | ಐಟಂಗಳು | ವಾರ್ಷಿಕವಾಗಿ ತಗಲುವ ವೆಚ್ಚ |
|---|---|---|
| 1. | ಶಬ್ದ ಗ್ರಂಥಾಲಯದ ನಿರ್ವಹಣೆಗಾಗಿ ಒಂದು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ ಗ್ರಂಥಪಾಲಕರು | 31,932-00 |
| 2. | ಒಂದು ನಾಲ್ಕನೇ ದರ್ಜೆಯ ನೌಕರರ ಹುದ್ದೆ | 26,160-00 |
| 3. | ಪೀಠೋಪಕರಣಗಳು | 10,000-00 |
| 4. | ಖಾಲಿ ಆಡಿಯೋ ಕ್ಯಾಸೆಟ್ಟುಗಳ ಖರೀದಿ | 50,000-00 |
| 5. | ಖಾಸಗಿಯಾಗಿ ಆಡಿಯೋ ಕ್ಯಾಸೆಟ್ಟುಗಳ ಧ್ವನಿ ಮುದ್ರಣ | 20,000-00 |
| 6. | ಟೇಪ್ ರೆಕಾರ್ಡ್‌ಗಳ ಖರೀದಿ | 1,20,000-00 |
| 7. | ಪಾಠ ಪ್ರವಚನಗಳನ್ನು ಧ್ವನಿಮುದ್ರಿಸಲು ಮಾಸ್ಟರ್ ಆಡಿಯೋ ಕ್ಯಾಸೆಟ್‌ಗಳನ್ನು ತಯಾರಿಸಲು ರೀಡರ್‌ಗಳಿಗೆ ನೀಡಬೇಕಾದ ಗೌರವಧನ ಪ್ರತಿ ಗಂಟೆಗೆ ರೂ. 50-00ರಂತೆ. | 10,000-00 |
| 8. | ಪಾಠ ಪ್ರವಚನಗಳನ್ನು ಸಿದ್ಧಪಡಿಸಲು ಪರಿಣಿತ ಶಿಕ್ಷಕರಿಗೆ ಗೌರವಧನ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನಂತೆ. ಪರಿಣಿತ ಶಿಕ್ಷಕರಿಗೆ ವಿಷಯದ ಆಧಾರಿತವಾಗಿ ಗೌರವಧನವನ್ನು ನೀಡಲಾಗುವುದು. | 20,000-00 |
| 9. | ಇತರೆ ಅನಿರೀಕ್ಷಿತ ವೆಚ್ಚಗಳು | 11,900-00 |
| | ಒಟ್ಟು | 2,79,992-00 |

Karnataka State Government Disabled Employees Association
Kemparadhya S
Indresh R

**ಸರ್ಕಾರಿ ಆದೇಶ ಸಂಖ್ಯೆ: ಮಮಅ 221 ಪಿಹೆಚ್‌ಪಿ 96 ಬೆಂಗಳೂರು, ದಿನಾಂಕ: 3ನೇ ಸೆಪ್ಟೆಂಬರ್ 96**

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದೆ. ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿ ಜಾರಿಯಲ್ಲಿರುವ ''ಅಂಧರಿಗಾಗಿ ಶಬ್ದ ಗ್ರಂಥಾಲಯ'' ಯೋಜನೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಹಾಗೂ ಮುಂದೆ ನಮೂದಿಸಿದ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ಕ್ರಮ.ಸಂಖ್ಯೆ | ಐಟಂಗಳು | ವಾರ್ಷಿಕವಾಗಿ ತಗಲುವ ವೆಚ್ಚ |
|---|---|---|
| 1. | ಶಬ್ದ ಗ್ರಂಥಾಲಯದ ನಿರ್ವಹಣೆಗಾಗಿ ಒಂದು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ ಗ್ರಂಥಪಾಲಕರು | 31,932-00 |
| 2. | ಒಂದು ನಾಲ್ಕನೇ ದರ್ಜೆಯ ನೌಕರರ ಹುದ್ದೆ | 26,160-00 |
| 3. | ಪೀಠೋಪಕರಣಗಳು | 10,000-00 |
| 4. | ಖಾಲಿ ಆಡಿಯೋ ಕ್ಯಾಸೆಟ್ಟುಗಳ ಖರೀದಿ | 50,000-00 |
| 5. | ಖಾಸಗಿಯಾಗಿ ಆಡಿಯೋ ಕ್ಯಾಸೆಟ್ಟುಗಳ ಧ್ವನಿ ಮುದ್ರಣ | 20,000-00 |
| 6. | ಟೇಪ್‌ರೆಕಾರ್ಡ್‌ಗಳ ಖರೀದಿ | 1,20,000-00 |
| 7. | ಪಾಠ ಪ್ರವಚನಗಳನ್ನು ಧ್ವನಿಮುದ್ರಿಸಲು ಮಾಸ್ಟರ್ ಆಡಿಯೋ ಕ್ಯಾಸೆಟ್‌ಗಳನ್ನು ತಯಾರಿಸಲು ರೀಡರ್‌ಗಳಿಗೆ ನೀಡಬೇಕಾದ ಗೌರವಧನ ಪ್ರತಿಗಂಟೆಗೆ ರೂ. 50-00ರಂತೆ. | 10,000-00 |
| 8. | ಪಾಠ ಪ್ರವಚನಗಳನ್ನು ಸಿದ್ಧಪಡಿಸಲು ಪರಿಣಿತ ಶಿಕ್ಷಕರಿಗೆ ಗೌರವಧನ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನಂತೆ ಪರಿಣಿತ ಶಿಕ್ಷಕರಿಗೆ ವಿಷಯದ ಆಧಾರಿತವಾಗಿ ಗೌರವ ಧನವನ್ನು ನೀಡಲಾಗುವುದು. | 20,000-00 |
| 9. | ಇತರೆ ಅನಿರೀಕ್ಷಿತ ವೆಚ್ಚಗಳು | 11,900-00 |
| | ಒಟ್ಟು | 2,79,992-00 |

(ಒಟ್ಟು ಎರಡು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಒಂಬೈನೂರ ತೊಂಬತ್ತೆರಡು ರೂಪಾಯಿಗಳು ಮಾತ್ರ)

ಷರತ್ತುಗಳು:

1. ಟೇಪ್ ರೆಕಾರ್ಡ್‌ಗಳನ್ನು ಅಂಧ ವಿದ್ಯಾರ್ಥಿಗಳಿಗಾಗಿ ಖರೀದಿಸಿದ್ದು, ಅಂಧ ವಿದ್ಯಾರ್ಥಿಗಳು ತಮ್ಮ ಶಿಕ್ಷಣಾವಧಿ ಪೂರೈಸಿದ ನಂತರ ಅವುಗಳನ್ನು ಸಂಸ್ಥೆಯ ಪ್ರಾಂಶುಪಾಲರಿಗೆ ಹಿಂದಿರುಗಿಸತಕ್ಕದ್ದು.
2. ಪ್ರತಿ ಟೇಪ್ ರೆಕಾರ್ಡ್‌ನ ಬೆಲೆ ರೂ. 300-00ರಿಂದ ರೂ. 400-00 ಮಿತಿಯೊಳಗಿರತಕ್ಕದ್ದು.
3. ಟೇಪ್ ರೆಕಾರ್ಡ್‌ಗಳನ್ನು ಕೊಂಡುಕೊಂಡ ಹಾಗೂ ವಿತರಿಸಿದ ಬಗ್ಗೆ ನಿರ್ದೇಶಕರು ಲೆಕ್ಕವನ್ನು ಇಡತಕ್ಕದ್ದು.

ಈ ಪರಿಷ್ಕರಿಸಿದ ಯೋಜನೆಗೆ ತಗಲುವ ವೆಚ್ಚ ರೂ. 2,79,992-00 (ರೂಪಾಯಿ ಎರಡು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಒಂಬೈನೂರ ತೊಂಬತ್ತೆರಡು ರೂಪಾಯಿಗಳು)ಗಳನ್ನು 1996-97ನೇ ಸಾಲಿನಲ್ಲಿ ''ಲೆಕ್ಕ ಶೀರ್ಷಿಕೆ 2235-02-101-0-28 (ಯೋಜನೆ)'' ಅಂಧರಿಗೆ ಶಬ್ದಗ್ರಂಥಾಲಯದ ಯೋಜನೆಯಡಿಯಲ್ಲಿ ಭರಿಸತಕ್ಕದ್ದು. ಈ ಆದೇಶವನ್ನು ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 91 ಪಿಟಿಪಿ 96 ದಿನಾಂಕ: 23-5-96 ಎಫ್‌ಡಿ 802 ಇ ಎಕ್ಸ್‌ಪಿ-3:96 ದಿನಾಂಕ: 23-8-96 (ಅನುಕ್ರಮವಾಗಿ) ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಗೀತಾ ರಮೇಶ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಅಂಧರ ಶಾಲೆಗಳಲ್ಲಿ ಅಂಧರೇ ನಿರ್ವಹಿಸಲ್ಪಡಬಹುದಾದ ಹುದ್ದೆಗಳಿಗೆ ಅಂಧರನ್ನೇ ನೇಮಕ ಮಾಡಿಕೊಳ್ಳಲು ಆದೇಶ.

### ಪ್ರಸ್ತಾವನೆ:

ಕರ್ನಾಟಕ ಅಂಧರ ಒಕ್ಕೂಟದವರು ಬಹಳ ದಿನಗಳಿಂದಲೂ ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿನ ಸರ್ಕಾರೀ ಶಾಲೆಗಳಿಗೆ ಅಂಧರನ್ನೇ ಭರ್ತಿ ಮಾಡಲು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಈ ಬಗ್ಗೆ ಅನೇಕ ಸಾರಿ ಸಂಘದ ಪದಾಧಿಕಾರಿಗಳ ಜೊತೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿದೆ. ಅಂಗವಿಕಲರ ಕಲ್ಯಾಣ ಇಲಾಖೆಗೆ ಇನ್ನೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಲ್ಲವಾದ್ದರಿಂದ ಈ ಸಂಘದ ಬೇಡಿಕೆಯನ್ನು ಜರೂರಾಗಿ ಇತ್ಯರ್ಥವಾಗಲು ಆದೇಶವನ್ನು ಹೊರಡಿಸಲು ತೀರ್ಮಾನಿಸಲಾಯಿತು.

### ಸರ್ಕಾರಿ ಆದೇಶ ಸಂಖ್ಯೆ: ಸಕಇ 79 ಪಿಹೆಚ್‌ಪಿ 92 ಬೆಂಗಳೂರು ದಿನಾಂಕ: 25-1-1994

ಸದರಿ ಬೇಡಿಕೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಅಂಗವಿಕಲರ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಹೊರಡಿಸುವುದನ್ನು ಕಾಯ್ದಿರಿಸಿ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ಅಂಧ ಮಕ್ಕಳ ಸರ್ಕಾರೀ ಶಾಲೆಗಳಲ್ಲಿ ಅಂಧರಿಂದಲೇ ನಿರ್ವಹಿಸಲ್ಪಡಬಹುದಾದ ಹುದ್ದೆಗಳಿಗೆ ಅಂಧರನ್ನೇ ನೇಮಕ ಮಾಡಿಕೊಳ್ಳಲು ಈ ಮೂಲಕ ಆದೇಶ ನೀಡಲಾಗಿದೆ. ಹಾಗೂ ಹಾಲೀ ಕಾರ್ಯ ನಿರ್ವಹಿಸುತ್ತಿರುವವರನ್ನು ಅವರವರ ಮಾತೃ ಇಲಾಖೆಗೆ ಹಿಂದಿರುಗಿಸತಕ್ಕದ್ದು. ಈ ಬಗ್ಗೆ ಮುಂಬರುವ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು, ಇವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಹ ಆದೇಶಿಸಲಾಗಿದೆ.

ಸಂಬಂಧಪಟ್ಟ ನೇಮಕಾತಿ ನಿಯಮಗಳಿಗೆ ಮೇಲಿನ ಆದೇಶದಂತೆ ಸೂಕ್ತ ತಿದ್ದುಪಡಿಯನ್ನು ತರಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ
ಎಸ್.ಕೆ. ಶ್ರೀಕಂಠಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯನ್ನು "ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ" ಎಂದು ಮರುನಾಮಕರಣ ಮಾಡುವ ಬಗ್ಗೆ.

**ಓದಲಾಗಿದೆ:** ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ/2010-11/2106, ದಿನಾಂಕ:11-01-2011

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು 1988ರಿಂದ ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದಿದ್ದು, ಅಂಗವಿಕಲರನ್ನು ಸಬಲೀಕರಣಗೊಳಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಕೊಂಡೊಯ್ಯುವ ಘನ ಉದ್ದೇಶವನ್ನು ಹೊಂದಿದ್ದು, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ, ಅವರಲ್ಲಿನ ಕೀಳರಿಮೆಯನ್ನು ತೊಡೆದು ಅವರಿಗೆ ಅವಕಾಶ ನೀಡಿ ಆರ್ಥಿಕ, ಸಾಮಾಜಿಕ, ದೈಹಿಕ, ಮಾನಸಿಕವಾಗಿ ಸಬಲೀಕರಣಗೊಳಿಸಲಾಗುತ್ತಿದೆ. U.N.Convention ನಲ್ಲಿ ಅಂಗವಿಕಲರು ಎಂಬ ಪದದ ಬದಲಿಗೆ ವಿಕಲಚೇತನರೆಂದು ಬಳಸಲಾಗಿದ್ದು, ಇದನ್ನು ಎಲ್ಲರೂ ಅನುಸರಿಸಬೇಕಾಗುತ್ತದೆ. ಅಲ್ಲದೆ ಸಂಘ ಸಂಸ್ಥೆಗಳೂ ಸಹ ಅಂಗವಿಕಲ ಪದವನ್ನು ತೊಡೆದುಹಾಕಿ ವಿಕಲಚೇತನರೆಂದು ಬಳಸಲು ಬೇಡಿಕೆಗಳು ಸ್ವೀಕೃತವಾಗುತ್ತಿದ್ದು, U.N.Convention ಅನುಸಾರ ವಿಕಲಚೇತನರ ಸಬಲೀಕರಣ ಇಲಾಖೆ ಎಂದು ಮರುನಾಮಕರಣ ಮಾಡಿದಲ್ಲಿ ವಿಕಲಚೇತನರಿಗೆ ಸ್ಫೂರ್ತಿ ನೀಡಿದಂತಾಗುವುದಲ್ಲದೇ ನ್ಯಾಯಸಮ್ಮತವೂ ಆಗಿರುತ್ತದೆಂದು ತಿಳಿಸಿರುತ್ತಾರೆ. ಈಗಾಗಲೇ ಇತರ ರಾಜ್ಯಗಳಲ್ಲಿ ವಿಕಲಚೇತನರ ಇಲಾಖೆಯೆಂದು ಮರುನಾಮಕರಣ ಮಾಡಿದ್ದು, ವಿಶ್ವ ಅಂಗವಿಕಲರ ದಿನಾಚರಣೆ-2010ರ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು U.N.Convention ಅನುಸಾರ ಇಲಾಖೆಯನ್ನು ವಿಕಲಚೇತನರ ಸಬಲೀಕರಣ ಇಲಾಖೆ ಎಂಬುದಾಗಿ ಮರುನಾಮಕರಣ ಮಾಡುವ ಬಗ್ಗೆ ಸಕಾರಾತ್ಮಕವಾಗಿ ಸಮ್ಮತಿಸಿ ಘೋಷಿಸಿದ್ದು, ಇಲಾಖೆಯ ಹೆಸರನ್ನು "ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ" ಎಂದು ಮರುನಾಮಕರಣ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 41 ಪಿಎಚ್‌ಪಿ 2011,**
**ಬೆಂಗಳೂರು, ದಿನಾಂಕ: 17-05-2011.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ "ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ"ಯನ್ನು

Karnataka State Government Disabled Employees Association
Renukaradhya S
Indresh R

"ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ" "Department for the Empowerment of Differently Abled and Senior Citizens" ಎಂದು ಮರುನಾಮಕರಣ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

[ಬಿ.ಕಮಲಮ್ಮ]
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 100 ಪ್ರತಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

**ಪ್ರತಿಗಳು:**
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಕಛೇರಿ, ನಂ.40, ತಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು 560 005.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
6. ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
   } ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಮೂಲಕ
7. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
8. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ,ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
10. ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
11. ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ [ಸೇವಾ ನಿಯಮಗಳು], ವಿಧಾನಸೌಧ, ಬೆಂಗಳೂರು. (ಈ ಬಗ್ಗೆ ವ್ಯವಹಾರ ಹಂಚಿಕೆ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡುವಂತೆ ಕೋರಲಾಗಿದೆ.

12 ಅಧೀನ ಕಾರ್ಯದರ್ಶಿ, ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.

13. ಎಲ್ಲಾ ಜಿಲ್ಲೆಯ ಉಪನಿರ್ದೇಶಕರು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು [ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಮೂಲಕ]

13. ಪತ್ರಿಕಾ ಪ್ರಕಟಣೆ ವಿಭಾಗ, ವಿಧಾನಸೌಧ, ಬೆಂಗಳೂರು.

14. ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬಡತನದ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿನ ದೃಷ್ಟಿಹೀನ ಮಹಿಳೆಯರಿಗೆ ಪ್ರತಿ ಹೆರಿಗೆಯ ನಂತರ 2 ವರ್ಷಗಳ ಅವಧಿಗೆ ಮಾಸಿಕ ರೂ.2000/- ಶಿಶುಪಾಲನಾ ಭತ್ಯೆ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾಸಇ/ಯೋಜನೆ/ಅಂ.ಮ.ಅ.ಬ/11/ 2013-14/1364, ದಿನಾಂಕ: 24-7-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 24-7-2013ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ:12-7-2013ರಂದು ಮಂಡಿಸಿರುವ 2013-14ನೇ ಸಾಲಿನ ಆಯವ್ಯಯ ಭಾಷಣದ ಕ್ರಮಸಂಖ್ಯೆ: 231ರಲ್ಲಿ, 'ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿನ ದೃಷ್ಟಿಹೀನ ಮಹಿಳೆಯರಿಗೆ 2 ಹೆರಿಗೆಯವರೆಗೆ ಪ್ರತಿ ಹೆರಿಗೆ ನಂತರ 2 ವರ್ಷ ಅವಧಿಗೆ ಆರೋಗ್ಯ ಹಾಗೂ ಪೌಷ್ಠಿಕ ಆಹಾರ ದೃಷ್ಟಿಯಿಂದ ತಿಂಗಳಿಗೆ ರೂ.2000/- ಗಳನ್ನು ಶಿಶುಪಾಲನ ಭತ್ಯೆಯನ್ನು ನೀಡಲಾಗುವುದೆಂದು' ಘೋಷಿಸಿರುತ್ತಾರೆ.

ನಿರ್ದೇಶಕರು, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರು ಪ್ರಸ್ತಾವನೆಯ ಬಗ್ಗೆ ಆಯವ್ಯಯ ಭಾಷಣದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿನ ದೃಷ್ಟಿಹೀನ ಮಹಿಳೆಯರಿಗೆ ಎಂಬುದರ ಬದಲಾಗಿ ಬಡ ಕುಟುಂಬದಲ್ಲಿರುವ ದೃಷ್ಟಿಹೀನ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಎಂದು ಬದಲಾಯಿಸಬಹುದೆಂದು ಅಭಿಪ್ರಾಯಡುತ್ತಾ, ಬಡಕುಟುಂಬದಲ್ಲಿ ಜನಿಸುವ ಮಕ್ಕಳ ಆರೈಕೆ, ಲಾಲನೆ, ಪೋಷಣೆ ಮಾಡುವ ಸಂಪೂರ್ಣ ಜವಾಬ್ದಾರಿಯು ತಾಯಿಯರದ್ದಾಗಿರುತ್ತದೆ. ಆದರೆ ದೃಷ್ಟಿದೋಷವುಳ್ಳ ಮಹಿಳೆಯರು ಅವರ ಸ್ವಂತ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಬೇಕಾದರೆ, ಎಲ್ಲಾ ಹಂತದಲ್ಲಿ ಇತರರನ್ನು ಅವಲಂಬಿಸಬೇಕಾದ ಅನಿವಾರ್ಯತೆ ಇರುತ್ತದೆ. ಅಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳ ಆರೈಕೆ ಮಾಡಿ ಪಾಲನೆ ಪೋಷಣೆ ಮಾಡುವುದು ತುಂಬಾ ಕಷ್ಟದ ಕೆಲಸವಾಗಿದ್ದು, ಮಗುವಿನ ದೈನಂದಿನ ಚಟುವಟಿಕೆಗಳನ್ನು ಗಮನಿಸುವುದು ಇವರಿಂದ ಸಾಧ್ಯವಾಗದ ಕಾರಣ ಮಗು ಹುಟ್ಟಿದಾಗಿನಿಂದ ಕನಿಷ್ಠ 2 ವರ್ಷಗಳ ಅವಧಿವರೆಗೆ ಮಗುವಿನ ಆರೈಕೆ ಮಾಡಲು ಒಬ್ಬ ಸಹಾಯಕರ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, 2013-14 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಬಡತನ ರೇಖೆಗಿಂತ ಕೆಳಗಿರುವ ಅಂಧ ಮಹಿಳೆಯರಿಗೆ 2 ಹೆರಿಗೆಗಳವರೆಗೆ, ಪ್ರತಿ ಹೆರಿಗೆಯ ನಂತರ 2 ವರ್ಷಗಳ ಅವಧಿಗೆ ಮಗುವಿನ ಆರೋಗ್ಯ ಮತ್ತು ಪೌಷ್ಠಿಕ ಆಹಾರ ಪೋಷಣೆಯ ದೃಷ್ಠಿಯಿಂದ ತಿಂಗಳಿಗೆ ರೂ.2000/- ಗಳ ಶಿಶುಪಾಲನ ಭತ್ಯೆಯನ್ನು 75 ಮಹಿಳೆಯರಿಗೆ ನೀಡಲು ಉದ್ದೇಶಿಸಿದ್ದು, ಯೋಜನೆಯ ಅನುಷ್ಠಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವುದರ ಜೊತೆ ಪ್ರಸಕ್ತ ಸಾಲಿಗೆ ರೂ.18.00ಲಕ್ಷಗಳ ಆಯವ್ಯಯವನ್ನು ಲೆಕ್ಕಶೀರ್ಷಿಕೆ: 2235-02-101-0-52 ಯೋಜನೆ ಉಪ ಲೆಕ್ಕ ಶೀರ್ಷಿಕೆ 051 ಸಾಮಾನ್ಯ ವೆಚ್ಚಗಳಡಿ ಒದಗಿಸುವಂತೆ, ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 265 ಪಿಹೆಚ್‌ಪಿ 2013, ಬೆಂಗಳೂರು**

**ದಿನಾಂಕ:28-8-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ವಾರ್ಷಿಕ ಆದಾಯ ರೂ.2.50 ಲಕ್ಷಗಳ (ಎರಡು ಲಕ್ಷದ ಐವತ್ತು ರೂಪಾಯಿಗಳು ಮಾತ್ರ) ಮಿತಿಯೊಳಗಿನ ಬಡಕುಟುಂಬಗಳ ದೃಷ್ಠಹೀನ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ, 2 ಹೆರಿಗೆಯವರೆಗೆ ಪ್ರತಿ ಹೆರಿಗೆ ನಂತರ 2 ವರ್ಷ ಅವಧಿಗೆ ಆರೋಗ್ಯ ಹಾಗೂ ಪೌಷ್ಠಿಕ ಆಹಾರ ದೃಷ್ಟಿಯಿಂದ ತಿಂಗಳಿಗೆ ರೂ.2000/-ಗಳ ಶಿಶುಪಾಲನಾ ಭತ್ಯೆಯನ್ನು 75 ಮಹಿಳೆಯರಿಗೆ ನೀಡುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

..2

Karnataka State Government Disabled Employees Association
Renukaradhya S
Indresh R

ಸಂಖ್ಯೆ 5157
ದಿನಾಂಕ 31-8-2013

ಈ ಯೋಜನೆಗೆ ಸಂಬಂಧಪಟ್ಟ ಷರತ್ತು ಹಾಗೂ ಮಾರ್ಗಸೂಚಿಗಳನ್ನು ಅನುಬಂಧ -1ರಲ್ಲಿ ಹಾಗೂ ಅರ್ಜಿ ನಮೂನೆಯನ್ನು ಅನುಬಂಧ -2ರಲ್ಲಿ ನೀಡಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2013-14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2235-02-101-0-99 (ಯೋಜನೆ)ರಡಿಯಲ್ಲಿ ಒದಗಿಸಿರುವ ರೂ.800.00 ಲಕ್ಷಗಳ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 39 ಐಎಂಎಂ 2013 ದಿನಾಂಕ:17.08.2013 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 563 ವೆಚ್ಚ-3 2013, ದಿನಾಂಕ: 28-8-2013 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
5) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,ಜಿಲ್ಲಾ ಪಂಚಾಯತ್. (ನಿರ್ದೇಶಕರ ಮುಖಾಂತರ)
6) ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
7) ಶಾಖಾ ರಕ್ಷಾ ಕಡತ/ ಹೆಚ್ಚವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

**ಸರ್ಕಾರದ ಆದೇಶ ಸಂಖ್ಯೆ: ಮಮಇ 265 ಪಿಹೆಚ್‌ಪಿ 2013, ದಿನಾಂಕ: 28-8-2013 ಕ್ಕೆ ಅನುಬಂಧ-1**

**ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳ ಆರೈಕೆಗಾಗಿ ಶಿಶುಪಾಲನಾ ಭತ್ಯೆ ನೀಡಲು ಈ**

**ಕೆಳಗಿನಂತೆ ಷರತ್ತು ಹಾಗೂ ಮಾರ್ಗಸೂಚಿ.**

1. ವಿಕಲಚೇತನರು ಭಾರತದ ಪ್ರಜೆಯಾಗಿರಬೇಕು. ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಕನಿಷ್ಠ 6 ವರ್ಷಗಳು ಕರ್ನಾಟಕದಲ್ಲಿ ವಾಸವಾಗಿರಬೇಕು.
2. ಅಂಧ ಮಹಿಳೆಯ ವಯಸ್ಸು ಕನಿಷ್ಠ 18 ವರ್ಷಕ್ಕಿಂತ ಹೆಚ್ಚಾಗಿರಬೇಕು.
3. ಶಿಶು ಪಾಲನ ಭತ್ಯೆಯು 2 ಹೆರಿಗೆಗೆ ಮಾತ್ರ ಸೀಮಿತವಾಗಿರುತ್ತದೆ.
4. ಕಂದಾಯ ಇಲಾಖೆಯಿಂದ ಪಡೆಯಲಾದ ಆದಾಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅವರುಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಒಳಗಿರಬೇಕು.
5. ಸಹಾಯಕ್ಕಾಗಿ ಬರುವ ವ್ಯಕ್ತಿಯಿಂದ ಶಿಶು ಲಾಲನೆ, ಪಾಲನೆ, ಆರೋಗ್ಯ ಹಾಗೂ ಪೌಷ್ಠಿಕ ಆಹಾರ ಒದಗಿಸುವ ಕುರಿತು ಮುಚ್ಚಳಿಕೆ ಪಡೆಯತಕ್ಕದ್ದು.
6. ಶಿಶು ಪಾಲನ ಭತ್ಯೆಯನ್ನು ಮಗುವಿನ ಆರೋಗ್ಯ, ಪೌಷ್ಠಿಕ ಆಹಾರ ಮತ್ತು ಪಾಲನೆಗೆ ಮಾತ್ರ ಉಪಯೋಗಿಸಲಾಗುವುದೆಂದು ದೃಢೀಕರಿಸತಕ್ಕದ್ದು.
7. ಶಿಶು ಪಾಲನ ಭತ್ಯೆಯನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya C
Indresh R

ಸರ್ಕಾರದ ಆದೇಶ ಸಂಖ್ಯೆ: ಮಮಇ 265 ಪಿಹೆಚ್‌ಪಿ 2013, ದಿನಾಂಕ: 28-8-2013ಕ್ಕೆ ಅನುಬಂಧ-2

ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
ಬಡ ಕುಟುಂಬಗಳಲ್ಲಿನ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳ
ಆರೈಕೆಗಾಗಿ ಶಿಶುಪಾಲನ ಭತ್ಯೆ ಮಂಜೂರಾತಿಗಾಗಿ ಅರ್ಜಿ

ವರ್ಷ:20 -20

ದಿನಾಂಕದೊಂದಿಗೆ ದೃಢೀಕರಿಸಿದ ಇತ್ತೀಚಿನ ಭಾವಚಿತ್ರ

| | | |
|---|---|---|
| 1 | ಅಂಧ ಮಹಿಳೆಯ ಹೆಸರು | |
| | ಗಂಡನ ಹೆಸರು | |
| 2 | ಜನ್ಮ ದಿನಾಂಕ ಮತ್ತು ವಯಸ್ಸು | |
| | ಉದ್ಯೋಗ | |
| 3 | ವಾರ್ಷಿಕ ವರಮಾನ: ತಹಸೀಲ್ದಾರ್ ರವರಿಂದ ಪಡೆದ ಪ್ರಮಾಣ ಪತ್ರ | |
| 4 | ಮಗು ಜನಿಸಿದ ದಿನಾಂಕ ಮತ್ತು ಸ್ಥಳ (ಜನ್ಮ ದಿನಾಂಕದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು) | |
| | ಮಕ್ಕಳ ಸಂಖ್ಯೆ | |
| 5 | ಅಂಚೆ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 6 | ಖಾಯಂ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 7 | ಮಗುವಿನ ಆರೈಕೆ ಮಾಡುವ ಸಹಾಯಕರ ಹೆಸರು | |
| 11 | ಅಂಚೆ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 12 | ಖಾಯಂ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 13 | ಅಂಧ ಮಹಿಳೆಗೆ ಸಹಾಯಕರ ಸಂಬಂಧ | |

Karnataka State Government Disabled Employees Association
Renukaradhya S
Indresh R

**::ಘೋಷಣೆ::**

ಶ್ರೀಮತಿ/ಶ್ರೀ____________________________
ತಂದೆ/ತಾಯಿ/ಪೋಷಕರು________________________ಆದ ನಾನು/ನಾವು ಪ್ರಮಾಣೀಕರಿಸುವುದೇನೆಂದತೆ, ಮೇಲಿನ ವಿಷಯಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತದೆ. ಒಂದು ವೇಳೆ ಮೇಲೆ ತಿಳಿಸಿರುವ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಬಹುದು ಎಂಬುದಾಗಿ ಒಪ್ಪಿರುತ್ತೇನೆ.

ದಿನಾಂಕ:________________

ಸಹಿ:
ಹೆರಿಗೆ ಒಳಪಡುವ ಅಂಥ ಮಹಿಳೆಯ

ಹೆಸರು

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಆದೇಶ.

ಓದಲಾಗಿದೆ:- ಪತ್ರ ಸಂಖ್ಯೆ:ನಿಅಕಇ/ಯೋಜನಾ ಶಾಖೆ/ಸಿ-9/02/10-11/91, ದಿ:09-04-2010

<u>ಪ್ರಸ್ತಾವನೆ:</u>

2010-11 ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಬುದ್ಧಿಮಾಂದ್ಯ ಮತ್ತು ಶ್ರವಣ ನ್ಯೂನತೆಯಿಂದ ಹಾಗೂ ಅಂಥ ಮುಂತಾದ ವಿಕಲತೆಯುಳ್ಳ ಮಕ್ಕಳ ಪಾಲನೆಗಾಗಿ ನಡೆಸುತ್ತಿರುವ ಸಂಸ್ಥೆಗಳಿಗೆ ಪಾಲನಾ ವೆಚ್ಚ ಹಾಗೂ ಶಿಕ್ಷಕರ ಸಂಭಾವನೆಗಳನ್ನು ಒಳಗೊಂಡಂತೆ ಮಕ್ಕಳ ಸಂಖ್ಯೆ ಆಧಾರದ ಮೇಲೆ ಅನುದಾನವನ್ನು ನೀಡಲು ರೂ.20.00 ಕೋಟಿ ಆಯವ್ಯಯ ಒದಗಿಸಲಾಗಿದೆಯೆಂದು ಘೋಷಿಸಲಾಗಿದ್ದು, ಈ ಸಂಬಂಧ 2010-11 ನೇ ಆಯವ್ಯಯದಲ್ಲಿ ರೂ.10.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ರವರು ಮೇಲೆ ಓದಲಾದ ಪತ್ರದೊಂದಿಗೆ ಕಳುಹಿಸಿರುವ ಪ್ರಸ್ತಾವನೆಯಲ್ಲಿ ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಗೆ 2010-11ನೇ ಸಾಲಿಗೆ ರೂ.10.00 ಕೋಟಿ ಆಯವ್ಯಯ ನಿಗದಿಯಾಗಿದ್ದು, ಸರ್ಕಾರೇತರ ಸಂಸ್ಥೆಗಳಿಂದ ನಡೆಸುತ್ತಿರುವ ಅಂಗವಿಕಲರ ವಿಶೇಷ ಶಾಲೆಗಳ ವಿಶೇಷ ಮಕ್ಕಳ ಶಿಶು ಕೇಂದ್ರೀಕೃತ ಯೋಜನೆ/ವಿಶೇಷ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಆರ್ಥಿಕ ಸಹಾಯಧನ ಯೋಜನೆಯನ್ನು ಅನುಮೋದಿಸಲು ಕೋರಿರುತ್ತಾರೆ.

ಈ ಯೋಜನೆ ಅನುಷ್ಠಾನದ ಪೂರ್ವ ಸರ್ಕಾರಿ ಆದೇಶ ಸಂಖ್ಯೆ:ಪಿಡಿ 5 ಬಿಎಂಎಂ 2010 ದಿ:03-04-2010 ರ ಕಂಡಿಕೆ 3 ರ ಮೇರೆಗೆ ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ (ವೆಚ್ಚ-3 ) ಶಾಖೆಯ ಅಭಿಪ್ರಾಯ/ಸಹಮತಿಯನ್ನು ಕ್ರಮವಾಗಿ ಟಿಪ್ಪಣಿ ಸಂಖ್ಯೆ:ಪಿಡಿ 11 ಬಿಎಂಎಂ 10, ದಿ:26-04-2010 ಮತ್ತು ಎಫ್‌ಡಿ 272 ವೆಚ್ಚ-3/10, ದಿ:29-10-2010 ರಂತೆ ಪಡೆಯಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ದಿ:20-04-2010 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದು, 2010-11 ನೇ ಸಾಲಿನ ಆರ್ಥಿಕ ವರ್ಷವು ಅಂತ್ಯಗೊಳ್ಳುತ್ತಿರುವುದರಿಂದ ಸಚಿವ ಸಂಪುಟದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಆದೇಶ ಹೊರಡಿಸುವಂತೆ ನೀಡಿದ ಸೂಚನೆ ಮೇರೆಗೆ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ:ಮಮಇ 109 ಪಿಹೆಚ್‌ಪಿ 2010</u>
<u>ಬೆಂಗಳೂರು, ದಿನಾಂಕ: 14-12-2010</u>

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನದ ಹೊಸ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರೇತರ ಸಂಸ್ಥೆಗಳು ಕನಿಷ್ಠ 3 ವರ್ಷಗಳ ಅವಧಿಯವರೆಗೆ ನಿರ್ವಹಿಸಿರುವ ಶಾಲೆಗಳನ್ನು

Karnataka State Government Disabled Employees Association
Renukaradhya S
Indresh R

ಪರಿಗಣಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

ಮಾರ್ಗಸೂಚಿ:

1. Institutions for education or training of physically/ mentally challenged children should not be started without taking permission from the Director of Disabled Welfare. In case an institution is already running, it should formally apply for permission.

2. Eligibility for Grant-in-aid will arise when the institution has been run as per norms for 3 years after taking such permission

3. The grant permissible will be based on the strength of students. Government will have no obligation to pay salary or any benefit to the teaching or non-teaching staff of the institution. Grant once sanctioned can later be varied or even stopped in case the number of students changes or if any other eligibility condition is violated.

4. As the students will be special children, it should be ensured by the Director, Disabled Welfare that all the teaching and supporting staff have got the required qualification and training and that they have to be appointed on merit through a transparent process after giving proper advertisement. It should also be ensured that all relevant Government guidelines are followed in this regard. Confirmation of staff will be a separate process and sanction of grants will not mean automatic confirmation of staff. Any recruitment or change of staff should be done only with the concurrence of the Director of Disabled Welfare.

5. There should be a compulsory annual inspection of every such schools by the Director of Disabled Welfare to see that the grant conditions are being followed satisfactorily.

6. In view of the economy orders, not more than 20 such schools should be considered during the year 2010-11. During the subsequent years depending on the budget provision, the department shall send further proposals to Government for further action.

...3/-.

Karnataka State Government Disabled Employees Association
Renukaradhya S
Indresh R

ಈ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ (ವೆಚ್ಚ-3 ) ಶಾಖೆಗಳು ಕ್ರಮವಾಗಿ ನೀಡಿದ ಟಿಪ್ಪಣಿ ಸಂಖ್ಯೆ:ಪಿಡಿ 11 ಐಎಂಎಂ 10 ದಿ:26-04-2010 ಮತ್ತು ಎಫ್‌ಡಿ 272 ವೆಚ್ಚ-3/10 ದಿ:29-10-2010 ರ ಅಭಿಪ್ರಾಯ/ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಬಿ.ಕಮಲಮ್ಮ]
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಎಲ್ಲಾ ಉಪನಿರ್ದೇಶಕರು/ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
6. ನಿರ್ದೇಶಕರು, ಯೋಜನಾ ಇಲಾಖೆ, ಪಿಡಿಎಂ ವಿಭಾಗ.
7. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-3)
8. ಆಯುಕ್ತರು ರಾಜ್ಯ ಅಂಗವಿಕಲರ ಅಧಿನಿಯಮ ಕಛೇರಿ, ನಂ-40, ತುಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು.
9. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

Karnataka State Government Disabled Employees Association
Renukaradhya S
Indresh R

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 109 ಪಿಎಚ್‌ಪಿ 2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 29-12-2010.

## ಸೇರ್ಪಡೆ

ಸರ್ಕಾರಿ ಆದೇಶ ಸಂಖ್ಯೆ: ಮಮಇ 109 ಪಿಎಚ್‌ಪಿ 2010, ದಿನಾಂಕ:14-12-2010ರ ಆದೇಶ ಭಾಗದ 2ನೇ ಕಂಡಿಕೆಯಲ್ಲಿ ಈ ಕೆಳಕಂಡಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

"ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ರೂಪಿಸಿರುವ ಯೋಜನೆಯ ರೂಪುರೇಷೆ ಮತ್ತು ಯೋಜನೆಗೆ ಸಂಬಂಧಿಸಿದಂತೆ ನಿಗದಿತ ಅರ್ಜಿ ಮತ್ತು ಇತರೆ ವಿವರಣೆಗಳನ್ನು ನಮೂನೆಯ ಅಡಕಗಳನ್ನು ಅನುಬಂಧ-1 ರಿಂದ 6ರವರೆಗೆ ತೋರಿಸಲಾಗಿದೆ".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

[ಬಿ.ಕಮಲಮ್ಮ]
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 250 ಪ್ರತಿಗಳನ್ನು ಈ ಇಲಾಖೆಗೆ ಒದಗಿಸಲು ಕೋರಿದೆ.

ಪ್ರತಿಗಳು:-
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು.
4. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ನಿರ್ದೇಶಕರು, ಯೋಜನಾ ಇಲಾಖೆ, ಪಿಡಿಎಂ ವಿಭಾಗ.

2/-

6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–3), ವಿಧಾನಸೌಧ, ಬೆಂಗಳೂರು.
7. ಎಲ್ಲಾ ಉಪನಿರ್ದೇಶಕರು/ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
8. ಆಯುಕ್ತರು, ರಾಜ್ಯ ಅಂಗವಿಕಲರ ಅಧಿನಿಯಮ, ನಂ.40, ತಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು.
9. ಶಾಖಾ ರಕ್ಷ ಕಡತ : ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

## ಸರ್ಕಾರದ ಆದೇಶ ಸಂಖ್ಯೆ: ಮಮಇ 109 ಪಿಎಚ್‌ಪಿ 2010, ದಿನಾಂಕ:14-12-2010ಕ್ಕೆ ಅನುಬಂಧಗಳು

## ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನದ ಹೊಸ ಯೋಜನೆ

**ಪೀಠಿಕೆ:**

ಕರ್ನಾಟಕ ರಾಜ್ಯದಲ್ಲಿ 2001 ರ ಜನಗಣತಿ ಆಧರಿಸಿ 9.40 ಲಕ್ಷ ಅಂಗವಿಕಲರು ಇರುತ್ತಾರೆ. 0-19 ವರ್ಷದೊಳಗಿನ ಅಂಗವಿಕಲರ ಸಂಖ್ಯೆ ಅಂದಾಜು 3.67 ಲಕ್ಷವೆಂದು ಪರಿಗಣಿಸಲಾಗಿದೆ.

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು ಅಂಗವಿಕಲರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಈ ಕಾರ್ಯಕ್ರಮಗಳು ಅಂಗವಿಕಲರನ್ನು ಸಾಮಾನ್ಯ ಜನರಂತೆ ಬದುಕಲು ನೆರವು ಮಾಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಮುಖ ಧ್ಯೇಯೋದ್ದೇಶಗಳನ್ನು, ಗುರಿಗಳನ್ನು ಇಟ್ಟುಕೊಂಡಿದೆ. ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮವು ಪ್ರಮುಖವಾಗಿದೆ.........

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ನೀತಿ, ರಾಷ್ಟ್ರೀಯ ಶಿಕ್ಷಣ ನೀತಿ, ಹಾಗೂ ಅಂಗವಿಕಲರ ಅಧಿನಿಯಮ-1995 ರನ್ವಯ 6 ರಿಂದ 18ನೇ ವಯೋಮಿತಿಯ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡುವುದು ಅತ್ಯವಶ್ಯಕವಾಗಿರುತ್ತದೆ. ಅಲ್ಲದೇ ಅಂಗವಿಕಲ ಮಕ್ಕಳಿಗೆ ವಿಶೇಷ ಶಾಲೆಗಳನ್ನು ಸರ್ಕಾರದಿಂದ / ಖಾಸಗಿ ವಲಯದಿಂದ ಕಡ್ಡಾಯವಾಗಿ ನಡೆಸುವುದು ಸಹ ಸರ್ಕಾರದ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಅಂಗವಿಕಲರಿಗೆ ವಿಶೇಷ ಶಿಕ್ಷಣ : ತರಬೇತಿ ನೀಡಲು ರಾಜ್ಯದಲ್ಲಿ ಸುಮಾರು 300 ವಿಶೇಷ ಶಾಲೆಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವಿವಿಧ ಅಂಗವಿಕಲತೆ ಹೊಂದಿರುವ ಅಂಗವಿಕಲ ಮಕ್ಕಳು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಶಕ್ತರಾಗಿರುವುದಿಲ್ಲ. ಅವರುಗಳಿಗೆ ಆದಷ್ಟು ಅವರು ವಾಸಿಸುವ ಪರಿಸರದಲ್ಲಿಯೇ ವಿಶೇಷ ಶಿಕ್ಷಣವನ್ನು ನೀಡುವ ಸೌಲಭ್ಯವನ್ನು ಒದಗಿಸಬೇಕಾಗುತ್ತದೆ. ಅಂಗವಿಕಲ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಅವರಿಗೆ ವಿಶೇಷ ಶಾಲೆಗಳಲ್ಲಿ ಉತ್ತಮ ಮೂಲಭೂತ ಸೌಕರ್ಯ, ಸೂಕ್ತ ಕಟ್ಟಡ, ಜೀವನ ಕೌಶಲ್ಯ, ವೃತ್ತಿಪರ ತರಬೇತಿ ಮುಂತಾದ ಸಮಗ್ರ ಶಿಕ್ಷಣ ಸೌಲಭ್ಯವನ್ನು ನೀಡಬೇಕಾಗುತ್ತದೆ. ಇದರಿಂದ ಅಂಗವಿಕಲ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ದಿಶೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಅನುದಾನ ಸಂಹಿತೆ-1982ರಡಿ ವಿಶೇಷ ಶಾಲೆಗಳಿಗೆ ನೀಡುತ್ತಿರುವ ಸಹಾಯಧನವು ಶಿಕ್ಷಕರ ಕೇಂದ್ರೀಕೃತವಾಗಿದ್ದು ಇದನ್ನು ಪರಿಷ್ಕರಿಸಿ ಅಂಗವಿಕಲ ಮಕ್ಕಳನ್ನು ಆಧರಿಸಿ ಅವರಿಗೆ ಸಂಪೂರ್ಣ ಗುಣಾತ್ಮಕ ಶೈಕ್ಷಣಿಕ ಸೇವಾ ಸೌಲಭ್ಯವನ್ನು ಒದಗಿಸುವ ಸಲುವಾಗಿ ವಿಶೇಷ ಶಾಲೆಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ ನೀಡುವ ಸಲುವಾಗಿ ಈ ಕೆಳಕಂಡಂತೆ ಯೋಜನೆಯನ್ನು ರೂಪಿಸಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಯವರು 2010-11ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ರೂ.10.00 ಕೋಟಿ ಆಯವ್ಯಯವನ್ನು ಘೋಷಿಸಿರುತ್ತಾರೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ:2235-02-800-0-04 ಯೋಜನೆ ಉಪಲೆಕ್ಕಶೀರ್ಷಿಕೆ:301 ಸಹಾಯಧನದಡಿ ಭರಿಸಲು ಅನುಮೋದನೆ ದೊರೆತಿರುತ್ತದೆ.

---

Karnataka State Government Disabled Employees Association
Renukaradhya S
Indresh R

## ಯೋಜನೆಯ ಹೆಸರು: *ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನ ಯೋಜನೆ:*

**ಉದ್ದೇಶ:**

1. ಅಂಗವಿಕಲರ ಕಾಯ್ದೆ-95 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು
2. ವಿಶೇಷ ಮಕ್ಕಳ ಶಿಕ್ಷಣಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸುವುದು.
3. ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ಹಕ್ಕು ಸೂಚಿಸಿದಂತೆ ಅಂಗವಿಕಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವುದು.
4. ಎಲ್ಲಾ ಅಂಗವಿಕಲ ಮಕ್ಕಳಿಗೂ ಶೈಕ್ಷಣಿಕ ಸೌಲಭ್ಯ ಒದಗಿಸುವುದು
5. ಅಂಗವಿಕಲ ಮಕ್ಕಳಲ್ಲಿ ಶೇ.100ರಷ್ಟು ಸಾಕ್ಷರತೆಯನ್ನು ಮೂಡಿಸುವುದು
6. ಅಂಗವಿಕಲ ಮಕ್ಕಳನ್ನು ಇತರೆ ಸಾಮಾನ್ಯ ಪ್ರಜೆಗಳಂತೆ ರಾಷ್ಟ್ರದ ಪ್ರಗತಿಗೆ ಸಹಕಾರಿಯಾಗುವಂತೆ ಮಾಡುವುದು
7. ಸೂಕ್ತ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಿ ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡಿ ನಂತರ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಸಹಕಾರಿಯಾಗುವುದು.
8. ಅಂಗವಿಕಲ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸ್ವಯಂಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು.
9. ಕುಷ್ಠರೋಗನಿವಾರಿತ ಅಂಗವಿಕಲರಿಗೆ, ಮಾನಸಿಕ ಅಸ್ವಸ್ಥರಿಗೆ ಹಾಗೂ ತರಬೇತಿ ಪಡೆಯಲು ಅರ್ಹರಿರುವಂತಹ ಬುದ್ಧಿಮಾಂದ್ಯರಿಗೆ ಔದ್ಯೋಗಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಪುನರ್ವಸತಿಗೆ ನೆರವು ನೀಡುವುದು.
10. ಶೈಕ್ಷಣಿಕ ಕಲಿಕೆ ಒಳಪಡುವ ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ವಸತಿಯುತ ಶಾಲೆಗಳನ್ನು ಜಿಲ್ಲಾಮಟ್ಟದಲ್ಲಿ ಪ್ರಾರಂಭಿಸುವುದು.
11. ಶಿಕ್ಷಣ ವ್ಯವಸ್ಥೆಗೆ ಒಳಪಡುವಂತಹ ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಾಲೆ/ಹಗಲು ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವುದು.

**ಅರ್ಹತೆ:**

1. ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್, ಸೊಸೈಟಿ ಅಥವಾ ಸಮಾಜಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು.
2. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಕಾಯ್ದೆ-1995 ಸೆಕ್ಷನ್ 50, 51ರಂತೆ ನೋಂದಣಿ ಮಾಡಿಸಿರಬೇಕು.
3. ಸ್ವಯಂ ಸೇವಾ ಸಂಸ್ಥೆಯು ವಿಶೇಷ ಶಾಲೆಗಳನ್ನು ನಡೆಸಲು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ನಿಯಮಾನುಸಾರ ಅನುಮತಿ ಪಡೆದಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಇದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯ ಸರ್ಕಾರದ ಇತರೆ ಇಲಾಖೆಗಳಿಂದಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಿಂದಾಗಲೀ ಸಹಾಯಧನ ಪಡೆಯುತ್ತಿದ್ದಲ್ಲಿ ಅಂತಹ ಸಂಸ್ಥೆಯು ಈ ಯೋಜನೆಯಡಿ ಸಹಾಯಧನ ಪಡೆಯಲು ಅವಕಾಶವಿರುವುದಿಲ್ಲ.

Karnataka State Government Disabled Employees Association
Renukaradhya S
Indresh R

**ಸಹಾಯಧನ ಪಡೆಯಲು ಷರತ್ತುಗಳು:**

1. ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವತಿಯಿಂದ ಅನುಮತಿ ಪಡೆದಂತಹ ಸಂಸ್ಥೆಗಳಿಗೆ ಮಾತ್ರವೇ ಸಹಾಯಧನ ನೀಡಲಾಗುವುದು.
2. ಸಂಸ್ಥೆಯು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆಧನ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ.
3. ಸಹಾಯಧನವು ಆಯವ್ಯಯ ಲಭ್ಯತೆಗೆ ಒಳಪಟ್ಟಿರುತ್ತದೆ, ಸಂಸ್ಥೆಯು ಸಹಾಯಧನವನ್ನು ತನ್ನ ಸ್ವಂತ ಹಕ್ಕೆಂದು ಕ್ಲೇಮು ಮಾಡುವಂತಿಲ್ಲ.
4. ಯಾವುದೇ ಸಂಸ್ಥೆಯು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ 03 ವರ್ಷದ ಒಳಗೆ ಸಹಾಯಧನಕ್ಕೆ ಅರ್ಹತೆ ಪಡೆಯುವುದಿಲ್ಲ. ಸಂಸ್ಥೆಯು ಶಾಲೆ ಪ್ರಾರಂಭಿಸಿದ 04ನೇ ವರ್ಷದಿಂದ ಸಹಾಯಧನ ಪಡೆಯಲು ಅರ್ಹತೆ ಹೊಂದಿರುತ್ತದೆ.
5. ಸಹಾಯಧನವನ್ನು ಮಂಜೂರು ಮಾಡಲು ಮಂಜೂರಾತಿಯು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ.
   ಅ) ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು ದಾಖಲೆಯಲ್ಲಿರಬೇಕು, ಶಾಲೆಯಲ್ಲಿ 20 ಕ್ಕಿಂತ ಕಡಿಮೆ ಮಕ್ಕಳಿದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
   ಆ) ಶಾಲೆಯು 220 ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಿರಬೇಕು.
   ಇ) ಶಿಕ್ಷಕರ ಶೈಕ್ಷಣಿಕ ಅರ್ಹತೆಯು ಈ ಯೋಜನೆಯಲ್ಲಿ ಉಲ್ಲೇಖಿಸಿದಂತೆ ಇರಬೇಕು.
6. ಸಹಾಯಧನ ಪಡೆಯುವ ಸಂಸ್ಥೆಯು ರಾಜ್ಯಸರ್ಕಾರದ ಅಧಿಕಾರಿಗಳ ಅಥವಾ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಯಾವುದೇ ವ್ಯಕ್ತಿಗಳ / ಸಂಸ್ಥೆಗಳ ತಪಾಸಣೆಗೆ ಸಿದ್ಧವಾಗಿರಬೇಕು / ಮುಕ್ತವಾಗಿರಬೇಕು.
7. ಸಂಸ್ಥೆಯು ಸಹಾಯಧನದ ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ಹಾಗೂ ಸರಿಯಾಗಿ ನಿರ್ವಹಿಸಿ ಅಗತ್ಯವೆನಿಸಿದಾಗ ತನಿಖೆಗೆ ನೀಡಬೇಕು.
8. ಸಹಾಯಧನದಿಂದ ಸಂಪೂರ್ಣವಾಗಿ ಅಥವಾ ಭಾಗಶ: ಖರೀದಿಸಿದ ಎಲ್ಲಾ ರೀತಿಯ ಆಸ್ತಿಗಳ ಲೆಕ್ಕಪತ್ರಗಳನ್ನು ಸಂಸ್ಥೆಯು ಸರಿಯಾಗಿ ನಿರ್ವಹಿಸತಕ್ಕದ್ದು. ಈ ರೀತಿ ಪಡೆದ ಆಸ್ತಿಗಳ ವಿವರಗಳ ಪಟ್ಟಿಯನ್ನು ಪ್ರತಿ ವರ್ಷ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಇಂತಹ ಆಸ್ತಿಗಳನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆ ಮಾಡುವುದು, ಅತಿಕ್ರಮ ಪ್ರವೇಶಿಸುವುದಾಗಲಿ ಮಾಡಬಾರದು. ಯಾವ ಉದ್ದೇಶಕ್ಕಾಗಿ ಸಹಾಯಧನ ಪಡೆಯಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ಸಂಸ್ಥೆಯು ಮುಚ್ಚಿದಲ್ಲಿ ಅಂತಹ ಆಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಮಂಜೂರು ಮಾಡಿದ ಸಹಾಯಧನವು ಅನುಮೋದಿಸಲ್ಪಟ್ಟ ಕಾರ್ಯಕ್ಕೆ ವಿನಿಯೋಗಿಸದೇ ಇರುವುದು ಕಂಡು ಬಂದಲ್ಲಿ ಸರ್ಕಾರವು ಸಹಾಯಧನವನ್ನು ನಿಲ್ಲಿಸುವುದಲ್ಲದೇ ಹಿಂದೆ ನೀಡಿದ ಸಹಾಯಧನವನ್ನು ವಸೂಲಿ ಮಾಡಲಾಗುವುದು.
10. ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆ ಆಗುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದಲೇ ಭರಿಸಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡತಕ್ಕದ್ದು. ಯಾವುದೇ ಕಾರಣಕ್ಕೂ ಶಿಕ್ಷಣದ ಗುಣಮಟ್ಟದಲ್ಲಿ ಕೊರತೆ ಕಂಡು ಬಂದಲ್ಲಿ ಸಂಸ್ಥೆಗೆ ಅನುದಾನವನ್ನು ರದ್ದುಪಡಿಸುವುದಲ್ಲದೇ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಶಿಫಾರಸ್ಸು ಮಾಡಲಾಗುವುದು.
11. ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ಅಂಗವಿಕಲ ಮಕ್ಕಳಿಗೂ ಮುಕ್ತವಾಗಿರಬೇಕು
12. ಸರ್ಕಾರವು ಸಹಾಯಧನದ ಬಗ್ಗೆ ಯಾವುದೇ ಸ್ಪಷ್ಟೀಕರಣ ಕೇಳಿದಲ್ಲಿ ಸಂಸ್ಥೆಯು ಒದಗಿಸತಕ್ಕದ್ದು.

Karnataka State Government Disabled Employees Association
Renukaradhya S
Indresh R

13. ಸರ್ಕಾರವು ಯಾವುದೇ ಸಂದರ್ಭದಲ್ಲಿ ವಿಶೇಷ ಶಾಲೆಗಳನ್ನು ಇತರೆ ಸರ್ಕಾರೇತರ ಸಂಸ್ಥೆಗಳಿಂದ ಮೌಲ್ಯಮಾಪನ ಮಾಡಿಸಲಾಗುವುದು.
14. ಸಹಾಯಧನವು ಮಂಜೂರಾಗದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ಸಂಸ್ಥೆಯು ಶಾಲೆಯನ್ನು ಮುಚ್ಚತಕ್ಕದ್ದಲ್ಲ. ಸಂಸ್ಥೆಯು ತನ್ನ ಸಂಪನ್ಮೂಲಗಳಿಂದಲೇ ಶಾಲೆಯನ್ನು ನಡೆಸತಕ್ಕದ್ದು.
15. ಸಹಾಯಧನದ ಮಂಜೂರಾತಿಯು ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು ರವರ ಅಂತಿಮ ತೀರ್ಮಾನಕ್ಕೊಳಪಟ್ಟಿರುತ್ತದೆ.
16. ಸಹಾಯಧನ ಪಡೆಯಲು ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಪರಿಶೀಲಿಸಿ ಶಿಫಾರಸ್ಸುಗೊಂಡ ಸೂಕ್ತ ಪ್ರಸ್ತಾವನೆಗಳನ್ನು ನಿರ್ದೇಶನಾಲಯದಲ್ಲಿ ಸ್ವೀಕರಿಸಲಾಗುವುದು.

**ಆರ್ಥಿಕ ಧನಸಹಾಯ:**

ವಿಶೇಷ ಶಾಲೆಗಳಿಗೆ ಆರ್ಥಿಕ ಧನಸಹಾಯವನ್ನು ಪ್ರಾಥಮಿಕ ವಿಭಾಗದಲ್ಲಿ 50 ಅಂಗವಿಕಲ ಮಕ್ಕಳ ಸಂಖ್ಯೆಯ ಯೂನಿಟ್ ಅಂತೆ ಹಾಗೂ ಪ್ರೌಢಶಾಲಾ ವಿಭಾಗದಲ್ಲಿ 25 ಮಕ್ಕಳ ಸಂಖ್ಯೆಯ ಯೂನಿಟ್ ಅಂತೆ ಅನುಗುಣವಾಗಿ ಭರಿಸಬಹುದಾದ ವೆಚ್ಚವನ್ನು ಆಧರಿಸಿ ಪರಿಗಣಿಸಲಾಗಿದೆ. ಪ್ರತಿ ಅಂಗವಿಕಲತೆಯ ಶಾಲೆಯಲ್ಲಿ ಕನಿಷ್ಠ 25 ಅಂಗವಿಕಲ ಮಕ್ಕಳಿದ್ದಲ್ಲಿ ಮಾತ್ರ ಈ ಸಹಾಯಧನಕ್ಕೆ ಪರಿಗಣಿಸಲಾಗುವುದು. ವಸತಿರಹಿತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ. 2000/-ರಂತೆ, ವಸತಿಯುತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ.2500/-ರಂತೆ ಅನುದಾನವನ್ನು ನೀಡಲಾಗುವುದು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೀಡುವ ಈ ಸಹಾಯಧನದಲ್ಲಿಯೇ ಎಲ್ಲಾ ವೆಚ್ಚವನ್ನ ಭರಿಸತಕ್ಕದ್ದು. (ಈ ವೆಚ್ಚಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ-1ರಲ್ಲಿ ನಮೂದಿಸಿದೆ)

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ: 2235-02-800-0-04 ಯೋಜನೆ ಉಪಲೆಕ್ಕಶೀರ್ಷಿಕೆ;301 ಸಹಾಯಾನುದಾನದಡಿ ಭರಿಸುವುದು.

**ಬೋಧನಾ ಮಾಧ್ಯಮ:**

1. ಎಲ್ಲಾ ವಿಶೇಷ ಶಾಲೆಗಳಲ್ಲಿ ಬೋಧನಾ ಮಾಧ್ಯಮವು ಸಾಧ್ಯವಾದಷ್ಟು ಕನ್ನಡ ಭಾಷೆಯಲ್ಲಿ ಇರಬೇಕು.

**ಸಿಬ್ಬಂದಿಗಳ ನೇಮಕಾತಿ:**

1. ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿರುವ ಎಲ್ಲಾ ಸಿಬ್ಬಂದಿಗಳನ್ನು ಗೌರವಧನದ ಆಧಾರದ ಮೇಲೆ ಸಂಸ್ಥೆಯು ನೇಮಿಸತಕ್ಕದ್ದು. ಸಿಬ್ಬಂದಿಗಳಿಗೆ ಅನುಬಂಧದಲ್ಲಿ ಸೂಚಿಸಿರುವಂತೆ ಗೌರವಧನವನ್ನು ಚೆಕ್ ಮೂಲಕ ಪ್ರತಿ ತಿಂಗಳು ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.
2. ಶಾಲೆಗಳಿಗೆ ಸಿಬ್ಬಂದಿ ವರ್ಗದವರನ್ನು ನೇಮಿಸುವಾಗ ಅರ್ಹ ಪರಿಶಿಷ್ಟ ಜಾತಿ : ಪಂಗಡ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು.
| ಕ್ರ. ಸಂ | ಆರ್ಥಿಕ ವರ್ಷದ ಸಹಾಯಾನುದಾನ | ಮಂಜೂರಾತಿಯ ಪತ್ರದ ಸಂಖ್ಯೆ ಮತ್ತು ದಿನಾಂಕ | ಆವರ್ತಕ ಮೊತ್ತ | ಅನಾವರ್ತಕ ಮೊತ್ತ | ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಠೇವಣಾತಿಯ ದಿನಾಂಕ | ಬ್ಯಾಂಕಿನ ಹೆಸರು ಮತ್ತು ವಿಳಾಸ | ಜಂಟಿ ಖಾತೆಯನ್ನು ವ್ಯವಹರಿಸುವ ವ್ಯಕ್ತಿಗಳು |
|---|---|---|---|---|---|---|---|
| 1 | | | | | | | |
| 2 | | | | | | | |
| 3 | | | | | | | |

ಟಿಪ್ಪಣಿ: ಒಂದು ಕಂತಿಗೆ ಒಂದು ಸಾಲನ್ನು ಬಳಸಬಹುದು

Karnataka State Government Disabled Employees Association
Renukaradhya S
Indresh R

| | | | |
|---|---|---|---|
| 13 | ಸಂಸ್ಥೆಯ ಲೆಕ್ಕಪತ್ರಗಳನ್ನು ಈ ಯೋಜನೆಯೂ ಒಳಗೊಂಡಂತೆ ಅರ್ಜಿಯೊಂದಿಗೆ ಸಲ್ಲಿಸಲಾಗಿದೆಯೇ ? | ಹೌದು | ಇಲ್ಲ |

14 ಸರ್ಕಾರದಿಂದ ಯೋಜನೆಗೆ ಬೇಕಾಗುವ ಅನುದಾನದ ಮೊತ್ತ

| ಕಾಸ್ಟ್ ಹೆಡ್‌ಗ್ರೂಪ್ | ಒಟ್ಟು ಆಯವ್ಯಯ | ಸರ್ಕಾರದಿಂದ ಭರಿಸಬಹುದಾದ ಅನುದಾನ | ಸಂಸ್ಥೆಯ ವತಿಯಿಂದ ಭರಿಸಬಹುದಾದ ಮೊತ್ತ | ಇತರೆ ಮೂಲಗಳಿಂದ ಭರಿಸಬಹುದಾದ ಮೊತ್ತ |
|---|---|---|---|---|
| 1. ಆವರ್ತಕ | | | | |
| 2. ಅನಾವರ್ತಕ | | | | |
| 3. ಒಟ್ಟು ರೂ. | | | | |

ಟಿಪ್ಪಣಿ: ಸಹಾಯ ನಿರೀಕ್ಷೆಯಲ್ಲಿ ಎಲ್ಲ ವೆಚ್ಚ ಘಟಕಗಳಡಿಯಲ್ಲಿ ಆಯವ್ಯಯ ವೆಚ್ಚ ಪಟ್ಟಿಯು, ಸ್ಪಷ್ಟವಾಗಿ ಸಮರ್ಥನೆಗಳನ್ನು ಕೊಡುವುದರೊಂದಿಗೆ ಮಾಹಿತಿಯನ್ನು ಸಹ ಕೊಡಬೇಕು.

| 15 | ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಲಗತ್ತಿಸಲಾಗಿದೆಯೇ? | ಹೌದು | ಇಲ್ಲ |
|---|---|---|---|

ಪ್ರತಿ ಘಟಕದ ಕಾರ್ಯ ನಿರ್ವಹಣೆ/ ನಿರ್ದಿಷ್ಟ ಕಾಲಾವಧಿಯಲ್ಲಿ ಲಾಭ ಪಡೆದುಕೊಂಡ ವ್ಯಕ್ತಿಗಳ ಯೋಜನಾ ಕಾರ್ಯ ಚಟುವಟಿಕೆ/ ವಿಶೇಷ ಸಾಧನೆಗಳು, ಎದುರಿಸಲಾದ ಸಮಸ್ಯೆಗಳು ಹಾಗೂ ತೊಂದರೆಗಳು ಇತ್ಯಾದಿ, ಸಮುದಾಯದ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ತೆಗೆದುಕೊಂಡ ಕ್ರಮಗಳ ವಿವರಗಳನ್ನು ಇತರ ವಿಷಯಗಳೊಂದಿಗೆ ಹೊಂದಿರುವ ವರದಿ.

| 16 | ಜಿಲ್ಲಾ ನಿರ್ವಹಣಾ ಸಮಿತಿಯ ಪಟ್ಟಿಯನ್ನು ಸೇರಿಸಲಾಗಿದೆಯೇ? | ಹೌದು | ಇಲ್ಲ |
|---|---|---|---|

| 17 | ಸಿಬ್ಬಂದಿ ವರ್ಗದವರ ಪಟ್ಟಿಯನ್ನು ಸೇರಿಸಲಾಗಿದೆಯೇ? | ಹೌದು | ಇಲ್ಲ |
|---|---|---|---|

Karnataka State Government Disabled Employees Association
Renukaradhya S
Indresh R

18. ಸಂಘಟನೆಯ ನಿಧಿಯ ಹರಿವು.

| | ವಿವರಗಳು | ಅಖಂಡವಾದ ಒಂದುದ ಸಂಘಟನೆಗಾಗಿ | | | ಯೋಜನೆಗಾಗಿ | | |
|---|---|---|---|---|---|---|---|
| | | ಪ್ರಾರಂಭಿಕ ವರ್ಷ ಅಥವಾ ನಂತರ ಆರ್ಥಿಕ ವರ್ಷ ಅದರಲ್ಲಿ ನಂತರ ಬರುವುದು | ಹಿಂದಿನ ವರ್ಷದ ವಾಸ್ತವಿಕ | ಪ್ರಸ್ತುತ ವರ್ಷದ ಲೆಕ್ಕಪರಿ ಶೋಧಿಕ ವಾಸ್ತವಿಕ | ಪ್ರಾರಂಭಿಕ ವರ್ಷ ಅಥವಾ ಆರ್ಥಿಕ ವರ್ಷ ಅದರಲ್ಲಿ ನಂತರ ಬರುವುದು | ಹಿಂದಿನ ವರ್ಷದ ವಾಸ್ತವಿಕ | ಪ್ರಸ್ತುತ ವರ್ಷದ ಲೆಕ್ಕಪರಿ ಶೋಧಿಕ ವಾಸ್ತವಿತ |
| 1 | ಆರ್ಥಿಕ ವರ್ಷ | | | | | | |
| 2 | ಒಟ್ಟು ಆದಾಯ (ಗುಂಪಿನ ಒಳಗಡೆಯ ಪ್ರತಿ ಪ್ರಮುಖ ಮೂಲವನ್ನು ನಿರ್ಧಿಷ್ಟಗೊಳಿಸಬೇಕು) | | | | | | |
| 1 | (ಎ). ಪದಾಧಿಕಾರಿಗಳಿಂದ ಹಣ ಒದಗಿಸುವುದು.<br>(ಬಿ). ಖಾಸಗಿ ವಲಯದಿಂದ ಕೊಡುಗೆ. | | | | | | |
| 2 | ವಿದೇಶೀ ಕೊಡುಗೆಗಳ ಮೂಲಕ ನಿಧಿ ಸಂಗ್ರಹ. | | | | | | |
| 3 | ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ವಲಯ ಸಂಘಟನೆಗಳು, ರಾಜ್ಯ ಸರ್ಕಾರದಿಂದ ನಿಧಿ ಸಂಗ್ರಹ. | | | | | | |

| | | | | | | | |
|---|---|---|---|---|---|---|---|
| 4 | ಕೇಂದ್ರ ಸರ್ಕಾರದ ಅನುದಾನ (ಯಾವ ಸಚಿವಾಲಯ/ಇಲಾಖೆ/ಸಿ.ಎ.ಪಿ.ಎ.ಆರ್.ಟಿ ಯಿಂದ ಎಂಬುದನ್ನು ಪ್ರತ್ಯೇಕವಾಗಿ ಸೂಚಿಸಬೇಕು) | | | | | | |
| 5 | ಫಲಾನುಭವಿಗಳ ಕೊಡುಗೆ/ಬಳಕೆದಾರರ ಶುಲ್ಕ. | | | | | | |
| 6 | ವಿವಿಧ ಪ್ರಕಾರದ ಆದಾಯ | | | | | | |
| 7 | ಮೇಲೆ ತಿಳಿಸದೆ ಇರುವ ಇತರ ಯಾವುದಾದರೂ ಮೂಲಗಳು (ಅಂದರೆ ಉತ್ಪನ್ನಗಳ ಮಾರಾಟ ಇತ್ಯಾದಿ) (ನಿರ್ಧಿಷ್ಟಪಡಿಸಬೇಕು) | | | | | | |
| 3 | ಒಟ್ಟು ವೆಚ್ಚಗಳು<br>1. ಆವರ್ತಕ<br>2. ಅನವರ್ತಕ | | | | | | |
| 4 | ಖರ್ಚು ವೆಚ್ಚದ ವಿವರಗಳು<br>1. ಗೌರವಧನ ಇತ್ಯಾದಿ<br>2. ಬಾಡಿಗೆ,<br>ಎ. ಕಟ್ಟಡ,<br>ಬಿ. ಪಿಠೋಪಕರಣಗಳು & ಪ್ರಷ್ಟಾಪಿತ ವಸ್ತುಗಳು,<br>ಸಿ. ಯಂತ್ರ ಘಟಕ, ಯಂತ್ರೋಪಕರಣಗಳು<br>ಡಿ. ಇತರ (ನಿರ್ಧಿಷ್ಟಪಡಿಸಿದ) | | | | | | |
| 5 | ಸಾದಿಲ್ವಾರು ವೆಚ್ಚಗಳು (ಮುದ್ರಣ ಮತ್ತು ಲೇಖನ ಸಾಮಾಗ್ರಿ, ದೂರವಾಣಿ, ವಾಹನ ಇತ್ಯಾದಿ (ನಿಧಿಷ್ಟಪಡಿಸಬೇಕು) | | | | | | |
| 6 | ಕಟ್ಟಡಗಳ ದುರಸ್ತಿ ನಿರ್ವಹಣಾ ವೆಚ್ಚ | | | | | | |
| 7 | ಇತರೆ (ನಿರ್ಧಿಷ್ಟಪಡಿಸಬೇಕು) | | | | | | |

Karnataka State Government Disabled Employees Association
Renukaradhya S
Indresh R

ಟಿಪ್ಪಣಿ: ಅವಶ್ಯಕವೆನಿಸಿದಲ್ಲಿ ಪ್ರತ್ಯೇಕ ಅನುಬಂಧವನ್ನು ಸೇರಿಸಬಹುದು.

ಅಧಿಕೃತವಾಗಿ ಸಹಿ ಹಾಕುವ ವ್ಯಕ್ತಿಯ ಸಹಿ,

(ಹೆಸರು, ಹುದ್ದೆ, ವಿಳಾಸ, ದಿನಾಂಕ, ಕಛೇರಿ ಮುದ್ರೆ)

## ಕರಾರು ಪತ್ರ

ಪರಿಶೋಧಿತವಾದ/ ಪರಿಶೋಧಿತಗೊಳ್ಳಬೇಕಾದ ಲೆಕ್ಕಪತ್ರಗಳು ಮತ್ತು ದಾಖಲೆಗಳ ಅನುಸಾರವಾಗಿ ಈ ಮೇಲೆ ತಿಳಿಸಿರುವ ಮಾಹಿತಿಗಳು ಸರಿಯಾಗಿ ಇರುತ್ತದೆ ಎಂದು ದೃಢೀಕರಿಸಲಾಗಿದೆ. ಸಂಘಟನೆಯ ಪದಾಧಿಕಾರಿಗಳ ಪರಮೋಚ್ಚ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಸರಿಯಾಗಿದೆ ಮತ್ತು ಅದನ್ನು ಅವಲೋಕಿಸಿ ಸಮಾಧಾನಕರವಾಗಿದೆ ಎಂದು ತಿಳಿದ ನಂತರ ಅವರು ಸಹಾಯಾನುದಾನ ಪಡೆದ ಯೋಜನೆಯ ಮೇಲ್ವಿಚಾರಣೆ ನಡೆಸುವ ಉದ್ದೇಶಕ್ಕಾಗಿ ಮಾಹಿತಿಯ ವಿವರಣೆಯನ್ನು ಪರಿಶೀಲಿಸಿ ಮಂಡಿಸಲು ದಿನಾಂಕ------------ (ನಕಲನ್ನು ಲಗತ್ತಿಸಿದೆ) ದ ಒಂದು ಠರಾವಿನ ಮೂಲಕ ಈ ಕೆಳಗೆ ಸಹಿ ಮಾಡಿದವರವನ್ನು ಅಧಿಕೃತಗೊಳಿಸಲಾಗಿದೆ.

1. ನಾನು ಈ ಯೋಜನೆಯ ನಿಯಮ ಹಾಗೂ ನಿಬಂಧನೆಗಳನ್ನು ಓದಿರುತ್ತೇನೆ ಮತ್ತು ಅವುಗಳಿಗೆ ಬದ್ಧವಾಗಿರುವುದಾಗಿ ಆಶ್ವಾಸನೆ ಹೊಂದಿರುತ್ತೇನೆ ಎಂದು ಈ ಮೂಲಕ ನಾನು ಸಹ ದೃಢಪಡಿಸುತ್ತೇನೆ. ಅಲ್ಲದೆ ವ್ಯವಸ್ಥಾಪಕರ ಪರವಾಗಿ ನಾನು ಈ ಕೆಳಗಿನ ನಿಬಂಧನೆಗಳನ್ನು ಒಪ್ಪುತ್ತೇನೆ.

ಎ. ಸಹಾಯಾನುದಾನವೆಂದು ಕೊಡಲಾದ ಎಲ್ಲ ಹಣ ಮತ್ತು ಕೇಂದ್ರೀಯ ಅನುದಾನದ ಮೂಲಕ ವಶಪಡಿಸಿಕೊಳ್ಳಲಾದ ಅಖಂಡವಾದ ಅಥವಾ ಗಣನೀಯ ಪ್ರಮಾಣದ ಎಲ್ಲ ಆಸ್ತಿಪಾಸ್ತಿಗಳನ್ನು, ಸಾಲಪಡೆಯಲಾಗಲೀ ವಿಲೇವಾರಿ ಮಾಡಲಾಗಲೀ, ಅಥವಾ ಅನುದಾನ ಯಾವ ಉದ್ದೇಶಕ್ಕಾಗಿ ಕೊಡಲ್ಪಟ್ಟಿತ್ತೋ ಅದಕ್ಕಿಂತ ಬೇರೆಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದನ್ನಾಗಲೀ ಮಾಡುವುದಿಲ್ಲ. ಹಾಗೊಂದು ವೇಳೆ ಸಂಘಟನೆಯು ತನ್ನ ಅಸ್ಥಿತ್ವವನ್ನು ಕಳೆದುಕೊಂಡರೆ ಅಥವಾ ಈ ಮೇಲೆ ಹೇಳಿರುವ ನಿಬಂಧನೆಗಳಿಗೆ ಭಂಗ ಉಂಟಾದರೆ ಅಂತಹ ಯಾವುದೇ ಸಂದರ್ಭದಲ್ಲಿ ಅಂತಹ ಆಸ್ತಿಪಾಸ್ತಿಗಳನ್ನು ರಾಜ್ಯ ಸರ್ಕಾರಕ್ಕೆ ಹಿಂತಿರುಗಿಸಲಾಗುತ್ತದೆ.

ಬಿ. ಯೋಜನೆಯ ಲೆಕ್ಕ ಪತ್ರಗಳನ್ನು ಸರಿಯಾಗಿ ಹಾಗೂ ಪ್ರತ್ಯೇಕವಾಗಿ ಕಾಪಾಡುತ್ತೇನೆ. ರಾಜ್ಯ ಸರ್ಕಾರದಿಂದ ನಿಯೋಜಿಸಲ್ಪಟ್ಟ ಅಧಿಕಾರಿಯಿಂದ ತಪಾಸಣೆಗೊಳಪಡಲು ಸರ್ವದ ಮುಕ್ತವಾಗಿರುತ್ತದೆ. ಅವು ರಾಜ್ಯಾದಾಯದ ಅಧಿಕಾರಿ ಮತ್ತು ಲೆಕ್ಕ ಪತ್ರ ಪರಿಶೋಧಕಾಧಿಕಾರಿಗಳು ಯುಕ್ತ ವಿವೇಚನೆಗನುಗುಣವಾಗಿ ಒಂದು ಪರೀಕ್ಷಾತ್ಮಕ ತಪಾಸಣೆಗೂ ಸಹ ಮುಕ್ತವಾಗಿಡಲಾಗಿರುತ್ತದೆ.

ಸಿ. ಅನುದಾನವು ಮಂಜೂರಾದ ಉದ್ದೇಶಗಳಿಗೆ ಬಳಕೆಯಾಗಿಲ್ಲ ಎಂದು ನಂಬಲು ರಾಜ್ಯ ಸರ್ಕಾರಕ್ಕೆ ಕಾರಣಗಳಿದ್ದಾಗ, ಸರ್ಕಾರವು ಮುಂದಿನಕಂತುಗಳ ಪಾವತಿಯನ್ನು ನಿಲ್ಲಿಸಬಹುದು ಮತ್ತು ಹಿಂದೆ ಬಿಡುಗಡೆ ಮಾಡಿದ್ದಂತಹ ಅನುದಾನವನ್ನು ತಾನೇ ನಿರ್ಣಯ ತೆಗೆದುಕೊಳ್ಳಬಹುದಾದಂತಹ ರೀತಿಯಲ್ಲಿ ಪುನ: ವಸೂಲಿ ಮಾಡಲು ಒಪ್ಪಿರುತ್ತೇನೆ.

ಡಿ. ಸಂಸ್ಥೆಯು ಸಾಮಾನ್ಯವಾಗಿ ತನ್ನ ಕೆಲಸ ಕಾರ್ಯಗಳಲ್ಲಿ ಹಾಗೂ ವಿಶೇಷವಾಗಿ ಕಟ್ಟಡ ನಿರ್ಮಾಣದ ಮೇಲಿನ ಖರ್ಚುವೆಚ್ಚಗಳ ಸಂಬಂಧದಲ್ಲಿ ವಿವೇಕಯುಕ್ತ ಮಿತವ್ಯಯವನ್ನು ಸಾಧಿಸಲು ಒಪ್ಪಿರುತ್ತೇನೆ.

ಇ. ಸರ್ಕಾರದಿಂದ ನಿರ್ದಿಷ್ಟಪಡಿಸಿದ ನಿಯಮಿತ ಕಾಲಾಂತರದಲ್ಲಿ ಯೋಜನಾ ಪ್ರಗತಿ ವರದಿಗಳನ್ನು ಒದಗಿಸಲು ಒಪ್ಪಿರುತ್ತೇನೆ.

Karnataka State Government Disabled Employees Association
Renukaradhya S
Indresh R

ಎಫ್. ಸದರಿ ಯೋಜನೆಗೆ ಇತರ ಯಾವುದೇ ಮೂಲಗಳಿಂದ (ಸರ್ಕಾರಿ/ ಖಾಸಗಿ ಅಥವಾ ವಿದೇಶಿ) ಅನುದಾನವನ್ನು ಸ್ವೀಕರಿಸಲಾಗಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಅಧಿಕೃತವಾಗಿ ಸಹಿ ಹಾಕುವ ವ್ಯಕ್ತಿಯ ಸಹಿ,

ಹೆಸರು:

ಹುದ್ದೆ:

ವಿಳಾಸ:

ದಿನಾಂಕ:

ಕಛೇರಿ ಮುದ್ರೆ:

Karnataka State Government Disabled Employees Association
Renukaradhya S
Indresh R

## ಅನುಬಂಧ-5

### ಜಿಲ್ಲಾ ಪುನರ್ವಸತಿ ಕೇಂದ್ರಕ್ಕೆ ಅನುಷ್ಠಾನಗಳ ಮಾರ್ಗಸೂಚಿಗಳು

### ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಉದ್ದೇಶಗಳು-

1. ತಪಾಸಣಾ ಶಿಬಿರಗಳ ಮೂಲಕ ಅಂಗವಿಕಲರ ಸಮೀಕ್ಷೆ ಹಾಗೂ ಗುರುತಿಸುವಿಕೆ
2. ಅಂಗವಿಕಲತೆಯನ್ನು ತಡೆಗಟ್ಟುವ ಬಗ್ಗೆ ಪ್ರೋತ್ಸಾಹಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು
3. ಬಾಲ್ಯವಸ್ಥೆಯಲ್ಲಿಯೇ ಅಂಗವಿಕಲತೆಯನ್ನು ಪತ್ತೆಹಚ್ಚಿ ತಡೆಗಟ್ಟುವುದು.
4. ಅಗತ್ಯವಿರುವ ಸಾಧನ ಸಲಕರಣೆಗಳನ್ನು ಗುರುತಿಸುವುದು, ಹಾಗೂ ಅವುಗಳನ್ನು ತಯಾರಿಸಿ ನೀಡುವುದು ಮತ್ತು ದುರಸ್ತಿ ಕಾರ್ಯಗಳು.
5. ದೈಹಿಕ, ಔದ್ಯೋಗಿಕ, ವಾಕ್‌ಚಿಕಿತ್ಸೆ ಇತರ ಸೇವೆಗಳನ್ನು ಒದಗಿಸುವುದು.
6. ಅಂಗವಿಕಲತೆ ಪ್ರಮಾಣ ಪತ್ರಗಳನ್ನು ಒದಗಿಸುವುದು, ರಿಯಾಯಿತಿ ದರದ ಬಸ್‌ಪಾಸ್, ಅಂಗವಿಕಲರಿಗೆ ಇತರೆ ರಿಯಾಯಿತಿಗಳನ್ನು ಒದಗಿಸಲು ಕ್ರಮ ವಹಿಸುವುದು
7. ಅಂಗವಿಕಲತೆ ನಿವಾರಣೆ ಶಸ್ತ್ರಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆ ಹಾಗೂ ಇತರೆ ಖಾಸಗಿ ಆಸ್ಪತ್ರೆಗಳಿಗೆ ಅಂಗವಿಕಲರನ್ನು ಕಳುಹಿಸಲು ಮಾಹಿತಿ ಸೇವೆ ನೀಡಲು ವ್ಯವಸ್ಥೆ ಮಾಡುವುದು.
8. ಸ್ವಯಂ ಉದ್ಯೋಗಕ್ಕೆ ಬ್ಯಾಂಕ್ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸುವುದು.
9. ವಿಕಲಚೇತನರ, ತಂದೆ ತಾಯಿಯಂದಿರು ಹಾಗೂ ಪೋಷಕರ ಸಮಾಲೋಚನಾ ಸಭೆಗಳನ್ನು ನಡೆಸುವುದು.
10. ವಿಕಲಚೇತನರಿಗೆ ಅಂಗವಿಕಲರ ಸ್ನೇಹಿ ವಾತಾವರಣ ಕಲ್ಪಿಸುವುದು.
11. ಶಿಕ್ಷಕರು, ಸಮುದಾಯ ಹಾಗೂ ಅಂಗವಿಕಲರ ಕುಟುಂಬಗಳಿಗೆ ಪುನಃಚೇತನ ತರಬೇತಿಯನ್ನು ನೀಡುವುದು.
12. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ವಿಕಲಚೇತನರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರನ್ನು ಸೂಕ್ತ ಕೆಲಸಗಳಲ್ಲಿ ತೊಡಗಿಸುವುದರ ಮೂಲಕ ಆರ್ಥಿಕವಾಗಿ ಸಬಲೀಕರಿಸುವುದು.

Karnataka State Government Disabled Employees Association
Renukaradhya S
Indresh R

### ಅನುಷ್ಠಾನಗೊಳಿಸುವ ಸಂಸ್ಥೆ-

ಸರ್ಕಾರದ ಆದೇಶದಂತೆ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳ ಅನುಷ್ಠಾನದ ಹೊಣೆಯನ್ನು ಆಯಾ ಜಿಲ್ಲೆಯ ಭಾರತೀಯ ರೆಡ್‌ಕ್ರಾಸ್ ಸೊಸೈಟಿಗಳ ಮೂಲಕ ಅನುಷ್ಠಾನಗೊಳಿಸಲಾಗುವುದು.

### ಜಿಲ್ಲಾ ನಿರ್ವಹಣಾ ಸಮಿತಿಯ ರಚನೆ-

1. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಗಳ ಸಂಬಂಧಿತ ಜಿಲ್ಲೆಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸುವುದು.
2. ಜಿಲ್ಲಾ ಪಂಚಾಯಿತಿಯ ಮುಖ್ಯ ನಿರ್ವಹಣಾಧಿಕಾರಿಗಳನ್ನು ಈ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುವರು.
3. ಉಳಿದ ಅಭಿವೃದ್ಧಿ ಇಲಾಖೆಗಳ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ಶಿಕ್ಷಣ ಇಲಾಖೆ) ಜಿಲ್ಲಾ ಮುಖ್ಯಸ್ಥರನ್ನು ಈ ಸಮಿತಿಯ ಸದಸ್ಯರಾಗಿ ನೇಮಿಸುವುದು.
4. ಜಿಲ್ಲೆಯಲ್ಲಿ ವಿವಿಧ ಅಂಗವಿಕಲ ವರ್ಗಗಳ ಅಭಿವೃದ್ಧಿಗೋಸ್ಕರ ಶ್ರಮಿಸುತ್ತಿರುವ ಪ್ರಮುಖ ಸಂಘ ಸಂಸ್ಥೆಗಳ ಪ್ರತಿನಿಧಿಯೊಬ್ಬರನ್ನು ಜಿಲ್ಲಾಧಿಕಾರಿಗಳು ಆಯ್ಕೆ ಮಾಡಿ ಈ ಸಮಿತಿಯ ಸದಸ್ಯರನ್ನಾಗಿ ನೇಮಿಸುವುದು.
5. ಒಬ್ಬರು ವಿಕಲಚೇತನ ವ್ಯಕ್ತಿಯನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಿಕೊಳ್ಳುವುದು.

6. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಈ ಸಮಿತಿಯ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುವರು.

7. ರೆಡ್‌ಕ್ರಾಸ್ ಸಂಸ್ಥೆಯ ಒಬ್ಬರು ಪದಾಧಿಕಾರಿ ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುವರು.

8. ಸದರಿ ಸಮಿತಿಯು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ(ಡಿ.ಡಿ.ಆರ್.ಸಿ) ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳತಕ್ಕದ್ದು.
9. ಜಿಲ್ಲಾ ನಿರ್ವಹಣಾ ಸಮಿತಿಯು ನೇಮಕಾತಿ ಸಮಿತಿಯನ್ನು ರಚಿಸುವ ಅಧಿಕಾರ ಹೊಂದಿರುತ್ತದೆ.
10. ನೇಮಕಾತಿ ಸಮಿತಿಯ ಸಾಕಷ್ಟು ಪಯತ್ನದ ಹೊರತಾಗಿಯೂ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಕ್ಕೆ ನಿಗದಿಪಡಿಸಲಾದ ಅರ್ಹತೆಯ ಪುನರ್ವಸತಿ ತಜ್ಞರು/ತಾಂತ್ರಿಕ ವರ್ಗದವರು/ಭೌತಿಕ ಹಾಗೂ ವೃತ್ತಿ ಚಿಕಿತ್ಸಕರು ದೊರೆಯದ ಇದಲ್ಲಿ ಜಿಲ್ಲಾ ನಿರ್ವಹಣಾ ಸಮಿತಿಯು ಸ್ಥಳೀಯರಾದ, ನಿಗದಿಪಡಿಸಿದ ವಿದ್ಯಾರ್ಹತೆಗೆ ಸಮೀಪವಾಗಿರುವ (ಫಿಟ್ಟರ್/ಟರ್ನರ್) ವಿಕಲಚೇತನ ವ್ಯಕ್ತಿಗಳನ್ನು ಆಯ್ಕೆ ಮಾಡಿ ರಾಷ್ಟ್ರೀಯ ಪುನರ್ವಸತಿ ಮಂಡಳಿಯಿಂದ ಅಂಗೀಕೃತಗೊಂಡ ತರಬೇತಿಗೆ ಒಳಪಡಿಸುವುದು. ತರಬೇತಿ ವೆಚ್ಚವನ್ನು ಜಿಲ್ಲಾ ಆಡಳಿತ ಅಥವಾ ಜಿಲ್ಲಾ ಪಂಚಾಯತ್‌ನಲ್ಲಿ ಲಭ್ಯವಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.
11. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಜಿಲ್ಲಾ ನಿರ್ವಹಣಾ ಸಮಿತಿಯು ಯೋಜನೆಯ ವ್ಯಾಪ್ತಿಗೊಳಪಟ್ಟು ಇಲಾಖೆಯ ಅನುಮೋದನೆ ಮೇರೆಗೆ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿದಂತೆ ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು.

**<u>ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಮತ್ತು ಸಮಿತಿಯ ಜವಾಬ್ದಾರಿಗಳು</u>**

1. ಸದರಿ ಕೇಂದ್ರದ ನಿರ್ವಹಣೆಯ ಹುದ್ದೆಗಳನ್ನು ಭಾರತೀಯ ರೆಡ್‌ಕ್ರಾಸ್ ಮುಖಾಂತರ ಗೌರವಧನದ ಆಧಾರದ ಮೇಲೆ ಪಡೆಯಲು ಜಿಲ್ಲಾ ನಿರ್ವಹಣಾ ಸಮಿತಿಯು ನಿಯಮಾನುಸಾರ ಕ್ರಮವಹಿಸುವುದು.

2. ಪುನರ್ವಸತಿ ಕೇಂದ್ರದ ವೆಚ್ಚಗಳಿಗೆ, ಆಯವ್ಯಯ ಬಿಡುಗಡೆಗೆ ಪ್ರಸ್ತಾವನೆಯನ್ನು ರೆಡ್‌ಕ್ರಾಸ್ ಸಂಸ್ಥೆಯು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳವರ ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ನಿರ್ದೇಶನಾಲಯವು ಸದರಿ ಪ್ರಸ್ತಾವನೆ ಪರಿಶೀಲಿಸಿ ಅನುದಾನವನ್ನು ತ್ರೈಮಾಸಿಕ ಕಂತುಗಳಲ್ಲಿ ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳವರಿಗೆ ಬಿಡುಗಡೆ ಮಾಡಿ ಅವರ ಮುಖಾಂತರ ಅನುದಾನದ ಬಿಲ್ಲಿನ ಮೂಲಕ ರೆಡ್‌ಕ್ರಾಸ್ ಸಂಸ್ಥೆಗೆ ಬಿಡುಗಡೆ ಮಾಡುವುದು.

3. ಸಂಸ್ಥೆಯ ವೆಚ್ಚಗಳಿಗೆ ಅನುಮೋದನೆಯನ್ನು ಜಿಲ್ಲಾ ನಿರ್ವಹಣಾ ಸಮಿತಿಯಲ್ಲಿ ಪಡೆಯತಕ್ಕದ್ದು

4. ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಲು ಹಾಗೂ ತರಬೇತಿ ವೆಚ್ಚವನ್ನು ಇತರೆ ವೆಚ್ಚಗಳಡಿ ಭರಿಸುವುದು. ಪ್ರಯಾಣ ವೆಚ್ಚಗಳನ್ನು ಪ್ರಯಾಣ ವೆಚ್ಚಗಳಡಿ ಭರಿಸತಕ್ಕದ್ದು,

5. ಅನಾವರ್ತಕ ವೆಚ್ಚಗಳಲ್ಲಿ ಮೆಷಿನರಿ ಮತ್ತು ಎಕ್ವಿಪ್‌ಮೆಂಟ್‌ಗಳನ್ನು ಅಗತ್ಯತೆ ಅನುಸಾರವಾಗಿ ದರಪಟ್ಟಿ/ಟೆಂಡರ್ ಕರೆದು ಕಡಿಮೆ ದರ ನಮೂದಿಸಿದ ಸಂಸ್ಥೆಯಿಂದ ಖರೀದಿಸುವುದು, ಕಂಪ್ಯೂಟರ್ ಮತ್ತು ಇತರೆ ಪರಿಕರಗಳನ್ನು ಸರ್ಕಾರದ ಅನುಮೋದಿಸಿದ ಡಿ.ಜಿ.ಎಸ್.ಡಿ ದರದಲ್ಲಿ ಸಂಬಂಧಿಸಿದ ಸಂಸ್ಥೆಗಳಿಂದ ಪಡೆಯುವುದು.

6. ಲೇಖನ ಸಾಮಗ್ರಿಗಳನ್ನು ದರಪಟ್ಟಿ ಮೂಲಕ ಕಡಿಮೆ ದರ ನಮೂದಿಸಿದ ಸಂಸ್ಥೆಯಿಂದ ಪಡೆಯುವುದು.

Karnataka State Government Disabled Employees Association
Renukaradhya S
Indresh R

7. ವೆಚ್ಚಗಳನ್ನು ನಿಗದಿಪಡಿಸಲಾದ ಆಯವ್ಯಯದ ಮಿತಿಯೊಳಗೆ ಭರಿಸತಕ್ಕದ್ದು ಹಾಗೂ ವೆಚ್ಚದ ವಿವರಗಳನ್ನು ಮಾಹೆವಾರು ನೀಡತಕ್ಕದ್ದು, ಪ್ರತಿ ವಾರ್ಷಿಕ ಅಂತ್ಯದಲ್ಲಿ ಆ ವರ್ಷದಲ್ಲಿ ಬಿಡುಗಡೆಯಾದ ಅನುದಾನಕ್ಕೆ ಉಪಯೋಗತಾ ಪ್ರಮಾಣ ಪತ್ರ ನೀಡುವುದು.
8. ಈ ಕೇಂದ್ರಗಳ ಎಲ್ಲಾ ಚಟುವಟಿಗಳ ಬಗ್ಗೆ ಕಾಲಕಾಲಕ್ಕೆ ನಿಗಾವಹಿಸಿ ಇತರೆ ಇಲಾಖೆಗಳ ಮತ್ತು ಸಂಘ ಸಂಸ್ಥೆಗಳ ಸಮನ್ವಯತೆಯೊಂದಿಗೆ ಕಾರ್ಯನಿರ್ವಹಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.
9. ಇತರೆ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಅಂಗವಿಕಲರ ಅಭಿವೃದ್ಧಿಗಾಗಿ ಸಲ್ಲಿಸುತ್ತಿರುವ ಸೇವೆಗಳನ್ನು ಈ ಕೇಂದ್ರದ ಚಟುವಟಿಕೆಗಳೊಂದಿಗೆ ಸಮನ್ವಯಗೊಳಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.
10. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದ ಎಲ್ಲಾ ಚಟುವಟಿಕೆಗಳು ಸಮರ್ಪಕ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.
11. ಪ್ರತಿ ತ್ರೈಮಾಸಿಕ ವರದಿ ಹಾಗೂ ಜಿಲ್ಲಾ ನಿರ್ವಹಣಾ ಸಮಿತಿಯ ನಡವಳಿಗಳನ್ನು ಪ್ರಧಾನ ಕಛೇರಿಗೆ ಕಳುಹಿಸುವುದು.

## ನೋಡಲ್ ಆಫಿಸರ್ / ಸಮಾಜ ಕಾರ್ಯಕರ್ತ

1) ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಂಯೋಜಿಸುವುದು ಮತ್ತು ಮೇಲ್ವಿಚಾರಣೆಯ ಜವಬ್ದಾರಿಯನ್ನು ನಿವ್ರಹಿಸುವುದು.
2) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದಿಂದ ಆಯೋಜಿಸುವ ಎಲ್ಲಾ ರೀತಿಯ ಶಿಬಿರಗಳಲ್ಲಿ ಬಾಗವಹಿಸುವುದು.
3) ಅಂಗವಿಕಲರ ಪುನರ್ವಸತಿ ಮತ್ತು ಸೌಲಭ್ಯಗಳ ಬಗ್ಗೆ ಅಂಗವಿಕಲರಿಗೆ ಆಪ್ತಸಮಾಲೋಚನೆಯನ್ನು ನಿಡುವುದು.
4) ಅರ್ಹ ವಿಕಲಚೇತನ ಫಲಾನುಭವಿಗಳಿಗೆ ಸಾಮಾಜಿಕ ಆರ್ಥಿಕ ಪುನರ್ವಸತಿ ಸೇವೆಗಳನ್ನು ಪಡೆದುಕೊಳುತ್ತಿರುವುದರ ಬಗ್ಗೆ ಖಾತ್ರಿ ಪಡೆಸಿಕೊಳ್ಳುವುದು.
5) ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಮೂಲಕ ಅಂಗವಿಕಲತೆ ಮತ್ತು ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಭಾಗವಹಿಸುವುದು.
6) ಜಿಲ್ಲಾ ಪನರ್ವಸತಿ ಕೇಂದ್ರ ಎಲ್ಲಾ ವಿಭಾಗಗಳ ಪ್ರಗತಿಯನ್ನು ಕ್ರೋಢೀಕರಿಸಿದ ಸಮಗ್ರ ತ್ರೈಮಾಸಿಕ ವರದಿಯನ್ನು ಜಿಲ್ಲಾ ನಿರ್ವಹಣಾ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸುವುದು (ಗ್ರಾಮಪಂಚಾಯ್ತಿ, ತಾಲ್ಲುಕು ಮತ್ತು ಜಿಲ್ಲಾ ಮಟ್ಟದ)
7) ಕೇಂದ್ರದ ಚಟುವಟಿಕಗಳ ಬಗ್ಗೆ ಮಾಸಿಕ ಅರ್ಧವಾರ್ಷಿಕ ಮತ್ತು ವಾರ್ಷಿಕ ಕ್ರಿಯಾಯೋಜನೆಯನ್ನು ತಯಾರಿಸುವುದು ಮತ್ತು ಕ್ರಿಯಾಯೋಜನೆಯ ಪ್ರಕಾರ ಚಟುವಟಿಕೆಗಳನ್ನು ನಡೆಸುವುದು.
8) ಸರ್ಕಾರಿ ಇಲಾಖೆಗಳೊಡನೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಜೊತೆ ಸಮನ್ವಯ ಏರ್ಪಡಿಸಿಕೊಂಡು ಅವುಗಳ ಮೂಲಕ ಅಂಗವಿಕಲರಿಗೆ ಸೌಲಭ್ಯಗಳು ದೊರಕುವಂತೆ ಕ್ರಮವಹಿಸದು.
9) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರದಿಂದ ಎಲ್ಲಾ ರೀತಿಯ ಅಂಗವಿಕಲರಿಗೆ ಉತ್ತಮ ಸೇವೆ ಸೌಲಭ್ಯಗಳು ಪರಿಣಾಮಕಾರಿಯಾಗಿ ದೊರೆಯುವಂತೆ ಕ್ರಮವಹಿಸುವುದು.
10) ಜಿಲ್ಲಾ ನಿರ್ವಣಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪುನರ್ವಸತಿ ಕೇಂದ್ರದ ನಡುವೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುವುದು

Karnataka State Government Disabled Employees Association
Renukaradhya S
Indresh R

## ಚಿಕಿತ್ಸಾ ಮನೋಶಾಸ್ತ್ರಜ್ಞರ ಕರ್ತವ್ಯ ಮತ್ತು ಜವಬ್ದಾರಿಗಳು

1) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಆಯೋಜಿಸುವ ಎಲ್ಲಾ ಚಿಕಿತ್ಸಾ ಮತ್ತು ಅನುಪಾಲನಾ ಶಿಬಿರಗಳಲ್ಲಿ ಬಾಗವಹಿಸುವುದು, ಬುದ್ಧಿಮಾಂದ್ಯತೆ ಮತ್ತು ಮಾನಸಿಕ ಅಸ್ವಸ್ಥರಿಗೆ ಸಂಬಂಧಿಸಿದ ವೈಯಕ್ತಿಕ ಪುರ್ನವಸತಿಗೆ ಸಂಬಂದಿಸಿದ ಚಟುವಟಿಕೆಗಳಲ್ಲಿ ಭಾಗವಹಿಸುವುದು.
2) ಬುದ್ಧಿಮಾಂದ್ಯತೆ ಮತ್ತು ಮಾನಸಿಕಸ್ವಸ್ಥತೆಗೆ ಸಂಬಂದಿಸಿದಂತೆ ಆಯೋಜಿಸುವ ಎಲ್ಲಾ ಅರಿವು ಹಾಗೂ ಜಾಗೃತಿ ಮೂಡಿಸುವ ಶಿಬಿರಗಳ ಯಶಸ್ವಿಯ ಜವಬ್ದಾರಿ ವಹಿಸುವುದು.
3) ಮನೋಶಾಸ್ತ್ರ ವಿಭಾಗದ ಎಲ್ಲಾ ಸಾಧನ-ಸಲಕರಣೆಗಳ ಹಾಗೂ ಉಪಕರಣಗಳ ನಿರ್ವಾಹಣೆಯ ಜವಾಬ್ದಾರಿ ವಹಿಸಿಕೊಳುವುದು.
4) ಮನೋರೋಗ ಚಿಕಿತ್ಸೆಗೆ ಸಂಬಂಧಿಸಿದ ಎಲ್ಲಾ ಸೇವೆಗಳು ಅರ್ಹ ವಿಕಲಚೇತನರಿಗೆ ದೊರೆಯುವಂತೆ ಖಾತ್ರಿ ಪಡಿಸಿಕೊಳ್ಳುವುದು.
5) ಈ ಘಟಕಕ್ಕೆ ಸಂಬಂದಿಸಿದ ಎಲ್ಲಾ ಪುನರ್ವಸತಿ ಚಟುವಟಿಕೆಗಳ ಪ್ರಗತಿ ಬಗ್ಗೆ ವರದಿ ಸಿದ್ದಪಡಿಸಿ ಸಂಬಂದಪಟ್ಟ ಅಧಿಕಾರಿಗಳಿಗೆ ಕಾಲ-ಕಾಲಕ್ಕೆ ಸಲ್ಲಿಸುವುದು.
6) ಚಿಕಿತ್ಸಾ ಮನೋಶಾಸ್ತ್ರಜ್ಞ ತನ್ನ ತಂಡದ ಮನೋರೋಗ ಚಿಕಿತ್ಸಕರು, ವಿಶೇಷ ಶಿಕ್ಷಕ ಹಾಗೂ ಇತರೆ ತಜ್ಞರೊಂದಿಗೆ ಸಮುನ್ವಯ ಸಾಧಿಸಿ ಕೇಂದ್ರದ ಚಟುವಟಿಕೆಗಳು ಮತ್ತು ಪುನರ್ವಸತಿ ಸೇವೆಗಳು ಪರಿಣಾಮಕಾರಿಯಾಗಿ ಎಲ್ಲಾ ಅರ್ಹ ವಿಕಲಚೇತನರಿಗೆ ದೊರೆಯುವಂತೆ ಕ್ರಮವಹಿಸುವುದು.

## ಕೃತಕಾಂಗಗಳ ಜೋಡಣೆ ಮಾಡುವ ಅಭಿಯಂತರರು

1. ಎಲ್ಲಾ ತಪಾಸಣಾ, ಚಿಕಿತ್ಸಾ ಹಾಗೂ ಅನುಪಾಲನಾ ಶಿಬಿರಗಳಲ್ಲಿ ಭಾಗವಹಿಸುವುದು.
2. ಕೃತಕ ಅಂಗಾಂಗಳು ಮತ್ತು ಸಾಧನ ಸಲಕರಣೆಗಳ ಜೋಡಣೆ ಪುನರ್ವಸತಿಗೆ ಎಲ್ಲಾ ಕಾರ್ಯಚಟುವಟಿಕೆಗಳ ಜವಬ್ದಾರಿಯನ್ನು ವಹಿಸುವುದು.
3. ಕೃತಕ ಅಂಗಾಂಗಳ ಹಾಗೂ ಸಾಧನ ಸಲಕರಣೆಗಳ ಪ್ರಯೋಗಾಲಯದ ಎಲ್ಲಾ ಚಟುವಟಿಕೆಗಳ ಸಮನ್ವಯತೆ ಸಾಧಿಸುವುದು
4. ಕೇಂದ್ರದಲ್ಲಿ ಅರ್ಹ ಅಂಗವಿಕಲರಿಗೆ ಕೃತಕ ಅಂಗಾಂಗಗಳ ಜೋಡಣೆ ಮತ್ತು ಅಂಗವಿಕಲರ ಅಗತ್ಯಕ್ಕೆ ಅನುಗುಣವಾಗಿ ಸೇವೆಗಳು ದೊರೆಯುವಂತೆ ಖಾತ್ರಿ ಪಡಿಸಿಕೊಳ್ಳುವುದು
5. ಕೃತಕಾಂಗಳ ಜೋಡಣೆ ಹಾಗೂ ಸಾಧನ ಸಲಕರಣೆ ವಿತರಿಸಿದ ಚಟುವಟಿಕೆಗಳ ಬಗ್ಗೆ ಸಾಧಿಸಿದ ಪ್ರಗತಿ ವರದಿಯನ್ನು ತಯಾರಿಸಿ ಕಾಲ-ಕಾಲಕ್ಕೆ ವರದಿ ಸಲ್ಲಿಸುವಿಕೆಗೆ ಜವಾಬ್ದಾರರಾಗಿರುತ್ತಾರೆ.
6. ಅಡಿಪ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳ ಸಲ್ಲಿಕೆಯ ಜವಬ್ದಾರಿಯನ್ನು ನಿರ್ವಹಿಸತಕ್ಕದ್ದು ಹಾಗೂ ಸಾಧನ ಸಲಕರಣಗಳ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿ, ಆಯವ್ಯಯ ಬಿಡುಗಡೆಗೆ ಅನುಪಾಲನೆ ಮಾಡುವುದು.
7. ಕೃತಕಾಂಗಗಳ ಹಾಗೂ ಸಾಧನ ಸಲಕರಣೆಗಳ ಘಟಕದ ಲೆಕ್ಕಪುಸ್ತಕಗಳ ನಿರ್ವಹಣೆ ಮತ್ತು ಉಗ್ರಾಣ ಗುಮಾಸ್ತರ ಸಹಕಾರದೊಂದಿಗೆ ಉಗ್ರಾಣದ ಜವಬ್ದಾರಿಗಳನ್ನು ನಿರ್ವಹಿಸುವುದು.
8. ಯಂತ್ರೋಪಕರಣಗಳ ನಿರ್ವಹಣೆ, ದುರಸ್ಥಿ ಹಾಗೂ ಖರೀದಿಗೆ ಸಂಬಂದಿಸಿದ ಜವಬ್ದಾರಿಗಳನ್ನು ನಿರ್ವಹಿಸುವುದು.
9. ಕೃತಕಾಂಗಗಳ ಜೋಡಣೆಗೆ ಸಂಬಂದಿಸಿದಂತೆ ಕಾಲ-ಕಾಲಕ್ಕೆ ಸರ್ಕಾರದಿಂದ ಬರುವ ಎಲ್ಲಾ ಯೋಜನೆಗಳ ಅನುಷ್ಠಾನದ ಜವಬ್ದಾರಿಗಳನ್ನು ನಿರ್ವಹಿಸುವುದು.

Karnataka State Government Disabled Employees Association
Renukaradhya S
Jitesh R

## ವಿಶೇಷ ಶೀಕ್ಷಕರ ಜವಾಬ್ದಾರಿ ಕರ್ತವ್ಯಗಳು

1) ವಿಶೇಷ ಶಿಕ್ಷಕರು ತಮ್ಮ ವರ್ಗದ (ಹೆಚ್,ಐ,ವಿ,ಐ.ಎಂ.ಆರ್) ನ್ಯೂನತೆ ಮಕ್ಕಳನ್ನು/ವ್ಯಕ್ತಿಗಳನ್ನು ಗುರುತಿಸುವ ಶಿಬಿರಗಳಲ್ಲಿ ಭಾಗವಹಿಸವುದು.

2) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಕ್ಕೆ ಬರುವ ಅಂಗವಿಕಲ ವ್ಯಕ್ತಿಗಳಿಗೆ ಅವರ ನ್ಯೂನತೆಗೆ ಅನುಗುಣವಾಗಿ ಸಂಬಂಧಪಟ್ಟ ವಿಶೇಷ ಶಿಕ್ಷಕರು ಅರ್ಹ ವಿಕಲಚೇತನರಿಗೆ ಸೇವೆಗಳನ್ನು ಒದಗಿಸುವುದು. ಶ್ರವಣ ನ್ಯೂನತೆ/ವಿಶೇಷ ಶಿಕ್ಷಕರು (ಹೆಚ್.ಐ) ದೃಷ್ಟಿದೋಷ ವಿಶೇಷ ಶಿಕ್ಷಕ (ವಿ.ಐ) ಬುದ್ಧಿಮಾಂದ್ಯತೆ/ವಿಶೇಷ ಶಿಕ್ಷಕರು (ಎಂ.ಆರ್).

3) ವಿಶೇಷ ಶಿಕ್ಷಕರು ಶ್ರವಣ ತಜ್ಞರು, ಕಿವಿ, ಗಂಟಲು, ಮೂಗು ವೈದ್ಯಾಧಿಕಾರಿಗಳ ಜೊತೆ ನೇತ್ರ ತಜ್ಞರು ಚಲನವಲನ ಶಿಕ್ಷಕರೊಂದಿಗೆ ಹಾಗೂ ಮನಃಶಾಸ್ತ್ರಜ್ಞರು ಹಾಗೂ ಮನೋರೋಗ ಚಿಕಿತ್ಸಕರೊಂದಿಗೆ ಸಮನ್ವಯತೆ ಏರ್ಪಡಿಸಿಕೊಂಡು ವಿಕಲಚೇತನರ ಪುನರ್ ವಸತಿಗೆ ಸೇವೆ ಸಲ್ಲಿಸಬೇಕು.

4) ಆಯಾ ವರ್ಗದ ಅಂಗವಿಕಲರಿಗೆ ಕೇಂದ್ರದಲ್ಲಿ ಸೇವೆಗಳು ಗುಣಮಟ್ಟ ಹಾಗೂ ಪರಿಣಾಮಕಾರಿಯಾಗಿ ದೊರೆಯುವಂತೆ ಖಾತ್ರಿ ಪಡಿಸಿಕೊಳ್ಳವುದು.

5) ಪ್ರಗತಿ ವರದಿಯನ್ನು ತಯಾರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ನೀಡುವುದು.

6) ಸರ್ಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಬೇಕಾದ ತಾಂತ್ರಿಕ ಸೇವೆಗಳನ್ನು ನೀಡುವುದು.

7) ಜಿಲ್ಲೆಯಲ್ಲಿ ಸಂಬಂಧಿಸಿದ ಅಂಗವಿಕಲತೆವಾರು ಸಮೀಕ್ಷಾ ಮಾಹಿತಿಯನ್ನು ಹಾಗೂ ಸಂಪನ್ಮೂಲಗಳನ್ನು ಕ್ರೋಢಿಕರಿಸುವುದು.

8) ಜಿಲ್ಲೆಯಲ್ಲಿನ ಎಲ್ಲಾ ಅಂಗವಿಕರಿಗೆ ಸೇವೆ ಸಲ್ಲಿಸುವ ಸ್ವಯಂ ಸೇವಾ ಸಂಸ್ಥೆಗಳ ಮಾಹಿತಿಯನ್ನು ಕ್ರೋಢಿಕರಿಸುವುದು.

9) ಜಿಲ್ಲೆಯಲ್ಲಿರುವ ಎಲ್ಲಾ ಮಕ್ಕಳ ಸಮೀಕ್ಷೆ ನಡೆಸಿ, 0–6 ವಯೋಮಾನದ ಮಕ್ಕಳನ್ನು ಅಂಗನವಾಡಿಗಳಿಗೆ ಹಾಗೂ 6–18 ವರ್ಷದ ಮಕ್ಕಳನ್ನು ಸಾಮಾನ್ಯ ಶಾಲೆ/ವಿಷೇಶ ಶಾಲೆಗಳಿಗೆ ದಾಖಲು ಮಾಡಲು ಅಗತ್ಯಕ್ರಮವಹಿಸುವುದು ಹಾಗೂ ಮಾಹಿತಿಯನ್ನು ಕ್ರೋಢೀಕರಿಸಿ ಸಲ್ಲಿಸುವುದು.

Karnataka State Government Disabled Employees Association
Renukaradhya S
Indresh R

## ಕೃತಕಾಂಗಗಳ ಹಾಗೂ ಸಾಧನ ಸಲಕರಣೆಗಳ ಜೋಡಣಾ ತಾಂತ್ರಿಕರ ಕರ್ತವ್ಯಗಳು

1. ಕೃತಕಾಂಗಗಳ ಹಾಗೂ ಸಾಧನ ಸಲಕರಣೆಗಳ ಅಭಿಯಂತರರ ವ್ಯಾಪ್ತಿಯಲ್ಲಿ ಕಾರ್ಯನಿರ್ವಸುವುದು.
2. ಯೋಜನೆಯ ವ್ಯಾಪ್ತಿಗೆ ಬರುವ ಎಲ್ಲಾ ಕೃತಕಾಂಗಗಳ, ಸಾಧನ ಸಲಕರಣೆಗಳ ಹಾಗೂ ಯಂತ್ರೋಪಕರಣಗಳ ನಿರ್ವಹಣೆ ಮತ್ತು ಅವುಗಳ ಜವಾಬ್ದಾರಿವಹಿಸುವುದು.
3. ತನ್ನ ಕರ್ತವ್ಯಗಳ ನಿರ್ವಹಣೆಯ ವರದಿಯನ್ನು ಕೃತಕಾಂಗಗಳ ಹಾಗೂ ಸಾಧನ ಸಲಕರಣೆಗಳ ಅಭಿಯಂತರರವರಿಗೆ ವರದಿ ಸಲ್ಲಿಸುವುದು.
4. ಸರ್ಕಾರದ ಆದೇಶದಂತೆ ನಿರ್ದಿಷ್ಟ ಸೇವೆಗಳಲ್ಲಿ ಪ್ರಗತಿ ಸಾಧಿಸುವುದು.
5. ಸರ್ಕಾರದ ವಿವಿಧ ಯೋಜನೆಗಳಡಿ ಅಂಗವಿಕಲರಿಗೆ ಒದಗಿಸುವ ಸಾಧನೆ ಸಲಕರಣೆಗಳನ್ನು ಅರ್ಹ ಪಲಾನುಭವಿಗಳ ಅಗತ್ಯಕ್ಕೆ ತಕ್ಕಂತೆ ಒದಗಿಸುವುದು.

## ಮಾತು ಮತ್ತು ಶ್ರವಣ ತಜ್ಞರ ಕರ್ತವ್ಯಗಳು

1. ಅಂಗವಿಕಲತಾ ತಪಾಸಣಾ ಶಿಬಿರ ಮತ್ತು ಅನುಪಾಲನಾ ಶಿಬಿರಗಳಲ್ಲಿ ಭಾಗವಹಿಸುವುದು.
2. ಮಾತು ಮತ್ತು ಶ್ರವಣ ನ್ಯೂನತಾ ವಿಭಾಗದ ಉಪಕರಣಗಳ ನಿರ್ವಹಣೆ ಮತ್ತು ಅವುಗಳ ಜವಾಬ್ದಾರಿಯನ್ನು ನಿರ್ವಹಿಸುವುದು.
3. ಸರ್ಕಾರದ ಆದೇಶದಂತೆ ಅರ್ಹ ವಿಕಲಚೇತನರಿಗೆ ಗುಣಾತ್ಮಕ ಸೇವೆಗಳನ್ನು ನೀಡುವಂತೆ ಕ್ರಮವಹಿಸುವುದು.
4. ತಮ್ಮ ವಿಭಾಗದ ಪ್ರಗತಿ ಬಗ್ಗೆ ವರದಿ ತಯಾರಿಸಿ ಕಾಲ–ಕಾಲಕ್ಕೆ ಸಂಬಂಧಿಸಿದ ಅಧಿಕಾರಿಗೆ ಸಲ್ಲಿಸುವುದು.
5. ಇ.ಎನ್.ಟಿ ತಜ್ಞರು, ವಿಶೇಷ ಶಿಕ್ಷಕರು, ಚಿಕಿತ್ಸಾ ಮನೋಶಾಸ್ತ್ರಜ್ಞರು ಹಾಗೂ ಇತರೆ ಎಲ್ಲಾ ತಜ್ಞರ ತಂಡದೊಂದಿಗೆ ಸಮಾನ್ವಯ ಸಾದಿಸುವುದು.
6. ಮಾತು ಮತ್ತು ಶ್ರವಣ ನ್ಯೂನತೆ ಬಗ್ಗೆ ಸಮೂದಾಯಕ್ಕೆ ಮತ್ತು ಪೋಷಕರಿಗೆ ಹಾಗೂ ಅರ್ಹ ಅಂಗವಿಕಲರಿಗೆ ಅರಿವು ಮತ್ತು ಜಾಗೃತಿ ಮಾಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜವಾಬ್ದಾರಿ ನಿರ್ವಹಿಸುವುದು.
7. ಶ್ರವಣ ಸಾಧನಗಳ ಖರೀದಿ ಹಾಗೂ ವಿತರಣೆಗೆ ಸಂಬಂಧಿಸಿದಂತೆ ಉಗ್ರಾಣ ಗುಮಾಸ್ತರಿಗೆ ಸಹಕರಿಸುವುದು.
8. ಅಡಿಪ್ ಹಾಗೂ ಸರ್ಕಾರಿ ಯೋಜನೆಗಳಡಿಯಲ್ಲಿ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಸಿದ್ದಪಡಿಸಲು ಸಹಕರಿಸುವುದು.

## ಭೌತಿಕ/ವೃತಿ ಚಿಕಿತ್ಸಕರು ಚಿಕಿತ್ಸಕರ ಕರ್ತವ್ಯಗಳು/ಜವಾಬ್ದಾರಿಗಳು:

1. ಅಂಗವಿಕಲತೆ ತಪಾಸಣಾ ಶಿಬಿರ ಮತ್ತು ಅನುಪಾಲಾ ಶಿಬಿರಗಳಲ್ಲಿ ಭಾಗವಹಿಸುವುದು.
2. ಅರ್ಹ ವಿಕಲಚೇತನ ಫಲಾನುಭವಿಗಳಿಗೆ ಭೌತಿಕ/ವೃತಿ ಚಿಕಿತ್ಸಾ ಸೇವೆಗಳನ್ನು ಒದಗಿಸುವುದರ ಜೊತೆಗೆ ಗುಣಮಟ್ಟ ಮತ್ತು ಪರಿಣಾಮಕಾರಿ ಯೋಜನೆಗಳ ಅನುಷ್ಠಾನದ ಜವಾಬ್ದಾರಿ ನಿರ್ವಹಿಸುವುದು ಹಾಗೂ ಸರ್ಕಾರದ ಆದೇಶದಂತೆ ಕಾಲ–ಕಾಲಕ್ಕೆ ನಿರ್ದಿಷ್ಟ ಗುರಿಯನ್ನು ಸಾಧಿಸುವುದು.
3. ಪಿಜಿಯೋ ಮತ್ತು ಆಕ್ಯೂಪೇಷನಲ್ ಚಿಕಿತ್ಸೆ ಸೇವೆಗಳ ಪ್ರಗತಿ ಬಗ್ಗೆ ವರದಿ ತಯಾರಿಸುವುದು ಮತ್ತು ಸಂಬಂಧಿಸಿದ ಅಧಿಕರಿಗಳಿಗೆ ಸಲ್ಲಿಸುವುದು.
4. ಈ ಯೋಜನೆಯ ಪ್ರಕಾರ ಪಿಜಿಯೋ ಥೆರಪಿಗೆ ಸಂಬಂಧಿಸಿದ ಸಾಧನಾ–ಸಲಕರಣೆಗಳು ನಿರ್ವಹಣೆ ಮತ್ತು ಅವುಗಳ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು.
5. ಇತರೆ ತಜ್ಞರುಗಳಾದ ದೈಹಿಕ ತಜ್ಞರು, ಪಿ ಮತ್ತು ಓ ಹಾಗೂ ಇತರೆ ಎಲ್ಲಾ ತಜ್ಞರೊಂದಿಗೆ ಸಮನ್ವಯ ಸಾಧಿಸುವುದು.
6. ಜನಜಾಗೃತಿ ಮತ್ತು ಅರಿವು ಮೂಡಿಸವ ಕಾರ್ಯಕ್ರಮಗಳ ಜವಾಬ್ದಾರಿ ವಹಿಸುವುದು ಮತ್ತು ಪೋಷಕರಿಗೆ ಮತ್ತು ವಿಕಲಚೇತನರಿಗೆ ಈ ಭೌತಿಕ/ವೃತ್ತಿ ಚಿಕಿತ್ಸೆ ಸೇವೆಗಳ ಬಗ್ಗೆ ಪ್ರಾತ್ಯಕ್ಷಿಕೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

[ಬಿ.ಕಮಲಮ್ಮ]
ಸರ್ಕಾರದ ಅಧೀನ ಕಾರ್ಯದರ್ಶಿ–2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬಹುಮಹಡಿ ಕಟ್ಟಡ
ಬೆಂಗಳೂರು

Karnataka State Government Disabled Employees Association
Renukaradhya S
Indresh K

# ಸರ್ಕಾರಿ ಆದೇಶ

ವಿಷಯ: ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರದಿಂದ ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಅಂಗವಿಕಲರಿಗೆ ಮೀಸಲಿಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಇಡಿ:57:ಟಿಇಸಿ:99 ದಿ: 26-6-99
2. ಸರ್ಕಾರಿ ಆದೇಶ ಸಂ: ಇಡಿ:117:1ಇಇಸಿ:2000 ದಿ: 23-6-2000
3. ಅಧಿಸೂಚನೆ ಸಂಖ್ಯೆ ಇಡಿ:10:ಯುಜಿಸಿ:99:ದಿ:3-6-99
4. ದಿನಾಂಕ: 26-8-2000ದ ಕಾಂ:801:ರೈವಿ:99-2000 ಕ್ರಮಾಂಕದ ಕಾಲೇಜು ಶಿಕ್ಷಣ ಆಯುಕ್ತರ ಪತ್ರ
5. ದಿ: 26-9-2000ದ ಪಪೂಶಿ: ಶೃಂಗ:ಅಂಗವಿಕಲ:2000-01 ಕ್ರಮಅಂಕದ ಪದವಿ ಪೂರ್ವ ಶಿಕ್ಷಣ ನಿರ್ದೇಶಕರ ಪತ್ರ

## ಪ್ರಸ್ತಾವನೆ:

1995ರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣವಾಗಿ ಭಾಗವಹಿಸುವ) ಅಧಿನಿಯಮದ (1996ರ ಒಂದನೇ ಸಂಖ್ಯೆಯ ಕೇಂದ್ರ, ಅಧಿನಿಯಮ) 39ನೇ ಪ್ರಕರಣದಡಿ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರದಿಂದ ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 3 ಕ್ಕಿಂತಲೂ ಕಡಿಮೆ ಇಲ್ಲದಂತೆ ಸೀಟುಗಳನ್ನು ಅಂಗವಿಕಲರಿಗೆ ಮೀಸಲಿಡಬೇಕಾಗಿದೆ.

ಈ ಅಧಿನಿಯಮದಡಿ ಇಂಜನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ದಿ: 26-9-1999ರ ಇಡಿ 65 ಟಿಇಸಿ 99 ಕ್ರಮಾಂಕದ ಸರ್ಕಾರಿ ಆದೇಶದಲ್ಲಿ ಉಚಿತ ಸೀಟುಗಳ ಶೇ. 3ರಷ್ಟು ಸೀಟುಗಳನ್ನು ಅಂಗವಿಕಲರಿಗೆ ಮೀಸಲಿರಿಸಿ ಆದೇಶ ಹೊರಡಿಸಲಾಗಿದೆ.

ಅದೇ ರೀತಿ ದಿ: 23-6-2000ರ ಇಡಿ 117 ಟಿಇಸಿ 2000 ಕ್ರಮಾಂಕದ ಆದೇಶದಲ್ಲಿ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೊಮಾ ಕೋರ್ಸುಗಳಲ್ಲಿ ಅಂಗವಿಕಲರಿಗೆ ಶೇ. 3 ರಷ್ಟು ಸೀಟುಗಳನ್ನು ಕಾಯ್ದಿರಿಸಿ ಆದೇಶಿಸಲಾಗಿದೆ. ಜೊತೆಗೆ ದಿ: 3-6-1999ರ ಇಡಿ 10 ಯುಜಿಸಿ 99ರ ಅಧಿಸೂಚನೆಯಲ್ಲಿ ಟಿಸಿಹೆಚ್ ಮತ್ತು ಬಿಇಡಿ ಪ್ರವೇಶಕ್ಕೆ ಸಂಬಂಧಪಟ್ಟಂತೆ ಹೊರಡಿಸಿರುವ ನಿಯಮಾವಳಿಯಲ್ಲಿಯೂ ಅಂಗವಿಕಲರಿಗೆ ಶೇ. 3 ರಷ್ಟು ಸೀಟುಗಳ ಮೀಸಲಾತಿಯನ್ನು ಕಾಯ್ದಿರಿಸಲಾಗಿದೆ. ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇತರ ಶಿಕ್ಷಣ ಅಭ್ಯಾಸ ಕ್ರಮಗಳಲ್ಲಿ ಅಂದರೆ ಉನ್ನತ ಶಿಕ್ಷಣ ಪದವಿ ಪೂರ್ವ ಶಿಕ್ಷಣ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣದ ಅಭ್ಯಾಸ ಕ್ರಮಗಳಲ್ಲಿಯೂ ಅಂಗವಿಕಲರಿಗೆ ಶೇ. 3 ರಷ್ಟು ಸೀಟುಗಳನ್ನು ಕಾಯ್ದಿರಿಸುವ ಬಗ್ಗೆ ಪರಿಶೀಲಿಸಲಾಗಿದೆ.

ಕಾಲೇಜು ಶಿಕ್ಷಣ ವ್ಯಾಪ್ತಿಗೆ ಒಳಪಡುವ ಪದವಿ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಬಿ.ಎ., ಬಿ.ಎಸ್‌ಸಿ, ಬಿ.ಕಾಂ, ಬಿ.ಹೆಚ್.ಎಂ., ಬಿ.ಬಿ.ಎಂ. ಮುಂತಾದ ಎಲ್ಲಾ ಪದವಿ ಕೋರ್ಸುಗಳಲ್ಲಿ ಅಂಗವಿಕಲರು ವ್ಯಾಸಂಗ ಮಾಡಬಲ್ಲರೆಂದು ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ಅಭಿಪ್ರಾಯಪಟ್ಟಿದ್ದಾರೆ.

ಪದವಿಪೂರ್ವ ಶಿಕ್ಷಣ ಹಂತದಲ್ಲಿ ಕಲಾ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲೂ ಪ್ರತಿ ವಿಭಾಗದಲ್ಲೂ ವಿವಿಧ ವಿಷಯಗಳನ್ನೊಳಗೊಂಡ ಬೇರೆ ಬೇರೆ ಸಂಯೋಜನೆಗಳಿದ್ದು ಕಲಾ ವಿಭಾಗ ಮತ್ತು ವಾಣಿಜ್ಯ ವಿಭಾಗದಲ್ಲಿರುವ ಎಲ್ಲಾ ಐಚ್ಛಿಕ ವಿಷಯಗಳನ್ನು ಯಾವುದೇ ಅಂಗವಿಕಲ ವಿದ್ಯಾರ್ಥಿ ಅಭ್ಯಾಸ ಮಾಡಬಹುದಾಗಿರುತ್ತದೆಂದು ಮತ್ತು ವಿಜ್ಞಾನ ವಿಭಾಗದಲ್ಲಿ ಪ್ರಾಯೋಗಿಕ ಪಠ್ಯ ಕ್ರಮವಿರುವುದರಿಂದ ವಿದ್ಯಾರ್ಥಿಗಳು ಪ್ರಯೋಗಗಳನ್ನು ಸ್ವತಃ ಮಾಡಬೇಕಾಗುವುದೆಂದು ಅಂಗವಿಕಲತೆ ಇರುವ ವಿದ್ಯಾರ್ಥಿ ಪ್ರಯೋಗಗಳನ್ನು ಮಾಡಲು ಸಾಧ್ಯವಾದರೆ ವಿಜ್ಞಾನ ವಿಭಾಗದಲ್ಲಿಯೂ ಸಹ ಅಂಗವಿಕಲತೆಯ ಅಭ್ಯಾಸ ಮಾಡಲು ಸಾಧ್ಯವಿದೆ ಎಂದು ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಪದವಿ ಪೂರ್ವ ಶಿಕ್ಷಣ ನಿರ್ದೇಶಕರು ತಿಳಿಸಿದ್ದಾರೆ.

Karnataka State Government Disabled Employees Association
Renukaradhya S
Indresh R

1995ರ ಅಧಿನಿಯಮದ 36ನೇ ಪ್ರಕರಣದಡಿಯಲ್ಲಿ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರದಿಂದ ನೆರವು ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 3 ಕ್ಕಿಂತಲೂ ಕಡಿಮೆ ಇಲ್ಲದಂತ ಸೀಟುಗಳನ್ನು ಅಂಗವಿಕಲರಿಗೆ ಮೀಸಲಿಡಬೇಕಾದ ಉಪ ಬಂಧಗಳಿರುವ ಹಿನ್ನೆಲೆಯಲ್ಲಿ ಹಾಗೂ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಉನ್ನತ ಪದವಿಪೂರ್ವ, ಪ್ರೌಢ ಹಾಗೂ ಮಾಧ್ಯಮಿಕ ಮತ್ತು ಇತರೆ ಅಭ್ಯಾಸ ಕ್ರಮಗಳಲ್ಲಿ ಅಂಗವಿಕಲರಿಗೆ ಶೇ. 3 ರಷ್ಟು ಸೀಟುಗಳನ್ನು ಕಾದಿರಿಸುವ ಸಂಬಂಧದಲ್ಲಿ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ: ಇಡಿ 10 ಎಸ್‌ಟಿಬಿ 93 ಬೆಂಗಳೂರು ದಿನಾಂಕ: 2-1-2001

ವಿಶ್ವ ವಿದ್ಯಾನಿಲಯವು ಸೇರಿದಂತೆ ಸರ್ಕಾರಿ ಹಾಗೂ ಸರ್ಕಾರದಿಂದ ನೆರವು ಪಡೆಯುತ್ತಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಪ್ರೌಢಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಹಾಗೂ ಇತರೆ ಶಿಕ್ಷಣ ಅಭ್ಯಾಸಗಳ ಕೋರ್ಸುಗಳ ಪ್ರವೇಶದಲ್ಲಿ ಶೇ. 3 ರಷ್ಟು ಕಡಿಮೆ ಇಲ್ಲದಂತೆ ಸೀಟುಗಳನ್ನು ಅಂಗವಿಕಲರ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದೆಂದು ಆದೇಶಿಸಲಾಗಿದೆ.

ಮೀಸಲಾತಿಗೆ ಸಂಬಂಧಪಟ್ಟಂತೆ ಈಗ ಜಾರಿಯಲ್ಲಿರುವ ಸರ್ಕಾರಿ ಆದೇಶದ ರೀತ್ಯ ಶಾಲಾ ಕಾಲೇಜುಗಳಲ್ಲಿ ಪ್ರತಿಯೊಂದು ಅಧ್ಯಯನ ಕೋರ್ಸಿನ ವಿದ್ಯಾರ್ಥಿ ಪ್ರಮಾಣದಲ್ಲಿ ಕಡೆಯ ಪಕ್ಷ ಶೇ. 3 ರಷ್ಟು ಸೀಟುಗಳನ್ನು ಅಂಗವಿಕಲರಿಗೆ ಶೇ. 50 ರಷ್ಟು ಮೀಸಲಾತಿ ಪರಿಮಿತಿಯಲ್ಲಿ ಮೀಸಲಿಡತಕ್ಕದ್ದು. ದಿ: 15-7-96ರ ಸಿಆಸುಇ 34STC 95ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ರೋಸ್ಟರ್‌ನಲ್ಲಿರುವಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳವರು ಹಾಗೂ ಮಹಿಳೆ ಮತ್ತು ಮಾಜಿ ಸೈನಿಕರು ಹಾಗೂ ಅಂಗವಿಕಲರಿಗೆ ರಿಕ್ತಸ್ಥಾನಗಳನ್ನು 100 ಬಿಂದುಗಳಲ್ಲಿ ಮೀಸಲಾಗಿಟ್ಟಿದ್ದು ಅದರಲ್ಲಿಯೇ ಶೇ. 3 ರಷ್ಟು ಅಂಗವಿಕಲರ ಮೀಸಲಾತಿಯ ಅನ್ವಯವಾಗುವುದು. ಈ ರೋಸ್ಟರನ್ನು ಅನುಸರಿಸಿ ಶೇ. 3 ರಷ್ಟು ಸೀಟುಗಳನ್ನು ಅಂಗವಿಕಲರಿಗೆ ಸಾಮಾನ್ಯ ಅಭ್ಯರ್ಥಿಯನ್ನೊಳಗೊಂಡ ರೋಸ್ಟರ್ ಬಿಂದುಗಳನ್ನು ಅಂತಹ ಅಭ್ಯರ್ಥಿಗಳಿಗೆ ಅನುಸರಿಸುವುದು. ಯಾವುದೇ ವ್ಯಾಸಂಗದ ಕೋರ್ಸುಗಳ ನಿಕಾಯಕ್ಕೆ ಎಂ.ಫಿಲ್., ಪಿಹೆಚ್‌ಡಿ ಯಂತಹ ಕಾರ್ಯಕ್ರಮಗಳಿಗೆ ಹಾಗೂ ಇನ್ನಿತರ ಪ್ರವೇಶದ ಉದ್ದೇಶಕ್ಕಾಗಿ ಶೇ. 50 ಪರಿಮಿತಿಯನ್ನು ಮೀರದೆ ಶೇ. 3 ರಷ್ಟು ಸೀಟುಗಳನ್ನು ಅಂಗವಿಕಲರಿಗೆ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅಂತಹ ಅಂಗವಿಕಲ ವ್ಯಕ್ತಿಗಳಿಗೆ ನೀಡಿದ ಮೀಸಲಾತಿಯನ್ನು ಅವರು ಯಾವ ಪ್ರವರ್ಗಕ್ಕೆ ಸೇರಿರುತ್ತಾರೋ ಅಥವಾ ಸಾಮಾನ್ಯ ವರ್ಗಕ್ಕೆ ಸೇರಿರುತ್ತಾರೋ ಅಂತಹ ನಿರ್ದಿಷ್ಟ ಬಿಂದುವಿಗೆ ಸರಿದೂಗಿಸಬೇಕು. ಒಟ್ಟಾರೆ ಶೇ. 50 ರಷ್ಟು ಮೀಸಲಾತಿ ಮೀರದಂತೆ ಮತ್ತು ರೋಸ್ಟರ್ ಬಿಂದುವಿನ ಚೌಕಟ್ಟಿನಲ್ಲಿ ಅಂತಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

ಮೇಲಿನ ಆದೇಶವು ತಕ್ಷಣದಿಂದ ಜಾರಿಗೆ ಬಂದಿದ್ದು ಅದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಆದೇಶ ಸಂಪೂರ್ಣವಾಗಿ ಪಾಲನೆಯಾಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರುಗಳ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

(ಕೆ.ಎಸ್. ಗೋಪಾಲಕೃಷ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಸಾಮಾನ್ಯ)

ಸಂಕಲನಕಾರರು ರಾಜ್ಯಪತ್ರ, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿದ ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

Karnataka State Government Disabled Employees Association
Renukaradhya S
Indresh R S

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲ ಯುವಕ/ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ ಕಲ್ಪಿಸುವ ಯೋಜನೆಯನ್ನು ಹೆಚ್ಚುವರಿಯಾಗಿ 7 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಮಮಇ:145:ಪಿಹೆಚ್‌ಪಿ:2006(1)ದಿನಾಂಕ:29-07-06
2. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಏಕಕಡತ ಸಂಖ್ಯೆ: ಅಂಹಿನಾಕಇ:ಯೋ:10:2007-08
3. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 22-05-2007 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆ.

### ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಅಂಗವಿಕಲ ಯುವಕ/ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯದಲ್ಲಿರುವ ಹೊಸ ಯೋನೆಯನ್ನು ಬೆಳಗಾಂ, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಗುಲ್ಬರ್ಗ, ರಾಯಚೂರು, ಬಾಗಲಕೋಟೆ, ಬಿಜಾಪುರ, ಉತ್ತರ ಕನ್ನಡ, ಕೋಲಾರ, ಹಾಸನ, ತುಮಕೂರು, ಮೈಸೂರು, ಶಿವಮೊಗ್ಗ, ಹಾವೇರಿ, ಗದಗ್, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು (ಗ್ರಾ), ಬೀದರ್ ಒಟ್ಟು 20 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ. ಆದರಿ ಆದೇಶದ ಅನುಬಂಧ-1 ರಲ್ಲಿ ಯೋಜನೆಯ ವಿವರ ಮತ್ತು ಷರತ್ತುಗಳನ್ನು ನಿಗದಿಪಡಿಸಲಾಗಿದೆ.

ನಿರ್ದೇಶಕರು, ಅಂಗವಿಕಲ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ (2) ರಲ್ಲಿನ ಅವರ ಏಕ ಕಡತದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ''ಅಂಗವಿಕಲ ಯುವಕ / ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ ಕಲ್ಪಿಸುವ'' ಈ ಯೋಜನೆಯನ್ನು ಉಳಿದ 7 ಜಿಲ್ಲೆಗಳಿಗೂ ವಿಸ್ತರಿಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮಸಂಖ್ಯೆ (3) ರಲ್ಲಿ ಓದಲಾದ ನಡವಳಿಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿತವಾದ ಅಧಿಕಾರಯುತ ಸಮಿತಿಯ ದಿನಾಂಕ: 22-05-2007ರ ಸಭೆಯಲ್ಲಿ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ತರಬೇತಿ ಮತ್ತು ಉದ್ಯೋಗ ಯೋಜನೆಯಡಿ ತರಬೇತಿ ನೀಡಿ ಉದ್ಯೋಗ ಕಲ್ಪಿಸುವ ಸಂಸ್ಥೆಗಳಿಗೆ ಹೆಚ್ಚಿನ ಮೊತ್ತವನ್ನು ಹಾಗೂ ತರಬೇತಿಯನ್ನು ಮಾತ್ರ ನೀಡುವ ಸಂಸ್ಥೆಗಳಿಗೆ ಕಡಿಮೆ ಮೊತ್ತವನ್ನು ನೀಡಲು ಉದ್ದೇಶಿಸಿರುವುದನ್ನು ಗಮನಿಸಿ ಅನುಮೋದನೆ ನೀಡುತ್ತಾ ಪ್ರತಿ ತರಬೇತಿಗೆ ಅಂಗವಿಕಲರ ಸಂಖ್ಯೆ ಬಗ್ಗೆ ನಿರ್ದೇಶನಾಲಯದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ಹಾಗೂ ಊಟ, ವಸತಿಗೋಸ್ಕರ ಪ್ರಸ್ತುತ ಇರುವ ದರವನ್ನು ಮುಂದುವರಿಸಲು ಹಾಗೂ 2007-08ನೇ ಸಾಲಿನ ಆಯವ್ಯಯದ ಮೊತ್ತದಲ್ಲಿ ಉಳಿದ ಮಂಡ್ಯ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಚಾಮರಾಜನಗರ, ಕೊಪ್ಪಳ ಮತ್ತು ಉಡುಪಿ ಜಿಲ್ಲೆಗೆ ವಿಸ್ತರಿಸಲು ಅನುಮೋದನೆಯನ್ನು ನೀಡಿದ್ದು ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

### ಆದೇಶ ಸಂಖ್ಯೆ: ಮಮಅ:244:ಪಿಹೆಚ್‌ಪಿ:2006(3) ಬೆಂಗಳೂರು.ದಿನಾಂಕ:25-06-2007

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಅಂಗವಿಕಲ ಯುವಕ/ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ ಕಲ್ಪಿಸುವ ಹೊಸ ಯೋಜನೆಯನ್ನು ಈ ಕೆಳಕಂಡ ಉಳಿದ 7 ಜಿಲ್ಲೆಗಳಲ್ಲಿ ಪ್ರಾರಂಭಿಸಲು 2007-08ನೇ ಸಾಲಿನ ಆಯವ್ಯಯದ ಮಿತಿಯಲ್ಲಿ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟಂತ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.



Karnataka State Government Disabled Employees Association
Renukaradhya S
Indresh R

1) ಮಂಡ್ಯ, 2) ಚಿಕ್ಕಮಗಳೂರು, 3) ದಕ್ಷಿಣ ಕನ್ನಡ, 4) ಕೊಡಗು, 5) ಚಾಮರಾಜನಗರ, 6) ಕೊಪ್ಪಳ, 7) ಉಡುಪಿ

ಸರ್ಕಾರಿ ಆದೇಶ ಸಂಖ್ಯೆ: ಮಮಇ:145:ಪಿಹೆಚ್‌ಪಿ:2006(1) ದಿನಾಂಕ: 29-07-2006 ರಲ್ಲಿನ ಅನುಬಂಧ (1) ರಲ್ಲಿರುವ ಮಾರ್ಗಸೂಚಿಗಳು ಈ ಯೋಜನೆಗಳಿಗೂ ಅನ್ವಯಿಸುತ್ತವೆ.

ಸದರಿ ಯೋಜನೆಗೆ ಸಂಬಂಧಿಸಿದ ವೆಚ್ಚವನ್ನು ಲೆಕ್ಕಶೀರ್ಷಿಕೆ ''2235-02-101-0-48 (ಯೋಜನೇತರ)'' ರಡಿ ಲಭ್ಯವಿರುವ ಆಯವ್ಯಯದಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರತಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಪೀಠೋಪಕರಣಗಳಿಗೆ ಪ್ಲಾಸ್ಟಿಕ್ ವೈರ್ ಹೆಣಿಕೆ ದುರಸ್ತಿ ಮಾಡಲು ಅಂಧ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸೂಚನೆಗಳು.

ಪ್ರಸ್ತಾವನೆ: ರಾಜ್ಯದ ಅಂಧ ಒಕ್ಕೂಟಗಳು ಆಗಿಂದಾಗ್ಗೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುತ್ತಾ ಅಂಧರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಸೂಕ್ತ ಪ್ರಾತಿನಿಧ್ಯತೆ ದೊರಕುತ್ತಿಲ್ಲವೆಂದು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸರ್ಕಾರವು ಇದನ್ನು ಪರಿಗಣಿಸಿದೆ.

**ಆದೇಶ ಸಂಖ್ಯೆ: ಸಿ ಅ ಸು ಇ 25 ಸೇಸ್ಥಇ 93 ಬೆಂಗಳೂರು ದಿನಾಂಕ: 26ನೇ ಏಪ್ರಿಲ್ 1994**

### ಆದೇಶ

ಸರ್ಕಾರವು ಅಂಧರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಿ, ಅಂಧ ಅಭ್ಯರ್ಥಿಗಳನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮ 1977ರ ನಿಯಮ 9ರನ್ವಯ ನೇಮಕಾತಿ ಮಾಡುವಾಗ ವಿಶೇಷ ಸೂಚನೆಗಳನ್ನು ನಿಬಂಧನೆ ಮತ್ತು ಷರತ್ತುಗಳನ್ನು ಕೆಳಕಂಡಂತೆ ವಿಧಿಸಿ ಆದೇಶಿಸಿದೆ.

1. ಕರ್ನಾಟಕ ಸಾಮಾನ್ಯ ಸೇವೆಗಳು (ಕಂದಾಯ ಅಧೀನ ಶಾಖೆಗಳು) ವೃಂದ ಮತ್ತು ನೇಮಕಾತಿ ನಿಯಮಗಳು 1977 ಪ್ರಕಾರ ಗ್ರೂಪ್- ಡಿ ಹುದ್ದೆಗಳು ಮಂಜೂರಾಗಿದ್ದು ಮತ್ತು ಆ ಹುದ್ದೆಗಳಿಗೆ ಆಯಾಯ ಜಿಲ್ಲಾಧಿಕಾರಿಗಳೇ ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ. ಆ ಹುದ್ದೆಗಳನ್ನು ನೇಮಕಾತಿ ನಿಯಮಗಳ ಪ್ರಕಾರ ಭರ್ತಿ ಮಾಡಲಾಗುತ್ತಿದ್ದು, ಮಂಜೂರಾದ ಒಂದು ಹುದ್ದೆಯಲ್ಲಿ ಅಂಧ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬೇಕು. ಅವರಿಗೆ ಪೀಠೋಪಕರಣಗಳಿಗೆ ಪ್ಲಾಸ್ಟಿಕ್ ವೈರ್ ಹೆಣಿಕೆ ದುರಸ್ತಿ ಕೆಲಸವನ್ನು ವಹಿಸಬೇಕು. ಈ ಅಂಧ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಪ್ಲಾಸ್ಟಿಕ್ ವೈರ್ ಹೆಣಿಕೆಯಲ್ಲಿ ಪರಿಣತಿ ಹೊಂದಿದವರನ್ನು ಆಯ್ಕೆ ಮಾಡಬೇಕು. ವೇತನ ಭತ್ಯೆಯನ್ನು ಆಯಾಯ ಜಿಲ್ಲಾಧಿಕಾರಿ ಕಛೇರಿಯಿಂದ ಭರಿಸತಕ್ಕದ್ದು.
2. ಅಂಧ ಅಭ್ಯರ್ಥಿಗಳು ಪ್ಲಾಸ್ಟಿಕ್ ಹೆಣಿಕೆ ದುರಸ್ತಿ ಬಗ್ಗೆ ರಾಜ್ಯ ಸರ್ಕಾರ; ಕೇಂದ್ರ ಸರ್ಕಾರಗಳಿಂದ ಅಂಗೀಕರಿಸಲ್ಪಟ್ಟ ಸಂಸ್ಥೆಗಳಿಂದ ನೀಡುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

3. ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳ ಪೀಠೋಪಕರಣಗಳನ್ನು ಅಂಥ ಅಭ್ಯರ್ಥಿಗಳಿಂದ ದುರಸ್ತಿ ಮಾಡಿಸಬೇಕು. ಈ ದುರಸ್ತಿಗೆ ತಗಲುವ ವೆಚ್ಚವನ್ನು ಆಯಾ ಇಲಾಖೆಗಳೇ ಭರಿಸಬೇಕು.
4. ಆಯಾಯ ಜಿಲ್ಲಾಧಿಕಾರಿಯವರು ಈ ಅಂಥ ಅಭ್ಯರ್ಥಿಗಳಿಗೆ ಕೆಲಸವನ್ನು ನಿರ್ವಹಿಸಲು ಸೂಕ್ತ ಸ್ಥಳಾವಕಾಶವನ್ನು ಮಾಡಿಕೊಡಬೇಕು.
5. ಈ ಹುದ್ದೆಗಳನ್ನು ಒಂದು ಸಲ ಮಾತ್ರ ಭರ್ತಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ
(ಕಣ್ಣನ್ ಕುಟ್ಟಿ ಕುಳಾವಿಲ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

Karnataka State Government Disabled Employees Association
Renukaradhya S
Nandeesh B R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ದೂರವಾಣಿ ಬೂತುಗಳನ್ನು ವಿತರಿಸುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ: ನಿಅಕಇ/16/ಯೋಜನೆ/96-97/3609/ದಿನಾಂಕ: 23-11-96.

### ಪ್ರಸ್ತಾವನೆ:

ದಿನಾಂಕ: 23-11-96ರ ಪತ್ರದಲ್ಲಿ ನಿರ್ದೇಶಕರು ಅಂಗವಿಕಲರ ಕಲ್ಯಾಣ ಇಲಾಖೆ ಇವರು ಅಂಗವಿಕಲರಿಗೆ ದೂರವಾಣಿ ಬೂತುಗಳನ್ನು ವಿತರಿಸುವ ಒಂದು ಯೋಜನೆಯನ್ನು ರೂಪಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಿರುತ್ತಾರೆ.

ಈ ಯೋಜನೆ ಪ್ರಕಾರ ಒಂದು ದೂರವಾಣಿ ಬೂತಿನ ನಿರ್ಮಾಣ ನಿವ್ವಳ ದರ ರೂ. 10,620-00 ಮತ್ತು ತೆರಿಗೆ ಹಾಗೂ ಪೌಡರ್ ಕೋಟಿಂಗ್ ವೆಚ್ಚವು ಪ್ರತ್ಯೇಕವಾಗಿರುತ್ತದೆ. ಸದರಿ ಬೂತುಗಳ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಮತ್ತಿತರ ಮಾಹಿತಿಗಳನ್ನು ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ನಿಯಮಿತ ಇವರಿಂದ ಪಡೆದುಕೊಳ್ಳಲಾಗಿದ್ದು ಬೂತಿನ ವಿಶಿಷ್ಟ ಪ್ರಕಾರ ಮತ್ತು ನಕಾಶೆಗಳನ್ನು ಸಹ ಒದಗಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ 50 ದೂರವಾಣಿ ಬೂತುಗಳನ್ನು ಅಂಗವಿಕಲರಿಗೆ ವಿತರಿಸಲು ಉದ್ದೇಶಿಸಲಾಗಿದ್ದು ಇದಕ್ಕೆ ರೂ. 12,000-00 ಮತ್ತು ಅದಕ್ಕಿಂತ ಕಡಿಮೆ ವರಮಾನವಿರುವ ಅಂಗವಿಕಲ ವ್ಯಕ್ತಿಗಳಿಗೆ ಈ ಯೋಜನೆಯ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆಯೆಂದು ನಿರ್ದೇಶಕರು ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ.

### ಸರ್ಕಾರಿ ಆದೇಶ ಸಂಖ್ಯೆ: ಮಮಅ 433 ಪಿಹೆಚ್‌ಪಿ 96
### ಬೆಂಗಳೂರು, ದಿನಾಂಕ: 29ನೇ ಮಾರ್ಚ್ 97

ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ. ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ದೃಷ್ಟಿಯಿಂದ ಹಾಗೂ ಈ ಬಗ್ಗೆ ಅಂಗವಿಕಲರಿಂದ ಬಂದಿರುವ ಬೇಡಿಕೆಗಳನ್ನು ಪರಿಶೀಲಿಸಿದ ನಂತರ 1996-97ನೇ

ಸಾಲಿನಲ್ಲಿ ಅಂಗವಿಕಲರಿಗಾಗಿ 50 ದೂರವಾಣಿ ಬೂತುಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿತರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

1. ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯುವ ಅಂಗವಿಕಲರ ಕುಟುಂಬದ ವಾರ್ಷಿಕ ವರಮಾನ ರೂ. 12,000-00 ಮತ್ತು ಅದಕ್ಕಿಂತಲೂ ಕಡಿಮೆ ಇರಬೇಕು.
2. ಫಲಾನುಭವಿಗಳ ವಯಸ್ಸು 18 ಮತ್ತು ಅದಕ್ಕಿಂತ ಮೇಲ್ಪಟ್ಟಿರಬೇಕು.
3. ಈ ಕೆಳಕಂಡ ಅಂಗವೈಕಲ್ಯವುಳ್ಳ ವ್ಯಕ್ತಿಗಳನ್ನು ಪರಿಗಣಿಸತಕ್ಕದ್ದು.
   1. ದೈಹಿಕ ಅಂಗವಿಕಲರು
   2. ಅಂಧರು
   3. ಕಿವುಡರು ಮತ್ತು ಮೂಗರು
   4. ಕುಷ್ಠರೋಗ ನಿವಾರಿತ ಅಂಗವಿಕಲರು
   5. ಬಹು ಅಂಗವಿಕಲತೆಯುಳ್ಳವರು
4. ಬೂತಿನ ವಿಶಿಷ್ಟ ಪ್ರಕಾರ ಮತ್ತು ನಕಾಶೆಯು ಈ ಆದೇಶಕ್ಕೆ ಲಗತ್ತಿಸಿರುವ ವಿವರಗಳಂತೆ ಇರತಕ್ಕದ್ದು. ದೂರವಾಣಿ ಬೂತುಗಳ ನಿರ್ಮಾಣ ಕಾರ್ಯವನ್ನು ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರಿಗೆ ವಹಿಸಿಕೊಡಲು ಆದೇಶಿಸಲಾಗಿದೆ. ಆದರೆ ಈ ಮಂಜೂರಾತಿಯು ಸಂಸ್ಥೆಯು ಬೂತುಗಳ ಗುಣಮಟ್ಟ, ಯುನಿಟ್ ಕಾಸ್ಟ್ ಮತ್ತು ಸರಬರಾಜು ಮೂಲ ಮುಂತಾದ ಖರೀದಿ ಕಾರ್ಯ ವಿಧಾನಗಳಲ್ಲಿನ ಷರತ್ತುಗಳನ್ನು ಪೂರೈಸುವ ನಿಬಂಧನೆಗೆ ಒಳಪಟ್ಟಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

(ಗೀತಾ ರಮೇಶ್)

ಸರ್ಕಾರದ ಅಧೀನ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ''ಅಂಗವಿಕಲ ಯುವಕ / ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ ಕಲ್ಪಿಸುವ'' ಹೊಸ ಯೋಜನೆಯನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಪತ್ರ ಸಂಖ್ಯೆ: ನಿಅಕಇ:ಯೋ:7:2006-07:ದಿನಾಂಕ:3-5-2006

2. 17-6-2006 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

### ಪ್ರಸ್ತಾವನೆ:

ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯವರು ಮೇಲೆ ಕ್ರಮಾಂಕ 1 ರಲ್ಲಿ ಓದಲಾದ ದಿನಾಂಕ: 3-5-2006 ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅಂಗವಿಕಲ ಯುವಕ/ಯುವತಿಯರಿಗೆ ಉದ್ಯೋಗಕ್ಕೆ ತರಬೇತಿ ನೀಡಿ ಉದ್ಯೋಗ ಕಲ್ಪಿಸುವ ಹೊಸ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

ಅಂಗವಿಕಲರನ್ನು ಮುಖ್ಯವಾಹಿನಿಗೆ ತರಬೇಕಾಗಿದ್ದಲ್ಲಿ ಅವರಿಗೆ ಉದ್ಯೋಗಾವಕಾಶವನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ 940643 ಅಂಗವಿಕಲರು ಇರುವರೆಂದು 2001ನೇ ಜನಗಣತಿಯ ಪ್ರಕಾರ ತಿಳಿದು ಬಂದಿರುತ್ತದೆ. ಈ ಒಟ್ಟು ಅಂಗವಿಕಲರಲ್ಲಿ 18 ರಿಂದ 45 ವರ್ಷ ವಯಸ್ಸಿನವರು ಸುಮಾರು 369257 ಅಂಗವಿಕಲರು ಇರುವರೆಂದು ಅಂದಾಜಿಸಲಾಗಿದೆ. ಇದಲ್ಲದೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿಸಿರುವ ಸಂಖ್ಯೆ 31237 ತಿಳಿದು ಬಂದಿರುತ್ತದೆ. ರಾಜ್ಯ ಸರ್ಕಾರದ ಅಂಗವಿಕಲರಿಗೆ ಗ್ರೂಪ್ ಸಿ ಮತ್ತು ಡಿ ವೃಂದದಲ್ಲಿ ಶೇ. 5 ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಎಲ್ಲಾ ಅಂಗವಿಕಲರಿಗೆ ರಾಜ್ಯ ಸರ್ಕಾರವೇ ನೇಮಕಾತಿಯನ್ನು ಒದಗಿಸಲು ಸಾಧ್ಯವಾಗುತ್ತಿರಲ್ಲ. ಈ ಹಿನ್ನೆಲೆಯಲ್ಲಿ ಅಂಗವಿಕಲರಿಗೆ ಸ್ಥಳೀಯ ಬೇಡಿಕೆಗಳಿಗನುಗುಣವಾಗಿ ಅವಶ್ಯಕತೆ ತರಬೇತಿಯನ್ನು ನೀಡಿ ಅವರನ್ನು ಸಶಕ್ತರನ್ನಾಗಿ ಮಾಡಿ ಉದ್ಯೋಗಗಳನ್ನು ಪಡೆಯಲು ಸಹಾಯ ಮಾಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ ಎಂದು ಪ್ರಸ್ತಾವನೆಯಲ್ಲಿ ನಿರ್ದೇಶಕರು ತಿಳಿಸಿರುತ್ತಾರೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಪ್ರಸ್ತಾವನೆಯನ್ನು ದಿನಾಂಕ: 17-6-2006 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಸಮಿತಿಯು ಈ ಯೋಜನೆಯನ್ನು ಮೊದಲ ಹಂತದಲ್ಲಿ 1. ಬೆಳಗಾಂ, 2. ಧಾರವಾಡ, 3. ದಾವಣಗೆರೆ, 4. ಚಿತ್ರದುರ್ಗ, 5. ಗುಲ್ಬರ್ಗಾ, 6. ರಾಯಚೂರು, 7. ಬಾಗಲಕೋಟೆ, 8. ಬಿಜಾಪುರ, 9. ಉತ್ತರ ಕನ್ನಡ, 10. ಕೋಲಾರ, 11. ಹಾಸನ, 12. ತುಮಕೂರು, 13. ಮೈಸೂರು, 14. ಶಿವಮೊಗ್ಗ, 15. ಹಾವೇರಿ, 16. ಗದಗ್, 17. ಬಳ್ಳಾರಿ, 18. ಬೆಂಗಳೂರು ನಗರ, 19. ಬೆಂಗಳೂರು ಗ್ರಾಮಾಂತರ, 20. ಬೀದರ್ ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆಯ ಸಹಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ. ನಿರ್ದೇಶಕರ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂ: ಮಮಇ:145:ಪಿಹೆಚ್‌ಪಿ:2006(1):ಬೆಂಗಳೂರು ದಿ:29-7-2006

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಲ್ಲಿ ಅಂಗವಿಕಲರಿಗೆ ತರಬೇತಿ ಮತ್ತು ಉದ್ಯೋಗ ಒದಗಿಸುವ ಉದ್ದೇಶದಿಂದ ಯೋಜನೆಯಡಿ ''ಅಂಗವಿಕಲ ಯುವಕ/ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ

Karnataka State Government Disabled Employees Association
Renukaradhya S
Indresh R

ಕಲ್ಪಿಸುವ'' ಹೊಸ ಯೋಜನೆಯನ್ನು ಈ ಕೆಳಕಂಡ 20 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಈ ಯೋಜನೆಯ ಮಾರ್ಗಸೂಚಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ ಯೋಜನೆಯನ್ನು 20 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡಂತೆ ಅನುಷ್ಠಾನಗೊಳಿಸಲಾಗುವುದು. ತರಬೇತಿಯ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಊಟ, ವಸತಿ ಒದಗಿಸಲು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಯ ಆಯ್ಕೆಯನ್ನು ಆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಇವರುಗಳನ್ನೊಳಗೊಂಡ ಸಮಿತಿಯು ಆಯ್ಕೆ ಮಾಡುವುದು. ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯ ಅವಧಿಯಲ್ಲಿ ಊಟ, ವಸತಿ ಸೌಕರ್ಯಗಳನ್ನು ಒದಗಿಸುವುದು ಆಯ್ದ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯವಾಗಿರುತ್ತದೆ.

ತರಬೇತಿ ನೀಡಲು ರಾಜ್ಯಮಟ್ಟದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅಧಿನಿಯಮ 1999 ಹಾಗೂ ನಿಯಮಗಳ 2000ರ ಅಡಿಯಲ್ಲಿ ನಿಯಮಾನುಸಾರ ಏಜೆನ್ಸಿಯನ್ನು ಆಯ್ಕೆ ಮಾಡಲಾಗುತ್ತದೆ. ತರಬೇತಿ ನೀಡುವ ಏಜೆನ್ಸಿಯು ಕನಿಷ್ಟ ಶೇ. 75 ರಷ್ಟು ಪ್ರಶಿಕ್ಷಣಾರ್ಥಿಗಳಿಗೆ / ತರಬೇತಿದಾರರಿಗೆ ಉದ್ಯೋಗಾವಕಾಶ ಕಲ್ಪಿಸುವ ಜವಾಬ್ದಾರಿಯನ್ನು ಹೊಂದಬೇಕು.

(ಪಾರ್ವತಿ ಕೇಶವಾಚಾರ್)
ಸರ್ಕಾರದ ಉಪ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು

Karnataka State Government Disabled Employees Association
Renukaradhya S
Indresh B

**ಸರ್ಕಾರಿ ಆದೇಶ ಸಂಖ್ಯೆ: ಮಮಇ:145:ಪಿಹೆಚ್‌ಪಿ:2006(1):ಬೆಂಗಳೂರು ದಿ: 29-7-2006**

**ಅನುಬಂಧ - 1**

## ಅಂಗವಿಕಲ ಯುವಕ / ಯುವತಿಯರಿಗೆ ಉದ್ಯೋಗಕ್ಕಾಗಿ ತರಬೇತಿ ನೀಡಿ ಉದ್ಯೋಗ ಸೌಲಭ್ಯ ಕಲ್ಪಿಸುವ ಯೋಜನೆ:

ಅಂಗವಿಕಲರು ಈಗ ಲಭ್ಯವಿರುವ ಹುದ್ದೆಗಳಿಗೆ ಬೇಕಾಗುವ ಅರ್ಹತೆಯ ಜೊತೆಗೆ ಕೌಶಲ್ಯಗಳನ್ನು ಪಡೆಯಬೇಕಾಗಿರುತ್ತದೆ. ಆದ್ದರಿಂದ ಅಂಗವಿಕಲರು ಉದ್ಯೋಗಗಳನ್ನು ಪಡೆಯಲು ಅನುಕೂಲವಾಗುವಂತೆ ಅವರನ್ನು ಸಶಕ್ತರನ್ನಾಗಿ ಮಾಡಿ ಮಾರ್ಗದರ್ಶನ ನೀಡಲು ಈ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಯೋಜನೆಯ ಮುಖ್ಯ ಉದ್ದೇಶವು ಅಂಗವಿಕಲ ಯುವಕ/ಯುವತಿಯರಿಗೆ ಇರುವ ಉದ್ಯೋಗಾವಕಾಶಗಳಲ್ಲಿ ಸೂಕ್ತವಾದ ಕೌಶಲ್ಯ ತರಬೇತಿ ಹಾಗೂ ಮಾರ್ಗದರ್ಶನ ನೀಡಿ ಅವರು ಸೂಕ್ತ ಉದ್ಯೋಗವನ್ನು ಹೊಂದುವಂತೆ ಅವಕಾಶ ಕಲ್ಪಿಸಿ ಅವರು ಸ್ವಾವಲಂಬಿಯಾಗಿ ಬದುಕಲು ದಾರಿ ಮಾಡಿಕೊಡುವುದು.

ಅರ್ಹತೆ: 18 ರಿಂದ 45 ವರ್ಷದ ಒಳಗಿನ ಏಳನೇ ತರಗತಿ ಮೇಲ್ಪಟ್ಟು ಪಾಸಾಗಿರುವ ಅಂಗವಿಕಲ ಅಭ್ಯರ್ಥಿಗಳು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

**ಯೋಜನೆಯ ರೂಪುರೇಷೆಗಳು:**

1. ರಾಜ್ಯದ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿರುವ ವಿದ್ಯಾವಂತ ನಿರುದ್ಯೋಗಿ ಅಂಗವಿಕಲ ಯುವಕರನ್ನು ಗುರುತಿಸಿ ಅವರ ಆಸಕ್ತಿ ಅಗತ್ಯತೆ ಹಾಗೂ ಸಾಮರ್ಥ್ಯವನ್ನು ನಿರ್ಧರಿಸುವುದು.

2. ಅಭ್ಯರ್ಥಿಗಳಿಗೆ ವಿವಿಧ ವೃತ್ತಿ ತರಬೇತಿ ಮತ್ತು ಕಂಪ್ಯೂಟರ್ ತರಬೇತಿ ನೀಡುವುದರ ಮೂಲಕ ಉದ್ಯೋಗಾವಕಾಶಗಳನ್ನು ಆಯ್ದುಕೊಳ್ಳಲು ತರಬೇತಿ ನೀಡುವುದು.

3. ವಿವಿಧ ಸ್ವಯಂ ಸೇವಾ ಸಂಸ್ಥೆಗಳು, ತರಬೇತಿ ಸಂಸ್ಥೆಗಳು, ಉದ್ಯಮಗಳು ಮತ್ತು ವ್ಯಾಪಾರಿ ಮಳಿಗೆಗಳೊಂದಿಗೆ ಸಂಪರ್ಕವನ್ನು ಕಲ್ಪಿಸಿ ತರಬೇತಿ ಮತ್ತು ಉದ್ಯೋಗಕ್ಕೆ ಅವಕಾಶ ಕಲ್ಪಿಸುವುದು.

4. ಅಂಗವಿಕಲ ಅಭ್ಯರ್ಥಿಗಳಿಗೆ ಸಾರ್ವಜನಿಕವಾಗಿ ಉದ್ಯೋಗಾವಕಾಶಗಳನ್ನು ನೀಡುವ ಉದ್ಯಮಿಗಳಿಗೆ ಹೆಚ್ಚಿನ ಅರಿವು ಮೂಡಿಸುವ ಬಗ್ಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ನೀಡಲು ಉತ್ತೇಜಿಸಲು ಮಾಧ್ಯಮವನ್ನು ಬಳಸಿಕೊಳ್ಳುವುದು.

ಗುರಿ:

1. ಪ್ರಾರಂಭಿಕವಾಗಿ ಒಟ್ಟು 2400 ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಪಡೆಯಲು ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳಾಗಿ ಮಾಡುವುದು.

2. ಯುವಕ / ಯುವತಿಯರಿಗೆ ಅವರಲ್ಲಿರುವ ಕಲೆ ಹಾಗೂ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಲು ಸ್ಥಳೀಯ ಬೇಡಿಕೆಗನುಗುಣವಾಗಿ ಅವಶ್ಯ/ನಿಗದಿತ ತರಬೇತಿ ನೀಡುವುದು. ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಂವಹನದ ಭಾಷಾಭಿವೃದ್ಧಿ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಉತ್ತೇಜನ ನೀಡಲು ತರಬೇತಿ ಕಾರ್ಯಕ್ರಮವನ್ನು ಯೋಜಿಸಿಕೊಂಡು ಸಶಕ್ತರನ್ನಾಗಿ ಮಾಡುವುದು. ಇದರಿಂದಾಗಿ ಯೋಜನೆ ಅನುಷ್ಠಾನದ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ 1200 ಉದ್ಯೋಗಾಂಕ್ಷಿ ನಿರುದ್ಯೋಗ ವಿದ್ಯಾವಂತ ಅಂಗವಿಕಲರನ್ನು ಉದ್ಯೋಗದ ಸಾಮಾನ್ಯ ವಾಹಿನಿಯಲ್ಲಿ ತರುವುದು ಸ್ವಯಂ ಉದ್ಯೋಗದ ಮಾಹಿತಿ ಹಾಗೂ ಕೌಶಲ್ಯ ತರಬೇತಿ ನೀಡುವುದು ಅನುದಾನದ ಲಭ್ಯತೆಗೆ ಅನುಗುಣವಾಗಿ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

1. ಬೆಳಗಾಂ 2. ಧಾರವಾಡ 3. ದಾವಣಗೆರೆ 4. ಚಿತ್ರದುರ್ಗ 5. ಗುಲ್ಬರ್ಗಾ 6. ರಾಯಚೂರು 7. ಬಾಗಲಕೋಟೆ
8. ಬಿಜಾಪುರ 9. ಉತ್ತರ ಕನ್ನಡ 10. ಕೋಲಾರ 11. ಹಾಸನ, 12. ತುಮಕೂರು 13. ಮೈಸೂರು 14. ಶಿವಮೊಗ್ಗ
15. ಹಾವೇರಿ 16. ಗದಗ್ 17. ಬಳ್ಳಾರಿ 18. ಬೆಂಗಳೂರು (ನ) 19. ಬೆಂಗಳೂರು (ಗ್ರಾ) 20. ಬೀದರ್

ಸದರಿ ಯೋಜನೆಗೆ ಸಂಬಂಧಿಸಿದ ವೆಚ್ಚವನ್ನು ಲೆಕ್ಕಶೀರ್ಷಿಗೆ 2235-02-101-0-48 ಯೋಜನೇತರ ಅಡಿ ಲಭ್ಯವಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 17-6-2006 ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯ ಅನುಮೋದನೆಯಂತೆ ಮತ್ತು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್.ಡಿ:286:EXp.3/2006 ದಿನಾಂಕ: 22-7-2006 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
(ಪಾರ್ವತಿ ಕೇಶವಾಚಾರ್)
ಸರ್ಕಾರದ ಉಪಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತಿ ಮಾಹಿತಿಗಾಗಿ
1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು
2. ಮಾನ್ಯ ಉಪಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು
4. ಪ್ರಧಾನ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಆಪ್ತ ಸಹಾಯಕರಿಗೆ.

Karnataka State Government Disabled Employees Association Renukaradhya S Indresh R

58/34
9/6/14

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ. ನಿಧಿ ಯೋಜನೆಯಡಿ ನೀಡುತ್ತಿರುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಮಮಇ 199 ಪಿಹೆಚ್‌ಪಿ 2008(5), ದಿನಾಂಕ: 15.9.2008.

2) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ:ವಿಹಿನಾಸಇ:ಹೊಸ ಯೋಜನೆ:ವೈ.ಪ.ನಿಧಿ:24:2014-15:141, ದಿನಾಂಕ: 3.4.2014.

ಪ್ರಸ್ತಾವನೆ:

ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆಯಡಿ ಅಂಗವಿಕಲರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ರೂ.35,000/- ಗಳ ಸಹಾಯಧನವನ್ನು ನೀಡಲು ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ದಿನಾಂಕ: 15.9.2008 ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು.

2014-15ನೇ ಸಾಲಿನ ಆಯವ್ಯಯದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ವಿಕಲಚೇತನತೆಯನ್ನು ನಿವಾರಣೆ ಮಾಡಲು ಹಾಲಿ ನೀಡುತ್ತಿರುವ ರೂ.35,000/- ಗಳ ಅನುದಾನವನ್ನು ರೂ.1.00 ಲಕ್ಷಗಳಿಗೆ ಹೆಚ್ಚಿಸಲು ಘೋಷಿಸಲಾಗಿದೆ. ಈ ಯೋಜನೆಯಡಿ ಶಸ್ತ್ರಚಿಕಿತ್ಸೆ ವೆಚ್ಚ, ಔಷಧಿ ವೆಚ್ಚ, ವೈದ್ಯಕೀಯ ಪರೀಕ್ಷೆಗಳ ವೆಚ್ಚ, ಬೆಡ್‌ಚಾರ್ಜ್‌ಗಳ ಮೊತ್ತ ಭರಿಸಲು ಹಾಲಿ ಇರುವ ರೂ.35,000/- ಗಳಿಂದ ಗರಿಷ್ಠ ರೂ.1.00 ಲಕ್ಷಗಳಿಗೆ ಹೆಚ್ಚಿಸಲು 2014-15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2235-02-101-0-99 ಯೋಜನೆ ಉಪ ಲೆಕ್ಕಶೀರ್ಷಿಕೆ 100 ರ ಧನಸಹಾಯ/ ಪರಿಹಾರ ನಿಧಿ ಅಡಿಯಲ್ಲಿ ರೂ.1012.50 ಲಕ್ಷಗಳ ಆಯವ್ಯಯದಲ್ಲಿ ವಿಕಲಚೇತನತೆಯನ್ನು ನಿವಾರಣೆ ಮಾಡಲು ವೈದ್ಯಕೀಯ ಪರಿಹಾರ ನಿಧಿಯನ್ನು ಒದಗಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಓದಲಾದ ಕ್ರ.ಸಂ.(2) ರ ದಿನಾಂಕ: 3.4.2014 ರ ಪತ್ರದಲ್ಲಿ ಕೋರಿರುತ್ತಾರೆ.

Karnataka State Government Disabled Employees Association
Renukaradhya S
Indresh R

10/6/14

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 114 ಪಿಎಚ್‌ಪಿ 2014, ಬೆಂಗಳೂರು, ದಿನಾಂಕ: 7.6.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆಯಡಿ ಶಸ್ತ್ರಚಿಕಿತ್ಸೆಯ ಮೂಲಕ ವಿಕಲಚೇತನತೆಯನ್ನು ನಿವಾರಣೆ ಮಾಡಲು ಶಸ್ತ್ರಚಿಕಿತ್ಸೆ ವೆಚ್ಚ, ಔಷಧಿ ವೆಚ್ಚ, ವೈದ್ಯಕೀಯ ಪರೀಕ್ಷೆಗಳ ವೆಚ್ಚ, ಬೆಡ್‌ಚಾರ್ಜ್‌ಗಳನ್ನು

336
9/6/14

ಭರಿಸಲು ಪ್ರಸ್ತುತ ನೀಡುತ್ತಿರುವ ರೂ.35,000/- ಗಳ ಅನುದಾನವನ್ನು ರೂ.1.00 ಲಕ್ಷಗಳಿಗೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-99 (ಯೋಜನೆ) ರಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 349 ವೆಚ್ಚ-3/2014, ದಿನಾಂಕ: 27.5.2014 ಹಾಗೂ ಪಿಡಿ 15 ಐಎಂಎಂ 2014, ದಿನಾಂಕ: 29.5.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಕೆ.ಜಂಬಗಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ - 3 & 9).
6. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ. ವಿಭಾಗ).
7. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
8. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
10. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಕಂಇ 3 ಪಿಹೆಚ್‌ಪಿ 2008, ದಿನಾಂಕ:29/08/2008

2.ಸರ್ಕಾರಿ ಆದೇಶ ಸಂಖ್ಯೆ:ಮಮಇ 157 ಮುಮ 07, ದಿನಾಂಕ: 26/04/2007

3.ಸರ್ಕಾರಿ ಆದೇಶ ಸಂಖ್ಯೆ: ಕಂಇ 147 ಎಂಎಸ್‌ಟಿ 2007, ದಿನಾಂಕ: 12/01/2012

**ಪ್ರಸ್ತಾವನೆ:**

ರಾಜ್ಯ ಸರ್ಕಾರವು, ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ವೃದ್ಧರಿಗೆ,ವಿಧವೆಯರಿಗೆ ಹಾಗೂ ಅಂಗವಿಕಲರಿಗೆ, ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯನ್ನೊದಗಿಸಲು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ ಓದಲಾದ ಉಲ್ಲೇಖ(1)ರಂತೆ, ಅಂಗವಿಕಲ ವೇತನದಡಿ, ಶೇಕಡಾ 40ರಿಂದ 75 ರಷ್ಟು ಅಂಗವೈಕಲ್ಯವಿರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ರೂ.400 ಗಳ ಮಾಸಾಶನವನ್ನು, ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ರೂ.1000ಗಳ ಮಾಸಾಶನವನ್ನು ನೀಡಲಾಗುತ್ತಿದೆ.

ಮೇಲೆ ಓದಲಾದ ಉಲ್ಲೇಖ(2)ರಂತೆ, ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ರೂ.400ರ ಮಾಸಾಶನ ನೀಡಲಾಗುತ್ತಿದೆ.

ಮೇಲೆ ಓದಲಾದ ಉಲ್ಲೇಖ(3) ರಂತೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ರೂ.500ರ ಮಾಸಾಶನ ನೀಡಲಾಗುತ್ತಿದೆ. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನದ ಮೊತ್ತವನ್ನು ಕೆಳಕಂಡಂತೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ.

Karnataka State Government Disabled Employees Association
Renukaradhya S
Indresh R

ಅಂಗವಿಕಲರ ವೇತನದಡಿ, ಶೇಕಡಾ 40ರಿಂದ 75 ರಷ್ಟು ಅಂಗವೈಕಲ್ಯವಿರುವ, ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.400 ರಿಂದ ರೂ.500ಕ್ಕೆ ಹೆಚ್ಚಿಸಲು ಹಾಗೂ ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ, ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.1000ಗಳಿಂದ ರೂ.1200 ಗಳಿಗೆ ಹೆಚ್ಚಿಸಲು ತೀರ್ಮಾನಿಸಿದೆ.

ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.400ರಿಂದ ರೂ.500ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ.

ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500 ರಿಂದ ರೂ.750ಕ್ಕೆ ಹೆಚ್ಚಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 74 ಡಿಎಸ್‌ಪಿ 2013, ಬೆಂಗಳೂರು. ದಿನಾಂಕ:30/08/2013.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನದ ಮೊತ್ತವನ್ನು ಕೆಳಕಂಡಂತೆ ಹೆಚ್ಚಿಸಿ 01-09-2013ರಿಂದ ಜಾರಿಗೆ ಬರುವಂತೆ ಆದೇಶಿಸಿದೆ.

1. ಅಂಗವಿಕಲರ ವೇತನದಡಿ,

   i. ಶೇಕಡಾ 40 ರಿಂದ 75 ರಷ್ಟು ಅಂಗವೈಕಲ್ಯವಿರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.400 ರಿಂದ ರೂ.500ಕ್ಕೆ ಹೆಚ್ಚಿಸಲಾಗಿದೆ.

   ii. ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.1000ಗಳಿಂದ ರೂ.1200 ಗಳಿಗೆ ಹೆಚ್ಚಿಸಲಾಗಿದೆ.

2. ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.400ರಿಂದ ರೂ.500ಕ್ಕೆ ಹೆಚ್ಚಿಸಲಾಗಿದೆ.

3. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500 ರಿಂದ ರೂ.750ಕ್ಕೆ ಹೆಚ್ಚಿಸಲಾಗಿದೆ.

ಪಿಂಚಣಿ ಮೊತ್ತವನ್ನು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಹೆಚ್ಚಳ ಮಾಡಿ ವಿತರಿಸುವ ಅಧಿಕಾರವನ್ನು ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು/ಉಪ ಖಜಾನಾಧಿಕಾರಿಗಳು ಇವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ.477 ವೆಚ್ಚ-7/2013 ದಿನಾಂಕ:23-08-2013ರಂತೆ ಹೊರಡಿಸಲಾಗಿದೆ.

Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
30/8/2013
(ಎಸ್. ಕಾತ್ಯಾಯಿನಿ ದೇವಿ)
ಪೀಠಾಧಿಕಾರಿಗಳು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು
ಕಂದಾಯ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬೆಂಗಳೂರು.
5. ಮಾನ್ಯ ಮುಖ್ಯ ಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು(ಅ ಮತ್ತು ಸ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾವಿ/ಮೈಸೂರು/ಗುಲ್ಬರ್ಗಾ.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಸಂಬಂಧಪಟ್ಟ ಉಪ ವಿಭಾಗಧಿಕಾರಿಗಳು/ತಹಸೀಲ್ದಾರರುಗಳಿಗೆ.
11. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
12. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹ" ಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಇಸಿ/ಹೊ.ಯೋ/01 /ಅನುಪಾಲನಾ ಗೃಹ/2016-17, ದಿ:28.03.2016

ಪ್ರಸ್ತಾವನೆ:

2016-17ನೇ ಸಾಲಿನ ಆಯವ್ಯಯದಲ್ಲಿ ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹ"ಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸುವ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಘೋಷಿಸಲಾಗಿದೆ. ನಿರ್ಗತಿಕ, ಅನಾಥ, ಏಕ ಪೋಷಕರಿರುವಂತಹ ಅಂಗವಿಕಲ ಅದರಲ್ಲೂ ಬುದ್ಧಿಮಾಂದ್ಯ ಮಹಿಳೆಯರು ಮತ್ತು ಪುರುಷರು ಕುಟುಂಬದಿಂದ ತಿರಸ್ಕಾರಕ್ಕೊಳಪಡುತ್ತಿದ್ದು, ಆರೈಕೆ, ರಕ್ಷಣೆ ಇಲ್ಲದೇ ಇರುವಂತಹ ಸ್ಥಿತಿಯನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ಅಂಗವಿಕಲ ವ್ಯಕ್ತಿಗಳ ಅಧಿನಿಮ 1995 ರ ನ್ವಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಸಂರಕ್ಷಿಸುವುದು, ಮುಖ್ಯವಾಹಿನಿಗೆ ತರವುದು ಹಾಗೂ ಸಮಾನ ಅವಕಾಶಗಳನ್ನು ನೀಡುವುದು ಸರ್ಕಾರದ ಸಮುದಾಯದ ಜವಾಬ್ದಾರಿಯಾಗಿರುತ್ತದೆ. ಪ್ರಸ್ತುತ ಇರುವ ಅನುಪಾಲನಗೃಹಗಳಲ್ಲಿ ಹೆಚ್ಚುವರಿ ಮಹಿಳೆ/ಪುರುಷರನ್ನು ಮೂಲಭೂತ ಸೌಕರ್ಯಗಳ ಕೊರತೆಯಿಂದ ಮತ್ತು ಸಿಬ್ಬಂದಿಗಳ ಕೊರತೆಯಿಂದ ಸೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಹೆಚ್ಚಿನ ಸಂಖ್ಯೆ ಪುರುಷ/ಮಹಿಳೆಯರ ಅನುಪಾಲನ ಗೃಹಗಳನ್ನು ತೆರೆಯುವ ಅವಶ್ಯಕತೆ ಇದ್ದು ಕನಿಷ್ಠ ವಿಭಾಗಿಯ ಮಟ್ಟದಲ್ಲಿ ಒಂದೊಂದು ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಅನುಪಾಲನಗೃಹಗಳನ್ನು ತೆರೆಯಬೇಕಾಗಿದ್ದು ಪುರುಷರಿಗಾಗಿ ಹೊಸದಾಗಿ ಕಲಬುರ್ಗಿ, ಮೈಸೂರು ಹಾಗೂ ಬೆಳಗಾವಿ ವಿಭಾಗಗಳಲ್ಲಿ ಮತ್ತು ಮಹಿಳೆಯರಿಗಾಗಿ ಕಲಬುರ್ಗಿ ಮತ್ತು ಮೈಸೂರಿನಲ್ಲಿ ಒಂದರಂತೆ ಒಟ್ಟು 5 ಅನುಪಾಲನ ಗೃಹಗಳನ್ನು ಪ್ರಾರಂಭಿಸಬೇಕಾಗಿರುತ್ತದೆಂದು ನಿರ್ದೇಶಕರು ತಿಳಿಸಿರುತ್ತಾರೆ.

2016-17 ನೇ ಸಾಲಿನಲ್ಲಿ ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹ"ಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸುವ ಯೋಜನೆಗೆಗಾಗಿ ಪ್ರತಿ ಅನುಪಾಲನ ಗೃಹಕ್ಕೆ ರೂ 70.80 ಲಕ್ಷಗಳಂತೆ ಒಟ್ಟು ರೂ. 354.00 ಲಕ್ಷಗಳ ಆಯವ್ಯಯವನ್ನು ಲೆಕ್ಕ ಶೀರ್ಷಿಕೆ:2235-02-001-0-03 ಯೋಜನೆ ಉಪ ಲೆಕ್ಕಶೀರ್ಷಿಕೆ-051 ಸಾಮಾನ್ಯ ವೆಚ್ಚಗಳ ಆಯವ್ಯಯದಲ್ಲಿ ಭರಿಸಲು ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರು ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಏಕ ಕಡತದಲ್ಲಿ ಕೋರಿರುತ್ತಾರೆ.

ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೆಂಗಳೂರು
ಸಂಖ್ಯೆ 342
ದಿನಾಂಕ: 7/6/16

..2

Karnataka State Government Disabled Employees Association
Renukaradhya R S
Indresh R S

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಹೆಚ್‌ಪಿ 2016, ಬೆಂಗಳೂರು, ದಿನಾಂಕ: 06.06.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಮತ್ತು 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ನಿರಾಶ್ರಿತ ಬುದ್ಧಿಮಾಂದ್ಯ ಪುರುಷ ಮತ್ತು ಮಹಿಳೆಯರ ಕಾಳಜಿ ವಹಿಸುವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ವಿಭಾಗವಾರು "ಅನುಪಾಲನಾ ಗೃಹ"ಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸುವ ಯೋಜನೆಯ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ರೂಪಿಸಿ ಅನುಬಂಧದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮುಂದುವರೆದು, ಆಯ್ಕೆ ಪ್ರಕ್ರಿಯೆಯು ಕೇವಲ 5 ಸೌಲಭ್ಯಗಳಿಗಾಗಿ ಮಾತ್ರ ಇರುವುದರಿಂದ ಪ್ರತಿ ವಿಭಾಗದಲ್ಲಿ ಪುರುಷ ಹಾಗೂ ಮಹಿಳಾ ಆಶ್ರಿತರಿಗೆ ಕನಿಷ್ಠ ಒಂದು ಸೌಲಭ್ಯವನ್ನಾದರೂ ಹೊಂದಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

ಅರ್ಹ ಸಂಸ್ಥೆಯನ್ನು ರಾಜ್ಯ ಮಟ್ಟದಲ್ಲಿ ಆಯ್ಕೆ ಮಾಡುವಾಗ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಪ್ರಕ್ರಿಯೆಯನ್ನು ಕೈಗೊಂಡು ಆಯ್ಕೆ ಸಮಿತಿಯಲ್ಲಿ ನಿಮ್ಹಾನ್ಸ್‌ನ ಪರಿಣಿತ ತಜ್ಞರು/ವಿಕಲಚೇತನ ಚಟುವಟಿಕೆಗಳಿಗೆ ಸಂಬಂಧಪಟ್ಟ ಬೋಧನಾ ಪರಿಣಿತರನ್ನು ಒಳಗೊಂಡಿರತಕ್ಕದ್ದು.

ಅರ್ಹ ಸ್ವಯಂ ಸೇವಾ ಸಂಸ್ಥೆಯು ಕನಿಷ್ಠ 3 ವರ್ಷಗಳಿಂದ ಅಸ್ತಿತ್ವದಲ್ಲಿರಬೇಕು ಹಾಗೂ ಮೇಲಿನ ಇಂತಹದೇ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು. ಪ್ರಸ್ತುತ ಚಾಲ್ತಿಯಲ್ಲಿರುವ ನಿಬಂಧನೆಗಳೊಂದಿಗೆ ಪೂರಕವಾದ ಪೂರ್ವಾನುಭವವು ಅಪೇಕ್ಷಣೀಯ.

Karnataka State Government Disabled Employees Association
Renukaradhya S
Indresh R

ಈ ವೆಚ್ಚವನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ:2235-02-001-0-03 ಯೋಜನೆ ಉಪ ಲೆಕ್ಕಶೀರ್ಷಿಕೆ-051 ಸಾಮಾನ್ಯ ವೆಚ್ಚಗಳಡಿ ಒದಗಿಸಿರುವ ಆಯವ್ಯಯ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 278 ವೆಚ್ಚ-3 2016, ದಿ:27.04.2016 ಮತ್ತು ಪಿಡಿ 19 ಐಎಂಎಂ 2016, ದಿ:23.05.2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/6/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ಪಿಎಂಐ ವಿಭಾಗ, ಯೋಜನ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

5) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಶಾಖಾ ರಕ್ಷಾ ಕಡತ/ಓಡಿಜಿಸಿ/ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಹೆಚ್‌ಪಿ 2016, ದಿನಾಂಕ 06-06-2016ಕ್ಕೆ

ಅನುಬಂಧ-01

## ಯೋಜನೆ ಅನುಷ್ಠಾನಗೊಳಿಸುವ ಸ್ವಯಂ ಸೇವಾ ಸಂಸ್ಥೆಗೆ ಇರಬೇಕಾದ ಅರ್ಹತಾ ಮಾನದಂಡಗಳು

- ಸಂಸ್ಥೆಯು ಕರ್ನಾಟಕ ಸಂಘ ಸಂಸ್ಥೆಗಳ ನೊಂದಣಿ ಕಾಯ್ದೆ 1960ರಡಿ ಅಥವಾ ಸಾರ್ವಜನಿಕ ಟ್ರಸ್ಟ್ ಕಾಯ್ದೆಯಡಿ ನೊಂದಾಯಿಸಿ ಕನಿಷ್ಠ 3 ವರ್ಷಗಳಾಗಿದ್ದು, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಬುದ್ಧಿಮಾಂದ್ಯ/ಮಾನಸಿಕ ಅಸ್ವಸ್ಥ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ಅನುಭವವಿದ್ದು ಉತ್ತಮ ಹೆಸರನ್ನು ಗಳಿಸಿರಬೇಕು.
- ಸಂಸ್ಥೆಯು ನಿಯಮಾನುಸಾರ ರಚಿತಗೊಂಡಿರುವ ಕಾರ್ಯಕಾರಿ ಸಮಿತಿಯನ್ನು ಹೊಂದಿದ್ದು, ಅದರ ಅಧಿಕಾರ ಜವಾಬ್ದಾರಿ ಮತ್ತು ಕರ್ತವ್ಯವನ್ನು ಸ್ಪಷ್ಟವಾಗಿ ಲಿಖಿತ ರೂಪದಲ್ಲಿ ಸಂವಿಧಾನ ಬದ್ಧವಾಗಿ ವ್ಯಾಖ್ಯಾನಿಸಿರಬೇಕು.
- ಕಾರ್ಯಕಾರಿ ಸಮಿತಿಯ ಸದಸ್ಯರು ಬುದ್ಧಿಮಾಂದ್ಯ ಅನುಪಾಲನಾ ಗೃಹಕ್ಕೆ ನೀಡಿರುವ ಬಾಡಿಗೆ ಕಟ್ಟಡದ ಮಾಲೀಕರಾಗಿರಬಾರದು.
- ಆರ್ಥಿಕವಾಗಿ ಸಬಲವಾಗಿರುವ ಸ್ವಯಂ ಸೇವಾ ಸಂಸ್ಥೆಯಾಗಿರಬೇಕು.
- ಬುದ್ಧಿಮಾಂದ್ಯ ವ್ಯಕ್ತಿಗಳ ಅನುಪಾಲನಾ ಗೃಹವನ್ನು ನಡೆಸಲು ಕಟ್ಟಡವು ಅಗತ್ಯ ಮೂಲ ಸೌಕರ್ಯಗಳನ್ನು ಹೊಂದಿರಬೇಕು. (ನಿವಾಸಿಗಳಿಗೆ ಊಟದ ಕೋಣೆ, ಮಲಗುವ ಕೋಣೆ, ಶೌಚಾಲಯ, ಅಡುಗೆ ಕೋಣೆ, ಸ್ನಾನದ ಗೃಹ, ಕಛೇರಿ ಕೊಠಡಿ ಹಾಗೂ ಅಗತ್ಯ ಪೀಠೋಪಕರಣಗಳನ್ನು ಹೊಂದಿರಬೇಕು) ವಿಕಲಚೇತನರ ಸ್ನೇಹಿ ಕಟ್ಟಡವಾಗಿರಬೇಕು.
- ಸಂಸ್ಥೆಯು ಬುದ್ಧಿಮಾಂದ್ಯ/ಮಾನಸಿಕ ಅಸ್ವಸ್ಥ ಕ್ಷೇತ್ರದಲ್ಲಿ ಕನಿಷ್ಠ 05 ವರ್ಷಗಳ ಅನುಭವ ಪಡೆದಿರತಕ್ಕದ್ದು.
- ಬುದ್ಧಿಮಾಂದ್ಯ ಅನುಪಾಲನಾ ಗೃಹವು ನರರೋಗ, ಮಾನಸಿಕ ಆಸ್ಪತ್ರೆಯ ಸಮೀಪದಲ್ಲಿರುವಂತೆ ನೋಡಿಕೊಳ್ಳುವುದು. ಕಾಲಕಾಲಕ್ಕೆ ಅಗತ್ಯ ವೈದ್ಯಕೀಯ ಸೇವೆಗಳನ್ನು ಪಡೆಯಲು ಅನುಕೂಲವಾಗುವಂತಿರಬೇಕು.
- ಸರ್ಕಾರಿ, ಅರೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳೊಂದಿಗೆ ಸತತ ಸಂಪರ್ಕವನ್ನು ಹೊಂದಿರಬೇಕು.
- ಸಂಸ್ಥೆಯು ಅನುದಾನವನ್ನು ತನ್ನ ಸ್ವಂತ ಹಕ್ಕೆಂದು ಕ್ಲೇಮು ಮಾಡುವಂತಿಲ್ಲ, ಹಣಕಾಸಿನ ಲಭ್ಯತೆಯ ಮಿತಿಗೊಳಪಟ್ಟು, ಸರ್ಕಾರದ ವಿವೇಚಾನಾಧಿಕಾರದಲ್ಲಿ ಮಂಜೂರು ಮಾಡಲಾಗುವುದು.
- ನಿವಾಸಿಗಳ ಕಡತಗಳನ್ನು ನಿರ್ವಹಿಸುವುದು ಹಾಗೂ ಪ್ರತಿ ಮಾಹೆ ಗೌರವಧನವನ್ನು ಬ್ಯಾಂಕ್ ಮುಖಾಂತರ ಪಾವತಿಸುವುದು. ಸಿಬ್ಬಂದಿಗಳಿಗೆ ಸೇವಾ ಭದ್ರತೆಯನ್ನಾಗಲಿ ಅಥವಾ ನಿವೃತ್ತಿ ವೇತನವನ್ನಾಗಲಿ ಮಂಜೂರು ಮಾಡಲಾಗುವುದಿಲ್ಲ.
- ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ವಾರ್ಷಿಕ ಕ್ರಿಯಾಯೋಜನೆಯನ್ನು ತಯಾರಿಸಿ ಇಲಾಖೆಯಿಂದ ಅನುಮೋದನೆ ಪಡೆದ ನಂತರ ಅದರಂತೆ ಕಾರ್ಯನಿರ್ವಹಿಸುವುದು.
- ಪ್ರತಿ ತ್ರೈಮಾಸಿಕದ ಮಾಸಿಕ ಪ್ರಗತಿ ವರದಿಗಳನ್ನು ಸಲ್ಲಿಸುವುದು.
- ಅನುದಾನವನ್ನು ತ್ರೈಮಾಸಿಕವಾಗಿ ಬಿಡುಗಡೆ ಮಾಡಲಾಗುವುದು, ಪಡೆದ ಅನುದಾನಕ್ಕೆ ಅಂಶವಾರು ಉಪಯೋಗತಾ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಹಾಗೂ ವಾರ್ಷಿಕವಾಗಿ ಚಾರ್ಟಡ್ ಅಕೌಂಟೆಂಟ್‌ರವರಿಂದ ಲೆಕ್ಕಪತ್ರಗಳನ್ನು ತಪಾಸಣೆ ನಡೆಸಿ ಅಂಶವಾರು ಉಪಯೋಗತಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
- ಸಂಸ್ಥೆಯು ಇದೇ ಉದೇಶಕ್ಕಾಗಿ ಕೇಂದ್ರ ಸರ್ಕಾರದಿಂದಾಗಲಿ ಅಥವಾ ರಾಜ್ಯ ಸರ್ಕಾರದ ಇತರೆ ಇಲಾಖೆಗಳಿಂದಾಗಲೀ ಅನುದಾನ ಸ್ವೀಕರಿಸುತ್ತಿದ್ದಲ್ಲಿ ಈ 'ಯೋಜನೆಯಡಿ ಅನುದಾನ' ಪಡೆಯಲು ಅರ್ಹವಾಗುವುದಿಲ್ಲ.

Karnataka State Government Disabled Employees Association
Renukaradhya S
Indresh P

- ಸ್ವಯಂ ಸೇವಾ ಸಂಸ್ಥೆಯು ಯಾವುದೇ ಜಾತಿ ಮತ ಪಂಥ ಮತ್ತು ಭಾಷೆಗಳನ್ನು ಪರಿಗಣಿಸದೇ ಸೌಲಭ್ಯ ಒದಗಿಸಬೇಕು.
- ಸಂಸ್ಥೆಯು ಯಾವುದೇ ಓರ್ವ ವ್ಯಕ್ತಿ ಅಥವಾ ಒಂದು ಜನಾಂಗದ ಲಾಭಕ್ಕಾಗಿ ನಡೆಸುತ್ತಿರಬಾರದು.

**ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡುವ ವಿಧಾನ :**

- ರಾಜ್ಯ ಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡಿ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿಯನ್ನು ಆಹ್ವಾನಿಸುವುದು.
- ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಮಂಡಿಸುವುದು.
- ಸಮಿತಿಯು ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮೈಸೂರು ವಿಭಾಗಕ್ಕೆ ಎರಡು(ಒಂದು ಪುರುಷ, ಒಂದು ಮಹಿಳೆ), ಗುಲ್ಬರ್ಗ ವಿಭಾಗಕ್ಕೆ ಎರಡು (ಒಂದು ಪುರುಷ, ಒಂದು ಮಹಿಳೆ), ಬೆಳಗಾವಿ ವಿಭಾಗಕ್ಕೆ ಒಂದು (ಒಂದು ಪುರುಷ), ಒಟ್ಟು ಐದು ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡುವುದು.
- ರಾಜ್ಯ ಮಟ್ಟದ ಸಮಿತಿಯ ಆಯ್ಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

**ರಾಜ್ಯ ಮಟ್ಟದ ಆಯ್ಕೆ ಸಮಿತಿ**

| | | |
|---|---|---|
| 1 | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 | ಜಂಟಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು | ಸದಸ್ಯರು |
| 3 | ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಆರ್ಥಿಕ ಇಲಾಖೆ, ವೆಚ್ಚ-3 ಬೆಂಗಳೂರು ಇವರ ಪ್ರತಿನಿಧಿ | ಸದಸ್ಯರು |
| 5 | ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು ಇವರ ಪ್ರತಿನಿಧಿ | ಸದಸ್ಯರು |
| 6 | ನಿರ್ದೇಶಕರು, ನಿಮ್ಹಾನ್ಸ್ ಬೆಂಗಳೂರು ಇವರ ಪ್ರತಿನಿಧಿ, | ಸದಸ್ಯರು |
| 7 | ಉಪ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

Karnataka State Government Disabled Employees Association
Renukaradhya S
Indresh R

**ಆಯ್ಕೆಗೊಂಡ ಸ್ವಯಂ ಸೇವಾ ಸಂಸ್ಥೆಯ ಕಾರ್ಯವಿಧಾನ:**

- ಆಯ್ಕೆಗೊಂಡ ಸ್ವಯಂ ಸೇವಾ ಸಂಸ್ಥೆಯು ಬುದ್ಧಿಮಾಂದ್ಯ/ಮಾನಸಿಕ ಅಸ್ವಸ್ಥರ ಅನುಪಾಲನಾ ಗೃಹವನ್ನು ಕೇಂದ್ರವನ್ನು ಯೋಜನಾ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದಾಗಿ ರೂ.100/-ಗಳ ಛಾಪಾ ಕಾಗದದಲ್ಲಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
- ಅಗತ್ಯ ಸಿಬ್ಬಂದಿಗಳನ್ನು ಭರ್ತಿ ಮಾಡಲು ಯೋಜನಾ ಮಾರ್ಗಸೂಚಿಯನ್ವಯ ವ್ಯಾಪಕ ಪ್ರಚಾರ ನೀಡಿ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
- ಇಲಾಖೆಯ ಅಧಿಕಾರಿ ಹಾಗೂ ಸ್ವಯಂ ಸೇವಾ ಸಂಸ್ಥೆಯ ಪದಾಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ ಸಂದರ್ಶನ ಕೈಗೊಂಡು ಸಿಬ್ಬಂದಿಗಳನ್ನು ಆಯ್ಕೆ ಮಾಡುವುದು.
- ತ್ರೈಮಾಸಿಕವಾಗಿ ಅನುದಾನ ಬಿಡುಗಡೆಗೊಳಿಸಲಾಗುವುದು, ಪ್ರಗತಿ ವರದಿಗಳನ್ನು ಪ್ರತಿ ತ್ರೈಮಾಸಿಕಕ್ಕೊಮ್ಮೆ ಮುಂದಿನ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಮೊದಲು ಸಲ್ಲಿಸುವುದು ಹಾಗೂ ಸ್ವಯಂ ಉಪಯೋಗತಾ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ಸ್ವಯಂ ಸೇವಾ ಸಂಸ್ಥೆಗಳ ಕರ್ತವ್ಯಗಳು**

1. ಅನುಪಾಲನ ಗೃಹ ಪ್ರಾರಂಭಿಸಿರುವ ಕುರಿತು ಸಮುದಾಯದಲ್ಲಿ ವ್ಯಾಪಕ ಪ್ರಚಾರ ನೀಡುವುದು.

..3

2. ಅರ್ಹ ನಿರ್ಗತಿಕ, ಅನಾಥ, ಏಕ ಪೋಷಕರಿರುವಂತಹ ಅಂಗವಿಕಲ ಅದರಲ್ಲೂ ಬುದ್ಧಿಮಾಂದ್ಯ ಮಹಿಳೆಯರು ಮತ್ತು ಪುರುಷರನ್ನು ಅನುಪಾಲನಾ ಗೃಹದಲ್ಲಿ ದಾಖಲಿಸಿಕೊಳ್ಳುವುದು.
3. ನಿರ್ಗತಿಕ ಬುದ್ಧಿಮಾಂದ್ಯ ಪುರುಷರು / ಮಹಿಳೆಯರನ್ನು ಸಂರಕ್ಷಿಸುವುದು ಹಾಗೂ ಅವರಿಗೆ ರಕ್ಷಣೆ ಒದಗಿಸುವುದು.
4. ನಿರ್ಗತಿಕ ಬುದ್ಧಿಮಾಂದ್ಯ ಪುರುಷ/ ಮಹಿಳೆಯರಿಗೆ ಉಚಿತ, ಊಟ, ವಸತಿ ಸೌಲಭ್ಯವನ್ನು ಒದಗಿಸುವುದು.
5. ಬುದ್ಧಿಮಾಂದ್ಯ ಪುರುಷ/ ಮಹಿಳೆಯರಿಗೆ ಅವರ ಅವಶ್ಯಕತೆಗೆ ಅನುಗುಣವಾಗಿ ವೈದ್ಯಕೀಯ ಸೌಲಭ್ಯ ಹಾಗೂ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ಒದಗಿಸುವುದು.
6. ಬುದ್ಧಿಮಾಂದ್ಯ ಪುರುಷ/ ಮಹಿಳೆಯರಿಗೆ ಸೂಕ್ತ ಶಿಕ್ಷಣ ತರಬೇತಿ ನೀಡಿ ಅವರನ್ನು ಸ್ವತಂತ್ರವಾಗಿ ಬದುಕಲು ಉತ್ತೇಜಿಸುವುದು.
7. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಅಧಿನಿಯಮವನ್ನು ಪರಿಪಾಲಿಸುವುದು.
8. ಈ ಬುದ್ಧಿಮಾಂದ್ಯ ಪುರುಷ/ ಮಹಿಳೆಯರನ್ನು ಸಮಾಜ ಹಾಗೂ ಕುಟುಂಬಕ್ಕೆ ಹೊರೆಯಾಗದಂತೆ ಸತ್ಪ್ರಜೆಗಳಾಗಿ ರೂಪಿಸುವುದು ಹಾಗೂ ಇವರಿಗೂ ಸಮಾನ ಅವಕಾಶವನ್ನು ಒದಗಿಸುವುದು.

**ಸ್ವಯಂ ಸೇವಾ ಸಂಸ್ಥೆಗಳವರು ನಿರ್ವಹಿಸಬೇಕಾದ ವಹಿಗಳು:**

1. ನಿವಾಸಿಗಳ ದಾಖಲಾತಿ ವಹಿ.
2. ನಿವಾಸಿಗಳ ಹಾಜರಾತಿ ವಹಿ.
3. ಅನುದಾನ ಸ್ವೀಕರಿಸಿದ ವಹಿ
4. ನಗದು ಪುಸ್ತಕ
5. ಔಷಧಿ ಸ್ಟಾಕ್ ಮತ್ತು ವಿತರಣಾ ವಹಿ
6. ಆಹಾರ ಸಾಮಾಗ್ರಿಗಳ ಸ್ಟಾಕ್ ಮತ್ತು ವಿತರಣಾ ವಹಿ
7. ಆರೋಗ್ಯ ತಪಾಸಣಾ ವಹಿ
8. ಇಲಾಖೆಯಿಂದ ನೀಡುವ ಸುತ್ತೋಲೆ / ಪತ್ರಗಳ ಕಡತ
9. ಗೌರವಧನ ಬಟವಾಡೆ ವಹಿ
10. ಸಿಬ್ಬಂದಿ ಹಾಜರಾತಿ ವಹಿ
11. ಸಂದರ್ಶಕರ ವಹಿ
12. ವೃತ್ತಿ ತರಬೇತಿಯ ಮಾದರಿ ವಹಿ
13. ಮಾಹೆಯಾನ ಸಲ್ಲಿಸುವ ಪ್ರಗತಿ ವರದಿಗಳ ವಹಿ

6/1/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.



Karnataka State Government Disabled Employees Association
Renukaradhya S
Indresh R

ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಹೆಚ್‌ಪಿ 2016, ದಿನಾಂಕ 06-06-2016ಕ್ಕೆ

## ಅನುಬಂಧ-02

## "ಅನುಪಾಲನಾ ಗೃಹ"

## ಬೇಕಾಗುವ ಆಯವ್ಯಯದ ವಿವರ:

100 ಜನರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ಅಂದಾಜು ಆಯವ್ಯಯದ ವಿವರ

| ಕ್ರ. ಸಂ. | ಹುದ್ದೆಗಳು / ವಿವರಗಳು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ನಿಗದಿಪಡಿಸಿರುವ ಮಾಹೆಯಾನ ಗೌರವಧನ | ಒಟ್ಟು ಬೇಕಾಗುವ ಆಯವ್ಯಯ (ರೂ.ಗಳಲ್ಲಿ) ವಾರ್ಷಿಕ |
|---|---|---|---|---|---|
| I. ಆವರ್ತಕ ವೆಚ್ಚ | | | | | |
| 1 | ಅಧೀಕ್ಷಕರು | 1 | ಸ್ನಾತಕೋತ್ತರ ಪದವಿ | 18,000/- | 2,16,000/- |
| 2 | ಸಮಾಜ ವಿಷಯ ಪರಿಶೀಲಕರು | 1 | ಎಮ್.ಎಸ್.ಡಬ್ಲ್ಯೂ | 15,000/- | 1,80,000/- |
| 3 | ವಾರ್ಡನ್ / ಮೇಟ್ರನ್ | 1 | ಪಿ.ಯು.ಸಿ | 12,000/- | 1,44,000/- |
| 4 | ನರ್ಸ್ | 2 | ಡಿಪ್ಲೊಮಾ/ಡಿಗ್ರಿ ಇನ್ ನರ್ಸಿಂಗ್ | 12000/- | 2,88,000/- |
| 5 | ವೃತ್ತಿ ತರಬೇತಿದಾರರು (ಕ್ರಾಫ್ಟ್ ಮತ್ತು ಯೋಗ ಶಿಕ್ಷಕರು) | 2 | ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್ | 10,000/- | 2,40,000/- |
| 6 | ಅಡಿಗೆಯವರು | 1 | ಅಕ್ಷರಸ್ಥರು | 9,000/- | 1,08,000/- |
| 7 | ಅಡಿಗೆ ಸಹಾಯಕರು | 1 | ಅಕ್ಷರಸ್ಥರು | 8,000/- | 96,000/- |
| 8 | ಸ್ವೀಪರ್ ಸ್ಕ್ಯಾವೆಂಜರ್ | 2 | ಅಕ್ಷರಸ್ಥರು | 8,000/- | 1,92,000/- |
| 9 | ರಕ್ಷಕರು | 3 | ಅಕ್ಷರಸ್ಥರು | 8,000/- | 2,88,000/- |
| 10 | ಆಯಾ | 08 | ಅಕ್ಷರಸ್ಥರು | 8,000/- | 7,68,000/- |
| 11 | ಜವಾನ | 1 | ಅಕ್ಷರಸ್ಥರು | 8,000/- | 96,000/- |
| 12 | ಆಹಾರ ವೆಚ್ಚ ಪ್ರತಿ ಫಲಾನುಭವಿಗೆ ಮಾಹೆಯಾನ ರೂ. 1200/-ಗಳಂತೆ 12 ತಿಂಗಳಿಗೆ 100 ಫಲಾನುಭವಿಗಳಿಗೆ | 1200 X 100 X 12 | | | 14,40,000/- |
| 13 | ಕಟ್ಟಡ ಬಾಡಿಗೆ / ನಿರ್ವಹಣಾ ವೆಚ್ಚ | 50,000 X 12 | | | 6,00,000/- |
| 14 | ವೈದ್ಯಕೀಯ ವೆಚ್ಚ ಪ್ರತಿ ಫಲಾನುಭವಿಗೆ ಮಾಹೆಯಾನ ರೂ. 1000/-ಗಳಂತೆ 12 ತಿಂಗಳಿಗೆ 100 ಫಲಾನುಭವಿಗಳಿಗೆ | 1000 X 100 X 12 | | | 12,00,000/- |
| 15 | ಸಮವಸ್ತ್ರ ವೆಚ್ಚ (ವರ್ಷಕ್ಕೆ 4 ಜೊತೆ ಒಳ ಉಡುಪುಗಳನ್ನು ಒಳಗೊಂಡಂತೆ) ಪ್ರತಿ ಫಲಾನುಭವಿಗೆ 1 ಜೊತೆಗೆ ರೂ. 600/-ಗಳಂತೆ 100 ಫಲಾನುಭವಿಗಳಿಗೆ | 600 X 100 X 4 | | | 2,40,000/- |
| 16 | ಕಛೇರಿ ನಿರ್ವಹಣಾ ವೆಚ್ಚ (ಸಾದಿಲ್ವಾರು, ದೂರವಾಣಿ, ಸಾರಿಗೆ ಮತ್ತು ಇತರೆ) ಪ್ರತಿ ತಿಂಗಳಿಗೆ ರೂ. 8,000/-ಗಳಂತೆ | 8,000 X 12 | | | 96,000/- |

Karnataka State Government Disabled Employees Association
Renukaradhya S
Indresh

| | | |
|---|---|---|
| II. ಅನಾವರ್ತಕ ವೆಚ್ಚ | | |
| 17 | ಕಛೇರಿ ಉಪಯೋಗಕ್ಕಾಗಿ (ಟೇಬಲ್, ಕುರ್ಚಿ, ಅಲ್ಮೇರ) | 13,08,000 |
| 18 | ನಿವಾಸಿಗಳ ಉಪಯೋಗಕ್ಕಾಗಿ ಕಬ್ಬಿಣದ ಮಂಚ, ರ್‍ಯಾಕ್‌ಗಳು, ಹಾಸಿಗೆ ಹೊದಿಕೆಗಳು, | |
| 19 | ನಿವಾಸಿಗಳ ಉಪಯೋಗಕ್ಕಾಗಿ ಅಡಿಗೆ ಪಾತ್ರೆ, ತಟ್ಟೆ, ಲೋಟ ಹಾಗೂ ಇತರೆ ಸಾಮಾಗ್ರಿ | |
| 20 | ಟಿವಿ / ಪರಿಕರಗಳು | |
| | ಒಟ್ಟು (I+ I I) ರೂ. | 75,00,000/– |

**ಸೂಚನೆ :** ಸಿಬ್ಬಂದಿಗಳನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಸೇರಿ ಆಯ್ಕೆ ಮಾಡತಕ್ಕದ್ದು.

6/1/2018

(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ – 2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಹೆಚ್‌ಪಿ 2016, ದಿನಾಂಕ 06-06-2016ಕ್ಕೆ

ಅನುಬಂಧ-03

## "ಅನುಪಾಲನಾ ಗೃಹ"

### ಬೇಕಾಗುವ ಆಯವ್ಯಯದ ವಿವರ:

50 ಜನರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ಅಂದಾಜು ಆಯವ್ಯಯದ ವಿವರ

| ಕ್ರ.ಸಂ | ಹುದ್ದೆಗಳು / ವಿವರಗಳು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ನಿಗದಿಪಡಿಸಿರುವ ಮಾಹೆಯಾನ ಗೌರವಧನ | ಒಟ್ಟು ಬೇಕಾಗುವ ಆಯವ್ಯಯ (ರೂ. ಗಳಲ್ಲಿ) ವಾರ್ಷಿಕ |
|---|---|---|---|---|---|
| I. ಆವರ್ತಕ ವೆಚ್ಚ | | | | | |
| 1 | ಅಧೀಕ್ಷಕರು | 1 | ಸ್ನಾತಕೋತ್ತರ ಪದವಿ | 18,000/- | 2,16,000/- |
| 2 | ಸಮಾಜ ವಿಷಯ ಪರಿಶೀಲಕರು | 1 | ಎಮ್.ಎಸ್.ಡಬ್ಲ್ಯೂ | 15,000/- | 1,80,000/- |
| 3 | ವಾರ್ಡನ್ / ಮೇಟ್ರನ್ | 1 | ಪಿ.ಯು.ಸಿ | 12,000/- | 1,44,000/- |
| 4 | ನರ್ಸ್ | 2 | ಡಿಪ್ಲೊಮಾ/ಡಿಗ್ರಿ ಇನ್ ನರ್ಸಿಂಗ್ | 12000/- | 2,88,000/- |
| 5 | ವೃತ್ತಿ ತರಬೇತಿದಾರರು (ಕ್ರಾಫ್ಟ್ ಮತ್ತು ಯೋಗ ಶಿಕ್ಷಕರು) | 2 | ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್ | 10,000/- | 2,40,000/- |
| 6 | ಅಡಿಗೆಯವರು | 1 | ಅಕ್ಷರಸ್ಥರು | 9,000/- | 1,08,000/- |
| 7 | ಅಡಿಗೆ ಸಹಾಯಕರು | 1 | ಅಕ್ಷರಸ್ಥರು | 8,000/- | 96,000/- |
| 8 | ಸ್ವೀಪರ್ ಸ್ಕ್ಯಾವೆಂಜರ್ | 2 | ಅಕ್ಷರಸ್ಥರು | 8,000/- | 1,92,000/- |
| 9 | ರಕ್ಷಕರು | 3 | ಅಕ್ಷರಸ್ಥರು | 8,000/- | 2,88,000/- |
| 10 | ಆಯಾ | 5 | ಅಕ್ಷರಸ್ಥರು | 8,000/- | 4,80,000/- |
| 11 | ಜವಾನ | 1 | ಅಕ್ಷರಸ್ಥರು | 8,000/- | 96,000/- |
| 12 | ಆಹಾರ ವೆಚ್ಚ ಪ್ರತಿ ಫಲಾನುಭವಿಗೆ ಮಾಹೆಯಾನ ರೂ. 1200/-ಗಳಂತೆ 12 ತಿಂಗಳಿಗೆ 50 ಫಲಾನುಭವಿಗಳಿಗೆ | | 1200 X 50 X 12 | | 7,20,000/- |
| 13 | ಕಟ್ಟಡ ಬಾಡಿಗೆ / ನಿರ್ವಹಣಾ ವೆಚ್ಚ | | 30,000 X 12 | | 3,60,000/- |
| 14 | ವೈದ್ಯಕೀಯ ವೆಚ್ಚ ಪ್ರತಿ ಫಲಾನುಭವಿಗೆ ಮಾಹೆಯಾನ ರೂ. 1000/-ಗಳಂತೆ 12 ತಿಂಗಳಿಗೆ 50 ಫಲಾನುಭವಿಗಳಿಗೆ | | 1000 X 50 X12 | | 6,00,000/- |
| 15 | ಸಮವಸ್ತ್ರ ವೆಚ್ಚ (ವರ್ಷಕ್ಕೆ 4 ಜೊತೆ ಒಳ ಉಡುಪುಗಳನ್ನು ಒಳಗೊಂಡಂತೆ) ಪ್ರತಿ ಫಲಾನುಭವಿಗೆ 1 ಜೊತೆಗೆ ರೂ. 800/-ಗಳಂತೆ 50 ಫಲಾನುಭವಿಗಳಿಗೆ | | 600 X 50 X 4 | | 1,20,000/- |
| 16 | ಕಛೇರಿ ನಿರ್ವಹಣಾ ವೆಚ್ಚ (ಸಾದಿಲ್ವಾರು, ದೂರವಾಣಿ, ಸಾರಿಗೆ ಮತ್ತು ಇತರೆ) ಪ್ರತಿ ತಿಂಗಳಿಗೆ ರೂ. 6,000/-ಗಳಂತೆ | | 6,000 X 12 | | 72,000/- |

Karnataka State Government Disabled Employees Association
Renukaradhya S
Indresh R

..7

| | | |
|---|---|---|
| II. ಆನಾವರ್ತಕ ವೆಚ್ಚ | | |
| 17 | ಕಛೇರಿ ಉಪಯೋಗಕ್ಕಾಗಿ (ಟೇಬಲ್, ಕುರ್ಚಿ, ಆಲ್ಮೆರ) | 8,00,000 |
| 18 | ನಿವಾಸಿಗಳ ಉಪಯೋಗಕ್ಕಾಗಿ ಕಬ್ಬಿಣದ ಮಂಚ, ರ್‍ಯಾಕ್‌ಗಳು, ಹಾಸಿಗೆ ಹೊದಿಕೆಗಳು, | |
| 19 | ನಿವಾಸಿಗಳ ಉಪಯೋಗಕ್ಕಾಗಿ ಅಡಿಗೆ ಪಾತ್ರೆ, ತಟ್ಟೆ, ಲೋಟ ಹಾಗೂ ಇತರೆ ಸಾಮಾಗ್ರಿ | |
| 20 | ಟಿವಿ / ಪರಿಕರಗಳು | |
| | ಒಟ್ಟು (I+II) ರೂ. | 50,00,000/- |

**ಸೂಚನೆ :** ಸಿಬ್ಬಂದಿಗಳನ್ನು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಸೇರಿ ಆಯ್ಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

6/1/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ,2ನೇ ಮಹಡಿ,ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ. ಬೆಂಗಳೂರು.
6. ಅಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(10), ವಿಧಾನ ಸೌಧ, ಬೆಂಗಳೂರು
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ಪ್ರದೇಶಗಳಲ್ಲಿನ 6 ರಿಂದ 18 ವರ್ಷದ ವಯೋಮಾನದವರೆಗಿನ ಮಾನಸಿಕ ಅಸ್ವಸ್ಥ, ಸೆರೆಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರದ ವಿಕಲಚೇತನ ಮಕ್ಕಳಿಗೆ 2 ಹಗಲು ಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: 1) ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾಸಇ/ಯೋಜನೆ/ಆ.ಮ.ಹ.ಯೋ.ಕೇಂ./13/2013-14/1367, ದಿನಾಂಕ: 24-7-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 24-7-2013ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ಮಾನ್ಯ ಮುಖ್ಯ ಮಂತ್ರಿಗಳ ದಿನಾಂಕ:12-7-2013ರಂದು ಮಂಡಿಸಿರುವ 2-13-14ನೇ ಸಾಲಿನ ಆಯವ್ಯಯ ಭಾಷಣದ ಕ್ರಮಸಂಖ್ಯೆ: 232ರಲ್ಲಿ, 'ನಗರ ಪ್ರದೇಶಗಳಲ್ಲಿನ 6 ರಿಂದ 18 ವರ್ಷದ ವಯೋಮಾನದವರೆಗಿನ ಮಾನಸಿಕ ಅಸ್ವಸ್ಥ, ಸೆರೆಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತರದ ವಿಕಲಚೇತನ ಮಕ್ಕಳಿಗೆ 2 ಹಗಲು ಪಾಲನಾ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಲಾಗುವುದು' ಎಂದು ಘೋಷಿಸಿರುತ್ತಾರೆ.

ನಗರ ಪ್ರದೇಶದಲ್ಲಿ ಜೀವನ ನಿರ್ವಹಣೆಗೆ ಕುಟುಂಬದ ಎಲ್ಲಾ ಸದಸ್ಯರು ಉದ್ಯೋಗ ಮಾಡಬೇಕಾದ ಪರಿಸ್ಥಿತಿ ಇರುತ್ತದೆ. ನಗರ ಪ್ರದೇಶದಲ್ಲಿನ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ಮಕ್ಕಳ ಬಹುತೇಕ ತಂದೆ ತಾಯಂದಿರು ಹಾಗೂ ಪೋಷಕರು ಹಗಲು ವೇಳೆಯಲ್ಲಿ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲೇಬೇಕಾಗಿದ್ದು, ಈ ಮಕ್ಕಳನ್ನು ಹಗಲು ವೇಳೆಯಲ್ಲಿ ನೋಡಿಕೊಳ್ಳಲು ಯಾರ ಸಹಾಯವೂ ಇಲ್ಲದೇ ತೊಂದರೆ ಅನುಭವಿಸುತ್ತಿರುವುದರಿಂದ, ಅಂತಹ ಸಂದರ್ಭದಲ್ಲಿ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು ಮನೆಯಲ್ಲಿ ಇರಬೇಕಾದ ಅನಿವಾರ್ಯತೆ ಇದ್ದು ಅವರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

ಈ ಹಿನ್ನಲೆಯಲ್ಲಿ, 6 ರಿಂದ 18 ವರ್ಷದ ವಯೋಮಾನದ ವರೆಗಿನ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ಮಕ್ಕಳಿಗೆ ಎರಡು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಬೆಂಗಳೂರು ನಗರದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸಲು ಉದ್ದೇಶಿಸಿದ್ದು, ಯೋಜನೆಯ ಅನುಷ್ಠಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವುದರ ಜೊತೆ ಪ್ರಸಕ್ತ ಸಾಲಿಗೆ ಪ್ರತಿ ಕೇಂದ್ರದಲ್ಲಿ ಕನಿಷ್ಠ 25 ಮಕ್ಕಳಿಗೆ ಮಾಹೆಯಾನ ರೂ.2500/-ರಂತೆ ವಾರ್ಷಿಕ ರೂ.6.25 ಲಕ್ಷಗಳಂತೆ ಎರಡು ಕೇಂದ್ರಗಳಿಗೆ ಒಟ್ಟು ರೂ.12.50ಲಕ್ಷಗಳ ಆಯವ್ಯಯದ ಅವಶ್ಯಕತೆ ಇದ್ದು ಸದರಿ ಆಯವ್ಯಯವನ್ನು ಲೆಕ್ಕಶೀರ್ಷಿಕೆ: 2235-02-800-0-04 (ಯೋಜನೆ) ಉಪ ಲೆಕ್ಕ ಶೀರ್ಷಿಕೆ 101 ಸಹಾಯಧನ/ವೇತನಗಳಡಿ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸಂಖ್ಯೆ 5258
ದಿನಾಂಕ 31-8-2013
ಬೆಂಗಳೂರು

## ಸರ್ಕಾರದ ಆದೇಶ ಸಂಖ್ಯೆ: ಮಮಇ 268 ಪಿಹೆಚ್‌ಪಿ 2013, ಬೆಂಗಳೂರು
## ದಿನಾಂಕ: 28-8-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 6 ರಿಂದ 18 ವರ್ಷದ ವಯೋಮಾನದವರೆಗಿನ ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ವಿಕಲಚೇತನ ಮಕ್ಕಳಿಗೆ ಎರಡು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಬೆಂಗಳೂರು ನಗರದಲ್ಲಿ ವಿಕಲಚೇತನ ಸ್ವಯಂ

ಸೇವಾ ಸಂಸ್ಥೆಗಳ ಮೂಲಕ ಸ್ಥಾಪಿಸಲು ಹಾಗೂ ಈ ಕೇಂದ್ರಗಳನ್ನು "ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನ ಯೋಜನೆ"ಯಡಿ ಅಳವಡಿಸಿ 2013-14ನೇ ಸಾಲಿಗೆ ರಾಜ್ಯ ಅನುದಾನಕ್ಕೆ ಒಳಪಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ಯೋಜನೆಯ ಅನುಷ್ಠನಕ್ಕೆ ಪತ್ರಿಕಾ ಪ್ರಕಟಣೆಯ ಮೂಲಕ ಅರ್ಹ ವಿಕಲಚೇತನ ಸ್ವಯಂಸೇವಾ ಸಂಸ್ಥೆಗಳನ್ನು ಆಹ್ವಾನಿಸಿ, ನಿಯಮಾನುಸಾರ ಆಯ್ಕೆ ಮಾಡಲು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಕ್ರಮವಹಿಸತಕ್ಕದ್ದು. ವಿಕಲಚೇತನ ಸ್ವಯಂಸೇವಾ ಸಂಸ್ಥೆಗಳ ಮೂಲಕ ಈ ಹಗಲು ಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಷರತ್ತು ಹಾಗೂ ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ 2013-14ನೇ ಸಾಲಿಗೆ ಪ್ರತಿ ಕೇಂದ್ರದಲ್ಲಿ ಕನಿಷ್ಠ 25 ಮಕ್ಕಳಿಗೆ ಮಾಹೆಯಾನ ರೂ.2500/-ರಂತೆ ವಾರ್ಷಿಕ ರೂ.6.25 ಲಕ್ಷಗಳಂತೆ ಎರಡು ಕೇಂದ್ರಗಳಿಗೆ ಒಟ್ಟು ರೂ.12.50ಲಕ್ಷಗಳ ಆಯವ್ಯಯವನ್ನು ಲೆಕ್ಕಶೀರ್ಷಿಕೆ: 2235-02-800-0-04 (ಯೋಜನೆ) ಉಪ ಲೆಕ್ಕ ಶೀರ್ಷಿಕೆ 101 ಸಹಾಯಧನದಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 565 ವೆಚ್ಚ-3 2013, ದಿನಾಂಕ: 28.08.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
5) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ.
6) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ.
7) ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
8) ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಮಮಇ 268 ಪಿಹೆಚ್‌ಪಿ 2013, ದಿನಾಂಕ: 28.08.2013ಕ್ಕೆ ಅನುಬಂಧ

## ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ವಿಕಲಚೇತನ ಮಕ್ಕಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಲು ಈ ಕೆಳಗಿನಂತೆ ಷರತ್ತು ಹಾಗೂ ಮಾರ್ಗಸೂಚಿಗಳು

1. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ವಿಕಲಚೇತನ ಮಕ್ಕಳ ವಯೋಮಿತಿ 6 ರಿಂದ 18 ವರ್ಷದೊಳಗಿರತಕ್ಕದ್ದು.
2. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರ ತೆರನಾದ ವಿಕಲಚೇತನ ಮಕ್ಕಳ ತಂದೆ/ತಾಯಿ/ಪೋಷಕರು ಉದ್ಯೋಗ ಮಾಡುತ್ತಿರುವ ಬಗ್ಗೆ ದೃಢೀಕರಣ ಒದಗಿಸತಕ್ಕದ್ದು.
3. ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವೈದ್ಯಕೀಯ ಪ್ರಮಾಣದಲ್ಲಿ ಸೂಚಿಸಿರುವ ವಿಕಲಚೇತನ ಮಕ್ಕಳನ್ನು ಮಾತ್ರ ಕೇಂದ್ರಕ್ಕೆ ಸೇರಿಸಿಕೊಳ್ಳಲು ಅವಕಾಶವಿರುತ್ತದೆ.
4. ವಿಕಲಚೇತನ ಮಕ್ಕಳ ತಂದೆ-ತಾಯಿ ಹಾಗೂ ಪೋಷಕರು ಮಕ್ಕಳನ್ನು ಹಗಲು ವೇಳೆಯಲ್ಲಿ ಮಾತ್ರ ಕೇಂದ್ರದಲ್ಲಿ ಬಿಡಲು ಅವಕಾಶವಿರುತ್ತದೆ.
5. ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಕನಿಷ್ಠ 25 ಮಕ್ಕಳು ದಾಖಲಾಗಿರಬೇಕು.
6. ವಿಕಲಚೇತನ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವತಿಯಿಂದ ಅನುಮತಿ ಪಡೆದ ಸಂಸ್ಥೆಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು.
7. ಸಂಸ್ಥೆಯು ಫಲಾನುಭವಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆ ಧನಸಹಾಯ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ.
8. ಇಲಾಖೆಯಿಂದ ಸಂಸ್ಥೆಗೆ ಅನುಮತಿ ಪಡೆದ ವರ್ಷದಿಂದಲೇ ಅನ್ವಯವಾಗುವಂತೆ ಸಹಾಯಧನ ಮಂಜೂರಾತಿಗೆ ಅರ್ಹರಾಗಿರುತ್ತಾರೆ.
9. ಸಹಾಯಧನವು ಆಯವ್ಯಯ ಲಭ್ಯತೆಗೆ ಒಳಪಟ್ಟಿರುತ್ತದೆ. ಸಂಸ್ಥೆಯ ಸಹಾಯಧನವನ್ನು ತನ್ನ ಹಕ್ಕೆಂದು ಕ್ಲೈಮ್ ಮಾಡುವಂತಿಲ್ಲ.
10. ಸಂಸ್ಥೆಯು ಸಹಾಯಧನದ ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ಹಾಗೂ ಸರಿಯಾಗಿ ನಿರ್ವಹಿಸಿ ಅಗತ್ಯವೆನಿಸಿದಾಗ ತನಿಖೆಗೆ ನೀಡಬೇಕು.
11. ಸಹಾಯಧನದಿಂದ ಸಂಪೂರ್ಣವಾಗಿ ಅಥವಾ ಭಾಗಶಃ ಖರೀದಿಸಿದ ಎಲ್ಲಾ ರೀತಿಯ ಆಸ್ತಿಯ ಲೆಕ್ಕಪತ್ರಗಳನ್ನು ಸಂಸ್ಥೆಯು ಸರಿಯಾಗಿ ನಿರ್ವಹಿಸತಕ್ಕದ್ದು. ಈ ರೀತಿ ಪಡೆದ ಆಸ್ತಿಗಳ ವಿವರಗಳ ಪಟ್ಟಿಯನ್ನು ಪ್ರತೀ ವರ್ಷ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಇಂತಹ ಆಸ್ತಿಗಳನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆ ಮಾಡುವುದು, ಅತಿಕ್ರಮ ಪ್ರವೇಶಿಸುವುದಾಗಲೀ ಮಾಡಬಾರದು. ಯಾವ ಉದ್ದೇಶಕ್ಕಾಗಿ ಸಹಾಯಧನ ಪಡೆಯಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಸಂಸ್ಥೆಯು ಮುಚ್ಚಿದಲ್ಲಿ ಅಂತಹ ಆಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವುದು.
12. ಮಂಜೂರು ಮಾಡಿದ ಸಹಾಯಧನವು ಅನುಮೋದಿಸಲ್ಪಟ್ಟ ಕಾರ್ಯಕ್ಕೆ ವಿನಿಯೋಗಿಸದೇ ಇರುವುದು ಕಂಡುಬಂದಲ್ಲಿ ಸರ್ಕಾರವು ಸಹಾಯಧನವನ್ನು ನಿಲ್ಲಿಸುವುದಲ್ಲದೇ ಹಿಂದೆ ನೀಡಿದ ಸಹಾಯಧನವನ್ನು ವಸೂಲಿ ಮಾಡಲಾಗುವುದು.
13. ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಮುಕ್ತವಾಗಿರಬೇಕು.
14. ಸರ್ಕಾರವು ಯಾವುದೇ ಸಂದರ್ಭದಲ್ಲಿ ಹಗಲು ಯೋಗಕ್ಷೇಮ ಕೇಂದ್ರವನ್ನು ಸರ್ಕಾರೇತರ ಸಂಸ್ಥೆಗಳಿಂದ ಮೌಲ್ಯಮಾಪನ ಮಾಡಿಸಲಾಗುವುದು.
15. ಸಹಾಯಧನವು ಮಂಜೂರಾಗದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ಸಂಸ್ಥೆಯು ಹಗಲು ಯೋಗಕ್ಷೇಮ ಕೇಂದ್ರವನ್ನು ಮುಚ್ಚತಕ್ಕದ್ದಲ್ಲ. ಸಂಸ್ಥೆಯು ತನ್ನ ಸಂಪನ್ಮೂಲಗಳಿಂದಲೇ ಹಗಲು ಯೋಗಕ್ಷೇಮ ಕೇಂದ್ರವನ್ನು ನಡೆಸತಕ್ಕದ್ದು.

Karnataka State Government Disabled Employees Association
Renukaradhya S
Indresh K

16. ಸಹಾಯಧನ ಪಡೆಯಲು ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಪರಿಶೀಲಿಸಿ ಶಿಫಾರಸ್ಸುಗೊಂಡ ಸೂಕ್ತ ಪ್ರಸ್ತಾವನೆಗಳನ್ನು ನಿರ್ದೇಶನಾಲಯದಲ್ಲಿ ಸ್ವೀಕರಿಸಲಾಗುವುದು.
17. ಸರ್ಕಾರದ ಸಹಾಯಧನ ಪಡೆಯುವ ಅವಧಿಯಲ್ಲಿ ಇತರೇ ಸಂಸ್ಥೆಗಳಿಂದ ಧನಸಹಾಯ ಪಡೆಯತಕ್ಕದ್ದಲ್ಲ.

**ಸಿಬ್ಬಂದಿಗಳ ನೇಮಕಾತಿ:**

1. ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿರುವ ಎಲ್ಲಾ ಸಿಬ್ಬಂದಿಗಳನ್ನು ಗೌರವಧನದ ಆಧಾರದ ಮೇಲೆ ಸಂಸ್ಥೆಯು ನೇಮಿಸತಕ್ಕದ್ದು. ಸಿಬ್ಬಂದಿಗಳಿಗೆ ಗೌರವಧನವನ್ನು ಚೆಕ್ ಮೂಲಕ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು. ಪಾವತಿಸಿದ ಬಗ್ಗೆ ಲೆಕ್ಕಪತ್ರಗಳನ್ನು ನೀಡುವುದು.
2. ಹಗಲು ಯೋಗಕ್ಷೇಮ ಕೇಂದ್ರಗಳಿಗೆ ಸಿಬ್ಬಂದಿ ವರ್ಗದವರನ್ನು ನೇಮಿಸುವಾಗ ಅರ್ಹ ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು ಹಾಗೂ ರೋಸ್ಟರ್ ಪದ್ಧತಿಯನ್ನು ಅನುಸರಿಸುವುದು.
3. ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಶಿಕ್ಷಕರು ಬುದ್ಧಿಮಾಂದ್ಯ, ಆಟಿಸಂ, ಸ್ಪ್ಯಾಸ್ಟಿಕ್ ಮತ್ತು ಸೆರಬ್ರಲ್ ಡಿಪ್ಲೊಮಾ ಅಥವಾ ಪದವಿಯೊಂದಿಗೆ ತರಬೇತಿಯನ್ನು ಹೊಂದಿದ್ದು, ಈ ಪದವಿಗಳು ಆರ್.ಸಿ.ಐ ನಿಂದ ಅಂಗೀಕೃತವಾಗಿರಬೇಕು.

Karnataka State Government Disabled Employees Association
Renukaradhya S
Indresh R

**ಮಂಜೂರಾತಿ ಪ್ರಾಧಿಕಾರ:**

ಸಹಾಯಧನ ಮಂಜೂರಾತಿ ಅಧಿಕಾರವು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರಿಗೆ ಒಳಪಟ್ಟಿರುತ್ತದೆ. ಹಾಗೂ ನಿರ್ದೇಶಕರ ಮತ್ತು ಸರ್ಕಾರದ ವಿವೇಚನಾಧಿಕಾರದಲ್ಲಿ ಸಹಾಯಧನವನ್ನು ಮಂಜೂರು ಮಾಡಲಾಗುವುದು.

**ಅರ್ಜಿಗಳು ಸಲ್ಲಿಸುವ ವಿಧಾನ:**

- ಸಹಾಯಧನಕ್ಕೆ ಅರ್ಜಿಗಳನ್ನು ಸಲ್ಲಿಸುವ ಮೊದಲು ಹಗಲು ಯೋಗಕ್ಷೇಮ ಕೇಂದ್ರವನ್ನು ಪ್ರಾರಂಭಿಸಲು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರಿಂದ ಅನುಮತಿಯನ್ನು ಪಡೆದಿರಬೇಕು.
- ಈ ಯೋಜನೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಅನುದಾನದ ಅರ್ಜಿಯನ್ನು ಅಗತ್ಯವಾದ ಎಲ್ಲಾ ದಾಖಲೆಗಳೊಂದಿಗೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
- ಅರ್ಜಿ ನಮೂನೆಯು ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯ ಆದೇಶದಲ್ಲಿನ ನಮೂನೆಯಂತೆ ಸಲ್ಲಿಸುವುದು.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

# ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 56 ಯುಬಿವಿ 2004

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23-03-2004

## ಸುತ್ತೋಲೆ

ವಿಷಯ: ಪದವಿ ಕೋರ್ಸುಗಳಲ್ಲಿ ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಭಾಷಾ/ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ: 20-03-2004 ಸಂಖ್ಯೆ: ಅಂಅನಿ/ಆಸ್ಪಿ ಅನು04/03-04ರ ಅಂಗವಿಕಲರ ಅಧಿನಿಯಮ ಆಯುಕ್ತರ ಪತ್ರ.

1. ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢ ಶಿಕ್ಷಣ ಮತ್ತು ಪಿಯುಸಿಯಲ್ಲಿ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ತೆಗೆದುಕೊಳ್ಳಲು ಅವಕಾಶವಿದ್ದು, ಉಳಿದ ಎರಡು ಭಾಷೆಗಳಲ್ಲಿ ವಿನಾಯಿತಿ ನೀಡಲಾಗಿರುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢಶಿಕ್ಷಣ ಮತ್ತು ಪಿಯುಸಿ ತರಗತಿಗಳಲ್ಲಿ ಭಾಷಾ ಕಲಿಕೆಯಿಂದ ನೀಡಲಾಗಿರುವ ಈ ವಿನಾಯಿತಿಯನ್ನು ಪದವಿ ತರಗತಿಗಳಿಗೂ ಸಹ ವಿಸ್ತರಿಸಲು ಮನವಿಗಳು ಸ್ವೀಕೃತವಾಗಿವೆ.

2. ಇಂತಹ ವಿದ್ಯಾರ್ಥಿಗಳಿಗೆ ಪದವಿ ಕೋರ್ಸುಗಳಲ್ಲಿ ಭಾಷಾ ಕಲಿಕೆಯಿಂದ ವಿನಾಯಿತಿ ನೀಡುವ ವಿಷಯವನ್ನು ಅಂಗವಿಕಲರ ಅಧಿನಿಯಮದ ಆಯುಕ್ತರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢ ಶಿಕ್ಷಣ ಮತ್ತು ಪಿಯುಸಿ ತರಗತಿಗಳಲ್ಲಿ ಭಾಷಾ ಕಲಿಕೆಯಿಂದ ವಿನಾಯಿತಿ ನೀಡಲಾಗಿರುವುದರಿಂದ ಪದವಿ ಕೋರ್ಸುಗಳಲ್ಲಿ ಭಾಷೆ ಅಭ್ಯಾಸ ಮಾಡುವುದು ಪ್ರಾಯೋಗಿಕವಾಗಿ ಸೂಕ್ತವೆಂದು ಕಂಡುಬರುವುದಿಲ್ಲ. ಆದ್ದರಿಂದ ಇಂತಹ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಈಗಾಗಲೇ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣದಲ್ಲಿ ನೀಡಲಾಗಿರುವ ಭಾಷಾ ವಿನಾಯಿತಿ ಸೌಲಭ್ಯವನ್ನು ಪದವಿ ಕೋರ್ಸುಗಳಿಗೂ ಸಹ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗಿದೆ.

3. ಬಿಎ/ಬಿಎಸ್ಸಿ/ಬಿಕಾಂ ಹಾಗೂ ಇತರ ಪದವಿ ಕೋರ್ಸುಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಎಲ್ಲಾ ಪದವಿ ಕೋರ್ಸುಗಳಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಎರಡನೇ ಭಾಷೆಯನ್ನು ಅಭ್ಯಾಸ ಮಾಡುವುದರಿಂದ ಹಾಗೂ ಸದರಿ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡುವಂತೆ ಈ ಮೂಲಕ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ.

(ಸುಂದರರಾಜ್ ಗುಪ್ತ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 1000 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಪ್ರತಿ ಇವರಿಗೆ:

1. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು (ಮೌಲ್ಯಮಾಪನ) ರವರಿಗೆ

Karnataka State Government Disabled Employees Association
Renukaradhya S

# GOVERNMENT OF KARNATAKA

No.DPAR 142 SRR 2006

Karnataka Government Secretariat,
Vidhana Soudha,
Bangalore, dated : 5-11-2007.

## NOTIFICATION

Whereas, the draft of the following Rules further to amend the Karnataka Civil Services (General Recruitment) Rules, 1977, was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990), in Notification No. DPAR 142 SRR 2006, dated 20th August, 2007 in Part IV-A (No.1690) of the Karnataka Gazette Extra-ordinary dated 10th September, 2007 inviting objections and suggestions from persons likely to be affected thereby within fifteen days from the date of publication of draft in the Official Gazette.

Whereas, the said Gazette was made available to the public on 10th September, 2007.

And, whereas no objections and suggestions have been received by the State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka makes the following rules, namely:-

...2

## RULES

**1. Title and Commencement:-** (1) These rules may be called the Karnataka Civil Services (General Recruitment) (67th Amendment) Rules, 2007.

(2) They shall come into force from the date of their publication in the Official Gazette.

**2. Amendment of Rule 13:** In the Karnataka Civil Services (General Recruitment) Rules, 1977, in rule 13, in the first proviso after the words "the Category-1" the words "or Physically Handicapped " shall be inserted.

By Order and in the name of the
President of India

Devaraju
(DEVARAJU)
Under Secretary to Government,
Department of Personnel &
Administrative Reforms,
(Service Rules-1)

**To:**

**The Compiler, Karnataka Gazette, Bangalore, for publication in the Extra-ordinary Gazette and to supply 1000 copies to DPAR(S.R-A Section), Room No.31, Ground Floor, Vidhana Soudha, B... galore-1.**

Copy to:

1. The Secretary to Governor, Raj Bhavan, Bangalore
2. Personal Secretaries to the Advisors to Governor.
3. Personal Secretary to Chief Secretary to Government.
4. All the Principal Secretaries/Secretaries to Government
5. The Accountant General, [GM Section], Karnataka, Bangalore
6. All Heads of Departments/Deputy Commissioners/ Chief Executive Officers.
7. Head of the Legal Cell, Department of Personnel and Administrative Reforms and Ex-officio Deputy Secretary to Government, MS Buildings, Bangalore-1.
8. PSs to Addl.Chief Secretaries to Government
9. *The Principal Secretary/Secretary, Karnataka Legislative Council/Legislative Assembly, Vidhana Soudha, Bangalore-560 001
10. *The Secretary, Karnataka Public Service Commission, Park House, Bangalore-1
11. *The Registrar General, High Court of Karnataka, Bangalore-560 001
12. *The Registrar, Karnataka Administrative Tribunal, Bangalore-560 038
13. *The Registrar, Karnataka Lokayukta, Bangloare-560 001
14. Website/Weekly Gazette/SGF/Spare Copies.

(*With a covering letter)

57/33
9/6/14

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲತೆಯುಳ್ಳ ವ್ಯಕ್ತಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವೈಯಕ್ತಿಕವಾಗಿ ಭಾಗವಹಿಸುವವರಿಗೆ ಸಹಾಯಧನ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ. ಮಮಇ 282 ಪಿಹೆಚ್‌ಪಿ 96 (ಭಾ-1), ದಿನಾಂಕ: 18.9.1996.

2) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ/ಸಾ&ಪ್ರ ಯೋಜನೆ/ಸಿ-10/2013-14/5053, ದಿನಾಂಕ: 25.10.2013.

ಪ್ರಸ್ತಾವನೆ:

ಅಂಗವಿಕಲರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳು, ನೋಂದಾಯಿತ ಸಾಂಸ್ಕೃತಿಕ ಸ್ವಯಂ ಸೇವಾ ಸಂಸ್ಥೆಗಳು ಅಂಗವಿಕಲ ಕಲಾವಿದರನ್ನು ಒಳಗೊಂಡು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 'ಪ್ರತಿಭೆ' ಯೋಜನೆಯಡಿ ಗರಿಷ್ಠ ಮೊತ್ತ ರೂ.10,000/- ಸಹಾಯಧನವನ್ನು ನೀಡಲು ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ದಿನಾಂಕ: 18.9.1996 ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಪ್ರತಿಭಾವಂತ ವಿಕಲಚೇತನ ಕಲಾವಿದರನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉತ್ತೇಜಿಸುವ ದೃಷ್ಟಿಯಿಂದ, ವಿಕಲಚೇತನರು ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಲಾ ರೂ.2,000/- ಸಹಾಯಧನ ನೀಡಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ದಿನಾಂಕ: 25.10.2013 ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 485 ಪಿಎಚ್‌ಪಿ 2013, ಬೆಂಗಳೂರು, ದಿನಾಂಕ: 7.6.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ವಿಕಲಚೇತನರು ವೈಯಕ್ತಿಕವಾಗಿ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.2,000/- (ರೂಪಾಯಿ ಎರಡು ಸಾವಿರಗಳು ಮಾತ್ರ) ರಂತೆ ಸಹಾಯಧನ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

10/6/14

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-99 ದೈಹಿಕ ಹಾಗೂ ಮಾನಸಿಕವಾಗಿ ಸವಾಲಿಗೊಳಗಾದವರ ಕಲ್ಯಾಣ 100 ಧನಸಹಾಯ/ ಪರಿಹಾರ (ಯೋಜನೆ) ರಡಿ 2014-15 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿಯೇ ಭರಿಸತಕ್ಕದ್ದು.

335
9/6/14

. . . . 2

Karnataka State Government Disabled Employees Association
Renukaradhya S
Indresh R

ಫಲಾನುಭವಿಗಳು ಅದೇ ಕಾರ್ಯಕ್ರಮಕ್ಕೆ ಪ್ರಾಯೋಜಿತರಿಂದ ಅಥವಾ ಇನ್ನಾವುದೇ ವ್ಯಕ್ತಿಗಳಿಂದ ಯಾವುದೇ ಹಣ ಅಥವಾ ಹಣದ ಬದಲಾಗಿ ಯಾವುದೇ ವಸ್ತುವನ್ನು ಪಡೆದಿರಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 345 ವೆಚ್ಚ-3/2014, ದಿನಾಂಕ: 19.5.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಕೆ.ಜರಳಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು. } ನಿರ್ದೇಶಕರು, ವಿ.ಹಿ.ನಾ.ಸ.ಇಲಾಖೆ
4. ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ } ಇವರ ಮುಖಾಂತರ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ – 3 &9).
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
9. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

Karnataka State Government Disabled Employees Association
Renukaradhya S
Indiesh R

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ
## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ವಿವಿಧ ಸಮತಳ (Horizontal) ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ:
1. ದಿನಾಂಕ: 20-6-1995ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95
2. ದಿನಾಂಕ: 21-10-1995ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 28 ಎಸ್ಆರ್ಆರ್ 95
3. ದಿನಾಂಕ: 6-3-1996ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 34 ಎಸ್ಎಸ್ಆರ್ 95
4. ದಿನಾಂಕ: 23-11-2000ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್ಎಸ್ಆರ್ 99
5. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000.
6. ದಿನಾಂಕ: 13-2-2001ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 6 ಸೆನೆನಿ 2001.
7. ದಿನಾಂಕ: 24-10-2002ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್ಎಸ್ಆರ್ 2001
8. ದಿನಾಂಕ: 22-11-2002ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 97 ಸೆನೆನಿ 2002.
9. ದಿನಾಂಕ: 3-9-2005ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್ಎಸ್ಆರ್ 2000.

### ಪ್ರಸ್ತಾವನೆ:

ಕ್ರಮಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 20-6-1995ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4) ರನ್ವಯ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ಪ್ರಮಾಣ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರನ್ನು ನಿಗದಿಪಡಿಸಲಾಗಿದೆ. ಈ ಆದೇಶದ ಕಂಡಿಕೆ (2)ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರನ್ವಯ ಮಾಜಿ ಸೈನಿಕರಿಗೆ ಶೇಕಡಾ 10 ರಷ್ಟು ಮೀಸಲಾತಿ ಬಗ್ಗೆ ಆಸ್ಪದವನ್ನು ಕಲ್ಪಿಸಲಾಗಿದೆ.

ಕ್ರಮಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 21-10-1995ರ ಅಧಿಸೂಚನೆಯಲ್ಲಿ ಮೇಲೆ ಹೇಳಿದ ನಿಯಮಗಳ ನಿಯಮ 9(1ಎ)ಯನ್ನು ತಿದ್ದುಪಡಿ ಮಾಡಿ, ಅಂಗವಿಕಲರಿಗೆ ಶೇಕಡಾ 5 ರಷ್ಟು ಮೀಸಲಾತಿ ಬಗ್ಗೆ ಆಸ್ಪದವನ್ನು ಕಲ್ಪಿಸಲಾಗಿದೆ.

ಕ್ರಮಸಂಖ್ಯೆ (3) ರಲ್ಲಿ ಓದಲಾದ, ದಿನಾಂಕ: 6-3-1996ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ಕ್ಕೆ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ. 30 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕ್ರಮಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 23-11-2000ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿನ ಗ್ರೂಪ್-'ಸಿ' ಮತ್ತು 'ಡಿ' ಹುದ್ದೆಗಳ ನೇರ ನೇಮಕಾತಿಯಲ್ಲಿ ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬಗಳ ಅಭ್ಯರ್ಥಿಗಳಿಗೆ ಶೇ. 5 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕ್ರಮಸಂಖ್ಯೆ (5) ರಲ್ಲಿ ಓದಲಾದ ಅಧಿನಿಯಮದಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇ. 25 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಮೇಲ್ಕಂಡ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಕ್ರಮಸಂಖ್ಯೆ (6) ರಲ್ಲಿ ಓದಲಾದ ದಿನಾಂಕ 13-2-2001ರ ಆದೇಶದಲ್ಲಿ ಮಾರ್ಗಸೂಚನೆಗಳನ್ನು ಹೊರಡಿಸಲಾಗಿದೆ.

Karnataka State Government Disabled Employees Association
Renuka Aradhya S
Indresh R

ಕ್ರಮಸಂಖ್ಯೆ (7) ರಲ್ಲಿ ಓದಲಾದ ದಿನಾಂಕ: 24-10-2002ರ ಅಧಿಸೂಚನೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಶೇ. 5 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕ್ರಮಸಂಖ್ಯೆ (8) ರಲ್ಲಿ ಓದಲಾದ ದಿನಾಂಕ: 22-11-2002ರ ಆದೇಶದಲ್ಲಿ ಮೇಲ್ಕಂಡ ಮೀಸಲಾತಿಗಳನ್ನು ಜಾರಿಗೊಳಿಸಲು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಲ್ಲಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ 20ರ ಒಂದು ಗುಂಪಿನಲ್ಲಿ ಬಿಂದುಗಳನ್ನು ಗುರುತಿಸಿ ರೋಸ್ಟರನ್ನು ನಿಗದಿಪಡಿಸಿ ಮಾರ್ಗಸೂಚನೆಗಳನ್ನು ನೀಡಲಾಗಿದೆ.

ನಂತರ, ಕ್ರಮಸಂಖ್ಯೆ (9) ರಲ್ಲಿ ಓದಲಾದ ದಿನಾಂಕ: 3-9-2005ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977ರ ನಿಯಮ 9(1ಎ) ತಿದ್ದುಪಡಿ ಮಾಡಿ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಶೇ. 3 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ರೋಸ್ಟರ್ ನಿಗದಿಪಡಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 107 ಸೇನೆನಿ 2005, ಬೆಂಗಳೂರು, ದಿನಾಂಕ: 5-9-2005**

ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇರ ನೇಮಕಾತಿಯಲ್ಲಿ ವಿವಿಧ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಕ್ರಮಸಂಖ್ಯೆ (8) ರಲ್ಲಿ ಓದಲಾದ ದಿನಾಂಕ: 22-11-2002ರ ಆದೇಶದಲ್ಲಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ 20 ರಿಕ್ತ ಸ್ಥಾನಗಳ ಸಮೂಹದಲ್ಲಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಲಾಗಿದೆ. ಇದರ ಪ್ರಕಾರ ಅಂಗವಿಕಲ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ರೋಸ್ಟರ್ ಬಿಂದುವಿನ ಸಂಖ್ಯೆ-19. ಇದೇ ರೋಸ್ಟರನ್ನು 20 ರಿಕ್ತ ಸ್ಥಾನಗಳ ಬದಲಾಗಿ 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಲಭ್ಯವಾಗುವ ರೋಸ್ಟರ್ ಬಿಂದುಗಳ ಸಂಖ್ಯೆಗಳು 19, 39, 59, 79 ಮತ್ತು 99 ಆಗುತ್ತವೆ. ಈ ರೋಸ್ಟರ್ ಬಿಂದುಗಳು ಸಮೂಹ 'ಸಿ' ಮತ್ತು ಸಮೂಹ 'ಡಿ' ಗೆ ಸೇರಿದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗೆ ಅನ್ವಯವಾಗುತ್ತವೆ. ಈಗ ಮೇಲಿನ ಕ್ರಮಸಂಖ್ಯೆ (9) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಅಂಗವಿಕಲರಿಗೆ ಸಮೂಹ 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇ. 3ರ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸುವ ಉದ್ದೇಶದಿಂದ ಮೇಲ್ಕಂಡ ದಿನಾಂಕ: 22-11-2002ರ ಆದೇಶದಲ್ಲಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ನೂರರ ಒಂದು ಗುಂಪಿನಲ್ಲಿ ಪ್ರತಿ 19, 59 ಮತ್ತು 99ನೇ ರೋಸ್ಟರ್ ಬಿಂದುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗಾಗಿ ಮೀಸಲಿರಿಸಕ್ಕದ್ದೆಂದು ಆದೇಶಿಸಲಾಗಿದೆ. ಅಲ್ಲದೆ ಈ ಮೂರು ಬಿಂದುಗಳಲ್ಲಿ 19ನ್ನು ದೃಷ್ಟಿಮಾಂದ್ಯ (blindness or low vision), 59ನ್ನು ಶ್ರವಣ ದೋಷ (hearing impairment) ಮತ್ತು 99ನ್ನು ಚಲನವಲನ ವೈಕಲ್ಯ (locomotor disability or cerebral palsy) ಈ ಅಂಗವಿಕಲತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದು; ಒಂದು ವೇಳೆ ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆಯುಳ್ಳವರನ್ನು ಈ ಬಿಂದುಗಳೆದುರು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿದೆ.

2. ಮೇಲ್ಕಂಡ ಬದಲಾವಣೆಗೆ ಒಳಪಟ್ಟು ಕ್ರಮಸಂಖ್ಯೆ (8) ರಲ್ಲಿ ಓದಲಾದ ದಿನಾಂಕ: 22-11-2002ರ ಆದೇಶ ಯಥಾವತ್ತಾಗಿ ಇನ್ನು ಮುಂದೆಯೂ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಕೆ. ಬಾಬುರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

Karnataka State Government Disabled Employees Association
Bengaluru Indresh R S

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಪತ್ರ ಸಂ: ನಿಅಕಇ:ಯೋ:11:2006-07:ದಿ: 18-4-2006

2. 17-6-2006 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

## ಪ್ರಸ್ತಾವನೆ

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯವರು ಮೇಲೆ ಕ್ರಮಾಂಕ 1 ರಲ್ಲಿ ಓದಲಾದ ದಿನಾಂಕ: 18-4-2006 ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅಂಗವಿಕಲ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಪ್ರಾರಂಭಿಸುವ ಯೋಜನೆಯ ಅನುಷ್ಠಾನಕ್ಕೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

ರಾಜ್ಯದಲ್ಲಿ 940643 ಅಂಗವಿಕಲರು ಇರುವರೆಂದು 2001ನೆಯ ಜನಗಣತಿಯ ಪ್ರಕಾರ ತಿಳಿದು ಬಂದಿರುತ್ತದೆ. ಅಂಗವಿಕಲರಿಗೆ ಇಲಾಖೆಯು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಒತ್ತು ನೀಡುವುದು ಅವಶ್ಯಕತೆ ಇರುತ್ತದೆ. ಅಂಗವಿಕಲರಿಗೆ ಇಲಾಖೆಯು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಒತ್ತು ನೀಡುವುದು ಅವಶ್ಯಕತೆ ಇರುತ್ತದೆ. ಅಂಗವಿಕಲರು ವಿದ್ಯಾವಂತರಾದಲ್ಲಿ ಉದ್ಯೋಗಾವಕಾಶಗಳು ಹೇರಳವಾಗಿ ದೊರೆಯುತ್ತದೆ. ಅಂಗವಿಕಲರು ವಿದ್ಯಾಭ್ಯಾಸವನ್ನು ಮುಂದುವರೆಸಲು ವಸತಿ ನಿಲಯಗಳ ಕೊರತೆಯಿರುವುದರಿಂದ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಮಹಿಳಾ ಅಂಗವಿಕಲರಿಗೆ ಶಿಕ್ಷಣವನ್ನು ಮುಂದುವರೆಯಲು ಅನುಕೂಲವಾಗುವ ರೀತಿಯಲ್ಲಿ ವಸತಿ ನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಜಿಲ್ಲೆಗಳಲ್ಲಿ ಅಂಗವಿಕಲ ಉದ್ಯೋಗಸ್ಥ ಮತ್ತು ತರಬೇತುದಾರರಿಗೆ ವಸತಿ ನಿಲಯಗಳು ಇರುವುದಿಲ್ಲ. ವಸತಿ ನಿಲಯಗಳನ್ನು ಪ್ರಾರಂಭಿಸುವುದರಿಂದ ಉದ್ಯೋಗಗಳನ್ನು ಅರಸಿ ಜಿಲ್ಲೆಗಳಿಗೆ ಬರುವ ಮಹಿಳಾ ಅಂಗವಿಕಲರಿಗೆ ಈ ವಸತಿ ನಿಲಯಗಳಲ್ಲಿ ವಿದ್ಯಾರ್ಥಿನಿಯರ ಜೊತೆ ಇರಲು ಅವಕಾಶ ಕಲ್ಪಿಸಬಹುದಾಗಿರುತ್ತದೆ. ಇದರಿಂದ ಉದ್ಯೋಗಸ್ಥ ಮಹಿಳೆಯರಿಗೆ, ಅಂಗವಿಕಲ ಮಹಿಳಾ ತರಬೇತುದಾರರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಜಿಲ್ಲೆಗಳಲ್ಲಿ ವಸತಿ ನಿಲಯಗಳ ಸೌಲಭ್ಯದ ಸಮಸ್ಯೆಯು ಬಗೆಹರಿಯುವುದೆಂದು ತಮ್ಮ ಪ್ರಸ್ತಾವನೆಯಲ್ಲಿ ನಿರ್ದೇಶಕರು ತಿಳಿಸಿರುತ್ತಾರೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಉದ್ಯೋಗಸ್ಥ ಅಂಗವಿಕಲ ಮಹಿಳೆಯರಿಗೆ, ಅಂಗವಿಕಲ ವಿದ್ಯಾರ್ಥಿಗಳಿಗೆ ಮತ್ತು ತರಬೇತಿ ಪಡೆಯುತ್ತಿರುವ ಅಂಗವಿಕಲ ಮಹಿಳೆಯರಿಗೆ ವಸತಿ ನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸಿರುವ ಪ್ರಸ್ತಾವನೆಯನ್ನು ದಿನಾಂಕ: 17-6-2006 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಸಮಿತಿಯು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆಯ ಸಹಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## ಸರ್ಕಾರಿ ಆದೇಶ ಸಂಖ್ಯೆ: ಮಮಇ:145:ಪಿಹೆಚ್‌ಪಿ:2006(2):ಬೆಂಗಳೂರು ದಿ: 29-7-2006

ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಅಂಗವಿಕಲರ ಮಹಿಳಾ ವಸತಿ ನಿಲಯಗಳನ್ನು ಈ ಕೆಳಕಂಡ 20 ಜಿಲ್ಲೆಗಳಲ್ಲಿ ಪ್ರಾರಂಭಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

1. ಬೆಳಗಾಂ, 2. ಧಾರವಾಡ, 3. ದಾವಣಗೆರೆ, 4. ಚಿತ್ರದುರ್ಗ, 5. ಗುಲ್ಬರ್ಗಾ, 6. ರಾಯಚೂರು, 7. ಬಾಗಲಕೋಟೆ, 8. ಬಿಜಾಪುರ, 9. ಉತ್ತರ ಕನ್ನಡ, 10. ಕೋಲಾರ, 11. ಹಾಸನ, 12. ತುಮಕೂರು, 13. ಮೈಸೂರು, 14. ಶಿವಮೊಗ್ಗ, 15. ಹಾವೇರಿ, 16. ಗದಗ್, 17. ಬಳ್ಳಾರಿ, 18. ಬೆಂಗಳೂರು (ನ), 19. ಬೆಂಗಳೂರು (ಗ್ರಾ), 20. ಬೀದರ್

ಉದ್ಯೋಗಸ್ಥ ಅಂಗವಿಕಲ ಮಹಿಳೆಯರಿಗೆ ಅಂಗವಿಕಲ ವಿದ್ಯಾರ್ಥಿನಿಯರಿಗೆ ಮತ್ತು ತರಬೇತಿ ಪಡೆಯುತ್ತಿರುವ ಅಂಗವಿಕಲ ಮಹಿಳೆಯರಿಗೆ ವಸತಿ ನಿಲಯವನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ನಡೆಸಬೇಕಾಗಿದ್ದು ಸದರಿ ಸ್ವಯಂ ಸೇವಾ ಸಂಸ್ಥೆಗಳನ್ನು ಆಯ್ಕೆ ಮಾಡಲು ರಚಿಸಿರುವ ಸಮಿತಿ ಮತ್ತು ಮಾನದಂಡಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಪೂರೈಸಬೇಕಾದ ಷರತ್ತುಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಯೋಜನೆಯ ಅನುಷ್ಠಾನಕ್ಕೆ ಆಯ್ಕೆ ಮಾಡುವ ಸ್ವಯಂ ಸೇವಾ ಸಂಸ್ಥೆಗಳಿಗೆ ವಸತಿ ನಿಲಯ ನಿರ್ವಹಣೆಗೆ ಒಂದು ವರ್ಷಕ್ಕೆ ನೀಡಬಹುದಾದ ವಾರ್ಷಿಕ ಅಂದಾಜು ವೆಚ್ಚದ ವಿವರವನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-50 ಯೋಜನೇತರ ಅಡಿ ಲಭ್ಯವಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 17-6-2006 ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯ ಅನುಮೋದನೆ ಮೇರೆಗೆ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ:286:EXP.3/2006 ದಿನಾಂಕ: 22-7-2006 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಪಾರ್ವತಿ ಕೇಶವಾಚಾರ್)

ಸರ್ಕಾರ ಉಪ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya R
Indresh R

ಪ್ರತಿ ಮಾಹಿತಿಗಾಗಿ

1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು
2. ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು
4. ಪ್ರಧಾನ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಆಪ್ತ ಸಹಾಯಕರಿಗೆ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಂಗವಿಕಲರು, ಗುರುತಿನ ಚೀಟಿಯ ಮೇಲೆ ಪಡೆಯಬಹುದಾದ ಪ್ರಯೋಜನಗಳ ಕುರಿತು.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ/ಮಮಅ/33/ಪಿಹೆಚ್‌ಪಿ/2002. ದಿ: 02-03-02.

(2) ಸರ್ಕಾರದ ಆದೇಶ ಸಂಖ್ಯೆ ಮಮಇ/107/ಪಿಹೆಚ್‌ಪಿ/2003. ದಿ: 11-07-2003.

(3) ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ಪತ್ರಸಂಖ್ಯೆ/ನಿಅಕಇ/ಗು.ಚೀ/ಮಾ.2003-04 16450/ದಿನಾಂಕ: 16-03-2004.

**ಪ್ರಸ್ತಾವನೆ:-**

ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಅಂಗವಿಕಲರಿಗೆ ಗುರುತಿನ ಚೀಟಿಯನ್ನು ನೀಡಲು ಮಾರ್ಗದರ್ಶನ ಹಾಗೂ ವಿತರಿಸುವ ವಿಧಾನವನ್ನು ತಿಳಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ತಜ್ಞ ಸರ್ಕಾರಿ ವೈದ್ಯಾಧಿಕಾರಿಗಳು ಖಾಸಗಿ ವೈದ್ಯಾಧಿಕಾರಿಗಳೊನ್ನೊಳಗೊಂಡ ಆರೋಗ್ಯ ತಪಾಸಣಾ ಶಿಬಿರವನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಏರ್ಪಡಿಸಿ, ಈ ಶಿಬಿರದಲ್ಲಿ ತಜ್ಞ ವೈದ್ಯಾಧಿಕಾರಿಗಳು ಅಂಗವಿಕಲತೆಯನ್ನು ದೃಢೀಕರಿಸಿ ಪ್ರಮಾಣಪತ್ರ ನೀಡತಕ್ಕದ್ದೆಂದು ಸೂಚಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವಿವಿಧ ಬಗೆಯ ಅಂಗವಿಕಲತೆಗಳನ್ನು ಗುರುತಿಸಿ ಅಂಗವಿಕಲ ಪ್ರಮಾಣ ಪತ್ರ ನೀಡಲು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚಿಸಲಾಗಿದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ (3)ರಲ್ಲಿ ಓದಲಾದ ಪತ್ರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಂಗವಿಕಲರಿಗೆ ಗುರುತಿನ ಚೀಟಿ ಇದ್ದರೂ ಸಹ ಸರ್ಕಾರದ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರಿಂದ ಸರ್ಟಿಫಿಕೇಟ್ ಕೇಳುತ್ತಿದ್ದು. ಇದರಿಂದ ಅಂಗವಿಕಲರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿ; ಅಂಗವಿಕಲರಿಗೆ ನೀಡಲಾದ ಗುರುತಿನ ಚೀಟಿಯ ಮೇಲೆ ಅವರು ಸರ್ಕಾರದಿಂದ ಯಾವ ಯಾವ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ ಎಂಬುದನ್ನು ನಮೂದಿಸಲು ಸರ್ಕಾರದ ಮಂಜೂರಾತಿ ಕೇಳಿದ್ದಾರೆ, ಅಲ್ಲದೇ ಈಗಾಗಲೇ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಗಳನ್ನು ರಚಿಸಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರ ಹುದ್ದೆಗಳನ್ನು ನಮೂದಿಸಿ ಕನಿಷ್ಟ ಇಬ್ಬರು ಸದಸ್ಯರು ಸಹಿ ಮಾಡಲು ಸೂಚಿಸಿ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಪರಿಶೀಲಿಸಿ ಈ ಕೆಳಗಿನ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಮಮಅ:184;ಪಿಹೆಚ್‌ಪಿ::2004:ಬೆಂಗಳೂರು:**

**ದಿನಾಂಕ: 28-06-2004.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಅಂಗವಿಕಲರಿಗೆ ನೀಡಲಾಗುತ್ತಿರುವ ಗುರುತಿನ ಚೀಟಿಯಲ್ಲಿ ಈ ಕೆಳಗಿನ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರು ಅರ್ಹರಿರುತ್ತಾರೆಂದು ನಮೂದಿಸಲು ಸರ್ಕಾರದ ಅನುಮತಿ ನೀಡಿದೆ.

(1) ಉಚಿತ/ರಿಯಾಯಿತಿ ಬಸ್ ಪಾಸ್ ಸೌಲಭ್ಯ ಪಡೆಯಲು,

(2) ರೈಲ್ವೆ ರಿಯಾಯಿತಿ ಪಡೆಯಲು,

(3) ಏರೋಪ್ಲೇನ್‌ನಲ್ಲಿ ಪ್ರಯಾಣಿಸಲು ರಿಯಾಯಿತಿ ಪಡೆಯಲು,

Karnataka State Government Disabled Employees Association
Renukaradhya S
Indresh R

(4) ಆದಾಯ ತೆರಿಗೆ ಪ್ರಯೋಜನ ಪಡೆಯಲು,

(5) ಸರ್ಕಾರದ ವಿವಿಧ ಯೋಜನೆಗಳಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕಾದ ಸಂದರ್ಭಗಳಲ್ಲಿ ಗುರುತಿನ ಚೀಟಿಯನ್ನು ತೋರಿಸಿ/ನಕಲನ್ನು ನೀಡಿ ಪ್ರಯೋಜನ ಪಡೆಯಬಹುದು.

(6) ರಾಜೀವ್‌ಗಾಂಧಿ, ಸ್ವರ್ಣರೋಜ್ಗಾರ್ ಯೋಜನೆ ಮುಂತಾದ ನಿವೇಶನ ಮತ್ತು ಮನೆಗಳನ್ನು ಪಡೆಯಲು.

ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚನೆ ಮಾಡಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರು ಹುದ್ದೆಗಳನ್ನು ನಮೂದಿಸಿ ಕನಿಷ್ಠ ಇಬ್ಬರು ಸದಸ್ಯರು ಸಹಿ ಮಾಡಲು ಹಾಗೂ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಗುರುತಿನ ಚೀಟಿಯನ್ನು ಮುದ್ರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಆರ್.ಎಂ. ಚಂದ್ರಮ್ಮ)

ಸರ್ಕಾರದ ಅಧೀನ ಕಾರ್ಯದರ್ಶಿಗಳು,

ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ: ಶಿಕ್ಷಣ ಇಲಾಖೆ ತಾಂತ್ರಿಕ ಶಿಕ್ಷಣ 1987-88ನೇ ಶೈಕ್ಷಣಿಕ ವರ್ಷದಿಂದ ಡಿಪ್ಲೋಮಾ ಮತ್ತು ಬಿ.ಇ. ಪ್ರವೇಶದಲ್ಲಿ ಅಂಗವಿಕಲರಿಗಿರುವ ಮೀಸಲು ಸ್ಥಾನಗಳನ್ನು ಹೆಚ್ಚಿಸುವ ಬಗ್ಗೆ ಆದೇಶ.

ಓದಲಾಗಿದೆ: 1. ದಿನಾಂಕ: 29-8-1986ರ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ಅಂಗವಿಕಲರ ಪುನರ್ವಸತಿ ಕೇಂದ್ರ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್.25015.1,86.2228.

2. ದಿನಾಂಕ: 25-11-86ರ ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ದಿಟ ಇ.116ರ ಎಸಿಂ(1)86.

### ಪ್ರಸ್ತಾವನೆ:

ಭಾರತ ಸರ್ಕಾರದ, ಕಾರ್ಮಿಕ ಮಂತ್ರಾಲಯದ, ಅಂಗವಿಕಲರ ಪುನರ್ವಸತಿ ಕೇಂದ್ರ, ಬೆಂಗಳೂರು ಇವರು ಮೇಲೆ(1)ರಲ್ಲಿ ಓದಲಾಗಿರುವ ತಮ್ಮ ದಿನಾಂಕ: 29-8-86ರ ಪತ್ರದಲ್ಲಿ ಅಂಗವಿಕಲರಿಗೆ ಈಗ ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮೀಸಲಾಗಿಟ್ಟಿರುವ ಸ್ಥಾನಗಳಾದ, ಡಿಪ್ಲೋಮಾ ಕೋರ್ಸ್ ಹಾಗೂ 4 ಬಿ.ಡಿ.ಡಿಗ್ರಿಗೂ, ಕಾಯ್ದಿರಿಸಿರುವ ಸ್ಥಾನಗಳು, ಪ್ರವೇಶ ಸಂಖ್ಯೆಗಳನ್ನು ಗಮನಿಸಿದಾಗ ಅತೀ ಕಡಿಮೆಯೆಂದೂ ಹಾಗೂ ಈ ಕಡಿಮೆ ಸ್ಥಾನಗಳಿಂದ ಅಂಗವಿಕಲರಿಗೆ ಬಹಳ ತೊಂದರೆಯಾಗುತ್ತಿದೆಯೆಂದೂ, ತಿಳಿಸಿ ಇದನ್ನು ಪರಿಹರಿಸಲು ಈ ಮೀಸಲಾತಿ ಸ್ಥಾನಗಳನ್ನು 1987-88ನೇ ಶೈಕ್ಷಣಿಕ ವರ್ಷದಿಂದ ಸೂಕ್ತವಾಗಿ ಹೆಚ್ಚಿಸಬೇಕೆಂದು ಕೋರಿರುತ್ತಾರೆ. ಈ ಪ್ರಸ್ತಾವನೆಯನ್ನು ಸರ್ಕಾರವು ತಾಂತ್ರಿಕ ಶಿಕ್ಷಣ ನಿರ್ದೇಶಕರೊಂದಿಗೆ ಸಮಾಲೋಚಿಸಿದಾಗ, ನಿರ್ದೇಶಕರು ಮೇಲೆ (2)ರಲ್ಲಿ ಓದಲಾಗಿರುವ ಅವರ ದಿನಾಂಕ: 25-11-86ರ ಪತ್ರದಲ್ಲಿ ಅಂಗವಿಕಲರಿಗೆ ಈಗಿರುವ ಸ್ಥಾನಗಳಾದ 8 ಮತ್ತು 4 ಅನ್ನು 15 ಮತ್ತು 10ಕ್ಕೆ ಹೆಚ್ಚಿಸಬಹುದಾಗಿ ತಿಳಿಸಿರುತ್ತಾರೆ.

ಸರ್ಕಾರವು ಈ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

### ಆದೇಶ ಸಂಖ್ಯೆ: ಇಡಿ 91 ಡಿ ಟಿ ಇ 86 ಬೆಂಗಳೂರು, ದಿನಾಂಕ: 28-1-1987

ಮೇಲ್ಕಂಡ ಸಂದರ್ಭದಲ್ಲಿ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಡಿಪ್ಲೋಮಾ ಮತ್ತು ಬಿ.ಇ. ಪ್ರವೇಶಗಳಲ್ಲಿ, ಅಂಗವಿಕಲರಿಗೆ ಮೀಸಲಾಗಿಟ್ಟಿರುವ 8 ಮತ್ತು 4 ಸ್ಥಾನಗಳನ್ನು ಕ್ರಮವಾಗಿ 15 ಮತ್ತು 10 ಸ್ಥಾನಗಳಿಗೆ 1987-88ನೇ ಸಾಲಿನಿಂದ ಹೆಚ್ಚಿಸಲಾಗಿದೆ.

ಅಲ್ಲದೆ ಅಂಗವಿಕಲರಿಗೆ ಅನುಕೂಲವಾಗಲು ಈ ಮೀಸಲಾತಿ ಸೀಟುಗಳನ್ನು ಸಾಧ್ಯವಾದಷ್ಟು ಸೀಟುಗಳನ್ನು ಕಂಪ್ಯೂಟರ್ ಸೈನ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಕೋರ್ಸುಗಳಲ್ಲಿ ಕಾದಿರಿಸಲು ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ
(ಎ.ಆರ್. ಪ್ರಸಾದ್)
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ

Karnataka State Government Disabled Employees Association
Renukaradhya S
Indresh B

17

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ:ಇಸಿ/19/ ಯೋಜನೆ/2014-15/748, ದಿನಾಂಕ: 19.5.2014.

ಪ್ರಸ್ತಾವನೆ:

2014-15ನೇ ಸಾಲಿನ ಆಯವ್ಯಯದಲ್ಲಿ ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲು ಘೋಷಿಸಲಾಗಿದೆ. ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್, 1999 ಆಕ್ಟ್ ಅಡಿ ಬರುವ ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯರು ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ 04 ವಿಧದ ವಿಕಲಚೇತನರಿಗೆ "ನಿರಾಮಯ" ಆರೋಗ್ಯ ವಿಮಾ ಯೋಜನೆಯನ್ನು ರಾಜ್ಯದ ನೋಡಲ್ ಏಜೆನ್ಸಿಯಾದ ಸೇವಾ-ಇನ್-ಆಕ್ಷನ್ ಸ್ವಯಂ ಸೇವಾ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿ ವಾರ್ಷಿಕ ಗರಿಷ್ಠ ರೂ.1.00 ಲಕ್ಷಗಳನ್ನು ನ್ಯಾಷನಲ್ ಟ್ರಸ್ಟ್‌ನವರು ಗುರುತಿಸಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಭರಿಸಿರುವ ವೆಚ್ಚವನ್ನು ಮರು ಪಾವತಿಸಲು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಓದಲಾದ ದಿನಾಂಕ: 19.5.2014 ರ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

Karnataka State Government Disabled Employees Association Renukaradhya S Indresh R S

## ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಎಚ್‌ಪಿ 2014, ಬೆಂಗಳೂರು, ದಿನಾಂಕ: 21.08.2014.

25/08/14

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಅಂಗವಿಕಲರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-99 ಯೋಜನೆ ಉಪ ಲೆಕ್ಕಶೀರ್ಷಿಕೆ 100 ಧನಸಹಾಯ ಮತ್ತು ಪರಿಹಾರ ಯೋಜನೆಯಡಿ ಒದಗಿಸಿರುವ ರೂ.1.12ಕೋಟಿ(ರೂಪಾಯಿ ಒಂದು ಕೋಟಿ ಹನ್ನೆರಡು ಲಕ್ಷಗಳು) ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು.

ಆರೋಗ್ಯ ಇಲಾಖೆಯಲ್ಲಿ ಲಭ್ಯವಿರುವ ಫಲಾನುಭವಿಗಳ ಪಟ್ಟಿಯಲ್ಲಿ ಆಯ್ಕೆ ಮಾಡಿರುವ ಫಲಾನುಭವಿಗಳು ಪುನರಾವರ್ತನೆ ಆಗದಂತೆ ಹೊಂದಾಣಿಕೆ ಮಾಡಿಕೊಂಡು ಈ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

. . . . 2

1757
25-8-2014

18



ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗಸೂಚಿಗಳ ಪ್ರಕಾರ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 464 ವೆಚ್ಚ-3/2014, ದಿನಾಂಕ: 13.6.2014 ಹಾಗೂ ಪಿಡಿ 38 ಐಎಂಎಂ 2014, ದಿನಾಂಕ: 23.7.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋಪಾಲ್) 21/8/14
ಸರ್ಕಾರದ ಉಪ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 & 9).
8. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ. ವಿಭಾಗ).
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
10. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
11. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

## ಸರ್ಕಾರದ ಆದೇಶ ಸಂಖ್ಯೆ: ಮಮಇ 115 ಪಿಎಚ್‌ಪಿ 2014, ದಿನಾಂಕ: 04.08.2014ರ ಆದೇಶಕ್ಕೆ ಮಾರ್ಗಸೂಚಿಗಳು

1. ವಿಕಲಚೇತನ ವ್ಯಕ್ತಿಗಳು ಭಾರತ ಪ್ರಜೆಯಾಗಿರಬೇಕು. ಹಾಗೂ ಇವರು ಕರ್ನಾಟಕದಲ್ಲಿ ಕನಿಷ್ಠ ಹಿಂದಿನ 10 ವರ್ಷಗಳು ವಾಸವಾಗಿರಬೇಕು.
2. ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಆಕ್ಟ್ ನಡಿ ಬರುವ 04 ವಿವಿಧ ಅಂದರೆ ಬುದ್ದಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ವಿಕಲಚೇತನರು ಮಾತ್ರ ಸೌಲಭ್ಯ ಪಡೆಯಬಹುದಾಗಿದೆ.
3. ಈ ಯೋಜನೆಗೆ ಒಳಪಡುವವರು ಬಡತನ ರೇಖೆಗಿಂತ ಕೆಳಗಿನವರಾಗಿರಬೇಕು ಹಾಗೂ ಬಿ.ಪಿ.ಎಲ್ ಕಾರ್ಡ್ ದೃಢೀಕೃತ ಪ್ರತಿ ಲಗತ್ತಿಸುವುದು. ಬಿ.ಪಿ.ಎಲ್ ಕಾರ್ಡ್ ಇಲ್ಲದ ಫಲಾನುಭವಿಗಳು ಗ್ರಾಮೀಣಪ್ರದೇಶದವರಾಗಿದ್ದಲ್ಲಿ ರೂ.12,000/– ಹಾಗೂ ನಗರ ಪ್ರದೇಶದವರಾಗಿದ್ದಲ್ಲಿ ರೂ.17,000/–ಗಳ ಮಿತಿಯೊಳಗಿರಬೇಕು. ಇತ್ತೀಚಿನ ಆದಾಯ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಲಗತ್ತಿಸಬೇಕು. ಹಾಗೂ ಫಲಾನುಭವಿಗಳು ಪುನರಾವರ್ತನೆ ಆಗದಂತೆ ಕ್ರಮ ವಹಿಸಬೇಕು.
4. ವಯಸ್ಸಿನ ಮಿತಿ ಇರುವುದಿಲ್ಲ
5. ಯಾವುದೇ ಅರ್ಹ ಫಲಾನುಭವಿಯು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನೇರವಾಗಿ ಅಥವಾ ನ್ಯಾಷನಲ್ ಟ್ರಸ್ಟ್‌ಯಡಿ ನೋಂದಾಯಿಸಿಕೊಂಡ ಸಂಸ್ಥೆಯ ಮೂಲಕ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.
6. ಅರ್ಜಿಯನ್ನು ಆಂಗ್ಲ ಭಾಷೆಯಲ್ಲಿ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವುದು.
7. ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದವರು ಶಿಫಾರಸ್ಸು ಮಾಡಿರುವ ವೈದ್ಯಕೀಯ ಪ್ರಮಾಣವನ್ನು ಸಲ್ಲಿಸಬೇಕಾಗಿರುತ್ತದೆ.
8. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗೆ ವಾರ್ಷಿಕ ರೂ.250/–ಗಳ ವಿಮಾ ಮೊತ್ತವನ್ನು ಒಂದು ಬಾರಿಗೆ ಸರ್ಕಾರವೇ ಪಾವತಿ ಮಾಡುವುದು. ಪ್ರತಿ ವರ್ಷ ಫಲಾನುಭವಿಗಳು ಯೋಜನೆಯಡಿ ತಮ್ಮ ನೋಂದಣಿಯನ್ನು ಕಡ್ಡಾಯವಾಗಿ ನವೀಕರಿಸಿಕೊಳ್ಳತಕ್ಕದ್ದು. ನವೀಕರಣಕ್ಕೆ ಯಾವುದೇ ಹಣ ಪಾವತಿಸಬೇಕಾಗಿರುವುದಿಲ್ಲ.
9. ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನ ವ್ಯಕ್ತಿಗಳಿಗೆ ಪ್ರತೀ ವರ್ಷ ಗರಿಷ್ಠ ರೂ.1.00 ಲಕ್ಷದವರೆಗೆ ನಿರಂತರ ವೈದ್ಯಕೀಯ ತಪಾಸಣೆಗೆ, ಹಾಸ್ಪಟಲೈಜೇಷನ್, ಥೆರಪಿ ಪಡೆಯಲು, ನಿವಾರಣಾ ಶಸ್ತ್ರ ಚಿಕಿತ್ಸೆಗೆ ಹಾಗೂ ಸಾರಿಗೆ ವೆಚ್ಚಗಳಿಗಾಗಿ ನ್ಯಾಷನಲ್ ಟ್ರಸ್ಟ್ ಅಧಿನಿಯಮದವರು ನಿಗದಿ ಪಡಿಸಿರುವ ಮೊತ್ತದ ಮಿತಿಯೊಳಗೆ ವೈದ್ಯಕೀಯ ಶುಶ್ರೂಷೆ ಪಡೆದ ನಂತರ ಮಾತ್ರ ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯಲು ಅವಕಾಶವಿದೆ.
10. ಈ ಯೋಜನೆಯನ್ನು ನ್ಯಾಷನಲ್ ಟ್ರಸ್ಟ್ ಆಯ್ಕೆ ಮಾಡಿದ ಹಾಲಿ ಇರುವ ಐ.ಸಿ.ಐ.ಸಿ.ಐ ಲಂಬಾರ್ಡ್ ಮೂಲಕ ಅನುಷ್ಠಾನಗೊಳಿಸಲಾಗುವುದು.
11. ಅರ್ಜಿದಾರರು ನಿರಾಮಯ ಯೋಜನೆಯಡಿ ವೈದ್ಯಕೀಯ ವೆಚ್ಚಗಳ ಮರುಪಾವತಿಗಾಗಿ ಐ.ಸಿ.ಐ.ಸಿ.ಐ ಲಂಬಾರ್ಡ್ ಸಂಸ್ಥೆಗೆ ಸಂಬಂಧಿಸಿದ ರಸೀದಿಗಳು/ ಬಿಲ್ ಮುಂತಾದವುಗಳನ್ನು ಚಿಕಿತ್ಸೆ ಪಡೆದ/ ಆಸ್ಪತ್ರೆಯಿಂದ ಬಿಡುಗಡೆಗೊಂಡ 30 ದಿನಗಳೊಳಗಾಗಿ ವಿವರಗಳೊಂದಿಗೆ ಸಲ್ಲಿಸುವುದು.

21/8/14

(ಗೋಪಾಲ್)
ಸರ್ಕಾರದ ಉಪ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ:- ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ರೂ. 6000/- ಆದಾಯದ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ.12,000/- ಗ್ರಾಮಿಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- ಕ್ಕೆ ಹೆಚ್ಚಿಸಲಾಗಿರುವ ಬಗ್ಗೆ.

ಓದಲಾಗಿದೆ:-1 ಸಚಿವ ಸಂಪುಟದ ಪ್ರಕರಣ ಸಂಖ್ಯೆ:- ಸಿ:199:2011, ದಿನಾಂಕ:- 21.04.2011

2 ಸರ್ಕಾರಿ ಆದೇಶ ಸಂ:-ಅನಾಸ 244 ಡಿಆರ್ಎ 2006, ದಿನಾಂಕ:-09.10.2006

3 ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 5 ಎಸ್‌ಡಬ್ಲ್ಯೂ 84, ದಿನಾಂಕ: 5/8 ಮಾರ್ಚ್ 1984.

4 ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 146 ಪಿಹೆಚ್‌ಪಿ 77, ದಿನಾಂಕ:- 07.11.1977.

Karnataka State Government Disabled Employees Association
Renukaradhya S
Indresh R

**ಪ್ರಸ್ತಾವನೆ :**

ಮೇಲೆ ಓದಲಾದ ಉಲ್ಲೇಖ(1) ರನ್ವಯ ಕರ್ನಾಟಕ ಸಚಿವ ಸಂಪುಟವು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಬಾಂಡ್‌ಗಳ ವಿತರಣೆಗಾಗಿ, ವೃದ್ಧಾಪ್ಯ ಪಿಂಚಣಿ ವಿತರಿಸುವ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಎಲ್ಲಾ ಫಲಾನುಭವಿಗಳು ಮೂಲ ಬಿಪಿಎಲ್ ಕಾರ್ಡ್ ಅಥವಾ ಆದಾಯ ಪ್ರಮಾಣ ಪತ್ರ ಎರಡನ್ನೂ ಕಡ್ಡಾಯವಾಗಿ ಹೊಂದಿರಬೇಕು ಎಂಬ ಷರತ್ತನ್ನು ಸುತ್ತೋಲೆಯ ಮೂಲಕ ವಿಧಿಸಿರುವ ಬಗ್ಗೆ ಚರ್ಚಿಸಿ, ಇಂತಹ ನಿರ್ಬಂಧಗಳನ್ನು ದಿನಾಂಕ:- 31.03.2011 ಕ್ಕಿಂತ ಮುಂಚೆ ಪಡೆದಿರುವ ಅಥವಾ ನೋಂದಾಯಿಸಿಕೊಂಡಿರುವ ಫಲಾನುಭವಿಗಳಿಗೆ ಅನ್ವಯ ಆಗಬಾರದೆಂದು ನಿರ್ಧರಿಸಿದೆ, ಮತ್ತು ದಿನಾಂಕ:- 01.04.2011 ರ ನಂತರ ಇಂತಹ ಯೋಜನೆಗಳಿಗೆ ಗುರುತಿಸಬಹುದಾದ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನ್ನು ಮಾತ್ರ ಕಡ್ಡಾಯವಾಗಿ ಸಲ್ಲಿಸುವ ಷರತ್ತನ್ನು ನಿಗದಿಪಡಿಸಬೇಕೆಂದು ಸಚಿವ ಸಂಪುಟವು ನಿರ್ಧರಿಸಿತು. ಅದರಂತೆ, ಬಿಪಿಎಲ್ ಕಾರ್ಡ್‌ನ್ನು ಪಡೆಯಲು ಮೇಲೆ ಓದಲಾದ ಉಲ್ಲೇಖ(2) ರನ್ವಯ ಅರ್ಜಿದಾರರ ಆದಾಯ ಮಿತಿಯನ್ನು ರೂ. 12,000 ಗ್ರಾಮೀಣಾ ಪ್ರದೇಶಗಳಲ್ಲಿ ಮತ್ತು ರೂ.17,000/- ನಗರ ಪ್ರದೇಶಗಳಲ್ಲಿ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ ಉಲ್ಲೇಖ (3) ರನ್ವಯ ನಿರ್ಗತಿಕ ವಿಧವಾ ವೇತನದಡಿ ಹಾಗೂ ಉಲ್ಲೇಖ (4) ರನ್ವಯ ಅಂಗವಿಕಲ ವೇತನದಡಿ ಆದಾಯ ಮಿತಿಯನ್ನು ರೂ.6000/-ಗಳು ಎಂದು ನಿಗದಿಪಡಿಸಲಾಗಿರುತ್ತದೆ. ಸಚಿವ ಸಂಪುಟದ ನಿರ್ಣಯದಂತೆ, ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಪರಿಗಣಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಬಿಪಿಎಲ್ ಪಡಿತರ ಚೀಟಿಯ ಮಾನದಂಡಕ್ಕೆ ಸರಿ ಹೊಂದುವಂತೆ ನಿರ್ಗತಿಕ ವಿಧವಾ ವೇತನದಡಿ ಹಾಗೂ ಅಂಗವಿಕಲ ವೇತನದಡಿ ಪ್ರಯೋಜನ ಪಡೆಯಲು ಆದಾಯ ಮಿತಿಯನ್ನು ಗ್ರಾಮೀಣಾ ಪ್ರದೇಶಗಳಲ್ಲಿ ರೂ.12,000/- ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- ಎಂದು ನಿಗದಿಪಡಿಸಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಗುರುತಿಸಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:- ಕಂ.ಇ.35 ಡಿಎಸ್‌ಪಿ 2011, ಬೆಂಗಳೂರು, ದಿನಾಂಕ:-24-05-2011.**

**ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.**

1. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ಆದಾಯದ ಮಿತಿಯನ್ನು ರೂ. 6000/- (ಆರು ಸಾವಿರದಿಂದ) ದಿಂದ, ಗ್ರಾಮೀಣಾ ಪ್ರದೇಶಗಳಲ್ಲಿ,

ರೂ.12,000/- (ರೂ.ಹನ್ನೆರಡು ಸಾವಿರಕ್ಕೆ) ಕ್ಕೆ ಗ್ರಾಮೀಣಾ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ರೂ.17,000/- (ರೂ. ಹದಿನೇಳು ಸಾವಿರಕ್ಕೆ) ಕ್ಕೆ ಹೆಚ್ಚಿಸಲಾಗಿರುತ್ತದೆ.

2. ಅರ್ಜಿದಾರರು ಯೋಜನೆಗಳಡಿ ಮಾಶಾಸನಕ್ಕಾಗಿ ಅರ್ಜಿ ಸಲ್ಲಿಸುವಾಗ ಆದಾಯ ಪ್ರಮಾಣ ಪತ್ರದ ಬದಲು ಬಿಪಿಎಲ್ ಪಡಿತರ ಚೀಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
3. ನಿರ್ಗತಿಕ ವಿಧವಾ ಮಾಶಾಸನ ಹಾಗೂ ಅಂಗವಿಕಲ ಮಾಶಾಸನವನ್ನು ಮಂಜೂರು ಮಾಡುವ ಮೊದಲು ಅರ್ಜಿದಾರರು ನೀಡಿರುವ ವಿವರಗಳನ್ನು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ ನಡೆಸಿ, ಅರ್ಜಿದಾರರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರು ಹಾಗೂ ಅರ್ಜಿದಾರರ ಆದಾಯ ಮಿತಿಯು ಯೋಜನೆಯಡಿ ನಿಗದಿ ಪಡಿಸಿರುವಂತೆ ಸರಿಯಾಗಿದೆಯೆಂದು ದೃಢೀಕರಿಸತಕ್ಕದ್ದು.
4. ಮಾಶಾಸನ ಮಂಜೂರಾತಿ ಅಧಿಕಾರಿಗಳಾದ ಸಂಬಂಧಪಟ್ಟ ತಹಸೀಲ್ದಾರರು ಹಾಗೂ ನಾಡಕಛೇರಿಯ ಉಪ ತಹಸೀಲ್ದಾರರು ಬಿಪಿಎಲ್ ಪಡಿತರ ಚೀಟಿ ಹಾಗೂ ರಾಜಸ್ವ ನಿರೀಕ್ಷಕರ ವರದಿಯಲ್ಲಿ ಅನುಮಾನಸ್ಪದ ಅಂಶಗಳಿದ್ದಲ್ಲಿ ಖುದ್ದು ಸಂದರ್ಶನ ನಡೆಸಿ ಯೋಜನೆಗಳಡಿ ಮಾಶಾಸನ ಮಂಜೂರು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/5/11
(ಎಸ್. ಕಾತ್ಯಾಯಿನಿ ದೇವಿ)
ಪೀಠಾಧಿಕಾರಿಗಳು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ ಕಂದಾಯ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಮದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ.ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮುಖ್ಯ ಮಂತ್ರಿಗಳವರ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
6. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು.
7. ಕಾರ್ಯದರ್ಶಿಗಳು, ವಿಧಾನ ಸಭೆ.
8. ಕಾರ್ಯದರ್ಶಿಗಳು, ವಿಧಾನ ಪರಿಷತ್ತು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಎಲ್ಲಾ ಜಿಲ್ಲಾಧಿಕಾರಿಗಳು.
11. ನಿದೇಶಕರು.ಖಜಾನೆ ಇಲಾಖೆ.ಬೆಂಗಳೂರು.
12. ಎಲ್ಲಾ ಉಪ ವಿಭಾಗಧಿಕಾರಿಗಳು
13. ಎಲ್ಲಾ ತಹಸೀಲ್ದಾರರುಗಳಿಗೆ.
14. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
15. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿನ ಅಂಗವಿಕಲರ ನಿಲಯಗಳಲ್ಲಿ ಒದಗಿಸಬೇಕಾದ ಕನಿಷ್ಠ ಸೌಲಭ್ಯಗಳ ಕುರಿತು

ಓದಲಾಗಿದೆ: 1. ಸರ್ಕಾರದ ಆದೇಶಸಂಖ್ಯೆ/ಮಮಇ/71/ಮಬಾಭ/2002, ದಿನಾಂಕ/26-06-2002

2. ಪತ್ರಸಂಖ್ಯೆ/ನಿಅಕಇ/ಮಂಜೂ/19/ಅಂಕಇ/ಶಾನಿ/ಅಂ.ಸಿ.ಲ./ಸೇಸ್/2003-04/11717 ದಿನಾಂಕ/09-12-2003.

### ಪ್ರಸ್ತಾವನೆ:

ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖಾ ವತಿಯಿಂದ ಅನುದಾನ ಪಡೆದು ಹಾಗೂ ಅನುದಾನ ಪಡೆಯದೇ ಮಕ್ಕಳಿಗಾಗಿ ಅನಾಥಾಲಯಗಳನ್ನು ನಿರ್ಗತಿಕ ಕುಟೀರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳ ಪಾಲನೆ-ಪೋಷಣೆಗಾಗಿ ಒದಗಿಸಬೇಕಾಗಿರುವ ಕನಿಷ್ಠ ಸೌಲಭ್ಯಗಳನ್ನು ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರವು ನಿಗದಿಪಡಿಸಿರುತ್ತದೆ. ಅದರಂತೆ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆದು ನಡೆಸುತ್ತಿರುವ ಅಂಗವಿಕಲರ ನಿಯಮಗಳಲ್ಲಿ ಮೇಲೆ ತಿಳಿಸಲಾದ ಅನಾಥಾಲಯ ಹಾಗೂ ನಿರ್ಗತಿಕ ಕುಟೀರಗಳಲ್ಲಿ ನಿಗಧಿಪಡಿಸಿರುವಂತೆ ಕನಿಷ್ಠ ಸೌಲಭ್ಯಗಳನ್ನು ಈ ಅಂಗವಿಕಲರ ವಸತಿ ನಿಲಯಗಳಲ್ಲಿಯು ಸಹ ನಿಗಧಿಪಡಿಸಲು ತೀರ್ಮಾನಿಸಿ, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಇವರನ್ನು ಕೋರಲಾಗಿತ್ತು. ಅದರಂತೆ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಇಲಾಖೆಯಿಂದ ಹಾಗೂ ಇಲಾಖೆಯಿಂದ ಅನುದಾನ ಪಡೆದು ನಡೆಯುತ್ತಿರುವ ಅಂಗವಿಕಲರ ನಿಲಯಗಳಲ್ಲಿ ನಿಗಧಿಪಡಿಸಬಹುದಾದ ಕನಿಷ್ಠ ಸೌಲಭ್ಯಗಳ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ.484:ಪಿಹೆಚ್‌ಪಿ:2003**

**ಬೆಂಗಳೂರು:ದಿನಾಂಕ:05ನೇ ಮಾರ್ಚ್ 2004**

ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆದು ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಅಂಗವಿಕಲರ ನಿಲಯಗಳಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ರೀತ್ಯಾ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಆರ್.ಎಂ. ಚಂದ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಸರ್ಕಾರದ ಆದೇಶ ಸಂ.ಮಮಇ/484/ಪಿಹೆಚ್‌ಪಿ/2003 ದಿನಾಂಕ:ಮ03-04 ಅನುಬಂಧ

1\. 1. ವಿವಿಧ ಅಂಗವಿಕಲತೆಯ ಆಧಾರದ ಮೇಲೆ ಆಯಾ ಅಂಗವಿಕಲತೆಯ ಆಧಾರದ ಮೇಲೆ ಆಯಾ ಅಂಗವಿಕಲತೆಗೆ ಅಗತ್ಯವಾದ ವಿನ್ಯಾಸದಲ್ಲಿ ಕಟ್ಟಡವನ್ನು ರೂಪಿಸತಕ್ಕದ್ದು.

2. ಈ ಕಟ್ಟಡಗಳಲ್ಲಿ ಅಂಗವಿಕಲರ ಅಧಿನಿಯಮದಲ್ಲಿ ಪ್ರತಿಪಾದಿಸಿದಂತೆ ತಡೆರಹಿತ ವಾತಾವರಣ ಸೃಷ್ಟಿಯಾಗಬೇಕು.
3. ಅಂಗವಿಕಲರು ಮುಖ್ಯ ದ್ವಾರದಿಂದ ಒಳಹೋಗಲು ಹೊರ ಬರಲು ಬಾಗಿಲುಗಳು ಅಗಲವಾಗಿರಬೇಕು.
4. ಗಾಳಿ ಮತ್ತು ಬೆಳಕು ಧಾರಾಳವಾಗಿ ಲಭ್ಯವಾಗುವಂತೆ ಕಟ್ಟಡದ ವಿನ್ಯಾಸವಿರತಕ್ಕದ್ದು.
5. ಕೊಠಡಿಯೊಂದಕ್ಕೆ ಗರಿಷ್ಠ 4 ಜನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸುವಷ್ಟು ವಿಸ್ತಾರವಾದ ಕಟ್ಟಡವಿರಬೇಕು.
6. ಅಗತ್ಯಕ್ಕೆ ತಕ್ಕಂತೆ ಸಾಲು ಕೊಠಡಿಗಳಿರಬೇಕು.
7. ಒಂದು ಗ್ರಂಥಾಲಯ ಒಂದು ಶುಷ್ರೂಶಾ ಕೊಠಡಿ ಒಂದು ಪಾಠಶಾಲೆ ಹಾಗೂ ಭೋಜನ ಶಾಲೆಗಳಿರಬೇಕು.
8. ಪ್ರತಿ 6 ಜನರಿಗೊಂದರಂತೆ ಪ್ರತ್ಯೇಕವಾದ ಶೌಚಾಲಯ ಮತ್ತು ಸ್ನಾನದ ಕೊಠಡಿಗಳಿರಬೇಕು.
9. ಪಾಠಶಾಲೆಗೆ ಸಂಬಂಧಿಸಿದ ಮತ್ತು ಅದಕ್ಕೆ ಲಗತ್ತಾದ ಒಂದು ಉಗ್ರಾಣ ಹಾಗೂ ಸಂಸ್ಥೆಯ ಇನ್ನಿತರ ವಸ್ತುಗಳ ದಾಸ್ತಾನಿಗಾಗಿ ಮತ್ತೊಂದು ಉಗ್ರಾಣವಿರಬೇಕು.
10. ಕಟ್ಟಡದ ಒಟ್ಟಾರೆ ವಿಸ್ತೀರ್ಣವು ಪ್ರತಿ ಫಲಾನುಭವಿಗೆ ಸರಾಸರಿ 100ರ ಅಡಿಗಳಷ್ಟು ಸ್ಥಳಾವಕಾಶ ಕಲ್ಪಿಸುವಷ್ಟಿರಬೇಕು.
11. ಸಮರ್ಪಕ ನೀರು ವಿದ್ಯುತ್/ಸೋಲಾರ್ ವ್ಯವಸ್ಥೆಯನ್ನು ರೂಪಿಸಿರತಕ್ಕದ್ದು.

2\. ಪರಿಕರ, ಪೀಠೋಪಕರಣ ಹಾಗೂ ಸಾಧನ ಸಲಕರಣೆಗಳು:

1. ವಿದ್ಯಾರ್ಥಿಗಳಿಗೆ ಮಲಗಲು ಮಂಚ, ಹಾಸಿಗೆ, ಹೊದಿಕೆ ದಿಂಬು ಮತ್ತಿತರ ವ್ಯವಸ್ಥೆ ಮಾಡಬೇಕು.
2. ವಿದ್ಯಾಭ್ಯಾಸಕ್ಕೆ ಅಗತ್ಯವಾದ ಮೇಜು ಕುರ್ಚಿಗಳನ್ನು ಒದಗಿಸಬೇಕು.
3. ವೈಯಕ್ತಿಕ ವಸ್ತುಗಳನ್ನು ಶೇಖರಿಸಿಡಲು ಕಪಾಟು/ಲಾಕರ್ ವ್ಯವಸ್ಥೆ ಮಾಡಬೇಕು.
4. ಅಗತ್ಯವಾದ ವಿಶೇಷ ಸಾಧನ ಸಲಕರಣೆ ಎಚ್ಚರಿಕೆ ಗಂಟೆ/ದೀಪಗಳನ್ನು ಅಗತ್ಯವಿರುವೆಡೆಯಲ್ಲೆಲ್ಲ ಅಳವಡಿಸತಕ್ಕದ್ದು.
5. ಅಗತ್ಯ ಪೀಠೋಪಕರಣಗಳನ್ನು ಒದಗಿಸತಕ್ಕದ್ದು, (ಅಂಗವಿಕಲತೆಗೆ ಅನುಗುಣವಾಗಿ ಪೀಠೋಪಕರಣಗಳನ್ನು ಒದಗಿಸಬೇಕು).
6. ಶಬ್ದ/ಶ್ರವಣ ಗ್ರಂಥಾಲಯ ವ್ಯವಸ್ಥೆ ಇರತಕ್ಕದ್ದು.
7. ಮನರಂಜನೆಗೆ ಅಗತ್ಯವಾದ ಪರಿಕರಣ / ಆಟದ ವಸ್ತುಗಳು / ವಾದ್ಯಗಳನ್ನೊದಗಿಸತಕ್ಕದ್ದು.

3\. ಪಠ್ಯಕ್ರಮ:

ವಿದ್ಯಾ ಇಲಾಖೆಯು ಅಂಗವಿಕಲರ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿಪಡಿಸುವ ಪಠ್ಯ ಕ್ರಮವನ್ನು ಏಕರೂಪವಾಗಿ ಎಲ್ಲ ವಿಶೇಷ ಶಾಲೆಗಳೂ ಅನುಸರಿಸತಕ್ಕದ್ದು.

Karnataka State Government Disabled Employees Association
Renukaradhya S
Indresh R

4. ಸಿಬ್ಬಂದಿ ಮಾದರಿ:

ರಾಜ್ಯ ಅನುದಾನ ಯೋಜನೆಯಡಿಯಲ್ಲಿ ನಿಗದಿಪಡಿಸಿರುವ ಮಾದರಿಯಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳತಕ್ಕದ್ದು. ಜೊತೆಗೆ ಒಬ್ಬ ಸಂದರ್ಶಕ ವೈದ್ಯಾಧಿಕಾರಿಗಳ ಸೇವೆಯನ್ನು ಪಡೆದುಕೊಳ್ಳಬಹುದು.

5. ವಿದ್ಯಾರ್ಥಿಗಳಿಗೆ ವೈಯಕ್ತಿಕ ಸವಲತ್ತುಗಳು:

1. ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರವನ್ನು ಒದಗಿಸತಕ್ಕದ್ದು.
2. ವೈಯಕ್ತಿಕ ಆರೋಗ್ಯ ನಿರ್ವಹಣೆಗೆ ಅಗತ್ಯವಾದ ಬ್ರಷ್, ಪೇಸ್ಟ್, ಸೋಪು ಬಟ್ಟೆ ಒಗೆಯುವ ಸೋಪುಗಳನ್ನು ಒದಗಿಸತಕ್ಕದ್ದು. (ದಿನನಿತ್ಯ ಅಗತ್ಯತೆಗೆ ಒಳಪಟ್ಟಿರಬೇಕು)
3. ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯವರು ಬಾಲಮಂದಿರದ ಮಕ್ಕಳಿಗೆ ಕಾಲದಿಂದ ಕಾಲಕ್ಕೆ ನಿಗದಿ ಮಾಡುವ ಪ್ರಮಾಣದಲ್ಲಿ ಊಟೋಪಚಾರಗಳನ್ನು ಒದಗಿಸತಕ್ಕದ್ದು.
4. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕದ್ದು.

6. ಇತರೆ

1. ಅತಿ ಮುಖ್ಯವಾದ ವಿದ್ಯಾರ್ಥಿಯು ತನ್ನ ಮನೆಯಲ್ಲಿಯೇ ಇರುವಂತೆ ಬಾಸವಾಗುವ ಒಂದು ವಾತಾವರಣ ನಿರ್ಮಾಣ ಮಾಡಬೇಕು.
2. ಪಠ್ಯ ಕ್ರಮದಲ್ಲಿ ಆಸಕ್ತಿ ಇಲ್ಲದ ಕನಿಷ್ಠ ವಿದ್ಯಾಭ್ಯಾಸವನ್ನು ಪೂರೈಸಿದ ಮಕ್ಕಳಿಗೆ ವೃತ್ತಿಪರ ತರಬೇತಿ ನೀಡುವ ವ್ಯವಸ್ಥೆಯನ್ನು ತೋರಿಸತಕ್ಕದ್ದು.

(ಆರ್.ಎಂ. ಚಂದ್ರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya C
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ 20 ರಿಂದ 60 ವರ್ಷದೊಳಗಿನ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರವಾಹನವನ್ನು ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ:ವಿಹಿನಾಸಇ:ಯೋ.ಶಾ:ಹೊಸ ಯೋಜನೆ: ಯಂತ್ರ.ದ್ವಿ.ವಾ:22:2013-14:207, ದಿನಾಂಕ: 11.4.2014.

ಪ್ರಸ್ತಾವನೆ:

2014-15ನೇ ಸಾಲಿನ ಆಯವ್ಯಯದಲ್ಲಿ ಕುಟುಂಬದ ವಾರ್ಷಿಕ ವರಮಾನ 2 ಲಕ್ಷ ರೂ.ಗಳಿಗಿಂತ ಕಡಿಮೆ ಇರುವ 20 ರಿಂದ 60 ವರ್ಷ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲು ಘೋಷಿಸಲಾಗಿದೆ. ದೈಹಿಕ ವಿಕಲಚೇತನರು ಉದ್ಯೋಗ ಕೈಗೊಳ್ಳಲು ಅಥವಾ ಅವರು ಉದ್ಯೋಗ ನಿರ್ವಹಿಸುವ ಸ್ಥಳಕ್ಕೆ/ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಿಗೆ ಹೋಗಿ ಬರಲು ಜೀವಿತ ಕಾಲದಲ್ಲಿ ಒಬ್ಬ ಫಲಾನುಭವಿಗೆ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಓದಲಾದ ದಿನಾಂಕ: 11.4.2014 ರ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

Karnataka State Government Disabled Employees Association
Renukaradhya S
Indresh R

**ಸರ್ಕಾರದ ಆದೇಶ ಸಂಖ್ಯೆ: ಮಮಇ 111 ಪಿಎಚ್‌ಪಿ 2014, ಬೆಂಗಳೂರು, ದಿನಾಂಕ: 4.7.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ದೈಹಿಕ ವಿಕಲಚೇತನರಿಗೆ ಉದ್ಯೋಗ ಕೈಗೊಳ್ಳಲು ಅಥವಾ ಅವರು ಉದ್ಯೋಗ ನಿರ್ವಹಿಸುವ ಸ್ಥಳಕ್ಕೆ/ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಿಗೆ ಹೋಗಿ ಬರಲು ಜೀವಿತ ಕಾಲದಲ್ಲಿ ಒಬ್ಬ ಫಲಾನುಭವಿಗೆ ಒಂದು ಬಾರಿಯಂತೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಯೋಜನೆಗೆ ತಗಲುವ ರೂ.6,12,50,000/- (ರೂಪಾಯಿ ಆರು ಕೋಟಿ ಹನ್ನೆರಡು ಲಕ್ಷ ಐವತ್ತು ಸಾವಿರಗಳು ಮಾತ್ರ) ಗಳ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-52 ಯೋಜನೆ ಉಪ ಲೆಕ್ಕಶೀರ್ಷಿಕೆ 051 ಸಾಧನ ಸಲಕರಣೆ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು. ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಯಂತ್ರಚಾಲಿತ ದ್ವಿಚಕ್ರ ವಾಹನಗಳನ್ನು ಖರೀದಿಸುವುದು.

497
5. 7. 2014

....2

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯೋಜನಾ ಸಹಾಯಕರನ್ನು ನೇಮಕ ಮಾಡಿಕೊಳ್ಳುವುದು ಸೇರಿದಂತೆ ಕಛೇರಿ ಪೀಠೋಪಕರಣ/ ಸಾಮಗ್ರಿಗಳ ಖರೀದಿಗೆ ಸಹಮತಿಸಿರುವುದಿಲ್ಲ.

ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗಸೂಚಿಗಳ ಪ್ರಕಾರ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 448 ವೆಚ್ಚ-3/2014, ದಿನಾಂಕ: 13.6.2014 ಹಾಗೂ ಪಿಡಿ 21 ಐಎಂಎಂ 2014. ದಿನಾಂಕ: 11.6.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4. [illegible] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ [illegible] ಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ - 3 & 9).
8. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ. ವಿಭಾಗ).
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
10. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
11. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ: ಮಮಇ 111 ಪಿಎಚ್‌ಪಿ 2014, ದಿನಾಂಕ: 4.7.2014 ರ

## ಆದೇಶಕ್ಕೆ ಮಾರ್ಗಸೂಚಿಗಳು

1. ವಿಕಲಚೇತನ ವ್ಯಕ್ತಿಗಳು ಭಾರತದ ಪ್ರಜೆಯಾಗಿದ್ದು ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳು ವಾಸವಾಗಿರಬೇಕು. 20 ರಿಂದ 60 ರ ವಯೋಮಾನ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಮಾತ್ರ ಜೀವಿತ ಕಾಲದಲ್ಲಿ 1 ಬಾರಿ ಮಾತ್ರ ಸೌಲಭ್ಯ ಕಲ್ಪಿಸಲಾಗಿದೆ.
2. ಈ ಯೋಜನೆ ಸೌಲಭ್ಯ ಪಡೆಯಲು ಕುಟುಂಬ ವಾರ್ಷಿಕ ಆದಾಯ ರೂ.2.00 ಲಕ್ಷಗಳಿಂತ ಕಡಿಮೆ ಇರಬೇಕು.
3. ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಇತರ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಯಂತ್ರಚಾಲಿತ ದ್ವಿಚಕ್ರವಾಹನ ಪಡೆದಿದ್ದಲ್ಲಿ ಅಂತಹವರು ಅರ್ಹರಾಗಿರುವುದಿಲ್ಲ.
4. ಈ ಸೌಲಭ್ಯ ಪಡೆಯುವ ದೈಹಿಕ ವಿಕಲಚೇತನರು ಶೇ.75% ಕ್ಕಿಂತ ಹೆಚ್ಚಿನ ದೈಹಿಕ ವಿಕಲಚೇತನ ರಾಗಿರಬೇಕು. ಹಾಗೂ ಸೊಂಟದ ಕೆಳಗೆ ಅಂದರೆ ಎರಡು ಕಾಲುಗಳಲ್ಲಿ ಸ್ವಾದೀನ ಕಳೆದುಕೊಂಡಿರುವ ಎರಡು ಕೈಗಳು ಸ್ವಾಧೀನದಲ್ಲಿರುವ ಹಾಗೂ ಇತರೆ ಎಲ್ಲಾ ರೀತಿಯಲ್ಲಿ ಸದೃಢವಾಗಿರುವ ವಿಕಲಚೇತನರಾಗಿರಬೇಕು.ಇಂತಹ ನ್ಯೂನತೆಯನ್ನು ಹೊಂದಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಮೊದಲ ಆದ್ಯತೆ ಮೇಲೆ ಈ ಸೌಲಭ್ಯ ನೀಡಬಹುದು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್‌ರವರ ಅಧ್ಯಕ್ಷತೆಯಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ದೈಹಿಕ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
6. ಯಂತ್ರಚಾಲಿತ ದ್ವಿಚಕ್ರವಾಹನವನ್ನು ಅವರ ಜೀವಿತಾವಧಿಯಲ್ಲಿ ಯಾವುದೇ ಕಾರಣಕ್ಕೆ ಪರಭಾರೆ ಮಾಡಬಾರದು, ಮಾಡಿದ್ದು ಕಂಡುಬಂದಲ್ಲಿ ಅಂತಹವರ ಮೇಲೆ ಕಾನೂನು ಕ್ರಮ ಜರುಗಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಈ ಸೌಲಭ್ಯ ಪಡೆಯಲಿಚ್ಛಿಸುವ ವಿಕಲಚೇತನರು ದ್ವಿಚಕ್ರ ವಾಹನ ಚಾಲನೆ ಮಾಡುವ ಪರವಾನಗಿ ಪತ್ರ ಪಡೆದಿರಬೇಕು.
8. ವಿಕಲಚೇತನರಿಗೆ ನೀಡುವ ದ್ವಿಚಕ್ರ ವಾಹನವನ್ನು ಸಾರಿಗೆ ಇಲಾಖೆಯಿಂದ ನೊಂದಣಿ ಮಾಡಿಸಿ ನೀಡಬೇಕು. ಆರ್.ಸಿ. ಪುಸ್ತಕದ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನೀಡಬೇಕು. ಹಾಗೂ ಆರ್.ಸಿ ಪುಸ್ತಕದಲ್ಲಿ "ಫಲಾನುಭವಿ ಜೀವಿತವಾಗಿರುವವರೆಗೆ ಸರ್ಕಾರ ಮಂಜೂರು ಮಾಡಿರುವ ವಾಹನ ಮರು ಮಾರಾಟ ಮತ್ತು ವರ್ಗಾವಣೆ ಮಾಡುವಂತಿಲ್ಲ" ಎಂದು ನಮೂದಿಸಬೇಕು.

— * — * —

Karnataka State Government Disabled Employees Association
Renukaradhya S
Indresh R

HT
7/7/2016



Shri Narendra Modi
Hon'ble Prime Minister of India



# SCHOLARSHIPS

## FOR STUDENTS WITH DISABILITIES

**With a view to provide educational opportunities to students with disabilities, Department of Empowerment of Persons with Disabilities has been implementing the following scholarship schemes for their empowerment through education:**

| S.N | Scheme | Courses covered | No. of Scholarships per year | Annual income ceiling (Rs.) | Rate of Scholarship | How to apply |
|---|---|---|---|---|---|---|
| 1. | Pre-matric Scholarship | Class IX and X | 46,000 | 2.00 lakh | Monthly Maintenance Allowance of Rs.350 for day scholars and Rs.600 for hostellers plus book grant and other allowances like transport allowance, reader allowance etc. | The students are required to submit applications on-line on National Electronic Scholarship Portal (www.scholarships.gov.in) |
| 2. | Post-matric Scholarship | Class XI to Master's Degree or Diploma level | 16,650 | 2.50 lakh | There are different rates for Post-Graduate, non-degree diploma, professional courses leading to degree, diploma etc. in different disciplines. It ranges from Rs.380-1200 for hosteller and Rs.230-550 for day scholars plus tuition fees, allowances, book grant etc. | |
| 3. | Scholarship for Top Class Education | Post-Graduate Degree or Diploma in 197 notified of institutions of excellence | 160 | 6.00 lakh | Montly maintenance allowance Rs.3000/- for hostellers, Rs.1500/- for day scholars, Rs.2000/- disability allowance, book grant Rs.5000/-per annum, tuition fee upto Rs.2 lakh per annum. | |
| 4. | National Fellowship for Persons with Disabilities | M.Phil/Ph.D | 200 | No income ceiling | Monthly Rs.25,000/- for JRF (first two years) and Rs.28,000/- for SRF (3rd year onwards upto complete duration of the course) and contingency grant, escort allowance/ reader allowance, HRA etc | The students are required to submit applications online on University Grants Commission website at www.ugc.ac.in. |
| [illegible] | National Overseas Scholarshis for pursuing | Master's degree and Doctorate degree in foreign universities abroad | 20 | 6.00 lakh | Pound (Great Britain) 9,900 per annum for UK and US $15,400 for other countries, plus tuition fees, contingency allowance, cost of air passage, etc. | The applications are invited through newspaper advertisement. The selection of candidates is done by DEPwD. |

All the above scholarship schemes are applicable to students with disabilities with more than 40% disability and having a disability certificate to this effect issued by a competent medical authority.
For further details about the scholarship schemes please visit: www:disabilityaffairs.gov.in

**Ministry of Social Justice & Empowerment**
**Department of Empowerment of Persons with Disabilities (Divyangjan)**

Accessible India Campaign

Karnataka State Government Disabled Employees Association
Renukaradhya S
Indresh R



ಶ್ರೀ ನರೇಂದ್ರ ಮೋದಿ
ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿ



# ವಿದ್ಯಾರ್ಥಿವೇತನಗಳು

## ವಿಕಲಚೇತನ ವಿದ್ಯಾರ್ಥಿಗಳಿಗೆ

Accessible India Campaign
Department of Empowerment of Persons with Disabilities (Divyangjan)
Ministry of Social Justice & Empowerment

"ಆಜಾದಿ 70 ಸಾಲ್– ಯಾದ್ ಕರೊ ಕುರುಬಾನಿ"

ವಿಕಲಚೇತನ ವಿದ್ಯಾರ್ಥಿಗಳಿಗಾಗಿ ಶಿಕ್ಷಣದ ಅವಕಾಶಗಳನ್ನು ಒದಗಿಸುವ ಸಲುವಾಗಿ ವಿಕಲಚೇತನ ವ್ಯಕ್ತಿಗಳ ಸಬಲೀಕರಣ ಇಲಾಖೆಯು ಶಿಕ್ಷಣದ ಮೂಲಕ ಅವರ ಸಬಲೀಕರಣಕ್ಕಾಗಿ ಈ ಕೆಳಗಿನ ವಿದ್ಯಾರ್ಥಿವೇತನ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿದೆ:

| ಕ್ರ ಸಂ | ಯೋಜನೆ | ಇವುಗಳಿಗೆ ಕೋರ್ಸ್‌ಗಳು | ಒಂದು ವರ್ಷಕ್ಕೆ ವಿದ್ಯಾರ್ಥಿವೇತನದ ಸಂಖ್ಯೆ | ವಾರ್ಷಿಕ ಆದಾಯದ ಗರಿಷ್ಠ ಮಿತಿ (ರೂ.) | ವಿದ್ಯಾರ್ಥಿವೇತನದ ದರ | ಹೇಗೆ ಸಲ್ಲಿಸಬೇಕು |
|---|---|---|---|---|---|---|
| 1. | 1.ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ | ಕ್ಲಾಸ್ IX ಹಾಗೂ X | 46,000 | 2.00 ಲಕ್ಷ | ದಿನದ ಸ್ಕಾಲರ್‌ಗಳಿಗೆ ತಿಂಗಳ ನಿರ್ವಹಣಾ ಭತ್ಯೆ ರೂ. 350 ಹಾಗು ಹಾಸ್ಟಲ್‌ನಲ್ಲಿರುವವರಿಗೆ ರೂ. 600 ಜೊತೆಗೆ ಪುಸ್ತಕದ ಅನುದಾನ ಹಾಗು ಸಾರಿಗೆ ಭತ್ಯೆ, ರೀಡರ್ ಭತ್ಯೆ ಇತ್ಯಾದಿ ಇತರ ಭತ್ಯೆಗಳು | ವಿದ್ಯಾರ್ಥಿಗಳು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ www.scholarships.gov.in ನಲ್ಲಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಆಗಸ್ಟ್ 31, 2016 |
| 2. | ಮೆಟ್ರಿಕೋತ್ತರ ವಿದ್ಯಾರ್ಥಿವೇತನ | ಕ್ಲಾಸ್ XI ರಿಂದ ಸ್ನಾತಕೋತ್ತರ ಅಥವಾ ಡಿಪ್ಲಮಾ ಶ್ರೇಣಿ | 16,650 | 2.50 ಲಕ್ಷ | ಬೇರೆ ಬೇರೆ ಶಿಸ್ತುಗಳಲ್ಲಿನ ಸ್ನಾತಕೋತ್ತರ, ಪದವಿಯಲ್ಲದ ಡಿಪ್ಲಮಾ, ಪದವಿಗೆ ಕರೆದೊಯ್ಯುವ ವೃತ್ತಿಪರ ಕೋರ್ಸ್‌ಗಳು, ಡಿಪ್ಲೊಮಾ ಇತ್ಯಾದಿಗಳಿಗೆ ಬೇರೆ ದರಗಳು. ಹಾಸ್ಟಲ್‌ನಲ್ಲಿರುವವರಿಗೆ ರೂ. 380-1200 ಹಾಗು ದಿನದ ಸ್ಕಾಲರ್‌ಗಳಿಗೆ ರೂ. 230-550 ವರೆಗೆ ಇದರ ಜೊತೆಗೆ ಟ್ಯೂಷನ್ ಶುಲ್ಕ, ಭತ್ಯೆಗಳು, ಪುಸ್ತಕದ ಅನುದಾನ ಇತ್ಯಾದಿ. | |
| 3. | ಉನ್ನತ ಶ್ರೇಣಿಯ ಶಿಕ್ಷಣಕ್ಕೆ ವಿದ್ಯಾರ್ಥಿವೇತನ | ಸ್ನಾತಕೋತ್ತರ ಪದವಿ ಅಥವಾ ಅತ್ಯುತ್ತಮ ಶ್ರೇಣಿ ಅಧಿಸೂಚಿತ 197 ಸಂಸ್ಥೆಗಳಲ್ಲಿ ಡಿಪ್ಲಮಾ | 160 | 6.00 ಲಕ್ಷ | ಹಾಸ್ಟಲ್‌ನಲ್ಲಿರುವವರಿಗೆ ತಿಂಗಳ ನಿರ್ವಹಣಾ ರೂ. 3000/–, ದಿನದ ಸ್ಕಾಲರ್‌ಗಳಿಗೆ, ರೂ. 2000/– ವಿಕಲಚೇತನ ಭತ್ಯೆ, ವರ್ಷಕ್ಕೆ ರೂ. 5000/– ಪುಸ್ತಕ ಅನುದಾನ, ಟ್ಯೂಷನ್ ಶುಲ್ಕ ವರ್ಷಕ್ಕೆ ರೂ. 2 ಲಕ್ಷದವರೆಗೆ | |
| 4. | ವಿಕಲಚೇತನ ವ್ಯಕ್ತಿಗಳಿಗೆ ರಾಷ್ಟ್ರೀಯ ಫೆಲೋಶಿಪ್ | ಎಂ.ಫಿಲ್/ಪಿಎಚ್.ಡಿ | 200 | ಆದಾಯಕ್ಕೆ ಗರಿಷ್ಠ ಮಿತಿ ಇಲ್ಲ | ಜೆಆರ್‌ಎಫ್ (ಮೊದಲ ಎರಡು ವರ್ಷಗಳಿಗೆ) ತಿಂಗಳಿಗೆ ರೂ. 25,000/– ಹಾಗು ಎಸ್‌ಆರ್‌ಎಫ್ ( ಮೂರನೇ ವರ್ಷದಿಂದ ಕೋರ್ಸ್ ಮುಗಿಯುವವರೆಗೆ) ರೂ. 28,000/– ಹಾಗೂ ಆಕಸ್ಮಿಕ ಭತ್ಯೆ, ಬೆಂಗಾವಲು ಭತ್ಯೆ/ ರೀಡರ್ ಭತ್ಯೆ, ಎಚ್‌ಆರ್‌ಎ ಇತ್ಯಾದಿ | ವಿದ್ಯಾರ್ಥಿಗಳು ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ವೆಬ್‌ಸೈಟ್ www.ugc.ac.in ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ಯುಜಿಸಿ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ 15 ಆಗಸ್ಟ್ 2016. ವಿದ್ಯಾರ್ಥಿಗಳ ಆಯ್ಕೆಯನ್ನು ಯುಜಿಸಿ ಮಾಡುತ್ತದೆ. |
| 5. | ಮುಂದುವರಿಸುವವರಿಗೆ ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿವೇತನಗಳು | ಹೊರದೇಶದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಹಾಗು ಡಾಕ್ಟೊರಲ್ ಪದವಿಗಳು | 20 | 6.00 ಲಕ್ಷ | ಪೌಂಡ್ ( ಗ್ರೇಟ್ ಬ್ರಿಟನ್) 9,900 ಯುಕೆಗೆ ಪ್ರತಿ ವರ್ಷಕ್ಕೆ ಹಾಗೂ ಯುಎಸ್ $ 15,400 ಇತರ ರಾಷ್ಟ್ರಗಳಿಗೆ ಇದರ ಜೊತೆಗೆ ಟ್ಯೂಷನ್ ಶುಲ್ಕ, ಆಕಸ್ಮಿಕ ಭತ್ಯೆ, ಏರ್ ಪ್ಯಾಸೇಜ್ ಬೆಲೆ ಇತ್ಯಾದಿ | ಅರ್ಜಿಗಳ ಆಹ್ವಾನವನ್ನು ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ 12 ಜುಲೈ 2016 ರಂದು ವಿತರಿಸಲಾಗಿದೆ ಹಾಗು ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ 25 ಆಗಸ್ಟ್ 2016. ಅಭ್ಯರ್ಥಿಗಳ ಆಯ್ಕೆಯನ್ನು ಡಿಒಪಿಡಬ್ಲ್ಯೂಡಿ ಮಾಡುತ್ತದೆ. |

ಮೇಲಿನ ಎಲ್ಲ ವಿದ್ಯಾರ್ಥಿವೇತನ ಯೋಜನೆಗಳು 40% ಅಂಗವೈಕಲ್ಯ ಹೊಂದಿರುವ ಹಾಗು ಈ ಸಂಬಂಧವಾಗಿ ಯೋಗ್ಯ ವೈದ್ಯಕೀಯ ಪ್ರಾಧಿಕಾರವು ವಿತರಿಸಿರುವ ವಿಕಲಚೇತನ ಪ್ರಮಾಣ ಪತ್ರ ಹೊಂದಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ವಿದ್ಯಾರ್ಥಿವೇತನ ಯೋಜನೆಗಳ ವಿವರಗಳಿಗೆ www.disabilityaffairs.gov.in ಗೆ ಭೇಟಿ ನೀಡಿ.

**ಸಾಮಾಜಿಕ ನ್ಯಾಯ ಹಾಗು ಸಬಲೀಕರಣ ಸಚಿವಾಲಯ**
**ವಿಕಲಚೇತನ ವ್ಯಕ್ತಿಗಳ (ದಿವ್ಯಾಂಜನ)**
**ಸಬಲೀಕರಣ ಇಲಾಖೆ**

davp 38117/13/0038/1617

Karnataka State Government Disabled Employees Association
Renukaradhya S
Indresh R

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: NHFDC ಯೋಜನೆಯನ್ನು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಉಲ್ಲೇಖ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ: ಮಅನಿ: NHFDC /7/12-13/368/14. ದಿನಾಂಕ: 25.08.2014.
2. ಪ್ರಧಾನ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.9.2014ರಂದು ನಡೆದ ಸಭೆಯ ನಡವಳಿ.

1112
29/10/14

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 2010-11ನೇ ಸಾಲಿನಿಂದ ವಿಕಲಚೇತನರಿಗೆ NHFDC ಯೋಜನೆಯ ಸ್ಟೇಟ್ ಚಾನೆಲೈಸಿಂಗ್ ಏಜೆನ್ಸಿಯಾಗಿ ಕೆಲಸ ನಿರ್ವಹಿಸುತ್ತಿದೆ. ಈ ಯೋಜನೆಯಡಿ ನಿಗಮವು NHFDC ಯವರಿಂದ ಸಾಲವನ್ನು ಪಡೆದು ವಿಕಲಚೇತನರಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಇವರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಇದುವರೆವಿಗೂ NHFDC ಯಿಂದ ರೂ.4.45 ಕೋಟಿಗಳ ಸಾಲ ಪಡೆದಿದ್ದು, ಇದರಲ್ಲಿ ಸುಮಾರು ರೂ.0.30 ಕೋಟಿಗಳಷ್ಟು ಮಾತ್ರ ಮರುಪಾವತಿಯಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ನಿಗಮದ ಸಿಬ್ಬಂದಿ / ಅಧಿಕಾರಿಗಳು ಇರುವುದಿಲ್ಲ. ಸರ್ಕಾರದ ಆದೇಶದನ್ವಯ ವಸೂಲಾತಿ ಅಧಿಕಾರಿಗಳು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಆಗಿರುತ್ತಾರೆ. ಆದರೆ ಇವರು ನಿಗಮದ ಅಧಿಕಾರಿಗಳಾಗಿರುವುದಿಲ್ಲ ಹಾಗೂ ಇವರು ನೇರವಾಗಿ ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ನಿಗಮವು ಪ್ರತಿ ತ್ರೈಮಾಸಿಕ ಎನ್.ಹೆಚ್.ಎಫ್.ಡಿ.ಸಿ. ಸಂಸ್ಥೆಗೆ ರೂ.1.13 ಕೋಟಿಗಳನ್ನು ಮರುಪಾವತಿಸಬೇಕಾಗಿರುತ್ತದೆ. ಮರುಪಾವತಿಸದೇ ಇದ್ದಲ್ಲಿ ನಿಗಮವು Penal Interest ಪಾವತಿಸಬೇಕಾಗುತ್ತದೆ. ಸಾಲ ವಸೂಲಾತಿ ಕಷ್ಟವಾಗಿರುವುದರಿಂದ NHFDC ಯೋಜನೆಯನ್ನು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವರ್ಗಾಯಿಸುವಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ 1ರ ಪತ್ರ ದಿನಾಂಕ:25.8.2014ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

NHFDC ಯೋಜನೆಯನ್ನು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವರ್ಗಾಯಿಸಲು ಮೇಲೆ ಕ್ರಮ ಸಂಖ್ಯೆ 3ರಲ್ಲಿ ಓದಲಾದ ದಿನಾಂಕ:16.9.2014ರ ಸಭೆ ನಡವಳಿಯಲ್ಲಿ ತೀರ್ಮಾನಿಸಲಾಗಿದೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

— 2

Karnataka State Government Disabled Employees Association
Renukaradhya S
Indresh R

ಸಂಖ್ಯೆ: ಮಮಇ ಅಶೀಕ ಸಂಸ್ಥೆ, ಮಹಿಳಾ 01 ವಿಕಚೇ 2014, ಬೆಂಗಳೂರು, ದಿನಾಂಕ: 23.10.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, NHFDC ನೋಡಲ್ ಏಜೆನ್ಸಿಯಿಂದ ವಿಕಲಚೇತನ ಫಲಾನುಭವಿಗಳಿಗೆ ನೀಡಲಾದ ಸಾಲ ನೀಡುವ ಮತ್ತು ಬಟವಾಡೆ ಮಾಡುವ ಕಾರ್ಯ ಯೋಜನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ– 2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:

1) ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮ, Red Cross Bhavan,Sector-12,Faridabad-121 007.
3) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
5) ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
6) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
7) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ.
8) ಜಂಟಿ ನಿರ್ದೇಶಕರು/ಉಪನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9) ಉಪನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ ಬೆಂಗಳೂರು
10) ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
11) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3)
12) ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
13) ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
14) ಶಾಖಾ ರಕ್ಷಾ ಕಡತ/ODGC/ಹೆಚ್ಚುವರಿ ಪ್ರತಿ.

ದಿನಾಂಕ 28/10/2014

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನರ ಆರ್ಥಿಕ ಅಭಿವೃದ್ಧಿ ಮತ್ತು ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನೆ ಮತ್ತು ನಿಬಂಧನೆಗಳ ಕುರಿತು ಪರಿಷ್ಕರಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಮಮಇ:81:ಮಅನಿ:2009, ದಿನಾಂಕ: 05.10.2009
2. ಸರ್ಕಾರಿ ಆದೇಶ ಸಂಖ್ಯೆ: ಮಮಇ:50:ಮಅನಿ:2013, ದಿನಾಂಕ: 01.07.2014.
3. ಸರ್ಕಾರಿ ಆದೇಶ ಸಂಖ್ಯೆ: ಮಮಇ:61:ಮಅನಿ:2014, ಬೆಂಗಳೂರು ದಿನಾಂಕ: 23.10.2014
4. ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಪತ್ರ ಸಂಖ್ಯೆ: ಇಸಿ/ 6/ NHFDC/ನಿಬಂಧನೆ ಆದೇಶ/2014-15 ದಿನಾಂಕ:05-02-2015

ಪ್ರಸ್ತಾವನೆ:

ರಾಷ್ಟ್ರೀಯ ಅಂಗವಿಕಲರ ಹಣಕಾಸು ನಿಗಮದ ವತಿಯಿಂದ ಸಾಲ ಪಡೆದು ವಿಕಲಚೇತನರಿಗೆ ಸಾಲ ಮತ್ತು ಇತರೆ ಆದಾಯ ತರುವಂತಹ ಚಟುವಟಿಕೆಗಳನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನೆ ಮತ್ತು ನಿಬಂಧನೆಗಳನ್ನು (Lending Policy and Procedure) ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿ:05.10.2009 ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾಗಿತ್ತು.

ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ವತಿಯಿಂದ ಸಾಲ ಪಡೆದು ವಿಕಲಚೇತನರಿಗೆ ಸಾಲ ಮತ್ತು ಇತರೆ ಆದಾಯ ತರುವಂತಹ ಚಟುವಟಿಕೆಗಳು ಹಾಗೂ ಸ್ವಯಂ ಉದ್ಯೋಗ ಪ್ರಾರಂಭಿಸಲು ಸರ್ಕಾರವು 2014-15ನೇ ಸಾಲಿಗೆ ರೂ.2.80 ಕೋಟಿಗಳ ಖಾತರಿಯನ್ನು (Government guarantee) ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿ:01.07.2014 ರ ಸರ್ಕಾರಿ ಆದೇಶದಲ್ಲಿ ನೀಡಿರುತ್ತದೆ.

ವಿಕಲಚೇತನ ಫಲಾನುಭವಿಗಳಿಗೆ ಸಾಲ ನೀಡುವ ಮತ್ತು ಬಟವಾಡೆ ಮಾಡುವ ಕಾರ್ಯಯೋಜನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ದಿ:23.10.2014 ರ ಸರ್ಕಾರಿ ಆದೇಶದಲ್ಲಿ ವರ್ಗಾಯಿಸಿದೆ.

ವಿಕಲಚೇತನ ಫಲಾನುಭವಿಗಳಿಗೆ ಸಾಲ ನೀಡುವ ಮತ್ತು ಬಟವಾಡೆ ಮಾಡುವ ಕಾರ್ಯಯೋಜನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವರ್ಗಾಯಿಸಿರುವುದರಿಂದ, ಸದರಿ ಕಾರ್ಯಯೋಜನೆಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಆದೇಶ ಹೊರಡಿಸುವಂತೆ ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ದಿ:05-02-2015 ರ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಕೋರಿರುತ್ತಾರೆ.

Karnataka State Government Disabled Employees Association
Renukaradhya S
Indresh R

ಮೇಲಿನ ಎಲ್ಲಾ ಅಂಶಗಳನ್ನು ಪ್ರಸ್ತಾವನೆಯನ್ನು ಕೂಲಂಕಶವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 46 ಪಿಹೆಚ್‌ಪಿ 2015 , ಬೆಂಗಳೂರು, ದಿನಾಂಕ: 07.03.2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ವತಿಯಿಂದ ಸಾಲ ಪಡೆದು ವಿಕಲಚೇತನ ಫಲಾನುಭವಿಗಳಿಗೆ ಸಾಲ ನೀಡುವ ಮತ್ತು ಬಟವಾಡೆ ಮಾಡುವ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸಲು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಷರತ್ತು ಮತ್ತು ನಿಬಂಧನೆಗಳನ್ನು Lending Policy and Procedure ನ್ನು ಪರಿಷ್ಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:

1) ಪ್ರಧಾನ ಮಹಾಲೇಖಪಾಲರು, (ಜಿ &ಎಸ್‌ಎಸ್‌ಎ) ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು, (ಇ & ಆರ್‌ಎಸ್‌ಎ) ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3) ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮ, ನವದೆಹಲಿ.
8) ವ್ಯವಸ್ಥಾಪಕ ನಿರ್ದೇಶಕರು. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ , ನಿಗಮ, ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನ ಸೌಧ, ಬೆಂಗಳೂರು.
11) ಶಾಖಾಧಿಕಾರಿ, ಸ್ತ್ರೀಮರ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಮಮಇ 46 ಪಿಹೆಚ್‌ಪಿ 2015,**
**ಬೆಂಗಳೂರು, ದಿನಾಂಕ: 07.03.2015 ಕ್ಕೆ ಅನುಬಂಧ.**

ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಫರಿದಾಭಾದ್, ಹರಿಯಾಣ ಇವರ ಸಾಲದ ನೆರವಿನೊಂದಿಗೆ ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ವಿಕಲಚೇತನರಿಗೆ ಆರ್ಥಿಕ ಅಭಿವೃದ್ಧಿ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲು ಷರತ್ತು ಮತ್ತು ನಿಬಂಧನೆಗಳು.

1. **ಪರಿಭಾಷೆಗಳು:**

**1 ಪರಿಭಾಷೆಗಳು:**

**(ಅ) ಸರ್ಕಾರ:** ಎಂದರೆ ಕರ್ನಾಟಕ ರಾಜ್ಯ ಸರ್ಕಾರ

**(ಆ) ಇಲಾಖೆ:** ಎಂದರೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,

**(ಇ) ಜಿಲ್ಲಾ ಸಮಿತಿ:** ಎಂದರೆ ಅಂಗವಿಕಲರ ಆರ್ಥಿಕ ಅಭಿವೃದ್ಧಿಗೆ ಅನುಷ್ಠಾನಗೊಳಿಸುವ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಸಂಬಂಧ ರಚಿಸಲ್ಪಟ್ಟಿರುವ ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಸಮಿತಿ.

| | | |
|---|---|---|
| 1. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | – ಅಧ್ಯಕ್ಷರು |
| 2. | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | – ಸದಸ್ಯರು |
| 3. | ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | – ಸದಸ್ಯರು |
| 4. | ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ | – ಸದಸ್ಯರು |
| 5. | ಜಿಲ್ಲಾ ವ್ಯವಸ್ಥಾಪಕರು, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | – ಸದಸ್ಯರು |
| 6. | ಜಿಲ್ಲಾ ವ್ಯವಸ್ಥಾಪಕರು, ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ | – ಸದಸ್ಯರು |
| 7. | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | – ಸದಸ್ಯ ಕಾರ್ಯದರ್ಶಿ |
| 8. | ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ | – ಸದಸ್ಯರು (ಸಮಿತಿಯು ನಾಮ ನಿರ್ದೇಶನ ಮಾಡುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ) |

**(ಈ)** ಉಪನಿರ್ದೇಶಕರು: ಎಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು.

**(ಉ) ರಾಷ್ಟ್ರೀಯ ನಿಗಮ:** ಎಂದರೆ ರಾಷ್ಟ್ರ ಮಟ್ಟದಲ್ಲಿ ಸ್ಥಾಪನೆ ಮಾಡಲಾಗಿರುವ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಫರಿದಾಬಾದ್, ಹರಿಯಾಣ.

**(ಊ) ಅರ್ಜಿ ನಮೂನೆ:** ಎಂದರೆ ವಿಕಲಚೇತನರ ಸಾಲ ಯೋಜನೆಯಲ್ಲಿ ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆ ನಿಗದಿಪಡಿಸಿರುವ ಅರ್ಜಿ ನಮೂನೆ.

**(ಋ) ಯೋಜನಾ ಅನುಮೋದನೆ ಸಮಿತಿ:**

| | | |
|---|---|---|
| 1. | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, | – ಅಧ್ಯಕ್ಷರು |
| 2. | ಜಂಟಿ ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, | – ಸದಸ್ಯ ಕಾರ್ಯದರ್ಶಿಗಳು |
| 3. | ಉಪ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, | – ಸದಸ್ಯರು |
| 4. | ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | – ಸದಸ್ಯರು |
| 5. | ಸ್ವಯಂ ಸೇವಾ ಸಂಸ್ಥೆಯ ಒಬ್ಬರು ಪ್ರತಿನಿಧಿ | – ಸದಸ್ಯರು |

Karnataka State Government Disabled Employees Association
Renukaradhya S
Indresh R

ಜಿಲ್ಲಾ ಮಟ್ಟದ ಸಮಿತಿಯು ಶಿಫಾರಸ್ಸು ಮಾಡುವ ಅರ್ಜಿಗಳನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಅನುಮೋದನೆ ನೀಡುವುದು.

(ಎ) ರಾಜ್ಯ ಸಮಿತಿ: ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡಂತೆ ಸದಸ್ಯರನ್ನು ಒಳಗೊಂಡಿರುತ್ತದೆ.

| | | | |
|---|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಯವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | - | ಅಧ್ಯಕ್ಷರು |
| 2. | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ | - | ಸದಸ್ಯ ಕಾರ್ಯದರ್ಶಿ |
| 3. | ಉಪ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್ ಸಂಸ್ಥೆ | - | ಸದಸ್ಯರು |
| 4. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಆರ್ಥಿಕ ಅಭಿವೃದ್ಧಿ ನಿಗಮ | - | ಸದಸ್ಯರು |

ರಾಜ್ಯ ಮಟ್ಟದ ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸುವುದು. ರಾಷ್ಟ್ರೀಯ ನಿಗಮದಿಂದ ಸಾಲ ಪಡೆಯಲು ಕ್ರಮ ಕೈಗೊಳ್ಳುವುದು ಮತ್ತು ಯೋಜನೆಯನ್ನು ಯಶಸ್ವಿಗೊಳಿಸಲು ಮಾರ್ಗಸೂಚಿಗಳನ್ನು ರಚಿಸುವುದು.

Karnataka State Government Disabled Employees Association
Renukaradhya S
Indresh R

**2. ಪೀಠಿಕೆ:**

ಅಂಗವಿಕಲರ ಅಭಿವೃದ್ಧಿಗಾಗಿ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮವನ್ನು ರಾಷ್ಟ್ರ ಮಟ್ಟದಲ್ಲಿ ದಿನಾಂಕ: 24-01-1997 ರಂದು ರೂ.400.00 ಕೋಟಿ ಷೇರು ಬಂಡವಾಳದೊಂದಿಗೆ ಕೇಂದ್ರ ಸರ್ಕಾರವು ಸ್ಥಾಪಿಸಿದೆ. ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಆರ್ಥಿಕ ನೆರವನ್ನು ಪಡೆದು ರಾಜ್ಯದ ಅಂಗವಿಕಲರಿಗೆ ಸಾಲ ಸೌಲಭ್ಯ ಒದಗಿಸಲು ರಾಜ್ಯದ ಚಾಲನಾ ಸಂಸ್ಥೆ (ಚಾನಲೈಸಿಂಗ್ ಏಜೆನ್ಸಿ)ಯಾಗಿ ಗುರುತಿಸಿ ಕಾರ್ಯನಿರ್ವಹಿಸುವ ಹೊಣೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ದಿನಾಂಕ:25-06-2008 ರಲ್ಲಿ ನೀಡಿ ನೀಡಿದ್ದು, ಪ್ರಸ್ತುತ ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ವರ್ಗಾಯಿಸಿ ದಿ:23.10.2014ರಲ್ಲಿ ಆದೇಶಿಸಿದೆ.

**3. ಸಾಲದ ಉದ್ದೇಶಗಳು/ಯೋಜನೆಗಳು:**

1. ವಿಕಲಚೇತನರಿಗೆ ಪ್ರಯೋಜನವಾಗುವ ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವುದು.
2. ವಿಕಲಚೇತನರಿಗೆ ಆರ್ಥಿಕ ಪುನರ್ವಸತಿ ಕಲ್ಪಿಸಲು ಸಹಾಯವಾಗುವಂತೆ ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸುವುದು.
3. ವಿಕಲಚೇತನರು ಉನ್ನತ ವ್ಯಾಸಂಗ ಕೈಗೊಳ್ಳಲು/ವೃತ್ತಿಪರ ಶಿಕ್ಷಣ ಪಡೆಯಲುಸಾಲ ಸೌಲಭ್ಯ ನೀಡುವುದು.
4. ಉತ್ಪಾದನಾ ಕೇಂದ್ರಗಳು ಉತ್ತಮ ರೀತಿಯಲ್ಲಿ ಕೆಲಸಮಾಡಲು ಸಹಾಯವಾಗುವಂತೆ ವಿಕಲಚೇತನರಿಗೆ ತಾಂತ್ರಿಕ ಮತ್ತು ಉದ್ಯಮಶೀಲಿತ ಸೌಲಭ್ಯ ಒದಗಿಸುವುದು.

4. (I) **(1) ವೈಯಕ್ತಿಕ ಸಾಲ ಪಡೆಯಲು ಅರ್ಹತೆ ಮತ್ತು ಸಲ್ಲಿಸಬೇಕಾದ ದಾಖಲಾತಿಗಳು:**

1) ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2) ಶೇ.40 ಅಥವಾ ಅದಕ್ಕಿಂತ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ಪ್ರಜೆ ಆಗಿರಬೇಕು. ಈ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪಡೆದ ದೃಡೀಕರಣ ಪತ್ರವನ್ನು ಅಥವಾ ಇಲಾಖೆಯ ಗುರುತಿನ ಚೀಟಿಯ ದೃಡೀಕರಣ ಪ್ರತಿಯನ್ನು ಸಲ್ಲಿಸಬೇಕು.

3) ವಯಸ್ಸು 18 ರಿಂದ 60 ವರ್ಷಗಳೊಳಗಿರಬೇಕು.
4) ವಾರ್ಷಿಕ ಆದಾಯ/ಪಟ್ಟಣ ಪ್ರದೇಶದವರಿಗೆ ರೂ.5,00,000/- ಗಳಿಗಿಂತ ಕಡಿಮೆ ಇರಬೇಕು. ಗ್ರಾಮಾಂತರ ಪ್ರದೇಶದವರಿಗೆ ರೂ.3,00,000/- ಗಳಿಗಿಂತ ಕಡಿಮೆ ಇರಬೇಕು. ಈ ಬಗ್ಗೆ ತಹಸೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರವನ್ನು (ಸರ್ಟಿಫಿಕೇಟ್) ಸಲ್ಲಿಸಬೇಕು.
5) ಕುಶಲತೆ ಮತ್ತು ತಾಂತ್ರಿಕ ಉದ್ದೇಶಕ್ಕೆ ಸಾಲ ಪಡೆಯಲು ಇಚ್ಚಿಸುವ ವಿಕಲಚೇತನ ವ್ಯಕ್ತಿಯು ಸಂಬಂದಿಸಿದ ವಿದ್ಯಾಭ್ಯಾಸ/ತಾಂತ್ರಿಕ/ವೃತ್ತಿಪರ ಶಿಕ್ಷಣದ ಅನುಭವ ಮತ್ತು ಹಿನ್ನೆಲೆಯನ್ನು ಹೊಂದಿರಬೇಕು.
6) ಅರ್ಜಿದಾರರು ಸ್ಥಳೀಯ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಹೊಂದಿಲ್ಲದೆ ಇರುವ ಬಗ್ಗೆ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸಬೇಕು. ಈಗಾಗಲೇ ಸರ್ಕಾರದ ಇತರ ಯೋಜನೆಗಳಲ್ಲಿ ಹಾಗೂ ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸುಸ್ತಿದಾರರಾಗಿದ್ದಲ್ಲಿ ಸಾಲ ಪಡೆಯಲು ಅರ್ಹರಾಗಿರುವುದಿಲ್ಲ.
7) ವಾಸಸ್ಥಳದ ಬಗ್ಗೆ ದೃಢೀಕರಿಸಲು ಲಭ್ಯವಿರುವ ದಾಖಲೆಗಳನ್ನು ಸಲ್ಲಿಸಬೇಕು. ಉದಾ:ಬಿ.ಪಿ.ಎಲ್. ಕಾರ್ಡ್, ಮತದಾರರ ಗುರುತಿನ ಚೀಟಿ ಮುಂತಾದವು.
8) ಪಾಸ್‌ಪೋರ್ಟ್ ಅಳತೆಯ 3 ಫೋಟೋಗಳನ್ನು ಮತ್ತು ಅಂಗವಿಕಲತೆಯನ್ನು ತೋರಿಸುವ ಪೂರ್ಣ ಭಾವಚಿತ್ರವನ್ನು ಸಲ್ಲಿಸುವುದು. ಫೋಟೋಗಳ ಹಿಂಬದಿಯಲ್ಲಿ ಅರ್ಜಿದಾರರು ಸಹಿ ಮಾಡಿರಬೇಕು. ಫೋಟೋದ ಮೇಲೆ ಉಪ ನಿರ್ದೇಶಕರು/ನೋಡಲ್ ಅಧಿಕಾರಿಗಳು/ಅಂಗವಿಕಲರ ಕಲ್ಯಾಣಾಧಿಕಾರಿಗಳು ಫೋಟೋ ದೃಢೀಕರಿಸಬೇಕು.
9) ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆ ಬಗ್ಗೆ ಪರಿಜ್ಞಾನವಿರಬೇಕು. ಈ ಬಗ್ಗೆ ತರಬೇತಿ ಹೊಂದಿದ್ದಲ್ಲಿ ಪ್ರಮಾಣ ಪತ್ರ ಲಗತ್ತಿಸಬೇಕು. ಅರ್ಜಿದಾರರು ಸಾಲ ಕೋರಿರುವ ಆರ್ಥಿಕ ಚಟುವಟಿಕೆ /ಉದ್ದೇಶವನ್ನು ನಡೆಸುತ್ತಿರುವ ಬಗ್ಗೆ/ನಡೆಸಬಹುದಾದ ಬಗ್ಗೆ ನೋಡಲ್ ಅಧಿಕಾರಿ/ ಉಪ ನಿರ್ದೇಶಕರ ಅಪ್ರೈಸಲ್ ರಿಪೋರ್ಟನೊಂದಿಗೆ ಸ್ಥಳ ಪರಿಶೀಲನಾ ವರದಿಯನ್ನು ಸಲ್ಲಿಸಬೇಕು. ಸಾಲದ ಮೊತ್ತ ರೂ.25,000/- ಗಳಿಗಿಂತ ಹೆಚ್ಚಿನ ಘಟಕದ ಯೋಜನೆಗೆ ತಪ್ಪದೇ ಯೋಜನಾ ವರದಿ ಸಲ್ಲಿಸಬೇಕು.
10) ಅರ್ಜಿದಾರರು ಕೈಗೊಳ್ಳುವ ಯೋಜನೆಯಲ್ಲಿ ಯಂತ್ರೋಪಕರಣಗಳು/ಉಪಕರಣಗಳು/ ಸಾಮಗ್ರಿಗಳು ಒಳಗೊಂಡಿದ್ದು ಅವುಗಳನ್ನು ಡೀಲರ್ಸ್ ಮೂಲಕ ಅಥವಾ ತಯಾರಕರಿಂದ ಅಥವಾ ವಿತರಕರಿಂದ ಪಡೆದ ಇನ್‌ವಾಯ್ಸ್ ಅಥವಾ ದರಪಟ್ಟಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಸಾಲ ಬಿಡುಗಡೆ ಮಾಡುವ ಸಂದರ್ಭದಲ್ಲಿ ಯಂತ್ರೋಪಕರಣಗಳಿಗೆ/ಉಪಕರಣಗಳಿಗೆ/ಡೀಲರ್ಸ್/ವಿತರಕರ ಹೆಸರಿನಲ್ಲಿ ಪ್ರತ್ಯೇಕವಾಗಿ ಚೆಕ್ ಮೂಲಕ ಹಣ ಬಿಡುಗಡೆ ಮಾಡಲಾಗುವುದು ಮತ್ತು ವಿಮೆ (INSURANCE) ಮಾಡಿಸಬೇಕು.
11) NHFDC ಯಿಂದ ನಿಗದಿಪಡಿಸಿರುವ/ನಿಗದಿಪಡಿಸಬಹುದಾದ ಇತರೆ ಷರತ್ತು ಹಾಗೂ ನಿಯಮಗಳಿಗೆ ಒಳಪಟ್ಟಿರುತ್ತದೆ.
12) ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮ ಆಗ್ಗಿಂದಾಗ್ಗೆ ಹೊರಡಿಸುವ Lending Policy and Procedure ನಲ್ಲಿ ತಿಳಿಸುವ ಎಲ್ಲಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.

Karnataka State Government Disabled Employees Association
Renukaradhya S
Indresh R

**(II) ಬಡ್ಡಿದರ:**

(ಅ) ರೂ.50,000 ಗಳವರೆಗೆ-5%
(ಆ) ರೂ.50,000 ದಿಂದ ರೂ.5,00,000 ಲಕ್ಷಗಳವರೆಗೆ-6%
(ಇ) ರೂ.6,00,000 ಲಕ್ಷಕ್ಕಿಂತ ಹೆಚ್ಚಿಗೆ-8%
ವಿಕಲಚೇತನ ಮಹಿಳಾ ಫಲಾನುಭವಿಗೆ ಬಡ್ಡಿ ದರದಲ್ಲಿ ಶೇ.1 ರಷ್ಟು ವಿಶೇಷ ರಿಯಾಯಿತಿ ಇರುತ್ತದೆ.

**(III) ವೈಯಕ್ತಿಕ ಸಾಲಕ್ಕೆ ಪಡೆಯಬೇಕಾದ ಭದ್ರತೆಗಳು:-**

(1) ರೂ.5000/- ಗಳವರೆಗಿನ ಸಾಲದ ಮೊತ್ತಕ್ಕೆ ಸಾಲಗಾರರು ವೈಯಕ್ತಿಕ ಭದ್ರತೆ ಹಾಗೂ ಸಾಲದಿಂದ ಸೃಷ್ಟಿಸಲ್ಪಟ್ಟ ಆಸ್ತಿಯನ್ನು ಸರ್ಕಾರಕ್ಕೆ ಆಧಾರ (ಹೈಪೋತಿಕೇಟ್) ಮಾಡಿಕೊಳ್ಳುವುದು. ಹಾಗೂ ಪಡೆಯುವ ಸಾಲಕ್ಕೆ ಈ ಕೆಳಗಿನ ದಾಖಲಾತಿಗಳನ್ನು ತೆಗೆದುಕೊಳ್ಳುವುದು.

(ಅ) ಕನ್‌ಸಿಡರೇಷನ್ ರಶೀದಿ (ಹಣ ಸಂದಾಯ ರಶೀದಿ).
(ಆ) ಕರಾರು ಪತ್ರ (ಮುಚ್ಚಳಿಕೆ ಪತ್ರ).

(2) ರೂ.5,001/-ರಿಂದ ರೂ.25,000/- ಗಳವರೆಗಿನ ಸಾಲದ ಮೊತ್ತಕ್ಕೆ ಸ್ವಯಂ ದೃಢೀಕರಣ (Self Declaration) ನೀಡುವುದು.

(ಅ) ಕಂಡಿಕೆ (1) ರಲ್ಲಿನ ದಾಖಲೆಗಳ ಜೊತೆಗೆ ಸಾಲ ಪಡೆಯುವ ಫಲಾನುಭವಿಯಿಂದ ಅವರು ಹೊಂದಿರುವ ಆಸ್ತಿ ಋಣಭಾರದ ಬಗ್ಗೆ ಘೋಷಣಾ ಪತ್ರ (ಡಿಕ್ಲರೇಷನ್)ನಿಗದಿತ ನಮೂನೆಯಲ್ಲಿ ಪಡೆಯಬೇಕು.

(ಆ) ರೂ.25,001/- ಕ್ಕಿಂತ ಹೆಚ್ಚಿನ ಸಾಲಕ್ಕೆ ಕಂಡಿಕೆ(1) ಮತ್ತು (2) ರಲ್ಲಿ ತಿಳಿಸಿರುವ ದಾಖಲಾತಿಗಳ ಜೊತೆಗೆ ಸಾಲಕ್ಕೆ ಸರಿಸಮನಾದ ಮೌಲ್ಯದ ಸ್ಥಿರ ಆಸ್ತಿಯನ್ನು ಸರ್ಕಾರಕ್ಕೆ ಆಧಾರ ಮಾಡಬೇಕು. ಈ ಸಂದರ್ಭದಲ್ಲಿ ಸಾಲಗಾರರು ಸ್ಥಿರ ಆಸ್ತಿಯನ್ನು ಹೊಂದಿದ್ದರೆ ಅದನ್ನು ಅಥವಾ ಸ್ಥಿರ ಆಸ್ತಿಯನ್ನು ಸರ್ಕಾರಕ್ಕೆ ಡೆಪಾಸಿಟ್ ಆಫ್ ಟೈಟಲ್ ಡೀಡ್: ರಿಜಿಸ್ಟರ್ಡ್ ಮಾರ್ಟ್‌ಗೇಜ್ ಮೂಲಕ ಆಧಾರ ಮಾಡಬೇಕು. ಆಧಾರ ಮಾಡುವ ಸ್ಥಿರ ಆಸ್ತಿಗೆ ಈ ಕೆಳಕಂಡ ದಾಖಲಾತಿಗಳನ್ನು ತೆಗೆದುಕೊಳ್ಳಬೇಕು.

1. ಆಸ್ತಿಯ ಸೇಲ್ ಡೀಡ್‌ನ ಮೂಲ ಪ್ರತಿ. ಆಸ್ತಿಯು ವಿಭಾಗವಾಗಿದ್ದರೆ ವಿಭಾಗ ಪತ್ರದ ರಿಜಿಸ್ಟರ್‌ನ ಮೂಲ ಪ್ರತಿ ಅಥವಾ ಸರ್ಟಿಫಿಕೇಟ್ ಪ್ರತಿ ಅಥವಾ ಪಂಚಾಯಿತಿಯ ಪಾಲು ಪತ್ರದ ಮೂಲ ಪ್ರತಿ.
2. ಮೂರು ವರ್ಷಗಳ ಪಹಣಿ.
3. ಖಾತಾ ಎಕ್ಸ್‌ಟ್ರಾಕ್ಟ್
4. ಕಂದಾಯ ರಶೀದಿ
5. ವಂಶವೃಕ್ಷ.
6. ಮ್ಯುಟೇಷನ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್
7. ಋಣಭಾರ ಪತ್ರ (5 ವರ್ಷಗಳದ್ದು)
8. ಹೈಪತಿಕೇಷನ್ ಡೀಡ್.

ಸರ್ಕಾರವು ನಿಗಧಿಪಡಿಸಿದ Guidance Value (ಭೂಮಿ,ನಿವೇಶನ,ಮನೆ,ಕಟ್ಟಡ,ಭವನ) ಅನ್ನು ಪರಿಗಣಿಸಲಾಗುವುದು.

Karnataka State Government Disabled Employees Association
Renukaradhya S
Indresh R

**4. II (I) ಸ್ವಯಂ ಸೇವಾ ಸಂಸ್ಥೆಗಳು/ಸ್ವಸಹಾಯ ಗುಂಪುಗಳು ಸಾಲ ಪಡೆಯಲು ಅರ್ಹತೆ ಮತ್ತು ಸಲ್ಲಿಸಬೇಕಾದ ದಾಖಲಾತಿಗಳು. Micro Credit ಯೋಜನೆಯಡಿ.**

(ಅ) ಸ್ವಯಂ ಸೇವಾ ಸಂಸ್ಥೆಯು ನೋಂದಣಿಯಾಗಿ ಕನಿಷ್ಠ ಮೂರು ವರ್ಷಗಳಾಗಿರಬೇಕು ಮತ್ತು ಖ್ಯಾತಿ ಪಡೆದಿರುವ ಸಂಸ್ಥೆಯಾಗಿರಬೇಕು.

(ಆ) ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ವಿಕಲಚೇತನರಿಗೆ ಸೇವೆ ಸಲ್ಲಿಸುವ ಉದ್ದೇಶವನ್ನು ಸ್ವಯಂ ಸೇವಾ ಸಂಸ್ಥೆ ಹೊಂದಿರಬೇಕು.

(ಇ) ಪದಾಧಿಕಾರಿಗಳು ಆಯ್ಕೆಯಾದ ರಾಜಕೀಯ ಪಕ್ಷದವರಾಗಿರಬಾರದು.

(ಈ) ಲೆಕ್ಕ ಪತ್ರ ನಿರ್ವಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಂಡಿರಬೇಕು ಹಾಗೂ ಆಡಿಟ್ ಮಾಡಿಸಿರಬೇಕು. ಆಡಿಟ್ ವರದಿಯಲ್ಲಿ ಯಾವುದೇ ಅಕ್ರಮಗಳ ಬಗ್ಗೆ ಆಕ್ಷೇಪಣೆ ಇರಬಾರದು ಮತ್ತು ಲೆಕ್ಕ ಪತ್ರಗಳನ್ನು ಪ್ರಕಟಿಸಿರಬೇಕು.

(ಎ) ಸ್ವಯಂ ಸೇವಾ ಸಂಸ್ಥೆಯು ಕನಿಷ್ಠ ಮೂರು ವರ್ಷಗಳ ಕಾಲ ಉಳಿತಾಯ ಮತ್ತು ಸಾಲ ನಿರ್ವಹಣೆಯ ಅನುಭವ ಹೊಂದಿರಬೇಕು. ಕಳೆದ ಮೂರು ವರ್ಷಗಳಲ್ಲಿ ಸಾಲ ಮರು ಪಾವತಿಯು ಶೇ.90 ಅಥವಾ ಅದಕ್ಕಿಂತ ಹೆಚ್ಚಿಗೆ ಇರಬೇಕು.

**(II) ಸ್ವಯಂ ಸೇವಾ ಸಂಸ್ಥೆಗಳು/ಸ್ವಸಹಾಯ ಗುಂಪುಗಳಿಂದ ಸಾಲ ಪಡೆಯಲು ಇರಬೇಕಾದ ಫಲಾನುಭವಿಯ ಅರ್ಹತೆಗಳು:**

(1) ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(2) ಶೇ.40 ಅಥವಾ ಅದಕ್ಕಿಂತ ಹೆಚ್ಚು ಅಂಗವಿಕಲತೆಯನ್ನು ಹೊಂದಿರುವ ಪ್ರಜೆ ಆಗಿರಬೇಕು. ಈ ಬಗ್ಗೆ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ದೃಡೀಕರಣ ಪತ್ರವನ್ನು ಅಥವಾ ಇಲಾಖೆಯ ಗುರುತಿನ ಚೀಟಿಯ ದೃಡೀಕರಣ ಪ್ರತಿಯನ್ನು ಸಲ್ಲಿಸಬೇಕು.

(3) ವಯಸ್ಸು 18 ರಿಂದ 60 ವರ್ಷಗಳೊಳಗಿರಬೇಕು.

(4) ಸಾಲ ಪಡೆಯುವ ಫಲಾನುಭವಿಯು ಈಗಾಗಲೇ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಹಣಕಾಸು ಸಂಸ್ಥೆಗಳಿಂದ ಯಾವುದಾದರೂ ಯೋಜನೆಯಡಿ ಫಲಾನುಭವಿಯಾಗಿದ್ದು ಮತ್ತು ಸಾಲ ಮರುಪಾವತಿ ಬಾಕಿ ಇದ್ದಲ್ಲಿ ಅಂತಹ ಫಲಾನುಭವಿ ಸಾಲ ಪಡೆಯಲು ಅರ್ಹರಿರುವುದಿಲ್ಲ.

(5) ಸಾಲ ಪಡೆಯುವ ಫಲಾನುಭವಿಯು ನಿಯತಕಾಲಿಕವಾಗಿ ಉಳಿತಾಯ ಮತ್ತು ಸಾಲ ನೀಡುವ ಸ್ವಸಹಾಯ ಗುಂಪುಗಳ ಸದಸ್ಯರಾಗಿರಬೇಕು.

(6) ಮಹಿಳಾ ಫಲಾನುಭವಿಗೆ ಆದ್ಯತೆ ನೀಡಲಾಗುವುದು.

(7) ಸಂಬಂಧಪಟ್ಟ ತಾಂತ್ರಿಕ/ ಔದ್ಯೋಗಿಕ ಶಿಕ್ಷಣ ಹಾಗೂ ಈ ಕ್ಷೇತ್ರದಲ್ಲಿ ಅನುಭವ ಅಥವಾ ಹಿನ್ನಲೆ ಹೊಂದಿರಬೇಕು.

**(III) ಭದ್ರತೆ:**

ಮಂಜೂರು ಮಾಡುವ ಕನಿಷ್ಠ ಶೇ.25 ರಷ್ಟು ಮೊತ್ತವನ್ನು ಠೇವಣಿಯಾಗಿ ಅಡವಿಡಲು ಅಥವಾ ಶೇ.40 ರಷ್ಟು ಮಂಜೂರಾದ ಹಣವನ್ನು Collateral Security ಯಾಗಿ ನೀಡಬೇಕು.

**(IV) ಬಡ್ಡಿದರ:**

(1) ಫಲಾನುಭವಿಯು ಪಾವತಿಸಬೇಕಾದ ಬಡ್ಡಿದರವು ವಾರ್ಷಿಕವಾಗಿ ಶೇ.5 ರಷ್ಟು ಮಾತ್ರ. ಸ್ವಯಂ ಸೇವಾ ಸಂಸ್ಥೆಗಳು/ಸ್ವಸಹಾಯ ಗುಂಪುಗಳು ಶೇ.5 ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಯಾವ ಕಾರಣಕ್ಕೂ ವಿಧಿಸುವಂತಿಲ್ಲ.

Karnataka State Government Disabled Employees Association
Renukaradhya S
Indresh R

(2) ಮಹಿಳಾ ಫಲಾನುಭವಿಗೆ ಶೇ.1 ರಷ್ಟು ರಿಯಾಯಿತಿ ನೀಡಲಾಗುತ್ತದೆ.
(3) ಸುಸ್ತಿ ಬಡ್ಡಿ ದರ ಶೇ.2 ರಷ್ಟು.

ನಿಗಧಿತ ಅವಧಿಯಲ್ಲಿ ಮರುಪಾವತಿ ಮಾಡಿದ ಮೊತ್ತಕ್ಕೆ ಅನುಗುಣವಾಗಿ ಶೇ.1 ರಷ್ಟು ಪ್ರೋತ್ಸಾಹಧನವನ್ನು ಸಂಸ್ಥೆಗೆ/ಸ್ವಸಹಾಯ ಗುಂಪುಗಳಿಗೆ ನೀಡಲಾಗುವುದು.

ಸ್ವಯಂ ಸೇವಾ ಸಂಸ್ಥೆ/ಸ್ವಸಹಾಯ ಗುಂಪುಗಳು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದೊಂದಿಗೆ M.O.U. ವನ್ನು ನಿಗದಿತ ನಮೂನೆಯಲ್ಲಿ ಮಾಡಿಕೊಳ್ಳಬೇಕು.

**5. ಹಣಕಾಸಿನ ಮೂಲಗಳು:**

ವಿಕಲಚೇತನರು ಆರ್ಥಿಕ ಅಭಿವೃದ್ಧಿಗೆ ಕೈಗೊಳ್ಳುವ ಚಟುವಟಿಕೆಗಳಾದ ವ್ಯವಸಾಯ ಸೇವಾ ಉದ್ದಿಮೆ, ವ್ಯಾಪಾರ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟ ಯೋಜನೆಗಳ ವೆಚ್ಚದ ಮೊತ್ತವನ್ನು ಭರಿಸುವ ಮೂಲ ಮತ್ತು ಬಡ್ಡಿಯ ವಿವರಗಳು ಈ ಕೆಳಕಂಡಂತಿದೆ.

Karnataka State Government Disabled Employees Association
Renukaradhya S
Indresh R

| ಕ್ರಮ.ಸಂಖ್ಯೆ | ಯೋಜನೆಯ ಒಟ್ಟು ವೆಚ್ಚ | NHFC ಷೇರು | ಪ್ರಮೋಟರ್ಸ್ ಷೇರು | ವಾರ್ಷಿಕ ಬಡ್ಡಿ |
|---|---|---|---|---|
| 01. | ರೂ.50,000 ದವರೆಗೆ | ಶೇ.100 | – | ಶೇ.5 |
| 02. | ರೂ.50,000–1,00,000 | ಶೇ.95 | ಶೇ.5 | ಶೇ.6 |

**6. ಸಾಲ ಮಂಜೂರಾತಿ ವಿಧಾನ:**

ವಿಕಲಚೇತನರ ಆರ್ಥಿಕಾಭಿವೃದ್ಧಿ ಯೋಜನೆಯಲ್ಲಿ ಜಿಲ್ಲೆಗೆ ನಿಗದಿಪಡಿಸಿದ ಗುರಿಯನ್ವಯ ಸ್ಥಳೀಯವಾಗಿ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಪಡೆಯುವುದು. ಸಂಬಂಧಿಸಿದ ಕಛೇರಿಗಳಲ್ಲಿಯೂ ಸಹ ಪ್ರಕಟಿಸಬೇಕು. ಅರ್ಹ ಅರ್ಜಿದಾರರು ಅರ್ಜಿ ಪಡೆಯಲು ಕನಿಷ್ಟ 15 ದಿನಗಳ ಕಾಲಾವಕಾಶ ಇರಬೇಕು. ಅರ್ಜಿದಾರರು ನಿಗದಿಪಡಿಸಿದ ಅರ್ಜಿಯನ್ನು (ದ್ವಿಪ್ರತಿಯಲ್ಲಿ) ನಿಯಮ (4) ರಲ್ಲಿ ತಿಳಿಸಿರುವ ಎಲ್ಲಾ ದಾಖಲಾತಿಗಳೊಂದಿಗೆ ಭರ್ತಿಮಾಡಿ ಆಯಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು. ಹೀಗೆ ಸ್ವೀಕೃತವಾದ ಸಾಲದ ಅರ್ಜಿಗಳ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಮಾಡಿ ತನಿಖಾ ವರದಿಯೊಂದಿಗೆ ಕ್ರೋಢೀಕರಿಸಿ ಆಯಾ ಜಿಲ್ಲಾ ಮಟ್ಟದ ಸಮಿತಿ ಮುಂದೆ ಮಂಡಿಸಲು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಕ್ರಮ ತೆಗೆದುಕೊಳ್ಳುವುದು.

ಜಿಲ್ಲಾ ಮಟ್ಟದ ಸಮಿತಿಯು ಸ್ವೀಕೃತವಾಗಿರುವ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಸಾಲ ಮಂಜೂರಾತಿ ಬಗ್ಗೆ ಸೂಕ್ತ ನಿರ್ಣಯ ಕೈಗೊಂಡು ಅರ್ಹ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಅನುಮೋದಿಸುವುದು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಜಿಲ್ಲಾ ಸಮಿತಿಯು ಅನುಮೋದಿಸಿರುವ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು, ಸಾಲ ಮಂಜೂರಾತಿಗಾಗಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೆಂಗಳೂರು ಇವರಿಗೆ ಕಳುಹಿಸಿಕೊಡುವುದು.

ಜಿಲ್ಲಾ ಸಮಿತಿಯಿಂದ ಅನುಮೋದನೆಗೊಂಡು ಬಂದ ಪ್ರಸ್ತಾವನೆಗಳನ್ನು ನಿರ್ದೇಶನಾಲಯವು ಪರಿಶೀಲಿಸಿ ಮಂಜೂರಾತಿ ನೀಡಿದ ಪ್ರತಿ ಫಲಾನುಭವಿಗಳ ಹೆಸರಿಗೆ ಸಾಲದ ಮೊತ್ತಕ್ಕೆ ಒಂದು ಚೆಕ್‌ನ್ನು ಮಂಜೂರಾತಿ ಆದೇಶದೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಾಲ ಬಿಡುಗಡೆ ಮಾಡಲು ಕಳುಹಿಸಿಕೊಡುವುದು.

ರೂ.1.00 ಲಕ್ಷಕ್ಕಿಂತ ಹೆಚ್ಚಿನ ಸಾಲದ ಮೊತ್ತದ ಅರ್ಜಿಗಳನ್ನು ಮಂಜೂರಾತಿಗಾಗಿ NHFDC ಸಂಸ್ಥೆಗೆ ಯೋಜನಾ ಅನುಮೋದನೆ ಸಮಿತಿಯು ತನ್ನ ಶಿಫಾರಸ್ಸಿನೊಂದಿಗೆ ಕಳುಹಿಸಿ ಕೊಡಲಾಗುವುದು.

ಯೋಜನಾ ಅನುಮೋದನಾ ಸಮಿತಿಯು ಜಿಲ್ಲಾ ಸಮಿತಿಯಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಪಟ್ಟಿಮಾಡಿ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮಕ್ಕೆ ಕಳುಹಿಸಿ ಕೊಡುವುದು. ಸ್ವಯಂ ಸೇವಾ ಸಂಸ್ಥೆಗಳಿಗೆ/ಸ್ವಸಹಾಯ ಗುಂಪುಗಳಿಗೆ ರೂ.2.00 ಲಕ್ಷಗಳವರೆಗೆ ಇಲಾಖೆಯ ಮಟ್ಟದಲ್ಲಿ ಮಂಜೂರಾತಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು. ರೂ.2.00 ಲಕ್ಷಕ್ಕಿಂತ ಹೆಚ್ಚಿನ ಸಾಲ ಮಂಜೂರಾತಿಗೆ ಯೋಜನಾ ಅನುಮೋದನೆ ಸಮಿತಿಯು ತನ್ನ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು NHFDC ಗೆ ಕಳುಹಿಸಿಕೊಡಲಾಗುವುದು.

Karnataka State Government Disabled Employees Association
Renukaradhya S
Indresh R

<u>7. ಸಾಲ ನಿರ್ವಹಣೆ:</u>

ಜಿಲ್ಲಾ ಸಮಿತಿಯಿಂದ ಶಿಫಾರಸ್ಸುಗೊಂಡು ಬಂದಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಜಿಲ್ಲೆಗೆ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಫಲಾನುಭವಿಗಳ ಅರ್ಜಿಗಳನ್ನು ಅನುಮೋದನೆಯೊಡನೆ ಅರ್ಜಿಗಳ ಮೊದಲ ಪ್ರತಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿ ಕೊಡಬೇಕು.

1. ಅರ್ಜಿಯ ಎರಡನೇ ಪ್ರತಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿಯೇ ಉಳಿಸಿಕೊಳ್ಳಬೇಕು.

2. ನಿರ್ದೇಶನಾಲಯವು ಹೀಗೆ ಜಿಲ್ಲಾ ಕಛೇರಿಗಳಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ ಹಣ ಬಿಡುಗಡೆಗಾಗಿ NHFDC ಗೆ ಪ್ರಸ್ತಾವನೆ ಸಲ್ಲಿಸುವುದು.

3. NHFDC ಯಿಂದ ಹಣ ಬಿಡುಗಡೆಯಾದ ಕೂಡಲೇ ಫಲಾನುಭವಿಗಳ ಹೆಸರಿಗೆ ಪ್ರತ್ಯೇಕ ಚೆಕ್ ಬರೆದು ಮಂಜೂರಾತಿ ಆದೇಶದೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಲಾಗುವುದು.

4. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ನಿಯಮ (III) ರಲ್ಲಿ ತಿಳಿಸಿರುವಂತೆ ಸಾಲ ವಿತರಣೆ ಮಾಡುವ ದಿನ ಸಾಲದ ಭದ್ರತಾ ದಾಖಲಾತಿಗಳನ್ನು ಫಲಾನುಭವಿಗಳಿಂದ ಮತ್ತು ಸಂಬಂಧಿಸಿದ ಜಾಮೀನುದಾರರಿಂದ ಪಡೆದ ನಂತರವೇ ಚೆಕ್ಕನ್ನು ಬಿಡುಗಡೆ ಮಾಡುವುದು.

5. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಭದ್ರತಾ ದಾಖಲಾತಿಗಳನ್ನು ರಿಜಿಸ್ಟರ್‌ನಲ್ಲಿ ಕ್ರಮವಾಗಿ ನೋಂದಾಯಿಸಿಕೊಂಡು ಅರ್ಜಿಯೊಂದಿಗೆ ಸೂಕ್ತ ಭದ್ರತೆಯಲ್ಲಿಡುವುದು. ಮಂಜೂರಾದ ಸಾಲವನ್ನು ಒಂದು ತಿಂಗಳಿನೊಳಗೆ ಬಿಡುಗಡೆ/ ವಿತರಣೆ ಮಾಡಬೇಕು. ಸಾಲ ವಿತರಿಸಿದ ಬಗ್ಗೆ ಜಿಲ್ಲಾ

ಅಂಗವಿಕಲರ ಕಲ್ಯಾಣಾಧಿಕಾರಿಗಳು ಮಾಹಿತಿಗಾಗಿ ನಿರ್ದೇಶನಾಲಯಕ್ಕೆ ಪೂರ್ಣ ಪ್ರಮಾಣದ ವರದಿಯನ್ನು ಸಲ್ಲಿಸಬೇಕು. ಸಾಲದಿಂದ ಘಟಕ ಸ್ಥಾಪನೆ ಆಗುವಂತೆ ನೋಡಿಕೊಳ್ಳುವುದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಘಟಕ ತಪಾಸಣಾ ವರದಿಯನ್ನು ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸಬೇಕು.

ಸ್ವಯಂ ಸೇವಾ ಸಂಸ್ಥೆಗಳು/ಸ್ವಸಹಾಯ ಗುಂಪುಗಳು ತಾವು ಪಡೆದ ಸಾಲವನ್ನು ಫಲಾನುಭವಿಗಳಿಗೆ ನೀಡಿದ ಬಗ್ಗೆ ಪ್ರತಿ ಫಲಾನುಭವಿಗಳ ವಿವರಗಳನ್ನೊಳಗೊಂಡ ದಾಖಲೆಗಳನ್ನು/ವಹಿಯನ್ನು ನಿರ್ವಹಿಸಬೇಕು.

**8. ವಿಮಾ ಸೌಲಭ್ಯ:**

ಸಾಲದಿಂದ ಉತ್ಪನ್ನವಾದ ವಸ್ತುಗಳು/ಖರೀದಿಸಿದ ಹಸು/ಎತ್ತು/ಕುರಿ/ಎಮ್ಮೆ ಮತ್ತು ಯಂತ್ರೋಪಕರಣಗಳಿಗೆ ವಿಮೆ ಮಾಡಿಸಬೇಕು. ವಿಮೆಯ ಪ್ರೀಮಿಯಂ ಮೊತ್ತವನ್ನು ಫಲಾನುಭವಿಯೇ ಭರಿಸಬೇಕು ಹಾಗೂ ವಿಮೆಯನ್ನು ಕಾಲಕಾಲಕ್ಕೆ ನವೀಕರಿಸಿ ಚಾಲ್ತಿಯಲ್ಲಿಡುವುದು ಸಂಬಂದಿಸಿದ ಜಿಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಹೊಣೆಯಾಗಿರುತ್ತದೆ.

**9. ಸಾಲ ವಸೂಲಾತಿ:**

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವೈಯಕ್ತಿಕ ಸಾಲ ಪಡೆದ ಫಲಾನುಭವಿಗಳಿಂದ ಪ್ರತಿ ತಿಂಗಳು ಪಡೆಯಬೇಕಾದ ಸಾಲ ಮತ್ತು ಬಡ್ಡಿ ಹಣವನ್ನು ವಸೂಲಿ ಮಾಡುವುದು ಆದ್ಯ ಕರ್ತವ್ಯವಾಗಿರುತ್ತದೆ. ಅದೇ ರೀತಿ ಸ್ವಸಹಾಯ ಗುಂಪುಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಿರುವ ಮೈಕ್ರೋ ಸಾಲವನ್ನು ಸಹ ಹಿಂದಕ್ಕೆ ಪಡೆಯುವುದು ಅವರ ಆಧ್ಯ ಕರ್ತವ್ಯವಾಗಿರುತ್ತದೆ.

Karnataka State Government Disabled Employees Association
Renukaradhya S
Indresh R

**10. ಸಾಲ ಮರುಪಾವತಿ:**

ಸಾಲ ಮರುಪಾವತಿಯ ಅವಧಿಯನ್ನು ಗರಿಷ್ಠ 36 ತಿಂಗಳಿಗೆ ಸೀಮಿತಗೊಳಿಸಿದ್ದು(Including Moratoria Period) ತಿಂಗಳ ಮರುಪಾವತಿ ಮೊತ್ತವನ್ನು ಮಂಜೂರಾದ ಸಾಲಕ್ಕೆ ಅನುಗುಣವಾಗಿ ನಿಗಧಿಪಡಿಸಲಾಗುವುದು. ಮಂಜೂರಾತಿಯ ಆದೇಶಗಳಲ್ಲಿ ನಿಗದಿಪಡಿಸಿದ ಕಂತುಗಳ ಮೊತ್ತದನ್ವಯ ಅಸಲು ಮತ್ತು ಬಡ್ಡಿಯ ಮರುಪಾವತಿಯನ್ನು ಪಡೆಯುವುದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ನಿಗದಿತ ಕಂತುಗಳಿಗಿಂತ ಕಡಿಮೆ ಮರುಪಾವತಿ ಮಾಡಿದಲ್ಲಿ ಮರುಪಾವತಿಯ ಮೊತ್ತದಲ್ಲಿ ಮೊದಲು ಬಡ್ಡಿಗೆ ಜಮಾ ಮಾಡಿಕೊಳ್ಳಲಾಗುವುದು. ಉಳಿದ ಮೊತ್ತವನ್ನು ಅಸಲಿಗೆ ಜಮಾ ಮಾಡಿಕೊಳ್ಳುವುದು. ಮರುಪಾವತಿ ಮಾಡದೆ ಸುಸ್ತಿಯಾದ ಫಲಾನುಭವಿಗಳಿಗೆ ನೋಟೀಸ್ ಜಾರಿ ಮಾಡುವುದು. ನಿರಂತರ ಮೂರು ಕಂತುಗಳಲ್ಲಿ ಮರುಪಾವತಿ ಮಾಡದಿದ್ದಲ್ಲಿ ಕಾನೂನಿನ್ವಯ ಕ್ರಮವಹಿಸಬೇಕು. ಹಣ ಮರುಪಾವತಿ ಮಾಡದೆ ಬಾಕಿಯಿರುವ ಮೊತ್ತದ ಮೇಲೆ ಶೇ.2 ರಷ್ಟು ಚಕ್ರ ಬಡ್ಡಿಯನ್ನು (Penal Interest) ಹಾಕಲಾಗುವುದು. ಸ್ವಯಂ ಸೇವಾ ಸಂಸ್ಥೆಗಳು/ಸ್ವಸಹಾಯ ಗುಂಪುಗಳು ಇಲಾಖೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ನಿಗದಿತ ಅವಧಿಯೊಳಗೆ ಸಾಲವನ್ನು ಮರುಪಾವತಿ ಮಾಡಬೇಕು.

**11. ಸಾಲ ಖಾತೆಗಳ ನಿರ್ವಹಣೆ;-**

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಫಲಾನುಭವಿಯ ಸಾಲದ ಖಾತೆಯ ವಿವರಗಳನ್ನು ಇಲಾಖೆಯ ಸರಬರಾಜು ಮಾಡಿದ ಸಾಲದ ಖಾತೆ ಪುಸ್ತಕದಲ್ಲಿ, ಅಥವಾ ನಿಗದಿತ ನಮೂನೆಯಲ್ಲಿ ಗಣಕೀಕರಿಸಿ ಸಾಲ ಮಂಜೂರಾದಂತೆ ಕ್ರಮವಾಗಿ ದಾಖಲಿಸಿರಬೇಕು. ಮತ್ತು ಫಲಾನುಭವಿಯಿಂದ ಪಡೆದ ಸಾಲದ ಮತ್ತು

ಪಾವತಿಯ ಕಂತುಗಳ ಮೊತ್ತವನ್ನು ದಾಖಲಿಸಬೇಕು ಇದರ ಮೂಲಕ ಡಿ.ಸಿ.ಬಿ.ಯೊಂದಿಗೆ ವಸೂಲಾದ ಮೊತ್ತವನ್ನು ತಲುಪಿಸುವುದು. ಈ ಬಗ್ಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಸೂಕ್ತ ಮೇಲ್ವಿಚಾರಣೆ ಮಾಡಬೇಕು.

**12. ಅನುಸರಣೆ: (Follow Up):-**

ಸಾಲ ಪಡೆದ ಫಲಾನುಭವಿಗಳ ಘಟಕಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲನಾ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಬೇಕು.

ಈ ಸಾಲದ ಯೋಜನೆಯ ಪ್ರಗತಿಯ ವರದಿಯನ್ನು ನಿರ್ದೇಶನಾಲಯಕ್ಕೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಳುಹಿಸಬೇಕು. ಜಿಲ್ಲಾ ಮಟ್ಟದ ಸಮಿತಿಯನ್ನು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ಸಾಲ ಮಂಜೂರಾತಿ ಪ್ರಗತಿಯನ್ನು ಮತ್ತು ಮರುಪಾವತಿ ಪ್ರಗತಿಯನ್ನು ಪರಿಶೀಲಿಸಬೇಕು. ಸಭೆಯ ನಡುವಳಿಗಳನ್ನು ನಿಗಮಕ್ಕೆ ಕಳುಹಿಸಬೇಕು.

**13. ಇತರೆ ಅಂಶಗಳು:-**

ಸಾಲದಿಂದ ಸ್ಥಾಪಿಸಲಾದ/ಘಟಕಗಳ ಮುಂದೆ/ವಾಹನ/ಯಂತ್ರೋಪಕರಣಗಳ ಮೇಲೆ ಆರ್ಥಿಕ ನೆರವು, ವಿಕಲಚೇತನರ ಹಾಗೂ ಹಿರಿಯನಾಗರೀಕರ ಸಬಲೀಕರಣ ಇಲಾಖೆಯಿಂದ ಎಂದು ದಪ್ಪ ಅಕ್ಷರಗಳಲ್ಲಿ ಕಡ್ಡಾಯವಾಗಿ ಬರೆಸಬೇಕು.

ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮ ಆಗಿಂದಾಗ್ಗೆ ಹೊರಡಿಸುವ Lending Policy and procedure ನಲ್ಲಿ ತಿಳಿಸುವ ಎಲ್ಲಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.

Karnataka State Government Disabled Employees Association
Renukaradhya S
Indresh R

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2007-08ನೇ ಸಾಲಿನಿಂದ NPRPD ಯೋಜನೆಯನ್ನು ಪುನರ್ ಪರಿಶೀಲಿಸಿ ಹೊಸ ಮಾರ್ಗಸೂಚಿಗಳೊಂದಿಗೆ ಅಂಗವಿಕಲರಿಗಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಮಮಇ.320.ಪಿಹೆಚ್‌ಪಿ.2006 (ಭಾ), ದಿ: 22-09-2000.
2. ಸಹ ಕಾರ್ಯದರ್ಶಿ, ಯೋಜನಾ ಆಯೋಗ, ಭಾರತ ಸರ್ಕಾರ ಇವರ ಅ.ಸ.ಪತ್ರ ಸಂಖ್ಯೆ: ವಿನಿ(ಪಿ)2/ಎಂ/2001-ಎಸ್‌ಪಿಸಿ(ಸಂಪುಟ-III), ದಿನಾಂಕ: 19-04-2002.
3. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿ: 07-07-2007 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

**ಪ್ರಸ್ತಾವನೆ:**

2001-01ನೇ ಸಾಲಿನಲ್ಲಿ ಭಾರತ ಸರ್ಕಾರವು ಕೇಂದ್ರ ವಲಯ ಅಂಗವಿಕಲರಿಗಾಗಿ ಪುನರ್ವಸತಿ ಸೇವೆಗಳನ್ನು ಒದಗಿಸುವ ರಾಷ್ಟ್ರೀಯ ಕಾರ್ಯಕ್ರಮಗಳನ್ನು ರೂಪಿಸಿತು. ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಸದರಿ ಯೋಜನೆಯನ್ನು ರಾಜ್ಯ ಸರ್ಕಾರದ ಮೂಲಕ ಮೈಸೂರು, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಜಾರಿಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದು (ದಿನಾಂಕ: 31-10-2004ರ ವರೆಗೆ) 2004-05ನೇ ಸಾಲಿನವರೆಗೆ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಅನುಷ್ಠಾನಗೊಳಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ಈ ಯೋಜನೆಯನ್ನು 1999-2000 ರಿಂದ ಅನುಷ್ಠಾನಗೊಳಿಸಲು ಮತ್ತು ರಾಜ್ಯ ವಲಯ ಯೋಜನೆಯಡಿ ಅನುದಾನವನ್ನು ಕಲ್ಪಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು 1999 ರಿಂದ 2002ರ ವರೆಗೆ ಹೆಚ್ಚುವರಿ ಕೇಂದ್ರ ಸಹಾಯಧನವನ್ನು ಬಿಡುಗಡೆ ಮಾಡಿದ್ದು 10ನೇ ವಾರ್ಷಿಕ ಯೋಜನೆಯ ನಂತರ ರಾಜ್ಯ ಸರ್ಕಾರವೇ ಅನುದಾನಕ್ಕೆ ಅವಕಾಶ ಕಲ್ಪಿಸಿಕೊಳ್ಳಬೇಕೆಂದು ಭಾರತ ಸರ್ಕಾರ ಸೂಚಿಸಿದೆ.

2007-08ರ ಸಾಲಿನ ಆಯವ್ಯಯ ಭಾಷಣದಲ್ಲಿ 2001-02ರಲ್ಲಿ ಅಂಗವಿಕಲರಿಗಾಗಿ ಜಾರಿಗೊಳಿಸುವ NPRPD ಯೋಜನೆಯನ್ನು ಪುನರ್ ಪರಿಶೀಲಿಸಿ ಹೊಸ ಮಾರ್ಗದರ್ಶಿ ಸೂತ್ರಗಳೊಂದಿಗೆ ರಾಜ್ಯ ವಲಯದ ಹೊಸ ಯೋಜನೆಯಾಗಿ ಅನುಷ್ಠಾನಗೊಳಿಸಲಾಗುವುದೆಂದು ಸೂಚಿಸಿದ್ದು ಅಂಗವಿಕಲರಿಗಾಗಿ ಎನ್‌ಪಿಆರ್‌ಪಿಡಿ ಕಾರ್ಯಕ್ರಮ ಯೋಜನೆ ಲೆಕ್ಕಶೀರ್ಷಿಕೆ 2235-02-101-0-53 (ಯೋಜನೆ) ಅಡಿಯಲ್ಲಿ ರೂ. 592 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಅಧಿಕಾರಯುಕ್ತ ಸಮಿತಿಯ ಅನುಮೋದನೆಗೆ ಮಂಡಿಸಿದ್ದ ಈ ಯೋಜನೆಯನ್ನು ದಿನಾಂಕ: 07-07-2007 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ NPRPD ಯೋಜನೆಯನ್ನು ಪುನರ್ ಪರಿಶೀಲಿಸಿ ಹೊಸ ಮಾರ್ಗಸೂಚಿಗಳನ್ನು ರೂಪಿಸಿ ಪರಿಷ್ಕೃತ ಮಾರ್ಗಸೂಚಿಗಳೊಂದಿಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಿರುತ್ತದೆ. ಅದರಂತೆ 2007-08ನೇ ಸಾಲಿನಿಂದ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮವನ್ನು 29 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಮಮಇ.237.ಪಿಹೆಚ್‌ಪಿ.2007**
**ಬೆಂಗಳೂರು, ದಿನಾಂಕ: 16-08-2007**

ಅಂಗವಿಕಲರಿಗಾಗಿ ಎನ್‌ಪಿಆರ್‌ಪಿಡಿ ಕಾರ್ಯಕ್ರಮ ಯೋಜನೆಯನ್ನು ಪುನರ್ ಪರಿಶೀಲಿಸಿ ಈ ಕೆಳಗೆ ಸೂಚಿಸಿದ ಅಂಗವಿಕಲರಿಗಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮವೆಂಬ ಹೊಸ ಯೋಜನೆಯನ್ನು ಮಾರ್ಗಸೂಚಿಯನ್ವಯ ರಾಜ್ಯದ ಎಲ್ಲಾ 29 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

Karnataka State Government Disabled Employees Association
Rohit Kulkarni
Indresh R S

## ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮದ ಮಾರ್ಗಸೂಚಿಗಳು

1. ಈ ಯೋಜನೆಯನ್ನು ರಾಜ್ಯದ ಎಲ್ಲಾ 29 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ರಾಜ್ಯ ವಲಯದ ಯೋಜನೆಯಡಿ ಅನುಷ್ಠಾನಗೊಳಿಸಲಾಗುವುದು.

2. ಪ್ರತಿ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಸ್ಥಳೀಯ ಸಮರ್ಥ ಅಂಗವಿಕಲರೊಬ್ಬರನ್ನು ಗ್ರಾಮ ಪುನರ್ವಸತಿ ಕಾರ್ಯಕರ್ತರೆಂದು ಗೌರವಧನ ಆಧಾರದ ಮೇಲೆ ನೇಮಕ ಮಾಡಲಾಗುವುದು. ಇವರು ಆ ಗ್ರಾಮದಲ್ಲಿರುವ ಅಂಗವಿಕಲರ ಸಮಸ್ಯೆ ಹಾಗೂ ಅಗತ್ಯತೆಗಳನ್ನು ಅರಿತು ಸೌಲಭ್ಯಗಳಿಗನುಗುಣವಾಗಿ ಸಂಬಂಧಿಸಿ ಇಲಾಖೆಗಳನ್ನು ಸಂಪರ್ಕಿಸಿ ಅಥವಾ ಸಂಪರ್ಕಿಸಲು ಮಾರ್ಗದರ್ಶನ ನೀಡತಕ್ಕದ್ದು. ಇವರಿಗೆ ತಿಂಗಳಿಗೆ ರೂ. 700/- ಗಳ ಗೌರವಧನವನ್ನು ಹಾಗೂ ರೂ. 50/- ಪ್ರವಾಸ, ಲೇಖನ ಸಾಮಗ್ರಿ ವೆಚ್ಚ ನೀಡಲಾಗುತ್ತದೆ. ಇವರು ನಿರ್ವಹಿಸಬೇಕಾದ ಕರ್ತವ್ಯಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ನಮೂದಿಸಿದೆ.

   ಇದೇ ರೀತಿ ಪ್ರತಿ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ಅಂಗವಿಕಲರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) ರೆಂದು ನೇಮಕ ಮಾಡಲಾಗುವುದು. ಇವರಿಗೆ ತಿಂಗಳಿಗೆ ರೂ. 1800/- ಗಳ ಗೌರವ ಧನ ಹಾಗೂ ರೂ. 200/- ಪ್ರವಾಸ, ಲೇಖನ ಸಾಮಗ್ರಿ ವೆಚ್ಚ ನೀಡಲಾಗುವುದು. ಜನರು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳಡಿ ಬರುವ ಅಂಗವಿಕಲರ ಅಗತ್ಯತೆಗಳನ್ನು ಪೂರೈಸಲು ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಹೊಂದಲು ಬದ್ಧರಾಗಿರುತ್ತಾರೆ. ಆ ತಾಲ್ಲೂಕಿನ ಎಲ್ಲಾ ವಿ.ಆರ್.ಡಬ್ಲ್ಯೂ.ಗಳ (VRW) ಕಾರ್ಯವನ್ನು ಇವರು ಪರಿಶೀಲಿಸುತ್ತಾರೆ. ಇವರು ನಿರ್ವಹಿಸುವ ಕರ್ತವ್ಯಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ನಮೂದಿಸಿದೆ.

3. ಈ ಎಲ್ಲಾ ಕಾರ್ಯಚಟುವಟಿಕೆಗಳ ಉಸ್ತುವಾರಿಗಾಗಿ ರಾಜ್ಯ ಮಟ್ಟದಲ್ಲಿ ಯೋಜನಾ ಸಂಯೋಜಕರೊಬ್ಬರನ್ನು ಗೌರವಧನ ಆಧಾರದ ಮೇಲೆ ಸೇವೆ ಪಡೆಯುವ ಅಗತ್ಯವಿರುತ್ತದೆ. ಇವರು ಅಂಗವಿಕಲರ ಕ್ಷೇತ್ರದಲ್ಲಿ ಅನುಭವ ಹೊಂದಿರಬೇಕು.

4. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯ್ತಿಯ ಕಾರ್ಯನಿರ್ವಾಹಣಾಧಿಕಾರಿ ಅಧ್ಯಕ್ಷತೆಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳ ಆಯ್ಕೆ ಸಮಿತಿಯನ್ನು ರಚಿಸಿದ್ದು ಇದೇ ಸಮಿತಿಯು ಉಸ್ತುವಾರಿ ಕೆಲಸವನ್ನು ಸಹ ನಿರ್ವಹಿಸುತ್ತದೆ. ಸಮಿತಿಗಳ ವಿವರಗಳನ್ನು ಅನುಬಂಧ-3 ರಲ್ಲಿ ತಿಳಿಸಿದೆ.

5. ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ. ವಿವರಗಳನ್ನು ಅನುಬಂಧ - 4 ರಲ್ಲಿ ನಮೂದಿಸಿದೆ.

6. ಈ ಯೋಜನೆಗೆ ಒಟ್ಟು ವಾರ್ಷಿಕ ವೆಚ್ಚ ರೂ. 592.00 ಲಕ್ಷಗಳಾಗುತ್ತದೆ. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-53 ಯೋಜನೆ ಇದರಡಿ ಭರಿಸಲಾಗುವುದು. ಯೋಜನೆಯ ಒಟ್ಟು ಖರ್ಚಿನ ವಿವರಗಳನ್ನು ಅನುಬಂಧ-5 ರಲ್ಲಿ ನಮೂದಿಸಿದೆ.

7. ಈ ಯೋಜನೆಯ ಅನುಷ್ಠಾನದಿಂದ ಗ್ರಾಮ ಪಂಚಾಯ್ತಿ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಅಂಗವಿಕಲರ ಸಮಸ್ಯೆಗಳಿಗೆ ನೇರವಾಗಿ ಸ್ಪಂದಿಸಲು ಅನುಕೂಲವಾಗುವಂತಹ ವ್ಯವಸ್ಥೆಯನ್ನು ಸಿದ್ಧಪಡಿಸಿದ್ದು ಒಟ್ಟು 5828 ಸಮರ್ಥ ಅಂಗವಿಕಲರಿಗೆ ಗೌರವಧನ ಆಧಾರದ ತಾತ್ಕಾಲಿಕ ಉದ್ಯೋಗಾವಕಾಶವನ್ನು ಕಲ್ಪಿಸಿದಂತಾಗುತ್ತದೆ. ಅಂಗವಿಕಲರ ಸಮಸ್ಯೆಗಳನ್ನು ಹಾಗೂ ಅಗತ್ಯತೆಗಳ ಬಗ್ಗೆ ಅಂಗವಿಕಲರೇ ಅರಿತು ಕ್ರಮ ಕೈಗೊಳ್ಳುವುದರಿಂದ ವಿವಿಧ ಇಲಾಖೆಗಳಲ್ಲಿರುವ ಸೌಲಭ್ಯಗಳನ್ನು ಸಕಾಲಕ್ಕೆ ಅಂಗವಿಕಲರಿಗೆ ತಲುಪಿಸಲು ವ್ಯವಸ್ಥಿತ ಪಡೆಯೊಂದನ್ನು ಸಿದ್ಧಪಡಿಸಿದಂತಾಗಿ ಅಂಗವಿಕಲರು ಸಮಾಜದ ಮುಖ್ಯವಾಹಿನಿಗೆ ಸೇರಲು ಅನುಕೂಲವಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ವಿ. ಶಿವಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ - 1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indiresh R

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ ಆದೇಶದ 250 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

## ಸರ್ಕಾರದ ಆದೇಶ ಸಂ: ಮಮಇ/237/ಪಿ.ಹೆಚ್.ಪಿ/2007/ದಿ:16-8-2007ಕ್ಕೆ

## ಅನುಬಂಧ – 1

### ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆಯರು (VRWs) ಇವರ ಕರ್ತವ್ಯ ಪಟ್ಟಿ

1. ಇವರು ಅಂಗವಿಕಲರಾಗಿದ್ದು ಸ್ಥಳೀಯ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು.
2. ಇವರು 18-45 ವರ್ಷದ ವಯೋಮಿತಿಯಲ್ಲಿದ್ದು ಆರೋಗ್ಯವಂತರಾಗಿರಬೇಕು.
3. ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ ವಿವಿಧ ಅಂಗವಿಕಲರನ್ನು ಭೇಟಿ ಮಾಡಿ, ಮನೆ ಮನೆಗೆ ಸಮೀಕ್ಷೆಯನ್ನು ನಡೆಸುವುದು.
4. ಗುರ್ತಿಸಲ್ಪಟ್ಟ ಅಂಗವಿಕಲರ ವೈಯಕ್ತಿಕ ವಿವರಗಳನ್ನು ನಿಗದಿತ ನಮೂನೆಯಲ್ಲಿ ಪಡೆದು ಪ್ರತ್ಯೇಕ ಕಡತಗಳಲ್ಲಿ ನಿರ್ವಹಿಸಬೇಕು.
5. ಮೊಟ್ಟ ಮೊದಲಿಗೆ ಗುರ್ತಿನ ಚೀಟಿ ಇಲ್ಲದಂತಹ ಅಂಗವಿಕಲರ ಪಟ್ಟಿಮಾಡಿ ಅವರಿಗೆ ಗುರ್ತಿನ ಚೀಟಿ ನೀಡುವಂತೆ ವ್ಯವಸ್ಥೆ ಮಾಡುವುದು.
6. ಮನೆ ಮನೆಗೆ ಭೇಟಿ ನೀಡಿ ಅಂಗವಿಕಲತೆ ಬಗ್ಗೆ ಮೊದಲು ಕುಟುಂಬ ಸದಸ್ಯರಲ್ಲಿ ಅದರಲ್ಲೂ ತಾಯಂದಿರಲ್ಲಿ ಅರಿವು ಮೂಡಿಸಬೇಕು.
7. ನಂತರ ಅಂಗವಿಕಲರ ಬಗ್ಗೆ ಅರಿವು ಮೂಡಿಸುವಂತಹ ಶಿಬಿರಗಳನ್ನು ಸ್ಥಳೀಯರ ಸಹಾಯದಿಂದ (ಅಂಗನವಾಡಿ ಕಾರ್ಯಕರ್ತೆಯರ, ANM ಗಳ ಸಹಕಾರದೊಂದಿಗೆ) ಏರ್ಪಡಿಸಬೇಕು.
8. ಅಗತ್ಯಕ್ಕೆ ತಕ್ಕಂತೆ ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ಪೂರೈಸಲು ಕ್ರಮ ಕೈಗೊಳ್ಳುವುದು. ಈ ಬಗ್ಗೆ ತುಲನೆ ಮಾಡಿ ಅಗತ್ಯತೆಯನ್ನು ಸಂಬಂಧಿತ MRWsಗಳಿಗೆ ಪ್ರತಿ 3 ತಿಂಗಳಿಗೊಮ್ಮೆ ಮಾಡಬೇಕು.
9. ಅಂಗವಿಕಲರ ಸ್ವಸಹಾಯ ಗುಂಪುಗಳನ್ನು ರಚಿಸಲು ಕ್ರಮ ಕೈಗೊಳ್ಳುವುದು ಮತ್ತು ಅಂಗವಿಕಲರಿಗೆ ಅರಿವು ಮೂಡಿಸಿ ಗುರ್ತಿಸಲ್ಪಟ್ಟ ಸ್ವಯಂ ಸೇವಾ ಸಂಸ್ಥೆಯೊಂದಿಗೆ ಗುಂಪು ರಚಿಸಲು ಸಹಕರಿಸುವುದು.
10. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಶಾಲೆಗೆ ಸೇರಿದ ಅಥವಾ ಶಾಲೆಯನ್ನು ಮಧ್ಯಾಂತರದಲ್ಲಿಯೇ ಬಿಟ್ಟಂತಹ ಅಂಗವಿಕಲ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು.
11. ತೀವ್ರತರ ಅಂಗವಿಕಲತೆಯಿಂದ ಬಳಲುತ್ತಿರುವ ಅಂಗವಿಕಲ ಮಕ್ಕಳಿಗೆ / ವ್ಯಕ್ತಿಗಳಿಗೆ ಸಮೀಪದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತಹ ಸಲಹಾ ಸೇವೆಯನ್ನು (Referral Services) ಮಾಡಬೇಕು.
12. ಸ್ಥಳೀಯ ಗ್ರಾಮ ಪಂಚಾಯ್ತಿಯ ಸಹಾಯದಿಂದ ಅಂಗವಿಕಲರಿಗೆ ಶಿಕ್ಷಣ, ವೈದ್ಯೋಪಚಾರ, ವಸತಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ವಿವರಗಳನ್ನು ಅಂಗವಿಕಲತೆವಾರು ನಿರ್ವಹಿಸುವುದು.
13. ಸರ್ಕಾರದಿಂದ ಅಂಗವಿಕಲರಿಗಾಗಿ ಸಿಗುವಂತಹ ಸೌಲಭ್ಯಗಳ / ಸೌಕರ್ಯಗಳ ಬಗ್ಗೆ ವ್ಯಾಪಕ ಅರಿವು ಮೂಡಿಸುವುದು.
14. ಈ ಎಲ್ಲಾ ಸೇವೆಗಳ ವಿವರಗಳನ್ನು ಅಂಗವಿಕಲತೆಯ ವರ್ಗವಾರು ನಿರ್ವಹಿಸಿ ಪ್ರತಿ ತಿಂಗಳ ಕೊನೆಯಲ್ಲಿ MRWಗೆ ವರದಿ ಮಾಡಿ ಪ್ರತಿಯನ್ನು ಕಡತದಲ್ಲಿ ನಿರ್ವಹಿಸಬೇಕು.

Karnataka State Government Disabled Employees Association
Renukaradhya S
Indresh R

15. ಅಂಗವಿಕಲರಿಗೂ ಹಾಗೂ ಗ್ರಾಮ ಪಂಚಾಯ್ತಿಯ ನಡುವೆ ಸೇತುವೆಯಂತೆ ಕಾರ್ಯ ನಿರ್ವಹಿಸಿ ತಮ್ಮ ವ್ಯಾಪ್ತಿಯಲ್ಲಿರುವ ಅಂಗವಿಕಲರ ಸಮಸ್ಯೆಗಳ ಬಗ್ಗೆ ಮೂಲಭೂತ ಮಾಹಿತಿಯನ್ನು ಸಿದ್ಧಪಡಿಸಿಕೊಂಡು ಪ್ರತಿ ಮೂರು ತಿಂಗಳಿಗೊಮ್ಮೆ ಮಾಹಿತಿಯನ್ನು ಉತ್ತಮಪಡಿಸಿಕೊಂಡಿರಬೇಕು.

16. ಇಲಾಖೆಯ ಯೋಜನೆಗಳ ಉಪಯೋಗ ಪಡೆದಿದ್ದಲ್ಲಿ ಅವುಗಳ ಮರುಪಾವತಿ ಬಗ್ಗೆ ದಾಖಲೆಗಳನ್ನು ಒಟ್ಟು ಫಲಾನುಭವಿಗಳೊಂದಿಗೆ ಸತತ ಸಂಪರ್ಕ ಇಟ್ಟುಕೊಂಡು ಅವರಿಂದ ಕೆಲಸಗಳನ್ನು ನಿರ್ವಹಿಸುವುದು.

17. ಸ್ಥಳೀಯ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕ ಇಟ್ಟು ಅವುಗಳ ಪ್ರಯೋಜನವನ್ನು ಪಡೆಯುವುದು.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಸರ್ಕಾರದ ಆದೇಶ ಸಂ: ಮಮಇ/237/ಪಿ.ಹೆಚ್.ಪಿ/2007/ದಿ: 16-8-2007ಕ್ಕೆ**

## ಅನುಬಂಧ-2

### ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (VRWs) ಗಳ ಕರ್ತವ್ಯ ಪಟ್ಟಿ

1. ಇವರು ಪದವೀಧರರಾಗಿದ್ದು ಅಂಗವಿಕಲ ವ್ಯಕ್ತಿಯಾಗಿರಬೇಕು. ಇವರು ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ವಾಸಿಸುತ್ತಿರಬೇಕು.
2. ಇವರು 18-45 ವರ್ಷ ವಯೋಮಿತಿಯವರಾಗಿದ್ದು ಆರೋಗ್ಯವಂತರಾಗಿರಬೇಕು.
3. ತಾಲ್ಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮ ಪಂಚಾಯ್ತಿಯಲ್ಲಿನ ಅಂಗವಿಕಲರ ಮೂಲಭೂತ ಮಾಹಿತಿಯನ್ನು VRWsಗಳಿಂದ ಪಡೆದು ಪರಿಷ್ಕರಿಸಿ ಪಂಚಾಯ್ತಿವಾರು ಹಾಗೂ ಅಂಗವಿಕಲತೆವಾರು ಸಿದ್ಧಪಡಿಸಿ ನಿರ್ವಹಿಸುವುದು.
4. ವಾರಕ್ಕೆ ಕನಿಷ್ಠ 3-4 ಪಂಚಾಯ್ತಿಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳ ಬಗ್ಗೆ VRWಗಳಿಂದ ಮಾಹಿತಿ ಪಡೆದು ಪರಿಹಾರಿಕ ಕ್ರಮವನ್ನು ಕೈಗೊಳ್ಳುವುದು.
5. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳೊಂದಿಗೆ ಸತತ ಸಂಪರ್ಕವಿಟ್ಟುಕೊಂಡು ಅರ್ಹ ಅಂಗವಿಕಲರಿಗೆ ಸಾಧನ ಸಲಕರಣೆ, ಗುರ್ತಿನ ಚೀಟಿ, ವೈದ್ಯಕೀಯ ಪ್ರಮಾಣ ಪತ್ರ ಮತ್ತು ಬಸ್‌ಪಾಸ್, ಶಿಕ್ಷಣ, ವಸತಿ ಹಾಗೂ ಉದ್ಯೋಗ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು.
6. VRWs ಗಳಿಗೆ ಗ್ರಾಮೀಣ ಮಟ್ಟದಲ್ಲಿ ಜಾಗೃತಿ ಶಿಬಿರಗಳನ್ನು ಏರ್ಪಡಿಸಲು ಸಹಕರಿಸುವುದರೊಂದಿಗೆ ಅದೇ ರೀತಿಯ ಜಾಗೃತಿ ಶಿಬಿರಗಳನ್ನು ಸ್ಥಳೀಯರ ಸಹಕಾರದೊಂದಿಗೆ ಏರ್ಪಡಿಸಿ DDWO ಗಳಿಗೆ ವರದಿ ಮಾಡುವುದು.
7. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಸ್ವಸಹಾಯ ಗುಂಪನ್ನು ರಚಿಸುವುದು, ರಚನೆಯಾದ ಸ್ವಸಹಾಯ ಗುಂಪುಗಳ ಬಲವರ್ಧನೆ ಹಾಗೂ ಅವುಗಳಿಗೆ ವಿವಿಧ ಇಲಾಖೆಗಳಿಂದ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಕ್ರಮ ಕೈಗೊಳ್ಳುವುದು.
8. ತಾಲ್ಲೂಕಿನ ಉದ್ಯೋಗಕ್ಕಾಗಿ ನೋಂದಾಯಿಸಿರುವ ಅಂಗವಿಕಲರ ವಿವರಗಳನ್ನು ಪ್ರತ್ಯೇಕ ನಿರ್ವಹಿಸಿ ಅವರುಗಳಿಗೆ ಇಲಾಖಾ ವತಿಯಿಂದ ಹಮ್ಮಿಕೊಂಡಿರುವ ಉದ್ಯೋಗ ಸಿಗುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳೊಂದಿಗೆ ಸಹಕರಿಸುವುದು.
9. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯ್ತಿ ನಡುವೆ ಸೇತುವೆಯಂತಿದ್ದು ತಾಲ್ಲೂಕು ಪಂಚಾಯ್ತಿ ವತಿಯಿಂದ ಅಂಗವಿಕಲರಿಗೆ ಸಲ್ಲಿಸಬೇಕಾದ ಶೇಕಡ 3 ರಷ್ಟು ಆಯವ್ಯಯವನ್ನು ಅವರಿಗೆ ತಲುಪುವಂತೆ ಮಾಡುವಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿರವರೊಂದಿಗೆ ಸಹಕರಿಸುವುದು. ಈ ಬಗ್ಗೆ VRWಗಳಿಗೆ ಮಾರ್ಗದರ್ಶನ ನೀಡುವುದು.

Karnataka State Government Disabled Employees Association
Renukaradhya S
Indresh R

10. ಸ್ವಯಂ ಉದ್ಯೋಗಕ್ಕಾಗಿ ಅಂಗವಿಕಲರು ಇಲಾಖೆಯಿಂದ ಪಡೆದ ಸಾಲದ ಸದ್ವಿನಿಯೋಗವಾಗುತ್ತಿದೆಯೇ ಎಂಬುದರ ಬಗ್ಗೆ ಫಲಾನುಭವಿಗಳು ಸಾಲ ಮರುಪಾವತಿಯನ್ನು ಸಕಾಲದಲ್ಲಿ ಮಾಡುವಂತೆ ಕ್ರಮ ಕೈಗೊಳ್ಳಬೇಕು.

11. ಸ್ಥಳೀಯ ಸಂಘ ಸಂಸ್ಥೆಗಳ ಹಾಗೂ ಇತರೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಮಾಹಿತಿ ಇಟ್ಟುಕೊಳ್ಳುವುದು.

12. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ VRW ನಡುವೆ ಸಮನ್ವಯ ಸಾಧಿಸಿ ಗ್ರಾಮೀಣ ಮಟ್ಟದಲ್ಲಿನ ಸಮಸ್ಯೆಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಮುಟ್ಟಿಸಿ ಅವುಗಳಿಗೆ ಪರಿಹಾರ ಸಿಗುವಂತೆ ಹಿಂಬಾಲಿಕ ಕ್ರಮ ಕೈಗೊಳ್ಳಬೇಕು.

13. VRWಗಳ ಕಾರ್ಯಾಚರಣೆಯನ್ನು ಸತತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಸಕಾಲಿಕ ಮಾರ್ಗದರ್ಶನ ತರಬೇತಿ ನೀಡುವುದು.

14. ನಿಗದಿತ ನಮೂನೆ ಹಾಗೂ ರಿಜಿಸ್ಟರ್‌ಗಳಲ್ಲಿ ಮಾಹಿತಿಯನ್ನು ನಿರ್ವಹಿಸಿ ಪ್ರತಿ ತಿಂಗಳು VRWಗಳಿಂದ ಪಡೆದ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ವರದಿ ಮಾಡುವುದು.

15. ಅವರು ತಹಸೀಲ್ದಾರ್ ಕಚೇರಿಯಲ್ಲಿ ಸ್ಥಾನಿಕರಾಗಿರುತ್ತಾರೆ.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಸರ್ಕಾರದ ಆದೇಶ ಸಂ: ಮಮಇ/237/ಪಿ.ಹೆಚ್.ಪಿ. 2007/ದಿ: 16-8-2007ಕ್ಕೆ ಅನುಬಂಧ - 3

**I. VRWs ಮತ್ತು MRWsಗಳನ್ನು ಆಯ್ಕೆ ಮಾಡಲು ತಾಲ್ಲೂಕು ಮಟ್ಟದಲ್ಲಿ ರಚಿಸಿರುವ ಸಮಿತಿ:**

| | | |
|---|---|---|
| 1. | ಕಾರ್ಯ ನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಅಧ್ಯಕ್ಷರು |
| 2. | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 3. | ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ | ಸದಸ್ಯರು |
| 4. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| 5. | ತಾಲ್ಲೂಕು ಮಟ್ಟದ ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ (ಕಾರ್ಯನಿರ್ವಹಣಾಧಿಕಾರಿಗಳು ಇವರನ್ನು ನಾಮ ನಿರ್ದೇಶನ ಮಾಡಬೇಕು) | ಸದಸ್ಯರು |

ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸಿ, ಈ ಸಮಿತಿಯು 18-45 ವರ್ಷ ವಯಸ್ಸಿನ ಸ್ಥಳೀಯ ಎಸ್.ಎಸ್.ಎಲ್.ಸಿ. ಪಾಸ್ ಆದ ಅಂಗವಿಕಲರನ್ನು ಯೋಗ್ಯತೆಯನುಸಾರ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನಾಗಿ (VRWS) ಹಾಗೂ ಪದವಿ ಹೊಂದಿದ ಅಂಗವಿಕಲರನ್ನು ವಿವಿಧ ಉದ್ದೇಶ ಕಾರ್ಯಕರ್ತರನ್ನಾಗಿ (MRW) ಆಯ್ಕೆ ಮಾಡಲಾಗುವುದು.

**II. ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿ:**

| | | |
|---|---|---|
| 1. | ಕಾರ್ಯನಿರ್ವಹಣಾಧಿಕಾರಿಗಳು | ಅಧ್ಯಕ್ಷರು |
| 2. | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 3. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | ಸದಸ್ಯರು |
| 4. | ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ | ಸದಸ್ಯರು |

5. ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ — ಸದಸ್ಯರು

6. ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು — ಸದಸ್ಯ ಕಾರ್ಯದರ್ಶಿಗಳು

**ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯಗಳು:**

- ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ ಅಗತ್ಯ ಮಾರ್ಗದರ್ಶನ ನೀಡುವುದು.
- ವಿವಿಧೋದ್ದೇಶ ಕಾರ್ಯಕರ್ತರ ಕಾರ್ಯ ಚಟುವಟಿಕೆಗಳನ್ನು ಪರಾಮರ್ಶಿಸಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಶಿಕ್ಷಣ, ಆರೋಗ್ಯ, ಪುನರ್ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.
- ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ವ್ಯವಸಾಯ ಮುಂತಾದ ಎಲ್ಲಾ ಇಲಾಖೆಗಳ ಕಲ್ಯಾಣ ಯೋಜನೆಗಳಡಿಯಲ್ಲಿ ಸವಲತ್ತುಗಳನ್ನು ಅಂಗವಿಕಲರಿಗೆ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು. (ಪ್ರತೀ ಇಲಾಖೆಯ ಕಾರ್ಯಕ್ರಮಗಳಲ್ಲಿ ಶೇಕಡ 3% ರಷ್ಟು ಅಂಗವಿಕಲರಿಗೆ ಸಿಗಬೇಕು)
- ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಗಳನ್ನು ಏರ್ಪಡಿಸಿ ಅಂಗವಿಕಲರಿಗೆ ಶಿಕ್ಷಣ, ಸ್ವಯಂ ಉದ್ಯೋಗ, ಮತ್ತಿತರ ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗೆ ಅವಕಾಶ ಕಲ್ಪಿಸುವುದು.
- ಇಲಾಖಾ ಯೋಜನೆಗಳಾದ ಆಧಾರ, ದೂರವಾಣಿ ಬೂತ್, ಸ್ವ-ಸಹಾಯ ಸಂಘಗಳ ರಚನೆ, ವಿದ್ಯಾರ್ಥಿ ವೇತನ, ಸ್ವಯಂ ಉದ್ಯೋಗ, ತರಬೇತಿ ಇತ್ಯಾದಿ ಯೋಜನೆಗಳಿಗೆ ಅರ್ಹ ಅಂಗವಿಕಲರನ್ನು ಆಯ್ಕೆ ಮಾಡಿ ಜಿಲ್ಲಾ ಸಮಿತಿಗೆ ಮಾಹಿತಿ ಒದಗಿಸುವುದು.
- ಅಂಗವಿಕಲರ ಅಗತ್ಯತೆಗಳಿಗನುಗುಣವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸಾಧನ ಸಲಕರಣೆಗಳು ತಾಲ್ಲೂಕು ಮಟ್ಟದಲ್ಲೇ ದೊರೆಯುವಂತೆ ಮಾಡುವುದು.
- ಸಮಾಜದ ಗಣ್ಯ ವ್ಯಕ್ತಿಗಳು, ಅಧಿಕಾರಿಗಳು, ಅಂಗವಿಕಲತೆಯುಳ್ಳ ವ್ಯಕ್ತಿಗಳು, ಜನ ಪ್ರತಿನಿಧಿಗಳು ಮುಂತಾದವರ ಸಭೆಗಳನ್ನು ಏರ್ಪಡಿಸಿ, ಸಮಾಜದಲ್ಲಿ ಅಂಗವಿಕಲರ ಬಗ್ಗೆ ಅರಿವು ಮೂಡಿಸಿ ಅವರಿಗಿರುವ ಕೀಳರಿಮೆಯನ್ನು ತೊಡೆದುಹಾಕುವುದು.
- ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸುವ ವೈದ್ಯಕೀಯ ಶಿಬಿರಗಳು ಮುಂತಾದೆಡೆಗಳಲ್ಲಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ನೆರವು, ಸರ್ಜರಿ ಮುಂತಾದವುಗಳನ್ನು ಒದಗಿಸುವುದು ಮತ್ತು ಇದೇ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಗ್ರಾಮಮಟ್ಟದ ಸಮಿತಿಗೆ ತಿಳಿಸುವುದು ಸಹಕರಿಸುವುದು.
- ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ಶಿಬಿರಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗೆ ಅಗತ್ಯ ಅನುಕೂಲ ಕಲ್ಪಿಸುವುದು.

ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ತಿಂಗಳಿಗೆ ಒಮ್ಮೆ ಸಭೆ ನಡೆಸಿ ಪರಿಶೀಲಿಸುವುದು.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ಸರ್ಕಾರದ ಆದೇಶ ಸಂ: ಮಮಇ/237/ಪಿ.ಹೆಚ್.ಪಿ. 2007/ದಿ: 16-8-1007ಕ್ಕೆ ಅನುಬಂಧ-4

**ಜಿಲ್ಲಾ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಯೋಜನೆಯ ಉಸ್ತುವಾರಿ ಸಮಿತಿ:**

1. ಜಿಲ್ಲಾಧಿಕಾರಿಗಳು — ಅಧ್ಯಕ್ಷರು



Karnataka State Government Disabled Employees Association
Renukaradhya S
Indresh R S

2. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು — ಉಪಾಧ್ಯಕ್ಷರು
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು — ಸದಸ್ಯರು
4. ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ — ಸದಸ್ಯರು
5. ಜಿಲ್ಲಾ ಶಸ್ತ್ರ ಚಿಕಿತ್ಸಕರು — ಸದಸ್ಯರು
6. ಉಪ ನಿರ್ದೇಶಕರು, ಶಿಕ್ಷಣ ಇಲಾಖೆ — ಸದಸ್ಯರು
7. ಜಿಲ್ಲಾ ಉದ್ಯೋಗಾಧಿಕಾರಿಗಳು — ಸದಸ್ಯರು
8. ಜಿಲ್ಲಾ ಮಟ್ಟದಲ್ಲಿ ಅಂಗವಿಕಲರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ — ಸದಸ್ಯರು
9. ಪ್ರತಿ ತಾಲ್ಲೂಕಿನ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು — ಸದಸ್ಯರು
10. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು — ಸದಸ್ಯ ಕಾರ್ಯದರ್ಶಿಗಳು

**ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು:**

- ಗ್ರಾಮೀಣ ಅಂಗವಿಕಲರ ಪುನರ್ವಸತಿ ಯೋಜನೆಯು ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಕಾಲಕಾಲಕ್ಕೆ ಪರಾಮರ್ಶಿಸಿ ಅಗತ್ಯ ಮಾರ್ಗದರ್ಶನ ನೀಡುವುದರೊಂದಿಗೆ ಯೋಜನೆಯ ಸಂಪೂರ್ಣ ಲಾಭವು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ದೊರೆಯುವಂತೆ ಮಾಡುವುದು.
- ತಾಲ್ಲೂಕು ಮಟ್ಟದ ಸಮಿತಿಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು.
- ಜಿಲ್ಲೆಯಲ್ಲಿನ ಎಲ್ಲಾ ಅಂಗವಿಕಲತೆಯುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ದಾಖಲಾಗಿ ಸಮನ್ವಯ ಶಿಕ್ಷಣಕ್ಕೆ ಒಳಪಡುವಂತೆ ಕ್ರಮ ತೆಗೆದುಕೊಳ್ಳುವುದು ಹಾಗೂ ವಿದ್ಯಾರ್ಥಿ ವೇತನ ಸಿಗುವಂತೆ ಮಾಡುವುದು.
- ಜಾರಿಯಲ್ಲಿರುವ ಯೋಜನೆಗಳಡಿಯಲ್ಲಿ ಸ್ವಯಂ ಉದ್ಯೋಗವನ್ನು ಕೈಗೊಳ್ಳುವಂತೆ ಅಂಗವಿಕಲರಲ್ಲಿ ಜಾಗೃತಿ ಮೂಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.
- ಅಂಗವಿಕಲರ ಸ್ವ-ಸಹಾಯ ಸಂಘಗಳ ರಚನೆ ಹಾಗೂ ವಿವಿಧ ಇಲಾಖೆಗಳ ಸೌಲಭ್ಯಗಳ ಬಗ್ಗೆ ತಾಲ್ಲೂಕು ಸಮಿತಿಗೆ ಮಾರ್ಗದರ್ಶನ ನೀಡುವುದು.
- ಯೋಜನೆಯ ಅನುಷ್ಠಾನದ ಬಗ್ಗೆ ಪ್ರತಿ ಮೂರು ತಿಂಗಳಿಗೆ ಒಮ್ಮೆ ಪರಿಶೀಲನೆ ಸಭೆಯನ್ನು ಏರ್ಪಡಿಸಿ ತಾಲ್ಲೂಕು ಮಟ್ಟದ ಸಮಿತಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುವುದು.
- ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಹಾಗೂ ಯೋಜನಾ ಸಂಯೋಜಕರೊಂದಿಗೆ ಸಂಪರ್ಕ ಇಟ್ಟು ಅನುಷ್ಠಾನದ ಬಗ್ಗೆ ಚರ್ಚಿಸುವುದು.
- ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ತಾಲ್ಲೂಕಿನಲ್ಲಿ ಕಾಲಕಾಲಕ್ಕೆ ಅಗತ್ಯ ತನಿಖೆ ಕೈಗೊಂಡು ಯೋಜನೆಯು ವ್ಯವಸ್ಥಿತವಾಗಿ ನಿಗದಿತ ಸಮಯದೊಳಗೆ ಜಾರಿಗೊಳ್ಳುವಂತೆ ಕ್ರಮ ತೆಗೆದುಕೊಳ್ಳುವುದು.
- ಇಲಾಖಾ ಯೋಜನೆಗಳಾದ ಆಧಾರ, ದೂರವಾಣಿ ಬೂತ್, ಅಂಗವಿಕಲ ಸ್ವ-ಸಹಾಯ ಸಂಘಗಳ ರಚನೆ ತರಬೇತಿ ಮತ್ತು ಉದ್ಯೋಗ, ಸ್ವಯಂ ಉದ್ಯೋಗ ಇತ್ಯಾದಿ ಯೋಜನೆಗಳ ಅನುಷ್ಠಾನದ ಬಗ್ಗೆ ಉಸ್ತುವಾರಿ ವಹಿಸುವುದು.

Karnataka State Government Disabled Employees Association
Renukaradhya S
Indresh R

- ಗ್ರಾಮೀಣಾಭಿವೃದ್ಧಿ ನಗರಾಭಿವೃದ್ಧಿ ಇಲಾಖೆ ಅಡಿಯಲ್ಲಿನ SGSY ಮತ್ತು SJSY ಮಾಡಿ ಅಡಿಯಲ್ಲಿ ಅಂಗವಿಕಲರನ್ನು ಆಯ್ಕೆ ಮಾಡಿ ಸಹಾಯಧನ ನೀಡಿ ಸ್ವಯಂ ಉದ್ಯೋಗಿಗಳಾಗುವಂತೆ ಕ್ರಮ ವಹಿಸುವುದು.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ಸರ್ಕಾರದ ಆದೇಶ ಸಂ: ಮಮಇ/237/ಪಿ.ಹೆಚ್.ಪಿ./2007/ದಿ: 16-8-2007ಕ್ಕೆ ಅನುಬಂಧ - 5

### ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮಕ್ಕೆ ತಗುಲುವ ವಾರ್ಷಿಕ ವೆಚ್ಚ

1. **ಆವರ್ತಕ ವೆಚ್ಚ**

| | |
|---|---|
| ಅ. ಗ್ರಾಮ ಪಂಚಾಯ್ತಿಗೆ ಒಬ್ಬರಂತೆ 5652 ಗ್ರಾಮ ಪಂಚಾಯ್ತಿಗಳಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ (VRW) ಗೌರವಧನ ಆಧಾರದ ನೇಮಕಾತಿ ಪ್ರತಿ VRW ಮಾಸಿಕ 700 ರೂ.ಗಳ ಗೌರವಧನ (5652x700x12) | 4,74,76,800-00 |
| ಆ. ಪ್ರತಿ ತಾಲ್ಲೂಕಿಗೆ ಒಬ್ಬರಂತೆ 176 ವಿವಿಧೋದ್ದೇಶ ಪುನರ್ವಸತಿ (MRW) ಕಾರ್ಯಕರ್ತರಿಗೆ ಗೌರವಧನ ಪ್ರತಿ MRWಗೆ ಮಾಸಿಕ 1800 ರೂ.ಗಳ ಗೌರವಧನ (176x1800x12) | 38,01,600-00 |
| ಇ. ರಾಜ್ಯ ಮಟ್ಟದಲ್ಲಿ ಯೋಜನಾ ಸಂಯೋಜಕರ ಸೇವೆಯನ್ನು ಗೌರವ ಧನದ ಆಧಾರ ಪಡೆಯುವುದು 10000x12x1(excluding TADA) | 1,20,000-00 |
| ಈ. MRWs ಗಳಿಗೆ ಲೇಖನ ಹಾಗೂ ಆಡಳಿತ ವೆಚ್ಚ - ಪ್ರತಿ ತಾಲ್ಲೂಕಿಗೆ ಮಾಸಿಕ 200/- ರೂ. ನಂತೆ (200x176x12) | 4,22,400-00 |
| ಉ. VRWs ಗಳಿಗೆ ಲೇಖನ ಸಾಮಾಗ್ರಿ ಹಾಗೂ ಆಡಳಿತ ವೆಚ್ಚ ಮಾಸಿಕ 50/- ರೂ. ನಂತೆ (5652x50x12) | 33,91,200-00 |
| ಊ. ರಾಜ್ಯ ಮಟ್ಟದಲ್ಲಿ ಆಡಳಿತ ವೆಚ್ಚ | 80,000-00 |
| ಒಟ್ಟು | 5,52,92,000-00 |

2. **ಅನಾವರ್ತಕ ವೆಚ್ಚ**

ತರಬೇತಿ ಮತ್ತು ಕಾರ್ಯಗಾರ

| | |
|---|---|
| ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮತ್ತು ತಹಸೀಲ್ದಾರ್‌ರವರಿಗೆ ಒಂದು ದಿನ ರಾಜ್ಯಮಟ್ಟದ / ವಿಭಾಗ ಮಟ್ಟದ ಕಾರ್ಯಗಾರ | 2,00,000-00 |

3. 5652 VRW ಗಳಿಗೆ ಹಾಗೂ 176 MRW ಗಳಿಗೆ ವಿಭಾಗಮಟ್ಟ /ತಾಲ್ಲೂಕು ಮಟ್ಟದಲ್ಲಿ 2 ದಿವಸಗಳ ವಸತಿಯುತ ತರಬೇತಿ ಕಾರ್ಯಕ್ರಮ (100x5828x28) — 11,65,600-00



Karnataka State Government Disabled Employees Association
Renukaradhya S
Indresh R

4. ತರಬೇತಿ ಸಲಕರಣೆಗಳು – ಪ್ರತಿ ಅಭ್ಯರ್ಥಿಗೆ ರೂ. 400 ರೂ. ನಂತೆ (400x5828) 23,31,200-00

5. ಬೋಧಕರಿಗೆ ಗೌರವಧನ 3 ಮಂದಿಗೆ ಪ್ರತಿ ಬೋಧಕರಿಗೆ ದಿನವೊಂದಕ್ಕೆ 200 ರೂ. ನಂತೆ (200x3x2x176) 2,11,200-00

ಒಟ್ಟು 39,08,000-00

**ಘೋಷ್ವಾರೆ**

| | |
|---|---|
| ಆವರ್ತಕ ವೆಚ್ಚ | 5,52,92,000-00 |
| ಅನಾವರ್ತಕ ವೆಚ್ಚ | 39,08,000-00 |
| ಒಟ್ಟು | 5,92,00,000-00 |

ಟಿಪ್ಪಣಿ: ಅ ಮತ್ತು ಆ ನಲ್ಲಿ ತಿಳಿಸಿರುವ MRW ಮತ್ತು VRWs ಗಳ ಇಟ್ಟು 5828 ಹುದ್ದೆಗಳನ್ನು ಭಾಗಶಃ ಅಂಧರಿಗೆ ಭಾಗಶಃ ಶ್ರವಣದೋಷವುಳ್ಳವರಿಗೆ (Mild ಮತ್ತು Moderate) ಹಾಗೂ ದೈಹಿಕ ಅಂಗವಿಕಲರಿಗೆ ಸಮವಾಗಿ ಹಂಚಬೇಕಿದೆ.

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

**ಕರ್ನಾಟಕ ಸರ್ಕಾರ**

ಸಂಖ್ಯೆ: ಮಮಇ 237.ಪಿಹೆಚ್‌ಪಿ.2007

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 27-09-2007

**ತಿದ್ದುಪಡಿ / ಸೇರ್ಪಡೆ ಆದೇಶ**

2007-08ನೇ ಸಾಲಿನಿಂದ ಅಂಗವಿಕಲರಿಗಾಗಿ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ಮಂಜೂರು ನೀಡಿ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ: ಮಮಇ: 237: ಪಿಹೆಚ್‌ಪಿ:2007 ದಿನಾಂಕ: 18-6-07ರ ಅನುಬಂಧ (3) ರಲ್ಲಿ ತಿಳಿಸಿರುವ VRW ಮತ್ತು MRW ಗಳನ್ನು ಆಯ್ಕೆ ಮಾಡಲು ತಾಲ್ಲೂಕು ಮಟ್ಟದಲ್ಲಿ ರಚಿಸಿರುವ ಸಮಿತಿಯಲ್ಲಿ ಕ್ರಮಸಂಖ್ಯೆ (4) ರಲ್ಲಿ ನಮೂದಿಸಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು 'ಸದಸ್ಯ ಕಾರ್ಯದರ್ಶಿಗಳು' ಎಂಬುದರ ಬದಲಾಗಿ 'ಸದಸ್ಯರು' ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು ಮತ್ತು ಸದರಿ ಸಮಿತಿಯ ಕ್ರಮಸಂಖ್ಯೆ (6) ರಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳನ್ನು 'ಸದಸ್ಯ ಕಾರ್ಯದರ್ಶಿ' ಎಂದು ಸೇರ್ಪಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ವಿ. ಶಿವಕುಮಾರ್)

ಇವರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ ಆದೇಶದ 250 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಕಂಇ 3 ಪಿಹೆಚ್‌ಪಿ 2008, ದಿನಾಂಕ:29/08/2008

2.ಸರ್ಕಾರಿ ಆದೇಶ ಸಂಖ್ಯೆ:ಮಮಇ 157 ಮುಮ 07, ದಿನಾಂಕ: 26/04/2007

3.ಸರ್ಕಾರಿ ಆದೇಶ ಸಂಖ್ಯೆ: ಕಂಇ 147 ಎಂಎಸ್‌ಟಿ 2007, ದಿನಾಂಕ: 12/01/2012

ಪ್ರಸ್ತಾವನೆ:

ರಾಜ್ಯ ಸರ್ಕಾರವು, ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ವೃದ್ಧರಿಗೆ,ವಿಧವೆಯರಿಗೆ ಹಾಗೂ ಅಂಗವಿಕಲರಿಗೆ, ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯನ್ನೊದಗಿಸಲು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ ಓದಲಾದ ಉಲ್ಲೇಖ(1)ರಂತೆ, ಅಂಗವಿಕಲ ವೇತನದಡಿ, ಶೇಕಡಾ 40ರಿಂದ 75 ರಷ್ಟು ಅಂಗವೈಕಲ್ಯವಿರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ರೂ.400 ಗಳ ಮಾಸಾಶನವನ್ನು, ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ರೂ.1000ಗಳ ಮಾಸಾಶನವನ್ನು ನೀಡಲಾಗುತ್ತಿದೆ.

ಮೇಲೆ ಓದಲಾದ ಉಲ್ಲೇಖ(2)ರಂತೆ, ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ರೂ.400ರ ಮಾಸಾಶನ ನೀಡಲಾಗುತ್ತಿದೆ.

Karnataka State Government Disabled Employees Association
Renukaradhya S
Indresh R

ಮೇಲೆ ಓದಲಾದ ಉಲ್ಲೇಖ(3) ರಂತೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ರೂ.500ರ ಮಾಸಾಶನ ನೀಡಲಾಗುತ್ತಿದೆ. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನದ ಮೊತ್ತವನ್ನು ಕೆಳಕಂಡಂತೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ.

ಅಂಗವಿಕಲರ ವೇತನದಡಿ, ಶೇಕಡಾ 40ರಿಂದ 75 ರಷ್ಟು ಅಂಗವೈಕಲ್ಯವಿರುವ, ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.400 ರಿಂದ ರೂ.500ಕ್ಕೆ ಹೆಚ್ಚಿಸಲು ಹಾಗೂ ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ, ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.1000ಗಳಿಂದ ರೂ.1200 ಗಳಿಗೆ ಹೆಚ್ಚಿಸಲು ತೀರ್ಮಾನಿಸಿದೆ.

ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.400ರಿಂದ ರೂ.500ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ.

ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500 ರಿಂದ ರೂ.750ಕ್ಕೆ ಹೆಚ್ಚಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶ,

**ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 74 ಡಿಎಸ್‌ಪಿ 2013, ಬೆಂಗಳೂರು. ದಿನಾಂಕ:30/08/2013.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನದ ಮೊತ್ತವನ್ನು ಕೆಳಕಂಡಂತೆ ಹೆಚ್ಚಿಸಿ 01-09-2013ರಿಂದ ಜಾರಿಗೆ ಬರುವಂತೆ ಆದೇಶಿಸಿದೆ.

1. ಅಂಗವಿಕಲರ ವೇತನದಡಿ,

   i. ಶೇಕಡಾ 40 ರಿಂದ 75 ರಷ್ಟು ಅಂಗವೈಕಲ್ಯವಿರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.400 ರಿಂದ ರೂ.500ಕ್ಕೆ ಹೆಚ್ಚಿಸಲಾಗಿದೆ.

   ii. ಶೇಕಡಾ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಯೋಜನೆಯಡಿ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.1000ಗಳಿಂದ ರೂ.1200 ಗಳಿಗೆ ಹೆಚ್ಚಿಸಲಾಗಿದೆ.

2. ನಿರ್ಗತಿಕ ವಿಧವಾ ವೇತನದಡಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.400ರಿಂದ ರೂ.500ಕ್ಕೆ ಹೆಚ್ಚಿಸಲಾಗಿದೆ.

3. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500 ರಿಂದ ರೂ.750ಕ್ಕೆ ಹೆಚ್ಚಿಸಲಾಗಿದೆ.

ಈಗಾಗಲೇ ಮಾಸಾಶನ ಪಿಂಚಣಿ ಮೊತ್ತವನ್ನು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಡೆಯುತ್ತಿರುವ ಫಲಾನುಭವಿಗಳಿಗೆ ಹೆಚ್ಚಳ ಮಾಡಿ ವಿತರಿಸುವ ಅಧಿಕಾರವನ್ನು ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು/ಉಪ ಖಜಾನಾಧಿಕಾರಿಗಳು ಇವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ.477 ವೆಚ್ಚ-7/2013 ದಿನಾಂಕ:23-08-2013ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

30/8/20

(ಎಸ್. ಕಾತ್ಯಾಯಿನಿ ದೇವಿ)
ಪೀಠಾಧಿಕಾರಿಗಳು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು
ಕಂದಾಯ ಇಲಾಖೆ

Karnataka State Government Disabled Employees Association
Renukaradhya S
Indresh R

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. [illegible], ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. [illegible], ಕಂದಾಯ ಇಲಾಖೆ, ಬೆಂಗಳೂರು.
5. [illegible], ವಿಧಾನ ಸೌಧ, ಬೆಂಗಳೂರು.
6. [illegible], ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. [illegible]

[illegible]

# ಸರ್ಕಾರದ ನಡವಳಿಗಳು

ಸಂಖ್ಯೆ: 44:ಯೋ.ಉ.ಮೌ:2003

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 23-7-2003

ಇವರಿಂದ

ಸರ್ಕಾರದ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಇವರಿಗೆ:

ನಿರ್ದೇಶಕರು,
ಅಂಗವಿಕಲರ ಕಲ್ಯಾಣ ನಿರ್ದೇಶನಾಲಯ
ನೆಲಮಹಡಿ, ಪೋಡಿಯಂ ಬ್ಲಾಕ್
ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು

ಮಾನ್ಯರೆ,

ವಿಷಯ: ಬಡತನ ನಿವಾರಣಾ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಶೇ. 3 ರಷ್ಟು ಮೀಸಲಾತಿ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಡಿ.ಡಬ್ಲ್ಯೂ.ಡಿ:01: ರಾಜ್ಯ.ಸ.ಸ: 2001-02-1097:ದಿನಾಂಕ: 20-5-2003

Karnataka State Government Disabled Employees Association
Renukaradhya S
Indresh R

ಕೇಂದ್ರ ಪುರಸ್ಕೃತ ಇಂದಿರಾ ಆವಾಸ್ ಯೋಜನೆಯಡಿ (ವಸತಿ ಯೋಜನೆ) ಅಂಗವಿಕಲರಿಗಾಗಿ ಶೇ. 3 ರಷ್ಟು ಮೀಸಲಾತಿಯನ್ನು ಕಲ್ಪಿಸಿರುತ್ತದೆ. ಕೇಂದ್ರ ಪುರಸ್ಕೃತ ಯೋಜನೆಯಾದ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯ ಮಾರ್ಗಸೂಚಿಯ ಅಧ್ಯಾಯ 11.3ರ ಕಂಡಿಕೆಯಂತೆ, ಅಂಗವಿಕಲರಿಗೆ ಉದ್ಯೋಗ ಅವಕಾಶವನ್ನು ನೀಡುವುದರ ಬಗ್ಗೆ ಆದ್ಯತೆ ನೀಡುವುದರ ಬಗ್ಗೆ ತಿಳಿಸಿರುತ್ತದೆ. ಆದರೆ ಇಂತಿಷ್ಟೇ ನಿಡಬೇಕೆಂಬುದರ ಕುರಿತು ನಿರ್ದಿಷ್ಟವಾಗಿ ಅದರಲ್ಲಿ ಹೇಳಿರುವುದಿಲ್ಲ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಯಾವುದೇ ರೀತಿಯ ಬದಲಾವಣೆ ಅಥವಾ ಶೇಕಡಾವಾರು ನಿಗದಿಪಡಿಸಬೇಕಾದರೆ ರಾಜ್ಯವು ತೀರ್ಮಾನ ಕೈಗೊಳ್ಳಲು ಬರುವುದಿಲ್ಲ. ಆದಾಗ್ಯೂ ಅಂಗವಿಕಲರಿಗೆ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಗೆ ರೂಪಿಸಲಾದ ಮಾರ್ಗಸೂಚಿಗಳಂತೆ, ಆದ್ಯತೆವಾರು ನೀಡಲಾಗುತ್ತದೆ.

ಸ್ವ ಉದ್ಯೋಗ ಕಾರ್ಯಕ್ರಮಗಳ ಶಲಖೆಯ ಉಸ್ತುವಾರಿಯಲ್ಲಿ ಗ್ರಾಮೀಣ ಬಡತನ ನಿವಾರಣೆಗಾಗಿ ಹಮ್ಮಿಕೊಂಡಿರುವ ಕೇಂದ್ರ ಪುರಸ್ಕೃತ ಕಾರ್ಯಕ್ರಮ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದಡಿ 2003-04ನೇ ಸಾಲಿಗೆ ನಿಗದಿಪಡಿಸಿರುವ ಒಟ್ಟು ಆರ್ಥಿಕ ಮತ್ತು ಭೌತಿಕ ಗುರಿಯಲ್ಲಿ ಶೇ. 3 ರಷ್ಟು ಅಂಗವಿಕಲರಿಗಾಗಿ ಕಡ್ಡಾಯವಾಗಿ ಕಾಯ್ದಿರಿಸಿ ಪ್ರಗತಿ ಸಾಧಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ತಿಳಿಸಲಾಗಿದೆ.

ಗ್ರಾಮೀಣ ಇಂಧನ ಕಾರ್ಯಕ್ರಮದಡಿ ಬರುವ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ ಮತ್ತು ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮಗಳು ಬಡತನಾ ನಿವಾರಣಾ ಯೋಜನೆಗಳಾಗಿರುವುದಿಲ್ಲ. ಆದರೂ ಸಹ, ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಅಂಗವಿಕಲ ವ್ಯಕ್ತಿಗಳಿಗೆ ಆದ್ಯತೆ ನೀಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ತಮ್ಮ ವಿಶ್ವಾಸಿ

ಸಹಿ/-

ಜಂಟಿ ನಿರ್ದೇಶಕರು (ಪಿಎಂಇ) ಪರವಾಗಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ಎಸ್.ಎಲ್.ಸಿ. ಹಾಗೂ ನಂತರ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ: ವಿಹಿನಾಸಇ/ಯೋ.ಶಾ/ಹೊಸ ಯೋಜನೆ/ಲ್ಯಾಪ್‌ಟಾಪ್/21/2013-14/142, ದಿನಾಂಕ: 3.4.2014.

ಪ್ರಸ್ತಾವನೆ:

2014-15ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚು ಜನ ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಹೊಂದಲು ಅನುಕೂಲವಾಗುವಂತೆ ಟಾಕಿಂಗ್ ಲ್ಯಾಪ್‌ಟಾಪ್ ನೀಡುವ ಯೋಜನೆಯನ್ನು ಘೋಷಿಸಲಾಗಿದೆ. ಎಸ್.ಎಸ್.ಎಲ್.ಸಿ. ಹಾಗೂ ನಂತರ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಟಾಕಿಂಗ್ ಲ್ಯಾಪ್‌ಟಾಪ್‌ನ್ನು ನೀಡುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಓದಲಾದ ದಿನಾಂಕ: 3.4.2014 ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 113 ಪಿಎಚ್‌ಪಿ 2014, ಬೆಂಗಳೂರು, ದಿನಾಂಕ: 3.7.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಹೆಚ್ಚು ಜನ ಅಂಧ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕೆ ಪ್ರೋತ್ಸಾಹಿಸಲು ಟಾಕಿಂಗ್ ಲ್ಯಾಪ್‌ಟಾಪ್ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚ ರೂ.400.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2235-02-101-0-52-100 ಧನಸಹಾಯ (ಯೋಜನೆ) ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳ ಪ್ರಕಾರ ಯೋಜನೆಯನ್ನು ಅನುಷ್ಠಾನಗೊಳಿಸುವುದು.

. . . . 2

Karnataka State Government Disabled Employees Association
Renukaradhya S
Indresh R

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 482 ವೆಚ್ಚ-3/2014, ದಿನಾಂಕ: 19.6.2014 ಹಾಗೂ ಪಿಡಿ 13 ಐಪಿಎಂ 2014, ದಿನಾಂಕ: 29.5.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಕೆ.ಜಿರಲಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ:22032240.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ - 3 & 9).
8. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ. ವಿಭಾಗ).
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
10. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
11. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

Karnataka State Government Disabled Employees Association
Renukaradhya S
Indresh R

## ಸರ್ಕಾರದ ಆದೇಶ ಸಂಖ್ಯೆ: ಮಮಇ 113 ಪಿಎಚ್‌ಪಿ 2014, ದಿನಾಂಕ: 3.7.2014 ರ ಆದೇಶಕ್ಕೆ ಮಾರ್ಗಸೂಚಿಗಳು

1. ಅಂಧ ವ್ಯಕ್ತಿಗಳು ಭಾರತದ ಪ್ರಜೆಯಾಗಿರಬೇಕು ಮತ್ತು ಕರ್ನಾಟಕದಲ್ಲಿ ಕನಿಷ್ಟ 10 ವರ್ಷಗಳು ವಾಸವಾಗಿರುವ ಬಗ್ಗೆ ತಹಸೀಲ್ದಾರರಿಂದ ಪ್ರಮಾಣ ಪತ್ರ ಸಲ್ಲಿಸಬೇಕು.
2. ಎಸ್.ಎಸ್.ಎಲ್.ಸಿ. ಹಾಗೂ ನಂತರದ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಮಾತ್ರ ಲ್ಯಾಪ್‌ಟಾಪ್ ನೀಡಲಾಗುವುದು.
3. ಲ್ಯಾಪ್‌ಟಾಪ್ ಪಡೆಯುವ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜು/ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಣ ಶಿಫಾರಸ್ಸಿನೊಂದಿಗೆ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವುದು
4. ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಅಂಧರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಒಬ್ಬ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ರಚಿಸಲಾಗುವ ಸಮಿತಿಯಲ್ಲಿ ಫಲಾನುಭವಿಯನ್ನು ಆಯ್ಕೆ ಮಾಡುವುದು.
5. ಈ ಯೋಜನೆಯ ಸೌಲಭ್ಯ ಪಡೆಯಲು ಯಾವುದೇ ಆದಾಯ ಮಿತಿಯಿರುವುದಿಲ್ಲ.
6. ಸರ್ಕಾರ ನೀಡುವ ಲ್ಯಾಪ್‌ಟಾಪ್‌ನ್ನು ಯಾವುದೇ ಕಾರಣಕ್ಕೆ ಪರಬಾರೆ ಮಾಡಬಾರದು, ಮಾಡಿದ್ದು ಕಂಡುಬಂದಲ್ಲಿ ಅಂತಹವರ ಮೇಲೆ ಕ್ರಮ ಜರುಗಿಸಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಲ್ಯಾಪ್‌ಟಾಪ್‌ನ್ನು ಪಡೆಯುವ ವಿದ್ಯಾರ್ಥಿಯು ರೂ.100/- ಗಳ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರೆದು ಕೊಡುವುದು.
8. ಲ್ಯಾಪ್‌ಟಾಪ್‌ನ್ನು ಪಡೆಯುವ ವಿದ್ಯಾರ್ಥಿಯು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವುದು.
9. ಈ ಸೌಲಭ್ಯವನ್ನು ಪಡೆಯುವ ವಿಕಲಚೇತನ ವಿದ್ಯಾರ್ಥಿಗಳು ಶೇ.40% ಕ್ಕಿಂತ ಹೆಚ್ಚು ದೃಷ್ಟಿದೋಷವುಳ್ಳವಾಗಿರಬೇಕು.
10. ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಶಿಫಾರಸ್ಸು ಮಾಡಿರುವ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.
11. ಲ್ಯಾಪ್‌ಟಾಪ್‌ನ್ನು ವಿದ್ಯಾರ್ಥಿಗಳು ಶಿಕ್ಷಣದ ಸಲುವಾಗಿಯೇ ಉಪಯೋಗಿಸತಕ್ಕದ್ದು.
12. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಅಧಿಕಾರವು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.
13. ಲ್ಯಾಪ್‌ಟಾಪ್‌ನ್ನು ಒಂದು ವಿದ್ಯಾರ್ಥಿಗೆ ಜೀವಿತ ಕಾಲದಲ್ಲಿ ಒಂದು ಬಾರಿ ಮಾತ್ರ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಬೇರೆ ಇಲಾಖೆಗಳು ಅಥವಾ ಸಂಘ ಸಂಸ್ಥೆಗಳಿಂದ ಲ್ಯಾಪ್‌ಟಾಪ್‌ಅನ್ನು ಪಡೆದಿದ್ದಲ್ಲಿ ಅಂತಹವರು ಅರ್ಹರಾಗಿರುವುದಿಲ್ಲ.
14. ಲ್ಯಾಪ್‌ಟಾಪ್‌ನ್ನು, ಸ್ವೀಕರಿಸಿರುವ ಅರ್ಜಿಗಳ ಜೇಷ್ಠತೆ ಅನುಸಾರ ವಿತರಿಸಲಾಗುವುದು.
15. ನಿಯತ ಕಾಲಿತ ವಿದ್ಯಾರ್ಥಿಗಳು ಮಾತ್ರ ಮೇಲಿನ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ಎಸ್.ಎಲ್.ಸಿ. ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆಯನ್ನು ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಇವರ ಪತ್ರ ಸಂಖ್ಯೆ: ವಿಹಿನಾಸಇ/ಯೋ.ಶಾ/ಹೊಸ ಯೋಜನೆ/ ಭತ್ಯೆ/20/2014-15/1350, ದಿನಾಂಕ: 4.7.2014.

ಪ್ರಸ್ತಾವನೆ:

ಎಸ್.ಎಸ್.ಎಲ್.ಸಿ. ನಂತರದ ವಿದ್ಯಾರ್ಹತೆ ಹೊಂದಿರುವ ಸುಮಾರು ಐದು ಸಾವಿರ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು ಒಂದು ಸಾವಿರ ರೂಪಾಯಿಗಳಂತೆ ನಿರುದ್ಯೋಗ ಭತ್ಯೆ ನೀಡಲು ರೂ.16.00ಕೋಟಿಗಳನ್ನು ಒದಗಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ರಾಜ್ಯದ ವಿವಿಧ ಜಿಲ್ಲೆಗಳ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ 20ರಿಂದ 45ರ ವಯೋಮಾನದ ಒಟ್ಟು 10482 ನಿರುದ್ಯೋಗಿ ವಿಕಲಚೇತನರಿದ್ದು, ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿದವರಿಗೆ ರೂ.300/-ರಂತೆ, ಪಿ.ಯು.ಸಿ. ಹಾಗೂ ತತ್ಸಮಾನ ಹೊಂದಿದವರಿಗೆ ರೂ.400/-ರಂತೆ ಹಾಗೂ ಪದವಿ ಮತ್ತು ತತ್ಸಮಾನ ನಂತರ ವಿದ್ಯಾರ್ಹತೆ ಹೊಂದಿದವರಿಗೆ ರೂ.500/-ರಂತೆ ನಿರುದ್ಯೋಗ ಭತ್ಯೆಯನ್ನು ನೀಡಬಹುದಾಗಿದ್ದು, 2014-15ನೇ ಸಾಲಿನ ಅಂಗವಿಕಲರ ಉದ್ಯೋಗ ಕೋಶ ಯೋಜನೆಯ ಲೆಕ್ಕಶೀರ್ಷಿಕೆ 2235-02-101-0-55 ಯೋಜನೆ ಉಪ ಲೆಕ್ಕಶೀರ್ಷಿಕೆ 059 ಇತರೆ ವೆಚ್ಚಗಳಡಿಯಲ್ಲಿ ನಿರುದ್ಯೋಗ ಭತ್ಯೆ ನೀಡಲು ಒದಗಿಸಿರುವ ರೂ.216.00 ಲಕ್ಷಗಳ ಅನುದಾನದಲ್ಲಿ ಅನುಷ್ಠಾನಗೊಳಿಸಬಹುದಾಗಿದೆಂದು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯವರು ಮೇಲೆ ಓದಲಾದ ದಿನಾಂಕ:4.7.2014ರ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ ಹಾಗೂ ಈ ಯೋಜನೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ ಅನುಷ್ಠಾನಗೊಳಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

Karnataka State Government Disabled Employees Association
Renukaradhya S
Indresh B

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಎಚ್‌ಪಿ 2014, ಬೆಂಗಳೂರು,**
**ದಿನಾಂಕ: 28.10.2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಎಸ್.ಎಸ್.ಎಲ್.ಸಿ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು ರೂ.500/- ಗಳಂತೆ ನಿರುದ್ಯೋಗಿ ಭತ್ಯೆಯನ್ನು ನೀಡಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ:2235-02-101-0-55-059(ಯೋಜನೆ) ಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಯೋಜನೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ ಅನುಷ್ಠಾನಗೊಳಿಸತಕ್ಕದ್ದು.

..2

30/10/14

ಈ ನಿರುದ್ಯೋಗ ಭತ್ಯೆ ಯೋಜನೆಯನ್ನು ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 614 ವೆಚ್ಚ-3/2014, ದಿನಾಂಕ: 06.8.2014 ಹಾಗೂ ಪಿಡಿ 45 ಐಎಂಎಂ 2014, ದಿನಾಂಕ: 03.9.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ

Karnataka State Government Disabled Employees Association
Renukaradhya S
Indresh R

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು,ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ - 3 & 9).
9. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ. ವಿಭಾಗ).
10. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
11. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
12. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಎಚ್‌ಪಿ 2014, ದಿನಾಂಕ: 28.10.2014

## ರಂತೆ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡುವ ಸಂಬಂಧ ಅನುಸರಿಸಬೇಕಾದ ಮಾರ್ಗಸೂಚಿಗಳು

1. ಸದರಿ ಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಸರ್ಕಾರದ ಇತರೆ ಯಾವುದೇ ಯೋಜನೆಯ ಅಡಿಯಲ್ಲಿ ಸೌಲಭ್ಯವನ್ನು ಪಡೆಯುತ್ತಿಲ್ಲವೆಂಬುದನ್ನು ದೃಢಪಡಿಸಿಕೊಳ್ಳುವುದು.
2. ಶೇ.40 ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಎಲ್ಲಾ ವಿಕಲಚೇತನರು ಮಾತ್ರ ಸದರಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ
3. ನಿರುದ್ಯೋಗ ಭತ್ಯೆ ಪಡೆಯಲು 25ರಿಂದ 45ರ ವಯೋಮಿತಿಯೊಳಗಿರತಕ್ಕದ್ದು.
4. ವಿಕಲಚೇತನ ವ್ಯಕ್ತಿಗಳು ಭಾರತ ಪ್ರಜೆಯಾಗಿರಬೇಕು. ಹಾಗೂ ಇವರು ಕರ್ನಾಟಕದಲ್ಲಿ ಕನಿಷ್ಠ ಹಿಂದಿನ 10 ವರ್ಷಗಳು ವಾಸವಾಗಿರಬೇಕು.
5. ವಿಕಲಚೇತನರು 2 ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ವಿಶೇಷ ಉದ್ಯೋಗ ವಿನಿಮಯ ಕೇಂದ್ರ/ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೋಂದಾಯಿಸಿಕೊಂಡಿದ್ದು..... ನಿರುದ್ಯೋಗಿಯಾಗಿರತಕ್ಕದ್ದು.
6. ವಿಕಲಚೇತನ ವ್ಯಕ್ತಿಗಳು ಯಾವುದೇ ಲಾಭದಾಯಕ ಉದ್ಯೋಗದಲ್ಲಿರತಕ್ಕದ್ದಲ್ಲ.
7. ಸಾಮಾಜಿಕ ಭದ್ರತೆ ಯೋಜನೆಯಡಿ ಮಾಸಿಕ ಪೋಷಣಾ ಭತ್ಯೆ ಪಡೆಯುತ್ತಿರುವ ವಿಕಲಚೇತನರು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
8. ಈ ಸೌಲಭ್ಯ ಪಡೆಯಲು ಯಾವುದೇ ಆದಾಯಮಿತಿ ಇರುವುದಿಲ್ಲ.
9. ಈ ಯೋಜನೆ ಸೌಲಭ್ಯ ಪಡೆಯಲು ಅರ್ಜಿದಾರರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
10. ಸದರಿ ಯೋಜನೆಯನ್ನು ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ನಿರ್ದೇಶನಾಲಯದ ಮೂಲಕ (ಕಂದಾಯ ಇಲಾಖೆ) ಅನುಷ್ಠಾನಗೊಳಿಸಬೇಕಾಗಿದ್ದು, ಆಯಾ ತಾಲ್ಲೂಕಿನ ತಹಸೀಲ್ದಾರರು ಮಂಜೂರಾತಿ ನೀಡಬೇಕಾಗಿರುತ್ತದೆ.
11. ನಿರುದ್ಯೋಗ ಭತ್ಯೆ ಸೌಲಭ್ಯ ಪಡೆಯುವ ಫಲಾನುಭವಿಗಳು ವಿದ್ಯಾರ್ಹತೆ ಹೊಂದಿರುವ ಅಂಕ ಪಟ್ಟಿಗಳ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
12. ಯಾವುದೇ ಉದ್ಯೋಗ (ಸ್ವಉದ್ಯೋಗ ಒಳಗೊಂಡಂತೆ) ದೊರೆಯದೇ ಇರುವ ಪತ್ರದ ದೃಢೀಕರಣವನ್ನು ಸ್ಥಳೀಯ ಪತ್ರಾಂಕಿತ ಅಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು.
13. ವಿದ್ಯಾರ್ಥಿವೇತನ /ಶಿಕ್ಷಣ ಶುಲ್ಕ ಮರುಪಾವತಿ ಯೋಜನೆಯಡಿಯಲ್ಲಿ ಉಪಯೋಗ ಪಡೆಯುತ್ತಿರುವ ಅಭ್ಯರ್ಥಿಗಳು ಈ ಯೋಜನೆಗೆ ಒಳಪಡಲು ಅರ್ಹರಿರುವುದಿಲ್ಲ.
14. ಸುಳ್ಳು ಮಾಹಿತಿ/ ದಾಖಲೆ ನೀಡಿ ಸೌಲಭ್ಯ ಪಡೆಯುವ ಹಾಗೂ ಉದ್ಯೋಗ (ಸ್ವ ಉದ್ಯೋಗ ಒಳಗೊಂಡಂತೆ) ದೊರಕಿದ ನಂತರವು ಲಿಖಿತ ಮಾಹಿತಿ ನೀಡದೇ ಉದ್ಯೋಗ ಭತ್ಯೆ ಪಡೆಯುವುದು ಕ್ರಿಮಿನಲ್ ಅಪರಾಧವಾಗಿದ್ದು ಅಂತಹವರ ವಿರುದ್ಧ ಕ್ರಿಮಿನಲ್ ಕ್ರಮ ವಹಿಸುವುದಲ್ಲದೆ ದುರುಪಯೋಗ ಪಡಿಸಿಕೊಂಡ ಹಣವನ್ನು ವಾರ್ಷಿಕ ಶೇಕಡ 18% ಬಡ್ಡಿಯೊಂದಿಗೆ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.
15. ಉದ್ಯೋಗ ದೊರಕಿದ ಕೂಡಲೇ ಈ ಯೋಜನೆಯಡಿ ಪ್ರಯೋಜನ ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಲಿಖಿತವಾಗಿ ಮಂಜೂರಾತಿ ಪ್ರಾಧಿಕಾರ ಹಾಗೂ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಿಳಿಸತಕ್ಕದ್ದು.
16. ಉದ್ಯೋಗ ದೊರತ ನಂತರ ಕರ್ತವ್ಯಕ್ಕೆ ಹಾಜರಾಗುವ ಮುನ್ನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತಿಲ್ಲವೆಂಬ ಬಗ್ಗೆ ದೃಢೀಕರಣ ಸಲ್ಲಿಸಬೇಕಾಗುತ್ತದೆ.

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ

Karnataka State Government Disabled Employees Association
Renukaradhya S
Indresh R

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆಯನ್ನು 1,000ರೂ.ಗಳಿಗೆ ಹೆಚ್ಚಿಸುವ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014 ದಿನಾಂಕ: 28.10.2014

2. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ:ಇಸಿ: 20/ಯೋಜನೆ/ನಿರುದ್ಯೋಗ ಭತ್ಯೆ/2014-15 ದಿ: 03.12..2014

ಪ್ರಸ್ತಾವನೆ:

ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ಸುಮಾರು ಐದು ಸಾವಿರ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು 1,000 ರೂ.ಗಳಂತೆ ನಿರುದ್ಯೋಗ ಭತ್ಯೆಯನ್ನು ನೀಡಲು 2.16 ಕೋಟಿ ರೂ. ಒದಗಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು ರೂ. 500/-ಗಳಂತೆ ನಿರುದ್ಯೋಗ ಭತ್ಯೆಯನ್ನು ನೀಡಲು ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

Karnataka State Government Disabled Employees Association
Renukaradhya S
Indresh R

ರಾಜ್ಯದಲ್ಲಿ ವಿವಿಧ ಜಿಲ್ಲೆಗಳ ಉದ್ಯೋಗ ವಿನಿಯಮ ಕೇಂದ್ರಗಳಲ್ಲಿ ನೊಂದಾಯಿಸಿರುವ 20 ರಿಂದ 45ರ ವಯೋಮಾನವದರೆಗಿನ 10482 ನಿರುದ್ಯೋಗಿ ವಿಕಲಚೇತನರ ಮಾಹಿತಿ ಲಭ್ಯವಿದ್ದು ಮಾಸಿಕ ಪೋಷಣಾ ಭತ್ಯೆ ಪಡೆಯುವ ಅವಕಾಶವಿಲ್ಲದಿರುವುದರಿಂದ ಇಂತಹ ವಿಕಲಚೇತನರು ಸುಮಾರು ಶೇಕಡ 40%ರಷ್ಟು ಇರುವುದಾಗಿ ಅಂದಾಜಿಸಿ ಇವರನ್ನು ಹೊರತುಪಡಿಸಿ, ಉಳಿದ ಸುಮಾರು 6300 ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ಮಾಹೆಗೆ ರೂ.1,000/-ಗಳಂತೆ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗಿರುತ್ತದೆ. ಈ ಯೋಜನೆಗೆ 2014-15ರ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2235-02-101-0-55-059 ಯೋಜನೆ(ಉದ್ಯೋಗ ಕೋಶ)ಯಲ್ಲಿ ಒದಗಿಸಿರುವ ಅನುದಾನ ರೂ.290.00ಲಕ್ಷಗಳ ರೂ.2.16ಲಕ್ಷಗಳು ಹಂಚಿಕೆಯಾಗಿದ್ದು ಹೆಚ್ಚುವರಿಯಾಗಿ ರೂ. 41.00ಲಕ್ಷಗಳಲ್ಲಿ ಆಯವ್ಯಯ ಬಿಡುಗಡೆ ಮಾಡಲಾಗಿದೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ: 12/03/2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ನಿರುದ್ಯೋಗ ಭತ್ಯೆಯನ್ನು ರೂ.500/-ರಿಂದ ರೂ.1000/-ಗಳಿಗೆ ಹೆಚ್ಚಿಸಿ ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ 2014-15ನೇ ಸಾಲಿನಲ್ಲಿ ವೆಚ್ಚದಡಿ 2235-02-101-0-55 ಯೋಜನೆ ಒದಗಿಸಿರುವ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು.

ಈ ಯೋಜನೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ ಅನುಷ್ಠಾನಗೊಳಿಸತಕ್ಕದ್ದು.

ಈ ನಿರುದ್ಯೋಗ ಭತ್ಯೆ ಯೋಜನೆಯನ್ನು ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 183 ವೆಚ್ಚ-3/2015 ದಿನಾಂಕ:24/02/2015ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya C
Indresh R

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), (ಇ & ಆರ್ ಎಸ್ ಎ), ಮತ್ತು (ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 & 9) ವಿಧಾನ ಸೌಧ, ಬೆಂಗಳೂರು
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ,ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
8. ಶಾಖಾಧಿಕಾರಿ, ಸ್ವೀಕೃತಿ ಮತ್ತ ರವಾನೆ ಶಾಖೆ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
9. ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ:ಮಮ ಇ 112 ಪಿಹೆಚ್ ಪಿ 2014, ದಿನಾಂಕ:28/02/2015ರಂತೆ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡುವ ಸಂಬಂಧ ಅನುಸರಿಸಬೇಕಾದ ಮಾರ್ಗಸೂಚಿಗಳು**

1. ಸದರಿ ಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಸರ್ಕಾರದ ಇತರೆ ಯಾವುದೇ ಯೋಜನೆಯ ಅಡಿಯಲ್ಲಿ ಸೌಲಭ್ಯವನ್ನು ಪಡೆಯುತ್ತಿಲ್ಲವೆಂಬುದನ್ನು ದೃಡಪಡಿಸಿಕೊಳ್ಳುವುದು.
2. ಶೇ.40ರಷ್ಟು ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಎಲ್ಲಾ ವಿಕಲಚೇತನರು ಮಾತ್ರ ಸದರಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
3. ನಿರುದ್ಯೋಗ ಭತ್ಯೆ ಪಡೆಯಲು 25 ರಿಂದ 45ರ ವಯೋಮಿತಿಯೊಳಗಿರತಕ್ಕದ್ದು.
4. ವಿಕಲಚೇತನ ವ್ಯಕ್ತಿಗಳು ಭಾರತ ಪ್ರಜೆಯಾಗಿರಬೇಕು. ಹಾಗೂ ಇವರು ಕರ್ನಾಟಕದಲ್ಲಿ ಕನಿಷ್ಠ ಹಿಂದಿನ 10 ವರ್ಷಗಳು ವಾಸವಾಗಿರಬೇಕು.
5. ವಿಕಲಚೇತನರು 2 ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ವಿಶೇಷ ಉದ್ಯೋಗ ವಿನಿಮಯ ಕೇಂದ್ರ/ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೊಂದಾಯಿಸಿಕೊಂಡಿದ್ದು, ನಿರುದ್ಯೋಗಿಯಾಗಿರತಕ್ಕದ್ದು.
6. ವಿಕಲಚೇತನ ವ್ಯಕ್ತಿಗಳು ಯಾವುದೇ ಲಾಭದಾಯಕ ಉದ್ಯೋಗದಲ್ಲಿತಕ್ಕದಲ್ಲ.
7. ಸಾಮಾಜಿಕ ಭದ್ರತೆ ಯೋಜನೆಯಡಿ ಮಾಸಿಕ ಪೋಷಣಾ ಭತ್ಯೆ ಪಡೆಯುತ್ತಿರುವ ವಿಕಲಚೇತನರು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
8. ಈ ಸೌಲಭ್ಯ ಪಡೆಯಲು ಯಾವುದೇ ಆದಾಯಮಿತಿ ಇರುವುದಿಲ್ಲ.
9. ಈ ಯೋಜನೆ ಸೌಲಭ್ಯ ಪಡೆಯಲು ಅರ್ಜಿದಾರರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
10. ಸದರಿ ಯೋಜನೆಯನ್ನು ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ನಿರ್ದೇಶನಾಲಯದ ಮೂಲಕ (ಕಂದಾಯ ಇಲಾಖೆ) ಅನುಷ್ಠಾನಗೊಳಿಸಬೇಕಾಗಿದ್ದು, ಆಯಾ ತಾಲ್ಲೂಕ ತಹಸೀಲ್ದಾರರು ಮಂಜೂರಾತಿ ನೀಡಬೇಕಾಗಿರುತ್ತದೆ.
11. ನಿರುದ್ಯೋಗ ಭತ್ಯೆ ಸೌಲಭ್ಯ ಪಡೆಯುವ ಫಲಾನುಭವಿಗಳು ವಿದ್ಯಾರ್ಹತೆ ಹೊಂದಿರುವ ಅಂಕ ಪಟ್ಟಿಗಳ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
12. ಯಾವುದೇ ಉದ್ಯೋಗ(ಸ್ವ ಉದ್ಯೋಗ ಒಳಗೊಂಡಂತೆ) ದೊರಯದೇ ಇರುವ ಪತ್ರದ ದೃಢೀಕರಣವನ್ನು ಸ್ಥಳೀಯ ಪತ್ರಾಂಕಿತ ಅಧಿಕಾರಿಗಳಿಂದ ಪಡೆದು ಸಲ್ಲಿಸತಕ್ಕದ್ದು.
13. ವಿದ್ಯಾರ್ಥಿವೇತನ/ಶಿಕ್ಷಣ ಶುಲ್ಕ ಮರುಪಾವತಿ ಯೋಜನೆಯಡಿಯಲ್ಲಿ ಉಪಯೋಗ ಪಡೆಯುತ್ತಿರುವ ಅಭ್ಯರ್ಥಿಗಳು ಈ ಯೋಜನೆಗೆ ಒಳಪಡಲು ಅರ್ಹರಿರುವುದಿಲ್ಲ.
14. ಸುಳ್ಳು ಮಾಹಿತಿ/ದಾಖಲೆ ನೀಡಿ ಸೌಲಭ್ಯ ಪಡೆಯುವ ಹಾಗೂ ಉದ್ಯೋಗ(ಸ್ವ ಉದ್ಯೋಗ ಒಳಗೊಂಡಂತೆ) ದೊರಕಿದ ನಂತರವು ಲಿಖಿತ ಮಾಹಿತಿ ನೀಡದೆ ಉದ್ಯೋಗ ಭತ್ಯೆ ಪಡೆಯುವುದು ಕ್ರಿಮಿನಲ್ ಅಪರಾಧವಾಗಿದ್ದು ಅಂತಹವರ ವಿರುದ್ಧ ಕ್ರಿಮಿನಲ್ ಕ್ರಮ ವಹಿಸುವುದಲ್ಲದೆ ದುರುಪಯೋಗ ಪಡಿಸಿಕೊಂಡ ಹಣವನ್ನು ವಾರ್ಷಿಕ ಶೇ.18% ಬಡ್ಡಿಯೊಂದಿಗೆ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.
15. ಉದ್ಯೋಗ ದೊರಕಿದ ಕೂಡಲೇ ಈ ಯೋಜನೆಯಡಿ ಪ್ರಯೋಜನ ಪಡೆಯಲು ಅವಕಾಶವಿರುವುದಿಲ್ಲ ಹಾಗೂ ಲಿಖಿತವಾಗಿ ಮಂಜೂರಾತಿ ಪ್ರಾಧಿಕಾರ ಹಾಗೂ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಿಳಿಸತಕ್ಕದ್ದು.
16. ಉದ್ಯೋಗ ದೊರತ ನಂತರ ಕರ್ತವ್ಯಕ್ಕೆ ಹಾಜರಾಗುವ ಮುನ್ನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಈ ಯೋಜನೆಯಿಂದ ಪ್ರಯೋಜನೆ ಪಡೆಯುವಂತಿಲ್ಲವೆಂಬ ಬಗ್ಗೆ ದೃಢೀಕರಣ ಸಲ್ಲಿಸಬೇಕಾಗುತ್ತದೆ.

(ಲಲಿತ)
ಸರ್ಕಾರದ ಅಧೀನ ಕಾರ್ಯದರ್ಶಿ–2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ಯೋಜನೆ ಪರಿಷ್ಕರಣೆ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014, ದಿನಾಂಕ: 12.03.2015
2) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1024 ವೆಚ್ಚ-3/ 2015, ದಿನಾಂಕ:24.11.2015.
3) ಕಂದಾಯ ಇಲಾಖೆ (ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ)ಯ ಟಿಪ್ಪಣಿ ಸಂಖ್ಯೆ: ಆರ್‌ಡಿ 145 ಡಿಎಸ್‌ಪಿ 2015, ದಿನಾಂಕ:11.02.2016.
4) ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 04 ಐಎಂಎಂ 2016,ದಿನಾಂಕ:29-01-2016.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ★ ಬೆಂಗಳೂರು ★
ಸಂಖ್ಯೆ: 1799
ದಿನಾಂಕ: 23/3/16.

**ಪ್ರಸ್ತಾವನೆ:**

ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ಸುಮಾರು ಐದು ಸಾವಿರ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು ರೂ.1000/-ದಂತೆ ನಿರುದ್ಯೋಗ ಭತ್ಯೆಯನ್ನು ನೀಡಲು ರೂ.2.16ಕೋಟಿ ಒದಗಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ಪ್ರತಿ ತಿಂಗಳು ರೂ.500/- ರಿಂದ ರೂ.1000/-ಕ್ಕೆ ಹೆಚ್ಚಿಸಿ ಹಾಗೂ ಸದರಿ ಯೋಜನೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಮೂಲಕ ಅನುಷ್ಠಾನಗೊಳಿಸಲು ಮೇಲೆ ಕ್ರಮ ಸಂಖ್ಯೆ(1)ರ ಓದಲಾದ ದಿನಾಂಕ:12.03.2015ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಬಿಡುಗಡೆಯಾಗಿರುವ ಆಯವ್ಯಯವನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಲೆಕ್ಕ ಶೀರ್ಷಿಕೆಗೆ ವರ್ಗಾಯಿಸುವಂತೆ ಕೋರಿ ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಸದರಿ ಇಲಾಖೆಯು ಈ ಬಗ್ಗೆ ಕಂದಾಯ ಇಲಾಖೆಯಿಂದ ಸಹಮತಿ ಹಾಗೂ ಯೋಜನಾ ಇಲಾಖೆಯಿಂದ ಅನುಮೋದನೆಯನ್ನು ಪಡೆದಿರುವ ಬಗ್ಗೆ ವಿವರವನ್ನು ನೀಡಲು ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆರ್ಥಿಕ ಇಲಾಖೆಯ ಟಿಪ್ಪಣಿ ದಿನಾಂಕ:24.11.2015ರಲ್ಲಿ ತಿಳಿಸಲಾಗಿದೆ.

ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ಕಂದಾಯ ಸಚಿವಾಲಯವನ್ನು ಸದರಿ ಯೋಜನೆಯ ಅನುಷ್ಠಾನದ ಸಹಮತಿಯ ಬಗ್ಗೆ ಕೋರಲಾಗಿ, ಕಂದಾಯ ಇಲಾಖೆಯು (ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯವು) ನೀಡಿರುವ ಅಭಿಪ್ರಾಯದಲ್ಲಿ "ಕಂದಾಯ ಇಲಾಖೆಯು ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ವ್ಯಕ್ತಿಗಳಿಗೆ ಜೀವನ ನಿರ್ವಹಣೆಗೆ ಸಂಬಂಧಿಸಿದಂತೆ, ಪಿಂಚಣಿ ಯೋಜನೆಗಳನ್ನು ಮಾತ್ರ ಅನುಷ್ಠಾನಗೊಳಿಸುತ್ತಿದೆ.

....2

Karnataka State Government Disabled Employees Association
Renukaradhya S
Indresh R

ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ನೀಡಲಾಗುವ ನಿರುದ್ಯೋಗ ಭತ್ಯೆ ನೀಡುವ ವಿಷಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸದರಿ ಇಲಾಖೆಯಿಂದ ಬಡತನ ರೇಖೆಗಿಂತ ಕೆಳಗಿರುವ ಅರ್ಹ ವಿಕಲಚೇತನರಿಗೆ ಮಾಸಾಶನ ಮಾತ್ರ ವಿತರಿಸಲಾಗುತ್ತಿದ್ದು, ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಇತರೆ ಎಲ್ಲಾ ಸೌಲಭ್ಯಗಳನ್ನು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕವೇ ವಿತರಿಸಲಾಗುತ್ತಿರುವ ಕಾರಣ ಹಾಗೂ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡಲು 2015-16ನೇ ಸಾಲಿನ ಆಯವ್ಯಯದಲ್ಲಿ ರೂ.2.16ಕೋಟಿ ಅನುದಾನವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಲೆಕ್ಕಶೀರ್ಷಿಕೆಯಡಿ ಒದಗಿಸಿರುವುದರಿಂದ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡುವ ಯೋಜನೆಯನ್ನು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕವೇ ಅನುಷ್ಠಾನಗೊಳಿಸುವಂತೆ" ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಟಿಪ್ಪಣಿಯಲ್ಲಿ ತಿಳಿಸಿ ಕಡತವನ್ನು ಹಿಂದಿರುಗಿಸಿರುತ್ತಾರೆ.

ಪ್ರಸ್ತುತ ನಿರುದ್ಯೋಗ ಭತ್ಯ ಯೋಜನೆಗೆ ಲೆಕ್ಕಶೀರ್ಷಿಕೆ:2235-02-101-0-55 ಯೋಜನೆ ಉಪಲೆಕ್ಕ ಶೀರ್ಷಿಕೆ: 059ರಡಿ ನಿಗದಿಗೊಳಿಸಿರುವ ರೂ.1.00 ಕೋಟಿ ಅನುದಾನವನ್ನು ಕಂದಾಯ ಇಲಾಖೆಯ ಲೆಕ್ಕಶೀರ್ಷಿಕೆ: 2235-02-101-020ಗೆ ವರ್ಗಾಯಿಸುವ ಈ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಸಹಮತಿಯ ಷರತ್ತಿಗೆ ಒಳಪಡಿಸಿ ಯೋಜನಾ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ ಸಹಮತಿಸಿರುತ್ತದೆ.

Karnataka State Government Disabled Employees Association
Renukaradhya S
Indresh R

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವು ಮೇಲೆ ತಿಳಿಸಿರುವಂತೆ ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ದಿನಾಂಕ:19.02.2016ರಂದು ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ 2015-16ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಣೆಯಾದ ಯೋಜನೆಗಳ ಅನುಷ್ಠಾನ ಕುರಿತಂತೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಸದರಿ ಯೋಜನೆಯು ನಿರುದ್ಯೋಗಿ ಅಂಗವಿಕಲರ ಆರ್ಥಿಕ ಪುನರ್ವಸತಿಗಾಗಿ ಹಾಗೂ ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ, ಪರಿಚ್ಛೇದ 68ರಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆ ಪಾವತಿ ಮಾಡುವುದಕ್ಕಾಗಿ ಯೋಜನೆ ರೂಪಿಸತಕ್ಕದ್ದು ಎಂಬುದಾಗಿ ತಿಳಿಸಿರುವ ಅನ್ವಯ ಈ ಯೋಜನೆಯ ಅನುಷ್ಠಾನವು ಅತ್ಯವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ, ಕಂದಾಯ ಇಲಾಖೆಯು ನಿರಾಕರಿಸಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಲಭ್ಯವಿರುವ ಕಾರಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವರು ಸಮ್ಮತಿಸಿದ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸುವುದು ಸೂಕ್ತವೆಂದು ನಿರ್ಣಯಿಸಲಾಯಿತು.

...3

ಆದ್ದರಿಂದ ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014, ದಿನಾಂಕ:12.03.2015ನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014 (ಭಾಗ-2), ಬೆಂಗಳೂರು ದಿನಾಂಕ:22.03.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರದ ಆದೇಶ ಸಂಖ್ಯೆ: ಮಮಇ 112 ಪಿಹೆಚ್‌ಪಿ 2014, ದಿನಾಂಕ:12.03.2015ನ್ನು ಭಾಗಶಃ ಪರಿಷ್ಕರಿಸಿ ಎಸ್.ಎಸ್.ಎಲ್.ಸಿ. ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ನಿರುದ್ಯೋಗ ಭತ್ಯೆ ನೀಡುವ ಯೋಜನೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ಬದಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿ ಹಾಗೂ ಅನುಬಂಧ-1 ಮತ್ತು 2ರ ಪ್ರಕಾರ ಅನುಷ್ಠಾನಗೊಳಿಸಲು ಆದೇಶಿಸಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-55 ಯೋಜನೆಗೆ ಒದಗಿಸಿರುವ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು.

Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

22/3/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜಿ ಮತ್ತು ಎಸ್.ಎಸ್.ಎ), (ಇ ಮತ್ತು ಆರ್ ಎಸ್ ಎ) ಮತ್ತು (ಎ ಮತ್ತು ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 ಮತ್ತು 9), ವಿಧಾನ ಸೌಧ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಆಪ್ತ ಸಹಾಯಕರು
8. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Karnataka State Government Disabled Employees Association
Renukaradhya S
Indresh R

## ಅನುಬಂಧ – 1

ಯೋಜನೆಯ ಹೆಸರು: ಎಸ್.ಎಸ್.ಎಲ್.ಸಿ.ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ ನೀಡುವ ಯೋಜನೆ ಅನುಷ್ಠಾನ ಕುರಿತಂತೆ

ಈ ಯೋಜನೆಗೆ ನಿಗದಿಗೊಳಿಸಿದ ಆಯವ್ಯಯವನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಬಿಡುಗಡೆಗೊಳಿಸಲಾಗುವುದು. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ ಅನುಷ್ಠಾನಗೊಳಿಸುವುದು. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಎಲ್ಲಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಈ ಯೋಜನೆಯಡಿ ಗುರಿ ನಿಗದಿಪಡಿಸಿ ಆಯವ್ಯಯವನ್ನು ನಿಯಮಾನುಸಾರ ಬಿಡುಗಡೆಗೊಳಿಸುವುದು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಮ್ಮ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನಿರುದ್ಯೋಗಿ ಅಂಗವಿಕಲರಿಂದ ಅರ್ಜಿಗಳನ್ನು ಪಡೆಯಲು ತಮ್ಮ ತಾಲ್ಲೂಕುಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸುವುದು. ಯೋಜನೆಯ ಮಾರ್ಗ ಸೂಚಿಯನ್ವಯ ಅಂಗವಿಕಲರಿಂದ ಪಡೆದಂತಹ ಅರ್ಜಿಗಳನ್ನು ಪರಿಶೀಲಿಸಿ ಸದರಿ ಅರ್ಜಿಗಳನ್ನು ಮಂಜೂರಾತಿಗಾಗಿ ತಮ್ಮ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರಿಗೆ ಸಲ್ಲಿಸುವುದು. ಈ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಆಯಾ ಜಿಲ್ಲೆಯ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಸಮಿತಿಗೆ ಫಲಾನುಭವಿಗಳ ಆಯ್ಕೆಗಾಗಿ ಸಲ್ಲಿಸುವುದು.

Karnataka State Government Disabled Employees Association
Renukaradhya S
Indresh B

ಆಯಾಯ ಜಿಲ್ಲೆಯ ಉಪ ನಿರ್ದೇಶಕರು ಅರ್ಜಿಗಳನ್ನು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಯೋಜನೆಗೆ ನಿಗದಿಪಡಿಸಿರುವ ಮಾರ್ಗಸೂಚಿಗಳಂತೆ ಪರಿಶೀಲಿಸಿ ಆಯ್ಕೆಮಾಡಿ ಮಂಜೂರಾತಿ ನೀಡಲು ಕ್ರಮವಹಿಸುವುದು. ಜಿಲ್ಲಾ ಮಟ್ಟದ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ.

### ಜಿಲ್ಲಾ ಮಟ್ಟದ ಸಮಿತಿ

| ಕ್ರ. ಸಂ. | ಪದನಾಮ | ವಿವರ |
|---|---|---|
| 1 | ಉಪ ನಿರ್ದೇಶಕರು, ಮಮಅಇ | ಅಧ್ಯಕ್ಷರು |
| 2 | ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿಗಳು | ಸದಸ್ಯರು |
| 3 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು | ಸದಸ್ಯರು |
| 4 | ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆ/ ಜಿಲ್ಲಾ ಪ್ರತಿನಿಧಿ | ಸದಸ್ಯರು |
| 5 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

ಆಯಾ ಜಿಲ್ಲೆಯ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಸಮಿತಿಯ ಸಭಾ ನಡಾವಳಿಯಂತೆ ಸದಸ್ಯ ಕಾರ್ಯದರ್ಶಿಗಳಾದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪಟ್ಟಿ ಸಿದ್ಧಪಡಿಸಿ ನಿರುದ್ಯೋಗ ಭತ್ಯೆಗಾಗಿ ಉಪ ನಿರ್ದೇಶಕರಿಂದ ಮಂಜೂರಾತಿ ಆದೇಶ ಪಡೆದು ಮಾರ್ಗಸೂಚಿಯನುಸಾರ ವಿತರಿಸಲು ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡುವುದು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರತಿ ಫಲಾನುಭವಿಗೆ ನಿರುದ್ಯೋಗ ಭತ್ಯೆಯನ್ನು ಆರ್.ಟಿ.ಜಿ.ಎಸ್. ಮುಖಾಂತರ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು. ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಫಲಾನುಭವಿಯಿಂದ ನಿರುದ್ಯೋಗಿ ಎಂಬ ಬಗ್ಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರವನ್ನು ಪಡೆದುಕೊಂಡು ನಿರುದ್ಯೋಗಿ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಈ ಯೋಜನೆಯ ಪ್ರಗತಿಯನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವರಿಗೆ ಪ್ರತಿ ಮಾಹೆ ಕಳುಹಿಸಿಕೊಡತಕ್ಕದ್ದು.

22/8/2016
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಅನುಬಂಧ – 2

## ಕರ್ನಾಟಕ ಸರ್ಕಾರ

## ಅರ್ಜಿ ನಮೂನೆ

## ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ನಿರುದ್ಯೋಗ ಭತ್ಯೆ ನೀಡುವ ಯೋಜನೆ

(ಸರ್ಕಾರದ ಆದೇಶ ಸಂ:ಮಮಇ/112/ಪಿಹೆಚ್‌ಪಿ/2014 (ಭಾಗ-2), ಬೆಂಗಳೂರು, ದಿ: 22.03.2016)

ಇತ್ತೀಚಿನ ಫೋಟೋ

| | | |
|---|---|---|
| 1 | ಅರ್ಜಿದಾರರ ಹೆಸರು : | |
| 2 | ಗಂಡು / ಹೆಣ್ಣು : | |
| 3 | ತಂದೆ / ಪೋಷಕರ ಹೆಸರು / ಗಂಡನ ಹೆಸರು : | |
| 4 | ಜನ್ಮ ದಿನಾಂಕ:<br><br>ಅರ್ಜಿದಾರರ ವಯಸ್ಸು:<br>(ಅರ್ಜಿ ಸಲ್ಲಿಸುವ ದಿನಾಂಕದಂದು ಇರುವಂತೆ ವಯಸ್ಸಿನ ಬಗ್ಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಯೊಂದಿಗೆ ದೃಢೀಕರಣ ಪತ್ರವನ್ನು ಸಲ್ಲಿಸತಕ್ಕದ್ದು) | |
| 5 | ಅಂಗವಿಕಲತೆಯ ವಿಧ ಮತ್ತು ಸ್ವರೂಪ:<br>ದೃಷ್ಟಿದೋಷ/ಶ್ರವಣದೋಷ/ದೈಹಿಕ/ಬುದ್ಧಿಮಾಂದ್ಯತೆ/<br>(ಅಂಗವಿಕಲತೆಯ ಬಗ್ಗೆ ದೃಢೀಕರಣ ಪತ್ರ) | |
| 6 | ಅರ್ಜಿದಾರರ ವಿಳಾಸ:<br>ಅ) ತಾತ್ಕಾಲಿಕ ವಿಳಾಸ: | |
| | ಆ) ಖಾಯಂ ವಿಳಾಸ: | |
| 7 | ಧರ್ಮ, ಜಾತಿ ಮತ್ತು ಪಂಗಡ: | |
| 8 | ವಾರ್ಷಿಕ ವರಮಾನ | |
| 9 | ವಿಶೇಷ ಉದ್ಯೋಗ ವಿನಿಮಯ ಕೇಂದ್ರ / ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ಸಂಖ್ಯೆ ಮತ್ತು ದಿನಾಂಕ: (ಪ್ರತಿ ಸಲ್ಲಿಸುವುದು) | |
| 10 | ನಿರುದ್ಯೋಗಿ ಅಂಗವಿಕಲರೆಂಬ ಬಗ್ಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢಿಕರಣ ಪತ್ರವನ್ನು ಸಲ್ಲಿಸಲಾಗಿದೆಯೇ: (ಪ್ರತಿ ಲಗತ್ತಿಸುವುದು) | |

Karnataka State Government Disabled Employees Association
Renukaradhya S
Indresh R

| | | |
|---|---|---|
| | ಅರ್ಜಿದಾರರು ಎಷ್ಟು ವರ್ಷಗಳಿಂದ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿರುತ್ತಾರೆ: | |
| 12 | ಅರ್ಜಿದಾರರ ಬ್ಯಾಂಕ್ ಖಾತೆ ಸಂಖ್ಯೆ:<br>ಬ್ಯಾಂಕಿನ ಹೆಸರು ಮತ್ತು ವಿಳಾಸ:<br>(ಐ.ಎಫ್.ಎಸ್.ಸಿ ಸಂಖ್ಯೆಯೊಂದಿಗೆ) | |

ಮೇಲೆ ನೀಡಿದ ಮಾಹಿತಿಯು ಸತ್ಯವಾಗಿರುತ್ತದೆಂದು ದೃಢೀಕರಿಸುತ್ತೇನೆ.

(ಸಹಿ)
(ಹೆಸರು)

ಮೇಲಿನ ಅಭ್ಯರ್ಥಿಯು ಒದಗಿಸಿರುವ ವಿವರಗಳನ್ನು ಪರಿಶೀಲಿಸಲಾಗಿದೆ ಹಾಗೂ ಸದರಿ ಅಭ್ಯರ್ಥಿಯು ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಅರ್ಹನಿರುವುದಾಗಿ ದೃಢೀಕರಿಸಿದೆ.

Karnataka State Government Disabled Employees Association
Renukaradhya S
Indresh R

(ಸಹಿ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ತಾಲ್ಲೂಕು ------------

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 431 ಸೇನೆನಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು
ದಿನಾಂಕ: 28/12/2016

## ಸುತ್ತೋಲೆ

ವಿಷಯ : ರಾಜ್ಯ ಸಿವಿಲ್ ಸೇವಾ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಸಲ್ಲಿಸುವ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ನೀಡುವ ಬಗ್ಗೆ

ಉಲ್ಲೇಖ : ಅಧಿಸೂಚನೆ ಸಂಖ್ಯೆ: ಡಿಪಿಎಆರ್ 142 ಎಸ್‌ಆರ್‌ಆರ್ 2006, ದಿನಾಂಕ: 05/11/2007.

*****

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 13ರಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಸೇರಿದಂತೆ ಇತರೆ ಆಯ್ಕೆ ಪ್ರಾಧಿಕಾರಗಳು ರಾಜ್ಯ ಸಿವಿಲ್ ಸೇವಾ ಹುದ್ದೆಗಳ ನೇರ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ ನೀಡಲಾಗಿರುತ್ತದೆ. ದಿನಾಂಕ: 05/11/2007ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 142 ಎಸ್‌ಆರ್‌ಆರ್ 2006ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೂ ಅರ್ಜಿ ಶುಲ್ಕವನ್ನು ಪಾವತಿ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

ಅದಾಗ್ಯೂ, ನೇಮಕಾತಿ / ಆಯ್ಕೆ ಪ್ರಾಧಿಕಾರಗಳು ನೇರ ನೇಮಕಾತಿ ಸಂದರ್ಭದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಪಾವತಿ ಮಾಡುವುದರಿಂದ ವಿನಾಯಿತಿ ನೀಡದೇ ಶುಲ್ಕ ಪಾವತಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗೆ ಅರ್ಜಿ ಆಹ್ವಾನಿಸುವ ಎಲ್ಲಾ ಆಯ್ಕೆ / ನೇಮಕಾತಿ ಪ್ರಾಧಿಕಾರಗಳು ಗೊತ್ತುಪಡಿಸಿದ ಅರ್ಜಿ ಶುಲ್ಕ ಪಾವತಿ ಮಾಡುವುದರಿಂದ ಅಂಗವಿಕಲ ಅಭ್ಯರ್ಥಿಗಳಿಗೆ ವಿನಾಯಿತಿ ನೀಡುವಂತೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಿದೆ.

(ಫೈರೋಜಾ. ಖಾನಂ)
ಸರ್ಕಾರದ ವಿಶೇಷ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ದಿನಾಂಕ: 28/12/2016ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಒದಗಿಸಲು.

Karnataka State Government Disabled Employees Association
Renukaradhya S
Indresh R

ಸರ್ಕಾರದ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

2. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ / ಪರಿಷತ್ತು, ಬೆಂಗಳೂರು
3. ಎಲ್ಲಾ ಇಲಾಖಾ ಮುಖ್ಯಸ್ಥರು
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
5. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
7. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
8. *ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009.
9. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು
10. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
11. ಸರ್ಕಾರದ ಎಲ್ಲಾ ವಿಶೇಷ / ಅಪರ / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು
12. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
13. ಶಾಖಾ ರಕ್ಷಾ ಕಡತ / ಅಧಿಕ ಪ್ರತಿಗಳು (* ಮುಖ ಪತ್ರದೊಂದಿಗೆ)

Karnataka State Government Disabled Employees Association
Renukaradhya S
Indresh R

A 1760/16

(965)

Adm-1 (11) 28 NOV 2016 (17)
OFFICE OF THE K.P.S.C.
BANGALORE
BY MUDDAM

**ಕರ್ನಾಟಕ ಸರ್ಕಾರದ ನಡವಳಿಗಳು**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

ವಿಷಯ : ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರಡಿ ರಾಜ್ಯ ಸಿವಿಲ್ ಸೇವೆಯಲ್ಲಿ ವಿಕಲಚೇತನರಿಗೆ ಮೀಸಲಿರಿಸಿರುವ ರಿಕ್ತಸ್ಥಾನಗಳಲ್ಲಿ ನಿಗದಿತ ಅಂಗವೈಕಲ್ಯತೆ ಹೊಂದಿದ ಅಭ್ಯರ್ಥಿ ಲಭ್ಯವಿಲ್ಲದೇ ಭರ್ತಿಯಾಗದ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*****

ಪ್ರಸ್ತಾವನೆ:

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಸೆಕ್ಷನ್ 36ರಲ್ಲಿ ವಿಕಲಚೇತನರಿಗಾಗಿ ಗುರುತಿಸಿ ಅಧಿಸೂಚಿಸಿದ ಹುದ್ದೆಗಳ ರಿಕ್ತ ಸ್ಥಾನಗಳಲ್ಲಿ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೆ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಅವಕಾಶವನ್ನು ರಾಜ್ಯ ಸಿವಿಲ್ ಸೇವಾ ಹುದ್ದೆಗಳ ನೇರನೇಮಕಾತಿಯಲ್ಲಿ ಪರಿಗಣಿಸುವಂತೆ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಸಂಸ್ಥೆಯು 2012 ರಿಂದ ಹಲವು ಬಾರಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಮನವಿಗಳನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

Karnataka State Government Disabled Employees Association
Renukaradhya S
Indresh R

**ಆದೇಶ ಸಂಖ್ಯೆ: ಸಿಆಸುಇ 235 ಸೆನೆನಿ 2012, ಬೆಂಗಳೂರು, ದಿನಾಂಕ: 22/11/2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವಾ ಹುದ್ದೆಗಳ ನೇರ ನೇಮಕಾತಿಯಲ್ಲಿ ವಿಕಲಚೇತನರಿಗಾಗಿ ಗುರುತಿಸಿ ಅಧಿಸೂಚಿಸಿದ ರಿಕ್ತ ಸ್ಥಾನಗಳನ್ನು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995ರ ಸೆಕ್ಷನ್ 36ರನ್ವಯ ಆ ನೇಮಕಾತಿಯಲ್ಲಿ ಅಧಿಸೂಚಿಸಿರುವ ಅಂಗವೈಕಲ್ಯ ಹೊಂದಿದ ಅಭ್ಯರ್ಥಿಯಿಂದಲೇ ಭರ್ತಿ ಮಾಡಬೇಕಾಗಿರುತ್ತದೆ.

ಒಂದು ವೇಳೆ ಅಧಿಸೂಚಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು (Carry forward). ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ವಿಕಲಚೇತನ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ವಿಕಲಚೇತನ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

ಪು.ತಿ.ನೋ...2

30/11/16

ಈ ಆದೇಶದಲ್ಲಿನ ಸೂಚನೆಗಳನ್ನು ಈ ಆದೇಶದ ದಿನಾಂಕದ ನಂತರ ಮಾಡುವ ಎಲ್ಲಾ ನೇರ ನೇಮಕಾತಿ ಅಧಿಸೂಚನೆಗಳಲ್ಲಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

Gayathri M.R 22/11/16

(ಗಾಯತ್ರಿ ಎಂ.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ದಿನಾಂಕ: 22/11/2016ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 200 ಪ್ರತಿಗಳನ್ನು ಒದಗಿಸಲು.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು
5. ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
7. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು
8. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯಮಾರ್ಗ, ಚಾಣಕ್ಯಪುರಿ, ನವದೆಹಲಿ-110021
9. *ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ / ಪರಿಷತ್ತು, ಬೆಂಗಳೂರು
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009.
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು
15. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
16. ಎಲ್ಲಾ ಆರಕ್ಷಕ ಮಹಾ ನಿರೀಕ್ಷಕರು ಮತ್ತು ಉಪ ಆರಕ್ಷಕ ಮಹಾ ನಿರೀಕ್ಷಕರು
17. ಎಲ್ಲಾ ಇಲಾಖಾ ಮುಖ್ಯಸ್ಥರು
18. ಎಲ್ಲಾ ಪ್ರಾದೇಶಿಕ ಆಯುಕ್ತರು / ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ / ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು
19. ಸರ್ಕಾರದ ಎಲ್ಲಾ ವಿಶೇಷ / ಅಪರ / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು
20. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
21. ಶಾಖಾ ರಕ್ಷಾ ಕಡತ / ಅಧಿಕ ಪ್ರತಿಗಳು

(* ಮುಖ ಪತ್ರದೊಂದಿಗೆ)

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವಿಕಲಚೇತನರ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ, ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣದ ಶುಲ್ಕವನ್ನು ಮರುಪಾವತಿ ಮಾಡುವ ಬಗ್ಗೆ

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾಸಇ/ಯೋಜನೆ/ಉಶಿಶುಮ/12/2013-14/1366, ದಿನಾಂಕ: 24-7-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 24-7-2013ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ:12-7-2013ರಂದು ಮಂಡಿಸಿರುವ 2013-14ನೇ ಸಾಲಿನ ಆಯವ್ಯಯ ಭಾಷಣದ ಕ್ರಮಸಂಖ್ಯೆ: 230ರಲ್ಲಿ, 'ವಿಕಲಚೇತನರ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ, ವಿಕಲಚೇತನರಿಗೆ ಉನ್ನತ ಶಿಕ್ಷಣ/ತಾಂತ್ರಿಕ ಶಿಕ್ಷಣದ ಶುಲ್ಕವನ್ನು ಹಿಂಬರಿಸಲಾಗುವುದು' ಎಂದು ಘೋಷಿಸಿರುತ್ತಾರೆ.

2001ರ ಜನಗಣತಿಯ ಪ್ರಕಾರ 9,40,643 ವಿಕಲಚೇತನರಿದ್ದು, ಅವರಲ್ಲಿ 15 ರಿಂದ 26ರ ವಯೋಮಾನದ ಸುಮಾರು 3.00 ಲಕ್ಷ ವಿಕಲಚೇತನರು ಇರುತ್ತಾರೆಂದು ಅಂದಾಜಿಸಲಾಗಿದೆ. ಇವರುಗಳು ಎಸ್.ಎಸ್.ಎಲ್.ಸಿ ನಂತರದ ಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಔದ್ಯೋಗಿಕ ಶಿಕ್ಷಣಗಳಲ್ಲಿ ವ್ಯಾಸಂಗ ಮಾಡಲು ಪ್ರತಿಭಾವಂತರಾಗಿದ್ದರೂ ಸಹ ಸರ್ಕಾರವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಲು ಶಕ್ತರಿಲ್ಲದ ಕಾರಣ ಉನ್ನತ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದೇ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ದಿಸೆಯಲ್ಲಿ ಪ್ರತಿಭಾವಂತ ವಿಕಲಚೇತನರನ್ನು ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ತಾಂತ್ರಿಕ ಶಿಕ್ಷಣ ಹಾಗೂ ಔದ್ಯೋಗಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ, ಸದರಿ ವ್ಯಾಸಂಗಕ್ಕೆ ಸರ್ಕಾರವು ವಿಧಿಸುವ ಶುಲ್ಕವನ್ನು ಮರು ಪಾವತಿ ಮಾಡುವುದರ ಮೂಲಕ ವಿಕಲಚೇತನ ವಿದ್ಯಾರ್ಥಿಗಳು ಸಹ ಸಾಮಾನ್ಯ ವಿದ್ಯಾರ್ಥಿಗಳಂತೆ ವಿದ್ಯಾಭ್ಯಾಸ ಮಾಡಲು ಸಹಕರಿಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಅದರಂತೆ 2013-14 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಔದ್ಯೋಗಿಕ ಶಿಕ್ಷಣಗಳಿಗೆ ಆಯ್ಕೆಯಾಗುವ ಅಂದಾಜು 4000 ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸಲು ರೂ.256.08 ಲಕ್ಷಗಳ ಅನುದಾನದ ಅಗತ್ಯತೆ ಇದ್ದು, ಸದರಿ ಆಯವ್ಯಯವನ್ನು ಲೆಕ್ಕ ಶೀರ್ಷಿಕೆ :2235-02-101-0-05 ಯೋಜನೆ ಉಪಲೆಕ್ಕಶೀರ್ಷಿಕೆ 117 ವಿದ್ಯಾರ್ಥಿವೇತನದಡಿ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಮಮಇ 271 ಪಿಹೆಚ್‌ಪಿ 2013, ಬೆಂಗಳೂರು

## ದಿನಾಂಕ: 03-09-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ವಿಕಲಚೇತನ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ, ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ 2013-14 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ ಮತ್ತು ಔದ್ಯೋಗಿಕ ಶಿಕ್ಷಣಗಳಿಗೆ

Karnataka State Government Disabled Employees Association
Renukaradhya S
Indresh B

ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಗೆ, ಬೇರೆ ಇಲಾಖೆ ಹಾಗೂ ಇತರೆ ಮೂಲಗಳಿಂದ ಶುಲ್ಕವನ್ನು ಮರು ಪಾವತಿ ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲವೆಂಬ ಷರತ್ತಿಗೆ ಒಳಪಟ್ಟು ಹಾಗೂ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಅರ್ಜಿ ಸ್ವೀಕರಿಸಿದ ನಂತರ ಅನುದಾನ ಒದಗಿಸುವ ಬಗ್ಗೆ ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಈ ಯೋಜನೆಯ ಅನುಷ್ಠಾನ ಸಂಬಂಧ ವಿಧಿಸಬಹುದಾದ ಷರತ್ತುಗಳು ಹಾಗೂ ಮಾರ್ಗಸೂಚಿಗಳ ವಿವರಗಳನ್ನು ಅನುಬಂಧ -1 ರಲ್ಲಿ ಹಾಗೂ ಶುಲ್ಕ ಮರುಪಾವತಿಯ ಅರ್ಜಿ ನಮೂನೆಯನ್ನು ಕ್ರಮವಾಗಿ ಅನುಬಂಧ -2 ರಲ್ಲಿ ನೀಡಿದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಉದ್ದೇಶಿತ ಗುಂಪುಗಳಿಗೆ ಈ ಯೋಜನೆ ಕುರಿತಂತೆ ವ್ಯಾಪಕ ಪ್ರಚಾರ ಕೈಗೊಳ್ಳುವುದು ಹಾಗೂ ಇಬ್ಬಗೆಯ ವಹಿ (Duplicity) ತಪ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 38 ಐಎಂಎಂ 2013, ದಿನಾಂಕ: 17-8-2013 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ ಆಇ 560 ವೆಚ್ಚ-3 2013, ದಿನಾಂಕ: 31-8-2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

Karnataka State Government Disabled Employees Association
Renukaradhya S
Indresh R

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
5) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,ಜಿಲ್ಲಾ ಪಂಚಾಯತ್. (ನಿರ್ದೇಶಕರ ಮುಖಾಂತರ)
6) ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಪ್ರತಿ:

1) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3), ವಿಧಾನಸೌಧ, ಬೆಂಗಳೂರು,
2) ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಆಪ್ತಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಸರ್ಕಾರದ ಆದೇಶ ಸಂಖ್ಯೆ: ಮಮಇ 271 ಪಿಹೆಚ್‌ಪಿ 2013, ದಿನಾಂಕ: 3-9-2013 ಕ್ಕೆ ಅನುಬಂಧ-1

## ಷರತ್ತುಗಳು

1. ವಿಕಲಚೇತನರು ಭಾರತದ ಪ್ರಜೆಯಾಗಿದ್ದು, ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಕನಿಷ್ಠ 5 ವರ್ಷ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರತಕ್ಕದ್ದು.
2. ಸರ್ಕಾರಿ, ಸ್ಥಳೀಯ ಸಂಸ್ಥೆ, ಅನುದಾನಿತ ಸಂಸ್ಥೆ, ಸರ್ಕಾರದ ಮಾನ್ಯತೆ ಪಡೆದ ಅನುದಾನ ಸಹಿತ ಮತ್ತು ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ನಂತರದ ವಿಕಲಚೇತನ ವಿದ್ಯಾರ್ಥಿಗಳು ಶುಲ್ಕ ಮರು ಪಾವತಿ ಪಡೆಯಲು ಅರ್ಹರಿರುತ್ತಾರೆ.
3. ಯಾವ ಸಂಸ್ಥೆಗಳು ವಿಕಲಚೇತನ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಿಧಿಸುವುದಿಲ್ಲವೋ ಅಂತಹ ಸಂಸ್ಥೆಯ ವಿದ್ಯಾರ್ಥಿಗಳು ಶುಲ್ಕು ಮರುಪಾವತಿಗೆ ಅರ್ಹರಿರುವುದಿಲ್ಲ.
4. ವಿಕಲಚೇತನರ ವಿದ್ಯಾರ್ಥಿಗಳು ಹಿಂದಿನ ವರ್ಷದ ಪಬ್ಲಿಕ್ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗದಿದ್ದಲ್ಲಿ ಮುಂದಿನ ವರ್ಷದಲ್ಲಿ ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ. ಆದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಿಂದಿನ ಬಾಕಿ ವಿಷಯಗಳು ಸೇರಿದಂತೆ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ನಂತರದ ವರ್ಷದಲ್ಲಿ ಶುಲ್ಕ ಮರುಪಾವತಿಗೆ ಅರ್ಹರಾಗುತ್ತಾರೆ. ಆ ಕೋರ್ಸ್‌ಗಳಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಯಿದ್ದು ಮುಂದಿನ ತರಗತಿಗೆ/ವರ್ಷಕ್ಕೆ ಪ್ರವೇಶ ಅವಕಾಶವಿದ್ದಲ್ಲಿ ಅಂತಹವರು ಶುಲ್ಕ ಮರುಪಾವತಿಗೆ ಅರ್ಹರಿರುತ್ತಾರೆ.
5. ಪರೀಕ್ಷಾ ಶುಲ್ಕವನ್ನು ವರ್ಷಕ್ಕೆ ಒಂದು ಸಲ ಮಾತ್ರ ಮರುಪಾವತಿಸಲಾಗುವುದು. ಅನುತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಶುಲ್ಕ ಮರುಪಾವತಿಗೆ ಅರ್ಹರಾಗುವುದಿಲ್ಲ.
6. ಬೇರೆ ಇಲಾಖೆ ಹಾಗೂ ಇತರೆ ಮೂಲಗಳಿಂದ ಶುಲ್ಕವನ್ನು ಪಡೆದ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲ.
7. ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
8. ಸರ್ಕಾರ ಅನುಬಂಧ-1 ರಂತೆ ನಿಗದಿಪಡಿಸಿರುವ ಮೊತ್ತ, ಇದರಲ್ಲಿ ಯಾವುದು ಗರಿಷ್ಠ ಮೊತ್ತಕ್ಕೆ ವಿವಿಧ ಕೋರ್ಸ್‌ಗಳಿಗೆ ಸೀಮಿತಗೊಳಿಸಬಹುದಾಗಿದೆ.
9. ಕಾಲೇಜಿನ ಪ್ರಾಂಶುಪಾಲರು/ಮುಖ್ಯಸ್ಥರ ಮೂಲಕ ಕೋರಿಕೆ ಅರ್ಜಿಯನ್ನು ಅವರ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು.
10. ಶುಲ್ಕವನ್ನು ಮರುಪಾವತಿ ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.
11. ಫಲಾನುಭವಿಗಳ ಹೆಸರಿನ ಬ್ಯಾಂಕ್ ಖಾತೆಗೆ ನೇರವಾಗಿ IFSC/NEFT ಮೂಲಕ ಮರುಪಾವತಿ ಶುಲ್ಕವನ್ನು ವರ್ಗಾವಣೆ ಮಾಡತಕ್ಕದ್ದು. ಅನುಷ್ಠಾನಗೊಳಿಸಲು ಸಾಧ್ಯವಾಗದ ಪಕ್ಷದಲ್ಲಿ ಮಾತ್ರ ಇಲಾಖಾ ನಿರ್ದೇಶಕರ ಪೂರ್ವಾನುಮತಿಯೊಡನೆ ಚೆಕ್ ಮೂಲಕ ವಿತರಿಸಬಹುದು.
12. ವಿದ್ಯಾರ್ಥಿಯು ವ್ಯಾಸಂಗ ಮಾಡುವ ಅವಧಿಯಲ್ಲಿ 2ನೇ ವರ್ಷದಿಂದ ನೀಡುವಾಗ ಹಿಂದಿನ ವರ್ಷದಲ್ಲಿ ಕನಿಷ್ಠ ಶೇ.80ರಷ್ಟು ಹಾಜರಾತಿ ಹೊಂದಿರಬೇಕು.
13. ಅಂಗವಿಕಲರ ಅಧಿನಿಯಮದಲ್ಲಿ ಸೂಚಿಸಿರುವ ಹಾಗೂ ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವೈದ್ಯಕೀಯ ಪ್ರಮಾಣದಲ್ಲಿ ಸೂಚಿಸಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಯೋಜನೆಗೆ ಅರ್ಹರಿರುತ್ತಾರೆ.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indiresh K S

ಸರ್ಕಾರದ ಆದೇಶ ಸಂಖ್ಯೆ: ಮಮಇ 271 ಪಿಹೆಚ್‌ಪಿ 2013, ದಿನಾಂಕ: 3-9-2013 ಕ್ಕೆ ಅನುಬಂಧ-2

ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.

ವಿಕಲಚೇತನರ ಶುಲ್ಕ ಮರುಪಾವತಿ ಮಂಜೂರಾತಿಗಾಗಿ ಅರ್ಜಿ

ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿದ ಇತ್ತೀಚಿನ ಭಾವಚಿತ್ರ

ವರ್ಷ:20 -20 ಕೋರ್ಸ್:

| | | |
|---|---|---|
| 1 | ವಿದ್ಯಾರ್ಥಿಯ ಹೆಸರು | |
| 2 | ಲಿಂಗ | ಗಂಡು/ಹೆಣ್ಣು |
| 3 | ಹುಟ್ಟಿದ ದಿನಾಂಕ | |
| 4 | ತಂದೆ/ತಾಯಿ/ಪೋಷಕರ ಹೆಸರು | |
| 5 | ಅಂಚೆ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 6 | ಖಾಯಂ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 7 | ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಹೆಸರು ಮತ್ತು ಪೂರ್ಣ ವಿಳಾಸ | ತಾಲ್ಲೂಕು: ಜಿಲ್ಲೆ:<br>ಪಿನ್ |
| 8 | ಹಾಲಿ ವ್ಯಾಸಂಗ ಮಾಡುತ್ತಿರುವ ಕೋರ್ಸ್ | ಕೋರ್ಸ್: ತರಗತಿ: |
| 9 | ಪ್ರಸಕ್ತ ಸಾಲಿನಲ್ಲಿ ಕಾಲೇಜಿಗೆ ಪ್ರವೇಶ ಪಡೆದ ದಿನಾಂಕ | |
| 11 | ವಿಕಲಚೇತನರ ಸ್ವರೂಪ/ಪ್ರಮಾಣ, ದೃಢೀಕೃತ ಗುರುತಿನ ಚೀಟಿ ಲಗತ್ತಿಸುವುದು. | |
| 12 | ಹಿಂದಿನ ವರ್ಷ ಶುಲ್ಕ ಮರುಪಾವತಿ ಮಂಜೂರಾಗಿದೆಯೇ? ಆಗಿದ್ದಲ್ಲಿ ಎಷ್ಟು? | ಹೌದು/ಇಲ್ಲ<br>ರೂ. |
| 13 | ವಿದ್ಯಾರ್ಥಿಯು ಹಿಂದಿನ ವರ್ಷ/ತರಗತಿಯಲ್ಲಿ ತೇರ್ಗಡೆಯಾಗಿದ್ದಾನೆಯೇ? (ಹಿಂದಿನ ತರಗತಿ/ವರ್ಷದ ಅಂಕಪಟ್ಟಿ ಲಗತ್ತಿಸಬೇಕು) | ಹೌದು/ಇಲ್ಲ<br>ಗರಿಷ್ಠ ಅಂಕ: ಪಡೆದ ಅಂಕ: ಶೇ: |
| 14 | ಕರ್ನಾಟಕದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆ? | |
| 15 | ವಿದ್ಯಾರ್ಥಿಯು ಕಳೆದ 03 ವರ್ಷಗಳಲ್ಲಿ ವ್ಯಾಸಂಗ ಮಾಡಿದ ಕಾಲೇಜುಗಳ ವಿವರಗಳು. | |

| ಕ್ರ.ಸಂ | ಕಾಲೇಜಿನ ಹೆಸರು ಮತ್ತು ಪೂರ್ಣ ವಿಳಾಸ | ತರಗತಿ | ವ್ಯಾಸಂಗ ಮಾಡಿದ ಅವಧಿ | |
|---|---|---|---|---|
| | | | ರಿಂದ | ವರೆಗೆ |
| | | | | |

Karnataka State Government Disabled Employees Association
Renukaradhya S
Indresh R

| | | |
|---|---|---|
| 16 | ವಿದ್ಯಾರ್ಥಿಯು ಕಾಲೇಜಿಗೆ ಪಾವತಿ ಮಾಡಬೇಕಾದ ಶುಲ್ಕಗಳು<br>ಪರೀಕ್ಷಾ ಶುಲ್ಕ:<br>ಬೋಧನಾ ಶುಲ್ಕ:<br>ಪ್ರಯೋಗಾಲಯ ಶುಲ್ಕ:<br>ಪ್ರವೇಶ ಶುಲ್ಕ:<br>ಗ್ರಂಥಾಲಯ ಶುಲ್ಕ:<br>ಒಟ್ಟು ರೂ. | ರೂ.<br>ರೂ.<br>ರೂ.<br>ರೂ.<br>ರೂ |
| 17 | ವಿದ್ಯಾರ್ಥಿಯ ಬ್ಯಾಂಕ್ ಖಾತೆ ಸಂಖ್ಯೆ | |
| 18 | ಷೆಡ್ಯೂಲ್ ಬ್ಯಾಂಕಿನ ಹೆಸರು | |
| 19 | ಬ್ಯಾಂಕ್ ಶಾಖೆಯ ಹೆಸರು | |
| 20. | ಬ್ಯಾಂಕಿನ NEFT ಕೋಡ್ ಅಥವಾ<br>IFSC: ಕೋಡ್: | NEFT ಕೋಡ್:<br>IFSC: ಕೋಡ್: |
| 21. | ಯಾವುದೇ ಮೂಲದಿಂದ / ಇಲಾಖೆಗಳಿಂದ ಶುಲ್ಕ ಮರುಪಾವತಿ ಪಡೆದಿದ್ದಲ್ಲಿ ವಿವರಗಳು | |

**ಘೋಷಣೆ:**

ಶ್ರೀಮತಿ/ಶ್ರೀ____________________________________________________________________________
ತಂದೆ/ತಾಯಿ/ಪೋಷಕರು_____________________________________ ಆದ ನಾನು/ನಾವು ಪ್ರಮಾಣೀಕರಿಸುವುದೇನೆಂದರೆ, ಮೇಲಿನ ವಿಷಯಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತದೆ. ಒಂದು ವೇಳೆ ಮೇಲೆ ತಿಳಿಸಿರುವ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಬಹುದು ಎಂಬುದಾಗಿ ಹಾಗೂ ನಾನು ಬೇರೆ ಯಾವುದೇ ಮೂಲದಿಂದ ಈ ಮೇಲಿನ ವರ್ಷಕ್ಕೆ ಸಂಬಂಧಿಸಿದಂತೆ ನಿಗಧಿತ ಶುಲ್ಕಗಳ ಮರುಪಾವತಿ ಪಡೆದಿಲ್ಲ/ಪಡೆಯಲು ಅರ್ಜಿ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:________

ಸಹಿ:
(ತಂದೆ/ತಾಯಿ/ಪೋಷಕರ)

ವಿದ್ಯಾರ್ಥಿಯ ಹೆಸರು:

ಸಹಿ:
ಹೆಸರು

ಸೂಚನೆ

1. ಅರ್ಜಿಯನ್ನು ವಿದ್ಯಾರ್ಥಿಯು ಆಯಾ ಕಾಲೇಜಿನ ಪಾಂಶುಪಾಲರಿಗೆ ದೃಢೀಕರಿಸಿದ ಅಂಕಪಟ್ಟಿ ಮತ್ತು ವಿಕಲಚೇತನರ ಗುರುತಿನ ಚೀಟಿಯೊಂದಿಗೆ ಸಲ್ಲಿಸಬೇಕು.
ಪ್ರಸ್ತುತ ತರಗತಿಯಲ್ಲಿ ಕನಿಷ್ಠ ಶೇ.80 ರಷ್ಟು ಹಾಜರಾತಿ ಹೊಂದಿರಬೇಕು.
ಶುಲ್ಕ ಮರುಪಾವತಿಯನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜಮಾ ಮಾಡುವ ಕಾರಣ, ತಮ್ಮ ಬ್ಯಾಂಕ್ ಖಾತೆಯ EFT/ IFSC: ಕೋಡ್ ವಿವರಗಳನ್ನು ಕಡ್ಡಾಯವಾಗಿ ತಪ್ಪಿಲ್ಲದಂತೆ ನಮೂದಿಸಬೇಕು.

Karnataka State Government Disabled Employees Association
Renukaradhya S
Indresh R

ಭಾಗ-2

## ಕಾಲೇಜು ಕಛೇರಿಯ ಉಪಯೋಗಕ್ಕೆ

### ಘೋಷಣೆ:

ಶ್ರೀಮತಿ/ಶ್ರೀ ____________________ ತಂದೆ/ತಾಯಿ/ಪೋಷಕರು____________________ ಆದ ಇವರು ____________________ ಕೋರ್ಸ್‌ಯಲ್ಲಿ __________ ಇವರು ವ್ಯಾಸಂಗ ಮಾಡುತ್ತಿದ್ದು, ಇವರ ಶುಲ್ಕದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಭಾಗ-1 ರಲ್ಲಿ ನಮೂದಿಸಿರುವ ವಿವರಗಳಲ್ಲಿ ವ್ಯತ್ಯಾಸಗಳಿದ್ದಲ್ಲಿ ನಮೂದಿಸಬೇಕು<br>1. ಅಂಕಪಟ್ಟಿ : ಸರಿ ಇದೆ/ಇಲ್ಲ.<br>2. ಗುರುತಿನ ಚೀಟಿ : ಸರಿ ಇದೆ/ಇಲ್ಲ | ಇತರೆ |
| ಕಳೆದ ವರ್ಷದ ಹಾಜರಾತಿ ವಿವರ | ಶೇಕಡ: |
| ಮಂಜೂರು ಮಾಡಬಹುದಾದ ಒಟ್ಟು ಶುಲ್ಕ | ಪರೀಕ್ಷಾ ಶುಲ್ಕ: ರೂ. |
| | ಬೋಧನಾ ಶುಲ್ಕ: ರೂ. |
| | ಪ್ರಯೋಗಾಲಯ ಶುಲ್ಕ: ರೂ. |
| | ಪ್ರವೇಶ ಶುಲ್ಕ: ರೂ. |
| | ಗ್ರಂಥಾಲಯ ಶುಲ್ಕ ರೂ |
| | ಒಟ್ಟು: |

ಮೇಲ್ಕಂಡ ಮಾಹಿತಿಗಳು ಕಾಲೇಜಿನಲ್ಲಿ ನಿರ್ವಹಿಸಿರುವ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಲಾಗಿದ್ದು, ಕ್ರಮಬದ್ಧವಾಗಿರುತ್ತದೆ ಎಂದು ದೃಢೀಕರಿಸಿದೆ. ಹಾಗೂ ರೂ ______ ಮೇಲ್ಕಂಡ ಶುಲ್ಕಗಳನ್ನು ವಿದ್ಯಾರ್ಥಿಗೆ ಮರುಪಾವತಿ ಮಾಡಬಹುದೆಂದು ಶಿಫಾರಸ್ಸು ಮಾಡಲಾಗಿದೆ. ಬೇರೆ ಯಾವುದೇ ಮೂಲದಿಂದ ಈ ವಿದ್ಯಾರ್ಥಿಗೆ ಈ ಮೇಲಿನ ವರ್ಷಕ್ಕೆ ಈ ಮೇಲಿನ ಶುಲ್ಕಗಳನ್ನು ಪಾವತಿಸಿಲ್ಲ/ ಪಾವತಿಸಲು ಶಿಫಾರಸ್ಸು ಮಾಡಿಲ್ಲವೆಂದು ಘೋಷಿಸುತ್ತೇನೆ.

ದಿನಾಂಕ:

ಸಹಿ:
(ಪ್ರಾಂಶುಪಾಲರು)
(ಸಂಸ್ಥೆಯ ಮೊಹರು)

ಲಗತ್ತು: ಶುಲ್ಕ ಪಾವತಿ ರಸೀತಿಯ ಮೂಲಪತ್ರಿ ಮತ್ತು ಒಂದು ನಕಲು ಪ್ರತಿ

ಸೂಚನೆ: ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಭಾಗ-1 ರ ವಿವರಗಳನ್ನು ಪರಿಶೀಲಿಸಿ ಭಾಗ-2 ರಲ್ಲಿ ವಿದ್ಯಾರ್ಥಿ ವಿವರಗಳನ್ನು ದೃಢೀಕರಿಸಬೇಕು, ನಂತರ ಅನುಬಂಧ-2 ರಲ್ಲಿನ ನಮೂನೆಯಲ್ಲಿ ವಿವರಗಳನ್ನು ಶಿಕ್ಷಣ ಸಂಸ್ಥೆ ವ್ಯಾಪ್ತಿಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು /ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರಿಗೆ ನಿಗಧಿಪಡಿಸಿ ದಿನಾಂಕದೊಳಗಾಗಿ ಸಲ್ಲಿಸಬೇಕು.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಧರಿಗಾಗಿ ಶಬ್ದ ಗ್ರಂಥಾಲಯ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಮಮಅ:221:ಪಿಹೆಚ್‌ಪಿ:96: ಬೆಂಗಳೂರು ದಿ: 03-09-96.

2. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ.ಯೋ:10:2006-07:971, ದಿನಾಂಕ: 03-05-2006.

3. ದಿನಾಂಕ: 17-06-2006 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

### ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ(1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಯ ಅಂಧ ವಿದ್ಯಾರ್ಥಿಗಳ ಶೈಕ್ಷಣಿಕ ಉಪಯೋಗಕ್ಕಾಗಿ ಶಬ್ದ ಗ್ರಂಥಾಲಯ ಯೋಜನೆಯನ್ನು ಮಂಜೂರು ಮಾಡಲಾಗಿದೆ. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ಸದರಿ ಯೋಜನೆಯಡಿ ಅಂಧ ವಿದ್ಯಾರ್ಥಿಗಳಿಗೆ ಈಗ ಆರ್ಟ್ಸ್ ವಿಷಯಗಳಲ್ಲಿ ಪಠ್ಯ ಕ್ರಮಗಳನ್ನು ಧ್ವನಿ ಮುದ್ರಿಸಿ ಕ್ಯಾಸೆಟ್‌ಗಳು ಮತ್ತು ಟೇಪ್ ರೆಕಾರ್ಡರ್‌ಗಳನ್ನು ಕಾಲೇಜುಗಳ ಪ್ರಾಂಶುಪಾಲರ ಮೂಲಕ ವಿತರಿಸಲಾಗುತ್ತಿದೆ. ಆದರೆ ಪದವಿ ಶಿಕ್ಷಣದಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಪಠ್ಯ ಕ್ರಮಗಳಿರುವುದರಿಂದ ಪಠ್ಯಕ್ರಮದ ಅನುಸಾರ ಪ್ರತ್ಯೇಕವಾಗಿ ಕ್ಯಾಸೆಟ್‌ಗಳನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಇದರ ಬದಲಾಗಿ ಅಂಧ ವಿದ್ಯಾರ್ಥಿಗಳಿಗೆ ಟೇಪ್ ರೆಕಾರ್ಡರ್ ಹಾಗೂ 10 ಖಾಲಿ ಕ್ಯಾಸೆಟ್‌ಗಳನ್ನು ನೀಡಬಹುದಾಗಿರುತ್ತದೆಂದು ತಿಳಿಸಿರುತ್ತಾರೆ. ಈ ಪ್ರಯೋಜನವನ್ನು ಮೈಸೂರಿನಲ್ಲಿರುವ ಇಲಾಖೆಯ ತರಬೇತಿ ಕೇಂದ್ರಗಳಿಗೂ ಸಹ ವಿಸ್ತರಿಸಬಹುದೆಂದು ತಿಳಿಸಿರುತ್ತಾರೆ.

ಈಗಿನ ಯೋಜನೆಯ ಪ್ರಕಾರ ಟೇಪ್ ರೆಕಾರ್ಡರ್‌ಗಳನ್ನು ವಿದ್ಯಾಭ್ಯಾಸದ ನಂತರ ಹಿಂತಿರುಗಿಸಬೇಕಾಗಿದ್ದು, ವಿದ್ಯಾರ್ಥಿಗಳು 5 ವರ್ಷಗಳ ಕಾಲ ಉಪಯೋಗಿಸಿದ ನಂತರ ಅದು ಉಪಯುಕ್ತವಾಗಿರುವುದಿಲ್ಲ. ಆದ್ದರಿಂದ ಟೇಪ್‌ರೆಕಾರ್ಡರ್‌ನ್ನು ಖಾಯಂ ಆಗಿ ವಿದ್ಯಾರ್ಥಿಗಳಿಗೆ ನೀಡಲು ಪ್ರಸ್ತಾಪಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ದಿನಾಂಕ: 17-06-2006 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಸಮಿತಿಯು ಈ ಯೋಜನೆಯನ್ನು ಮಾರ್ಪಡಿಸಲು ಆರ್ಥಿಕ ಇಲಾಖೆಯ ಸಹಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಕೋರಿಕೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

### ಸರ್ಕಾರಿ ಆದೇಶ ಸಂಖ್ಯೆ: ಮಮಇ 156 ಪಿಹೆಚ್‌ಪಿ 2006(2) ಬೆಂಗಳೂರು,
### ದಿನಾಂಕ: 28-08-2006

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು ಅಂಧರಿಗಾಗಿ ಶಬ್ದ ಗ್ರಂಥಾಲಯ ಯೋಜನೆಯನ್ನು ದಿನಾಂಕ: 03-09-96ರ ಸರ್ಕಾರದ ಆದೇಶವನ್ನು ಈ ಕೆಳಕಂಡಂತೆ ಭಾಗಶಃವಾಗಿ ಮಾರ್ಪಡಿಸಲು ಅನುಮತಿ ನೀಡಲಾಗಿದೆ.

1. ಪಠ್ಯ ಕ್ರಮಗಳನ್ನು ಕ್ಯಾಸೆಟ್‌ಗಳಲ್ಲಿ ಮುದ್ರಿಸಿ ನೀಡುವ ಬದಲಾಗಿ ಅಂಧ ವಿದ್ಯಾರ್ಥಿಗಳಿಗೆ 10 ಖಾಲಿ ಕ್ಯಾಸೆಟ್‌ಗಳನ್ನು ನೀಡತಕ್ಕದ್ದು.

Karnataka State Government Disabled Employees Association Renukaradhya S Indresh R

2. ಈ ಯೋಜನೆಯ ಪ್ರಯೋಜನವನ್ನು ಮೈಸೂರಿನಲ್ಲಿರುವ ಇಲಾಖೆಯ ತರಬೇತಿ ಕೇಂದ್ರಗಳಿಗೂ ಸಹ ವಿಸ್ತರಿಸಲು ಅನುಮತಿಸಲಾಗಿದೆ.

3. ಟೇಪ್ ರೆಕಾರ್ಡರನ್ನು ವಿದ್ಯಾಭ್ಯಾಸದ ನಂತರ ಹಿಂತಿರುಗಿಸುವ ಬದಲು ಟೇಪ್ ರೆಕಾರ್ಡರನ್ನು ಖಾಯಂ ಆಗಿ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

4. ಈಗಾಗಲೇ ವಿತರಿಸಿರುವ ಟೇಪ್ ರೆಕಾರ್ಡ್‌ಗಳಿಗೆ ಸಹ ಮೇಲಿನ ಆದೇಶ ಅನ್ವಯವಾಗುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-99-ಯೋಜನೆ-ಉಪ ಲೆಕ್ಕ ಶೀರ್ಷಿಕೆ-100 ಧನಸಹಾಯ/ಪರಿಹಾರ ಇದರಡಿ ಲಭ್ಯವಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ: 17-06-2006 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಅನುಮೋದನೆಯಂತೆ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ: ಪಿಡಿ.25.ಐಎಂಎಂ.2006, ದಿನಾಂಕ: 27-05-2006 ರಲ್ಲಿ ಮತ್ತು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD.348.EXP-3.2006. ದಿನಾಂಕ: 22.07.2006 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಆರ್.ಎಂ. ಚಂದ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

ಇವರಿಗೆ,

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ
4. ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು
9. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ, (ನಿರ್ದೇಶಕರ ಮುಖಾಂತರ)
10. ಎಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ)
11. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 ಮತ್ತು 9)
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು
2. ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆಯಡಿ ಮಂಜೂರು ಮಾಡುವ ಸಾಲ/ಸಹಾಯಧನ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಮಮಇ:212:ಪಿಹೆಚ್‌ಪಿ:98 : ದಿ: 13-11-98.
2. ನಿರ್ದೇಶಕರು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ.ಯೋ:10:2007-07:971, ದಿನಾಂಕ: 03-05-2006.
3. ದಿನಾಂಕ: 17-06-2006ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

## ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 13-11-98ರ ಸರ್ಕಾರದ ಆದೇಶದಲ್ಲಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆಯಡಿ ರಾಜ್ಯದಲ್ಲಿರುವ ಅಂಗವಿಕಲರಿಗೆ ಅವರು ವಾಸಿಸುವ ಸ್ಥಳದಲ್ಲಿ ಸಣ್ಣ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಳ್ಳುವುದಕ್ಕಾಗಿ ಬಂಡವಾಳ ರೂ. 6000/- ಹಾಗೂ ಪೆಟ್ಟಿಗೆ ಅಂಗಡಿಗಾಗಿ ರೂ. 6000/- ಹೀಗೆ ಒಟ್ಟು ರೂ. 12000/- ಗಳನ್ನು ಸಾಲವಾಗಿ / ಸಹಾಯಧನ ಮಂಜೂರು ಮಾಡಲು ಸರ್ಕಾರವು ಅನುಮತಿ ನೀಡಿದೆ.

ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಆಧಾರ ಯೋಜನೆಯನ್ನು 1988 ರಲ್ಲಿ ಪರಿಷ್ಕರಿಸಿದ್ದು, ಯೋಜನೆಗಳ ನಿಬಂಧನೆಗಳನ್ವಯ ರೂ. 6000/- ಗಳ ವೆಚ್ಚದಲ್ಲಿ ಪೆಟ್ಟಿಗೆ ಅಂಗಡಿಯನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ ಮತ್ತು ಈಗ ಮಂಜೂರು ಮಾಡಲಾಗುತ್ತಿರುವ ಬಂಡವಾಳ ರೂ. 6000/- ಗಳ ಮೊಬಲಗು ಸಾಕಾಗುವುದಿಲ್ಲವೆಂದು ತಿಳಿಸುತ್ತಾ ಈಗಿರುವ ಮಿತಿಯನ್ನು ಪರಿಷ್ಕರಿಸಿ ಪೆಟ್ಟಿಗೆಯನ್ನು ನಿರ್ಮಿಸಲು ಕನಿಷ್ಟ ರೂ. 15,000/- ಗಳನ್ನು ಒದಗಿಸಬೇಕೆಂದು ಹಾಗೂ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸಲು ಹಾಗೂ ಇನ್ನು ಮುಂದೆ 12,000/- ರೂ.ಗಳ (6000+6000/-) ಬದಲಾಗಿ ರೂ. 35,000/- (15,000+20,000) ಗಳನ್ನು ಮಂಜೂರು ಮಾಡಲು ಸಹಾಯವಾಗುವಂತೆ ಉಲ್ಲೇಖಿತ ದಿನಾಂಕ: 13.11.98ರ ಆದೇಶವನ್ನು ಮಾರ್ಪಾಡು ಮಾಡಬೇಕೆಂದು ಪ್ರಸ್ತಾಪಿಸಿದ್ದಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ದಿನಾಂಕ: 17-06-2006 ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ, ಸಮಿತಿಯು ಈ ಯೋಜನೆಯನ್ನು ಮಾರ್ಪಡಿಸಲು ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆರವರ ಕೋರಿಕೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

Karnataka State Government Disabled Employees Association
Renukaradhya S
Indresh R

## ಸರ್ಕಾರಿ ಆದೇಶ ಸಂಖ್ಯೆ: ಮಮಇ 156 ಪಿಹೆಚ್‌ಪಿ 2006 (1) ಬೆಂಗಳೂರು, ದಿನಾಂಕ: 28-08-2006

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ದಿನಾಂಕ: 13-11-98ರ ಸರ್ಕಾರಿ ಆದೇಶವನ್ನು ಭಾಗಶಃ ಮಾರ್ಪಡಿಸಿ ಆಧಾರ ಯೋಜನೆಯಡಿ ಪೆಟ್ಟಿಗೆ ಅಂಗಡಿಗಾಗಿ ಈಗ ಮಂಜೂರು ಮಾಡುತ್ತಿರುವ ಮೊತ್ತ ರೂ. 6000/- ಗಳಿಂದ ರೂ. 15000/- ಗಳಿಗೆ ಹಾಗೂ ಬಡ್ಡಿ ರಹಿತ ಸಾಲದ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸಿ ಅಂದರೆ ಒಟ್ಟು ರೂ. 12,000/- (ರೂ. 6000/- + 6000/-) ಗಳ ಬದಲಾಗಿ ಇನ್ನು ಮುಂದೆ ರೂ. 35,000/- (ರೂ. 15,000/- + 20,000/-) ಗಳನ್ನು ಮಂಜೂರು ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಈಗ ಬಡ್ಡಿ ರಹಿತ ಸಾಲದ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸುತ್ತಿರುವುದರಿಂದ ಇಲಾಖೆಯು ಸಾಲವನ್ನು ವಸೂಲಿ ಮಾಡಲು ಹೆಚ್ಚಿನ ಪ್ರಯತ್ನ ಪಡುವುದು ಮತ್ತು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.
2. ಬಂಡವಾಳಕ್ಕೆಂದು ಮಂಜೂರು ಮಾಡಲಾಗುವ ಬಡ್ಡಿ ರಹಿತ ಸಾಲ ರೂ. 20,000/- ಮೊಬಲಗನ್ನು ಈಗಿರುವ ವ್ಯವಸ್ಥೆಯ ಬದಲಾಗಿ ಫಲಾನುಭವಿಗಳಿಂದ 40 ತಿಂಗಳಲ್ಲಿ ತಿಂಗಳಿಗೆ ರೂ. 500/- ಗಳಂತೆ ವಸೂಲಾತಿ ಮಾಡತಕ್ಕದ್ದು.
3. ಈ ಯೋಜನೆಯ ಸೌಲಭ್ಯ ಮಂಜೂರು ಮಾಡಿದ ಬಗ್ಗೆ ಫಲಾನುಭವಿಗಳ ಗುರುತಿನ ಚೀಟಿಯಲ್ಲಿ ನಮೂದಿಸತಕ್ಕದ್ದು.
4. ಈ ಯೋಜನೆಯ ಮಾರ್ಪಾಡಿನ ವೆಚ್ಚವು ಇದಕ್ಕಾಗಿ ಆಯವ್ಯಯದಲ್ಲಿ ಹಂಚಿಕೆ ಮಾಡಿದ ಮೊತ್ತದೊಳಗೆ ಇರತಕ್ಕದ್ದು, ಹೆಚ್ಚಿನ ಅನುದಾನ ಒದಗಿಸಲು ಕೋರಿಕೆ ಸಲ್ಲಿಸತಕ್ಕದ್ದಲ್ಲ.

ಈ ಸಂಬಂಧ ತಗಲುವ ವೆಚ್ಚವನ್ನು 2006-07ನೇ ಸಾಲಿನ ಲೆಕ್ಕಶೀರ್ಷಿಕೆ 2235-02-101-0-99 ಯೋಜನೆ-ಉಪ ಲೆಕ್ಕಶೀರ್ಷಿಕೆ-100 ಧನಸಹಾಯ / ಪರಿಹಾರ ಇದರಡಿಯಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಆದೇಶವನ್ನು ದಿನಾಂಕ: 17-06-2006 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಅನುಮೋದನೆಯಂತೆ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ: ಪಿಡಿ.25.ಐ.ಎಂ.ಎಂ.2006, ದಿನಾಂಕ: 27-05-2006 ರಲ್ಲಿ ಮತ್ತು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್‌ಡಿ348/ವೆಚ್ಚ-3/2006. ದಿನಾಂಕ: 22.07.2006 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಆರ್.ಎಂ. ಚಂದ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳಿಗೆ
2. ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು
4. ಪ್ರಧಾನ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಆಪ್ತ ಸಹಾಯಕರು

Karnataka State Government Disabled Employees Association
Kenchaaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿನ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರಸ್ತುತ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ದ್ವಿಗುಣ ಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಮಮಇ 404 ಪಿಹೆಚ್‌ಪಿ 2001, ದಿನಾಂಕ:04-09-2001

2) ಸರ್ಕಾರದ ಆದೇಶ ಸಂಖ್ಯೆ: ಮಮಇ 293 ಪಿಹೆಚ್‌ಪಿ 2013, ದಿನಾಂಕ:01-02-2014

3) ನಿರ್ದೇಶಕರು,ವಿಕಲಚೇನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಪತ್ರ ಸಂಖ್ಯೆ: ವಿಹಿನಾಸಇ/ಯೋಜನೆ/ವಿ.ವೇತನ/07/2013-14/ 1292, ದಿನಾಂಕ:30-06-2014

**ಪ್ರಸ್ತಾವನೆ:**

ರಾಜ್ಯದಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ 1ನೇ ತರಗತಿಯಿಂದ ಸ್ನಾತಕೋತ್ತರ ಕೋರ್ಸ್‌ಗಳ ವರೆಗೆ (ತಾಂತ್ರಿಕ ಶಿಕ್ಷಣವನ್ನೊಳಗೊಂಡಂತೆ) ನೀಡುವ ವಿದ್ಯಾರ್ಥಿ ವೇತನ ದರವನ್ನು ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ದಿನಾಂಕ:4-9-2001ರ ಸರ್ಕಾರಿ ಆದೇಶದಲ್ಲಿ ಕೆಳಕಂಡಂತೆ ಪರಿಷ್ಕರಿಸಲಾಗಿತ್ತು.

Karnataka State Government Disabled Employees Association
Renukaradhya S
Indresh R

| ಕ್ರ.ಸಂ | ತರಗತಿವಾರು | ಮಾಹೆಯಾನ ಹಾಲಿ ರೂ. | ಮಾಹೆಯಾನ ಪರಿಷ್ಕೃತ ದರ ರೂ. |
|---|---|---|---|
| 1 | 1 ರಿಂದ 5ನೇ ತರಗತಿ | 25/- | 50/- |
| 2 | 6 ರಿಂದ 8ನೇ ತರಗತಿ | 35/- | 100/- |
| 3 | 9, 10ನೇ ತರಗತಿಗಳು | 85/- | 100/- |
| 4 | ಪಿ.ಯು.ಸಿ | 85/- | 150/- |
| 5 | ಬಿ.ಎ/ಬಿ.ಎಸ್ಸಿ/ಬಿ.ಕಾಂ/ಇತರೆ ಪದವಿಧರರು ಹಾಗೂ ಟಿ.ಸಿ.ಹೆಚ್/ತತ್ಸಮಾನ | 125/- | 200/- |
| 6 | ಬಿ.ಇ, ಬಿ.ಟೆಕ್, ಎಂ.ಬಿ.ಬಿ.ಎಸ್, ಎಲ್.ಎಲ್.ಬಿ/ ಡಿಪ್ಲೊಮೋ ಇನ್ ಪ್ರಫೆಷನ್ ಮತ್ತು ಇಂಜಿನಿಯರಿಂಗ್ ಇನ್ ಪ್ಲ್ಯಾಂಟ್ ಟ್ರೈನಿಂಗ್ | 170/- | 250/- |
| 7 | ಎಂ.ಎ/ಎಂ.ಎಸ್ಸಿ/ಎಂ.ಕಾಂ/ಎಲ್.ಎಲ್.ಎಂ ಹಾಗೂ ತತ್ಸಮಾನ | 170/- | 300/- |

..2

ಈ ವಿದ್ಯಾರ್ಥಿವೇತನ ದರವನ್ನು ಮೇಲೆ ಕ್ರ.ಸಂ(2)ರಲ್ಲಿ ಓದಲಾದ ದಿನಾಂಕ:1-2-2014ರ ಆದೇಶದಲ್ಲಿ ಪರಿಷ್ಕರಿಸಿ, ಕೆಳಕಂಡಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ. | ತರಗತಿವಾರು | ದಿ:1-2-2014ರ ಆದೇಶದ ಪೂರ್ವದಲ್ಲಿ ನೀಡಲಾಗುತ್ತಿದ್ದ ವಿದ್ಯಾರ್ಥಿ ವೇತನ ಮಾಹೆಯಾನ | ದಿ:1-2-2014ರ ಆದೇಶದನ್ವಯ ಪರಿಷ್ಕೃತ ವಿದ್ಯಾರ್ಥಿ ವೇತನ |
|---|---|---|---|
| 1 | 1 ರಿಂದ 5 | 50/- | 100/- |
| 2 | 6 ರಿಂದ 10 | 100/- | 200/- |
| 3 | ಪಿ.ಯು.ಸಿ | 150/- | 300/- |
| 4 | ಬಿ.ಎ/ಬಿ.ಎಸ್ಸಿ/ಬಿ.ಕಾಂ/ಇತರೆ ಪದವಿಧರರು ಹಾಗೂ ಟಿ.ಸಿ.ಹೆಚ್/ತತ್ಸಮಾನ | 200/- | 400/- |

ರಾಜ್ಯದಲ್ಲಿರುವ ವಿಕಲಚೇತನ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹ ನೀಡುವ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಹಾಲಿ ನೀಡುತ್ತಿರುವ ವಿದ್ಯಾರ್ಥಿವೇತನವನ್ನು ಎರಡು ಪಟ್ಟು ಪರಿಷ್ಕರಣೆ ಮಾಡಲು 2.6 ಕೋಟಿ ರೂ ಗಳನ್ನು 2014-15ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದೆ.

ವಿಕಲಚೇತನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನದ ದರಗಳನ್ನು ಮೇಲ್ಕಂಡ ಆದೇಶಗಳಲ್ಲಿ 1ನೇ ತರಗತಿಯಿಂದ ಪದವಿ ಹಂತದವರೆಗೆ ಅಥವಾ ತತ್ಸಮಾನ ಕೋರ್ಸ್‌ಗಳಿಗೆ ಮಾತ್ರ ಪರಿಷ್ಕರಿಸಿದೆ ಈ ಆದೇಶದಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ, ತತ್ಸಮಾನ ಹಾಗೂ ಸ್ನಾತಕೋತ್ತರ ಅಥವಾ ತತ್ಸಮಾನ ಕೋರ್ಸ್‌ಗಳ ವಿದ್ಯಾರ್ಥಿ ವೇತನ ದರಗಳನ್ನು ಪರಿಷ್ಕರಿಸಿರುವುದಿಲ್ಲ ಈ ಬಗ್ಗೆ ಸೂಕ್ತ ಸೇರ್ಪಡೆ ಆದೇಶ ಹೊರಡಿಸುವಂತೆ ನಿರ್ದೇಶಕರು ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರವರು ಕೋರಿರುತ್ತಾರೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 167 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ: 5-2-2015**

ಪ್ರಸ್ತಾವದಲ್ಲಿ ವಿವರಿಸಿದ ಕಾರಣಗಳಿಂದ, ರಾಜ್ಯದಲ್ಲಿನ ವಿಕಲಚೇತನ ವಿದ್ಯಾರ್ಥಿಗಳಿಗೆ 1ನೇ ತರಗತಿಯಿಂದ ಸ್ನಾತಕೋತ್ತರ ತರಗತಿ ವರೆಗೆ ನೀಡುತ್ತಿರುವ ವಿದ್ಯಾರ್ಥಿವೇತನ ದರವನ್ನು ದುಪ್ಪಟ್ಟು ಗೊಳಿಸಿ ಕೆಳಕಂಡಂತೆ ಪರಿಷ್ಕರಿಸಿದೆ.

| ಕ್ರ.ಸಂ. | ತರಗತಿವಾರು | ಹಾಲಿ ನಿಡುತ್ತಿರುವ ವಿದ್ಯಾರ್ಥಿ ವೇತನ ಮಾಹೆಯಾನ | ಪರಿಷ್ಕೃತ ವಿದ್ಯಾರ್ಥಿ ವೇತನ ಮಾಹೆಯಾನ |
|---|---|---|---|
| 1 | 1 ರಿಂದ 5 | 100/- | 200/- |
| 2 | 6 ರಿಂದ 10 | 200/- | 400/- |
| 3 | ಪಿ.ಯು.ಸಿ | 300/- | 600/- |
| 4 | ಬಿ.ಎ/ಬಿ.ಎಸ್ಸಿ/ಬಿ.ಕಾಂ/ಇತರೆ ಪದವಿಧರರು ಹಾಗೂ ಟಿ.ಸಿ.ಹೆಚ್/ತತ್ಸಮಾನ | 400/- | 800/- |
| 5 | ಬಿ.ಇ, ಬಿ.ಟೆಕ್, ಎಂ.ಬಿ.ಬಿ.ಎಸ್, ಎಲ್.ಎಲ್.ಬಿ/ ಡಿಪ್ಲೊಮೋ ಇನ್ ಪ್ರಫೆಷನ್ ಮತ್ತು ಇಂಜಿನಿಯರಿಂಗ್ ಇನ್ ಪ್ಲ್ಯಾಂಟ್ ಟ್ರೈನಿಂಗ್ | 250/- | 500/- |
| 6 | ಎಂ.ಎ/ಎಂ.ಎಸ್ಸಿ/ಎಂ.ಕಾಂ/ಎಲ್.ಎಲ್.ಎಂ ಹಾಗೂ ತತ್ಸಮಾನ | 300/- | 600/- |

Karnataka State Government Disabled Employees Association
Renukaradhya S
Indresh R

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-0-05 ಉಪ ಲೆಕ್ಕಶೀರ್ಷಿಕೆ-117 ಯೋಜನೆಯಡಿಯಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 627 ವೆಚ್ಚ-3 2014 ದಿನಾಂಕ:26-8-2014 ಮತ್ತು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ: ಪಿಡಿ 51 ಐಎಂಎಂ 2014, ದಿನಾಂಕ: 3-11-2014ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತ)

ಸರ್ಕಾರದ ಅಧೀನ ಕಾರ್ಯದರ್ಶಿ - 2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಹಾಗೂ ವಿಕಲಚೇತನರ ಮತ್ತು ಹಿರಿಯ
ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ )ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ ಎಸ್ ಎ )ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು, (ಎ & ಇ )ಕರ್ನಾಟಕ, ಹೊಸ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
6. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ , ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 & 9).
9. ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಂ.ಐ.ವಿಭಾಗ).
10. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
11. ಎಲ್ಲಾ ಜಿಲ್ಲೆಯ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ನಿರ್ದೇಶಕರ ಮುಖಾಂತರ).
12. ಶಾಖಾ ರಕ್ಷಾ ಕಡತ/ ಓ.ಡಿ.ಜಿ.ಸಿ / ಸೂಚನಾ ಫಲಕ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಉಪ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ ೧೫ ಯುಎಸ್‌ಇ ೨೦೦೪

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿ:೨೨-೦೩-೨೦೦೪.

### ಸುತ್ತೋಲೆ

ಪದವಿ ಪರೀಕ್ಷೆ ಮತ್ತು ಸ್ನಾತಕೋತ್ತರ ಪರೀಕ್ಷೆ ಬರೆಯುವ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ತಮಗೆ ಇಚ್ಛೆಯುಳ್ಳ, ವಿದ್ಯಾರ್ಹತೆ ಮಿತಿಗೆ ಒಳಪಡದಂತಹ ಬರಹಗಾರರನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ ಹೊರಡಿಸಲಾದ ಇಡಿ ೧೫ ಯುಎಸ್‌ಇ ೨೦೦೪ ದಿ:೫-೩-೨೦೦೪ರ ಸುತ್ತೋಲೆಯ ಮುಂದುವರಿಕೆಯಾಗಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

೧) ಅಂಗವಿಕಲರು ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ಬರಹಗಾರರ ಸಹಾಯಕ್ಕಾಗಿ ಮುಂಚಿತವಾಗಿ ತಾವು ಓದುತ್ತಿರುವ ಕಾಲೇಜಿನ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ ಅನುಮತಿಯನ್ನು ಪಡೆದುಕೊಂಡಿರತಕ್ಕದ್ದು ಮತ್ತು ಈ ಕೋರಿಕೆಯ ಜೊತೆಗೆ ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

೨) ಬರಹಗಾರರ ಸಹಾಯವನ್ನು ಪಡೆದುಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ಪರೀಕ್ಷಾ ವೇಳೆಗಿಂತ ಒಂದು ಗಂಟೆ ಮುಂಚಿತವಾಗಿ ಬರಹಗಾರರ ವಿವರಗಳನ್ನು ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಿ ಪೂರ್ವಾನುಮತಿ ಪಡೆಯುವುದು.

೩) ಬರಹಗಾರರ ವಿದ್ಯಾರ್ಹತೆಯು ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗಿಂತ ಕಡಿಮೆ ವಿದ್ಯಾರ್ಹತೆ ಇರಬೇಕೆಂಬುದಾಗಿ ಏನೂ ಇಲ್ಲ. ಬರಹಗಾರರ ವಿದ್ಯಾರ್ಹತೆಯು ಹೆಚ್ಚಿಗೆ ಇದ್ದರೂ ಸಹ, ಅದು ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಿರುವ ಪರೀಕ್ಷೆಯಲ್ಲಿನ ವಿಷಯಗಳು ಒಂದೇ ಆಗಿರಬಾರದು. ಉದಾಹರಣೆಗೆ ಒಬ್ಬ ಬಿ.ಎ ಅಥವಾ ಎಂ.ಎ ವಿದ್ಯಾರ್ಹತೆ ಹೊಂದಿರತಕ್ಕ ಬರಹಗಾರನು ಬಿ.ಎಸ್ಸಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗೆ ಬರಹಗಾರನಾಗಬಹುದು.

೪) ಯಾವುದಾದರೂ ಒಂದು ಅಥವಾ ಹೆಚ್ಚಿನ ಅಂಗವಿಕಲತೆಯ ತೊಂದರೆಯಿಂದ ನರಳುತ್ತಿರುವ ಹಾಗೂ ದೃಷ್ಟಿ ಹಾಗೂ ಶ್ರವಣ ವೈಕಲ್ಯತೆ ಇರುವ ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯಾವಕಾಶ ನೀಡುವುದು ಅಗತ್ಯವಾಗಿರುತ್ತದೆ. ಮೂರು ಗಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ ಗಂಟೆಗೆ ೨೦ ನಿಮಿಷಗಳಂತೆ ಒಂದು ಗಂಟೆ ಹೆಚ್ಚಿನ ಸಮಯಾವಕಾಶ ನೀಡುವುದು. ಈ ಸೌಲಭ್ಯವನ್ನು ಬರಹಗಾರರ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವ ವಿದ್ಯಾರ್ಥಿಗಳಿಗೂ ಕೂಡಾ ಒದಗಿಸುವುದು.

Karnataka State Government Disabled Employees Association
Renukaradhya S
Indresh R

೫) ಶ್ರವಣ ದೋಷವುಳ್ಳ ವಿದ್ಯಾರ್ಥಿಗಳಿಗೆ ಭಾಷಾ ಸಮಸ್ಯೆ ಇರುವುದರಿಂದ ಪರೀಕ್ಷೆ ಬರೆಯುವಲ್ಲಿ ವ್ಯಾಕರಣ, ವಾಕ್ಯ ರಚನಾ ದೋಷಗಳು ಆಗುವ ಸಾಧ್ಯತೆ ಇರುವುದನ್ನು ಪರಿಗಣಿಸಿ ಉತ್ತರ ಪತ್ರಿಕೆಯ ಮೌಲ್ಯ ಮಾಪಕರು ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಗುರ್ತಿಸಿ, ಉದಾರತೆಯಿಂದ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ಶ್ರವಣ ದೋಷವುಳ್ಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಿಗೆ ಹಸಿರು ಬಣ್ಣದ ಸ್ಟಿಕರ್ ಅಂಟಿಸುವಲ್ಲಿ ಕ್ರಮ ತೆಗೆದುಕೊಳ್ಳುವುದು.

(ಶೋಭಾ ನಂಬೀಶನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ ೧೦೦೦ ಪ್ರತಿಗಳನ್ನು ಒದಗಿಸುವಮತ ಕೋರಲಾಗಿದೆ.

೧. ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು-೧
೨. ಎಲ್ಲ ವಿಶ್ವವಿದ್ಯಾಲಯಗಳ ಕುಲಸಚಿವರು (ಮೌಲ್ಯಮಾಪನ)ರವರಿಗೆ
೩. ಆಯುಕ್ತರು, ಅಂಗವಿಕಲರ ಅಧಿನಿಯಮ ಕಚೇರಿ, ನಂ.೪೦, ತಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು-೫೬೦ ೦೦೫
೪. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಮಂಡಳಿ, ಅರಮನೆ ರಸ್ತೆ, ಬೆಂಗಳೂರು-೧.
೫. ಉಪಕಾರ್ಯದರ್ಶಿ-೪, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ)
೬. ಅಧೀನ ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ
೭. ಶಾಖಾಧಿಕಾರಿಗಳು, ವಿಶ್ವವಿದ್ಯಾಲಯ-೧, ವಿಶ್ವವಿದ್ಯಾಲಯ-೨, ತಾಂತ್ರಿಕ ಶಿಕ್ಷಣ, ಕಾಲೇಜು ಶಿಕ್ಷಣ

ಪ್ರತಿ:-
ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ,
ಸಹ ಕಾರ್ಯದರ್ಶಿಗಳ ಆಪ್ತಸಹಾಯಕ, ಶಿಕ್ಷಣ ಇಲಾಖೆ

ಪತ್ರಿಕಾ ವೇದಿಕೆ.

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶಿಕ್ಷಣ ಇಲಾಖೆಯ ತಾಂತ್ರಿಕ ಶಿಕ್ಷಣ ಇಲಾಖೆ ತಾಂತ್ರಿಕ ಶಿಕ್ಷಣ ಮಂಡಳಿಯು ನಡೆಸುವ ಡಿಪ್ಲೊಮಾ ಪರೀಕ್ಷೆಗಳಲ್ಲಿ ಬರೆಯುವ ಅಂಗವಿಕಲರ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಬರೆಯಲು ಹೆಚ್ಚಿನ ಸೌಲಭ್ಯ ಒದಗಿಸುವ ಬಗ್ಗೆ ಆದೇಶ.

ಓದಲಾಗಿದೆ: ಪತ್ರ ಸಂ: ಬಿಡಿಟಿಇ 15:ಇಎಪಿ:96:ದಿನಾಂಕ: 12-1-98. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು

### ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 12-1-98ರ ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿವತಿಯಿಂದ ಜರುಗಿಸಲ್ಪಡುವ ಡಿಪ್ಲೊಮಾ ಪರೀಕ್ಷೆಗಳಿಗೆ ಸಾಮಾನ್ಯ ವಿದ್ಯಾರ್ಥಿಗಳಂತೆ ದೈಹಿಕ ಹಾಗೂ ಅಂಗವಿಕಲ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು ಈ ಅಂಗವಿಕಲ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿಗಳಂತೆ ಪರೀಕ್ಷೆ ಬರೆಯಲು ಸಾಧ್ಯವಾಗದ ಕಾರಣ ಮರ್ನಾಟಕ ಪ್ರೌಢಶಿಕ್ಷಣ ಮಂಡಳಿ ಹಾಗೂ ಪದವಿ ಪೂರ್ಣ ಶಿಕ್ಷಣ ಮಂಡಳಿಯಂತೆ ತಾಂತ್ರಿಕ ಶಿಕ್ಷಣ ಮಂಡಳಿ ವತಿಯಿಂದ ಜರುಗಿಸಲ್ಪಡುವ ಡಿಪ್ಲೊಮಾ ಪರೀಕ್ಷೆಗೆ ಕುಳಿತುಕೊಳ್ಳುವ ಅಂಗವಿಕಲತೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ವೇಳೆ ಅಥವಾ ಬದಲಿ ವ್ಯಕ್ತಿಯ ಮೂಲಕ ಬರೆಸುವ ಪ್ರಸ್ತಾವನೆಗೆ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ತನ್ನ 115ನೇ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಂಡಿದ್ದು ಈ ಬಗ್ಗೆ ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶ ನೀಡಲಾಗಿದೆ

### ಸರ್ಕಾರಿ ಆದೇಶ ಸಂ: ಇಡಿ 41:ಟಿಪಿಇ:98:ಬೆಂಗಳೂರು, ದಿನಾಂಕ: 04-03-1996

Karnataka State Government Disabled Employees Association
Renukaradhya S
Indresh R

ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಜರುಗಿಸಲ್ಪಡುವ ಡಿಪ್ಲೊಮಾ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಅಂಗವಿಕಲ ವಿದ್ಯಾರ್ಥಿಗಳಿಗೆ ಹೆಚ್ಚಿನ ವೇಳೆಗೆ ಅವಕಾಶ ಅಥವಾ ಬರಹಗಾರರಾಗಿ ಸಹಾಯಕರನ್ನು ಒದಗಿಸುವ ಅವಶ್ಯಕತೆಯನ್ನು ವಿದ್ಯಾರ್ಥಿಯು ಮುಂಚಿತವಾಗಿ ವೈದ್ಯಕೀಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ನೀಡಿದ್ದಲ್ಲಿ ಸಂಸ್ಥೆಯು ಪರೀಕ್ಷಾ ಮುಖ್ಯ ಅಧೀಕ್ಷಕರು: ಮುಖ್ಯ ವೀಕ್ಷಕರು ಹೆಚ್ಚಿನ ವೇಳೆಯನ್ನು ನೀಡಲು ಅಥವಾ ಬರಹಗಾರರನ್ನು ನೇಮಿಸಲು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಸರ್ಕಾರದ ಮಂಜೂರಾತಿ ನೀಡಿದೆ.

1. ಈ ರೀತಿಯ ರಿಯಾಯಿತಿ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಿಯಾಯಿತಿ ಪಡೆದಿದ್ದಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ಮುಂಚಿತವಾಗಿ ತಿಳಿಸತಕ್ಕದ್ದು.
2. ವಿದ್ಯಾರ್ಥಿಯು ದೈಹಿಕ ಅಂಗವಿಕಲ ಅಥವಾ ಅಂಧ ವಿದ್ಯಾರ್ಥಿ ಎಂಬುದರ ಬಗ್ಗೆ ಕರ್ನಾಟಕ ಸರ್ಕಾರದ ಜಿಲ್ಲಾ ಸರ್ಜನ್ ಅಥವಾ ಅವರಿಗಿಂತ ಮೇಲ್ಪಟ್ಟ ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಫೋಟೋ ಸಹಿತ ಪ್ರಮಾಣ ಪತ್ರ ಹೊಂದಿರುವುದು.
3. ಸಹಾಯಕರಾಗಿ ಬರೆಯುವವರ ವಿದ್ಯಾರ್ಹತೆಯು ಸದರಿ ವಿದ್ಯಾರ್ಥಿಯ ವಿದ್ಯಾರ್ಹತೆಗಿಂತ ಕಡಿಮೆ ಇರತಕ್ಕದ್ದು ಹಾಗೂ ಡಿಪ್ಲೊಮಾ ವಿದ್ಯಾರ್ಥಿಯಾಗಿರಬಾರದು ಮತ್ತು ಬರಹಗಾರರು ಸದರಿ ಅಂಗವಿಕಲ / ಅಂಧ ವಿದ್ಯಾರ್ಥಿಯು ಹಾಜರಾಗುವ ವಿಷಯಗಳನ್ನು ಓದಿರಬಾರದು. ಸದರಿ ವಿದ್ಯಾರ್ಥಿಯು ವಿದ್ಯಾರ್ಥಿಗೆ ಸಂಬಂಧಿಯಾಗಿರಕೂಡದು.

4. ದೈಹಿಕ ಅಂಕವಿಕಲ ವಿದ್ಯಾರ್ಥಿಯಿಂದ ಹಾಜರಾಗುವ ಪ್ರತಿ ವಿಷಯಕ್ಕೂ ರೂ. 50.00 ರಂತೆ ಶುಲ್ಕ ಪಡೆದು ರಸೀದಿ ಕೊಡುವುದು. ಹಾಗೂ ಈ ಹಣದಲ್ಲಿ ಬರಹಗಾರರಾಗಿ ಕೆಲಸ ನಿರ್ವಹಿಸುವವರಿಗೆ ಪ್ರತಿ ಪರೀಕ್ಷೆ ದಿನ ಪ್ರತಿ ವಿಷಯಕ್ಕೆ ರೂ. 25.00 ಪಾವತಿಸಿ ಉಳಿದ 25.00 ಗಳನ್ನು ಸರ್ಕಾರಕ್ಕೆ ಜಮಾ ಮಾಡುವುದು. ಈ ಬಗ್ಗೆ ನಗದು ಪುಸ್ತಕದಲ್ಲಿ ನಮೂದಿಸುವುದು.

5. ದೈಹಿಕ ಅಂಗವಿಕಲರ / ಅಂಧ ವಿದ್ಯಾರ್ಥಿಗಳು ಸ್ವತಃ ಬರೆಯುವುದಾದಲ್ಲಿ ಅಥವಾ ಬರಹಗಾರರನ್ನೇ ನೇಮಿಸಿಕೊಂಡು ಬರೆಯುವುದಾದಲ್ಲಿ ಪ್ರತಿ ವಿಷಯದ ಪ್ರತಿ ಪರೀಕ್ಷೆಗೂ ಪ್ರತಿ ಗಂಟೆಗೆ 20 ನಿಮಿಷ ಹೆಚ್ಚಿಸಿ ಕಾಲಾವಕಾಶವನ್ನು ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

(ಮಹಮದ್ ಖಲೀಲುದ್ರಾಹ್ಮಾನ್)

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
4. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು
5. ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
6. ರಕ್ಷಾ ಕಡತ / ವಾರದ ಗೆಜೆಟ್

Karnataka State Government Disabled Employees Association
Renukaradhya R S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅಂಗವಿಲರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ದೂರವಾಣಿ ಬೂತ್‌ಗಳನ್ನು ವಿತರಿಸುವ ಯೋಜನೆಯನ್ನು ಮಾರ್ಪಡಿಸಿ ಸದರಿ ಯೋಜನೆಗೆ ಮೆಟಾಫೋನ್‌ನ್ನು ಒದಗಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಮಮಇ:433:ಪಿಹೆಚ್‌ಪಿ:96, ದಿನಾಂಕ: 29-3-97.

2. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಏಕಕಡತ ಸಂಖ್ಯೆ: ಅಂಹಿನಾಕಇ:ಯೋ:10:2007-08.

3. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿ: 22-05-2007 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

## ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 29-03-97ರ ಆದೇಶದಲ್ಲಿ ಅಂಗವಿಕಲರಿಗೆ ಸ್ವಯಂ ಉದ್ಯೋಗ ಒದಗಿಸುವ ದೃಷ್ಟಿಯಿಂದ 1996-97ನೇ ಸಾಲಿನಲ್ಲಿ ಅಂಗವಿಕಲರಿಗಾಗಿ ದೂರವಾಣಿ ಬೂತ್ ವಿತರಿಸುವ ಯೋಜನೆಗೆ ಸರ್ಕಾರದ ಮಂಜೂರಾತಿಯನ್ನು ನೀಡಿದ್ದು, ಸದರಿ ಯೋಜನೆಯ ಮುಂದುವರೆದ ಯೋಜನೆಯಾಗಿರುತ್ತದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ (2) ರಲ್ಲಿನ ಅವರ ಏಕಕಡತದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಈ ಯೋಜನೆಯಡಿಯಲ್ಲಿ ಜಿಲ್ಲೆಗಳಲ್ಲಿ ರೂ. 10,600/- ವೆಚ್ಚದಲ್ಲಿ ದೂರವಾಣಿ ಬೂತ್‌ನ್ನು ಒದಗಿಸಲಾಗುತ್ತಿದ್ದು, ಈ ದೂರವಾಣಿ ಬೂತ್‌ಗಳನ್ನು ಫಲಾನುಭವಿಗಳು ಸಂಬಂಧಿಸಿದ ಪ್ರಾಧಿಕಾರಗಳಿಂದ ಅನುಮತಿಯನ್ನು ಪಡೆದು ನಿರ್ದಿಷ್ಟವಾದ ಸ್ಥಳದಲ್ಲಿಟ್ಟು ವ್ಯಾಪಾರ ಮಾಡಲು ಅನೇಕ ತೊಡರುಗಳು ಉಂಟಾಗುತ್ತಿರುವುದು ಕಂಡು ಬಂದಿದ್ದು, ಇತ್ತೀಚೆಗೆ ಮಹಾನಗರ ಪಾಲಿಕೆಗಳು ಹಾಗೂ ನಗರ ಸಭೆಗಳು ರಸ್ತೆಗಳ ಬದಿಯಲ್ಲಿ ಹಾಗೂ ಜನಜಂಗುಳಿ ಇರುವ ಸ್ಥಳದಲ್ಲಿ ದೂರವಾಣಿ ಬೂತ್ ಇಡಲು ಅನುಮತಿಯನ್ನು ನೀಡುತ್ತಿಲ್ಲವಾದ್ದರಿಂದ ಕೆಲವು ಕಡೆ ದೂರವಾಣಿ ಬೂತ್‌ಗಳನ್ನು ಸಹ ತೆಗೆದುಕೊಂಡು ಹೋಗಿರುವ ನಿದರ್ಶನಗಳಿದ್ದು, ಫಲಾನುಭವಿಗಳ ಕೋರಿಕೆಯಂತೆ ಮೆಟಾಫೋನ್ (Metaphone) ಒದಗಿಸಿದ್ದಲ್ಲಿ ಅವರ ನಿವಾಸದ ಬಳಿ ಅಥವಾ ಅವರಿಗೆ ಪರಿಚಯಸ್ಥ ಅಂಗಡಿಗಳ ಹತ್ತಿರದಲ್ಲಿ ಇಟ್ಟುಕೊಳ್ಳಲು ಅನುಕೂಲವಾಗುವುದರಿಂದ ಮೆಟಾಫೋನ್‌ಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸಬಹುದಾಗಿದ್ದು ಹಾಗೂ ಈ ಮೆಟಾಫೋನ್‌ಗಳ ಮೌಲ್ಯ ಕಡಿಮೆ ಇರುವುದರಿಂದ ಹೆಚ್ಚು ಫಲಾನುಭವಿಗಳಿಗೆ ಈ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶ ಕಲ್ಪಿಸಬಹುದಾಗಿದ್ದು, ಈಗ ನೀಡುತ್ತಿರುವ ದೂರವಾಣಿ ಬೂತ್ ಬದಲಿಗೆ ಮೆಟಾಫೋನ್ ಅನ್ನು ಉಚಿತವಾಗಿ ಅಂಗವಿಕಲರಿಗೆ ನೀಡಲು ಯೋಜನೆಯನ್ನು ಮಾರ್ಪಡಿಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮಸಂಖ್ಯೆ (3) ರಲ್ಲಿ ಓದಲಾದ ನಡವಳಿಯಲ್ಲಿ, ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತ ಅಧ್ಯಕ್ಷತೆಯಲ್ಲಿ ರಚಿತವಾದ ಅಧಿಕಾರಯುತ ಸಮಿತಿಯ ದಿನಾಂಕ: 22-05-2007ರ ಸಭೆಯಲ್ಲಿ ಪ್ರಸ್ತಾವನೆಯ ಕುರಿತು ಚರ್ಚಿಸಲಾಗಿದ್ದು, ಯೋಜನೆಯನ್ನು ಪರಿಷ್ಕರಿಸಲು ಅನುಮೋದನೆ ನೀಡಿದ್ದು, ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಮಮಅ: 244:ಪಿಹೆಚ್‌ಪಿ:2006(2): ಬೆಂಗಳೂರು ದಿನಾಂಕ: 25-06-2007**

ಸರ್ಕಾರಿ ಆದೇಶ ಸಂಖ್ಯೆ: ಮಮಅ:433:ಪಿಹೆಚ್‌ಪಿ:96 ದಿನಾಂಕ: 29-03-97 ರಲ್ಲಿನ ಯೋಜನೆಯನ್ನು ಭಾಗಶಃ ಮಾರ್ಪಡಿಸಿ

Karnataka State Government Disabled Employees Association
Renukaradhya S
Nandeesh B

ಅಂಗವಿಕಲರಿಗೆ ದೂರವಾಣಿ ಬೂತ್ ವಿತರಿಸುವ ಯೋಜನೆಯಡಿ ಈಗ ನೀಡುತ್ತಿರುವ ದೂರವಾಣಿ ಬೂತ್ ಬದಲಿಗೆ ಮೆಟಾಫೋನನ್ನು ಉಚಿತವಾಗಿ ಅಂಗವಿಕಲರಿಗೆ ನೀಡಲು ಸದರಿ ಆದೇಶದಲ್ಲಿನ ಇತರೆ ಷರತ್ತುಗಳಿಗೂ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೆಟಾಫೋನ್‌ನ ಖರೀದಿಗೆ ತಗಲುವ ವೆಚ್ಚವನ್ನು ಫಲಾನುಭವಿಗಳಿಗೆ, ಅವರು ದೂರ ಸಂಪರ್ಕ ಇಲಾಖೆಗೆ ಪಾವತಿಸಿದ ರಸೀದಿ ಆಧಾರದ ಮೇಲೆ ಇಲಾಖೆಯು ನೀಡತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ ''2235-02-101-0-18 (ಯೋಜನೇತರ)'' ಅಡಿಯಲ್ಲಿ ಲಭ್ಯವಿರುವ ಆಯವ್ಯಯದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ 'ಸಮುದಾಯ ಆಧಾರಿತ ಅಂಗವಿಕಲರ ಪುನರ್ವಸತಿ ಯೋಜನೆ'ಯನ್ನು ಜಾರಿಗೆ ತರುವ ಬಗ್ಗೆ.

ಓದಲಾಗಿದೆ:
1. ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರು ಪತ್ರದ ಸಂಖ್ಯೆ:ನಿಕಆಇ:8:ಯೋಜನೆ: 96-97 ದಿನಾಂಕ 4-6-96.
2. ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ. 15-9-99ರಂದು ನಡೆದಿರುವ ಸಭೆಯ ತೀರ್ಮಾನ.

### ಪ್ರಸ್ತಾವನೆ:

ಮೇಲೆ ಓದಲಾದ (2)ರ ದಿನಾಂಕ: 15-9-99ರಂದು ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು - ಇವರು ರಾಜ್ಯದಲ್ಲಿರುವ ವಿವಿಧ ಬಗೆಯ ಅಂಗವಿಕಲತೆಯುಳ್ಳ ಸುಮಾರು ನಾಲ್ಕು ಲಕ್ಷ ಜನರ ಪುನರ್ವಸತಿಗಾಗಿ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆಗಳು, ನಗರ ಪ್ರದೇಶಗಳಲ್ಲಿನ ಅಂಗವಿಕಲ ಫಲಾನುಭವಿಗಳಿಗೆ ಮಾತ್ರ ಉಪಯೋಗವಾಗುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಅಂಗವಿಕಲರ ವೈದ್ಯಕೀಯ, ಶೈಕ್ಷಣಿಕ ಹಾಗೂ ಆರ್ಥಿಕ ಪುನರ್ವಸತಿ ಸೌಲಭ್ಯಕ್ಕೆ ಒಂದು ಹೊಸ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗೆ ಸಮುದಾಯ ಆಧಾರಿತ ಅಂಗವಿಕಲರ ಪುನರ್ವಸತಿ ಎಂಬ ಯೋಜನೆಯೊಂದನ್ನು ಸಿದ್ಧಪಡಿಸಿ, ಸರ್ಕಾರದ ಅನುಮೋದನೆಗಾಗಿ ಕಳುಹಿಸಿರುತ್ತಾರೆ.

ಮೇಲೆ ಓದಲಾದ (2)ರ ದಿನಾಂಕ: 15-9-99ರಂದು ಕಾರ್ಯದರ್ಶಿಗಳೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಪ್ರಸ್ತಾಪಿತ ಯೋಜನೆಯ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ:ಮಮ ಆ310 ಸಿಹೆಚ್‌ಪಿ 99, ಬೆಂಗಳೂರು, ದಿನಾಂಕ: 26-11-99**

ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು - ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ವಿವಿಧ ಬಗೆಯ ಅಂಗವಿಕಲತೆಯುಳ್ಳ, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿನ ಅಂಗವಿಕಲರ ಪುನರ್ವಸತಿಗಾಗಿ 'ಸಮುದಾಯ ಆಧಾರಿತ ಪುನರ್ವಸತಿ ಯೋಜನೆ'ಯನ್ನು 1999-2000ನೇ ಆರ್ಥಿಕ ಸಾಲಿನಿಂದ ಜಾರಿಗೆ ಬರುವಂತೆ ಈ ಆದೇಶಕ್ಕೆ ಲಗತ್ತಿಸಲಾಗಿರುವ ಅನುಬಂಧದಲ್ಲಿ ವಿವರಿಸಿರುವ ಷರತ್ತುಗಳಿಗೊಳಪಡಿಸಿ ಮಂಜೂರಾತಿ ನೀಡಲಾಗಿದೆ. ಈ ಹೊಸ ಯೋಜನೆಯನ್ನು ಲೆಕ್ಕ ಶೀರ್ಷಿಕೆ ''2235-02-101-0-32 (ಯೋಜನೆ)'' ಅಡಿಯಲ್ಲಿ 1999-2000ದ ಆರ್ಥಿಕ ಸಾಲಿನಲ್ಲಿ ಒದಗಿಸಲಾಗಿರುವ ರೂ. 50.00ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಜಾರಿಗೊಳಿಸತಕ್ಕದ್ದು.

ಈ ಆದೇಶವನ್ನು ಸಂಖ್ಯೆ: ಪಿಡಿ:109:ಪಿಟಿಪಿ 96 ದಿನಾಂಕ 21-7-97ರ ಟಿಪ್ಪಣಿಯಲ್ಲಿ ಯೋಜನಾ ಇಲಾಖೆಯ ಸಹಮತಿಯನ್ನು ಹಾಗೂ ಸಂಖ್ಯೆ: ಎಫ್‌ಡಿ: 829-ವೆಚ್ಚ:3-97 ದಿನಾಂಕ 9-9-97ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹುಲಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪ್ರತಿಯನ್ನು:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು.
3) ಸಹಾಯಕ ನಿರ್ದೇಶಕರು:ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು (ಎಲ್ಲಾ ಜಿಲ್ಲೆಗಳಿಗೆ - ನಿರ್ದೇಶಕರ ಮುಖಾಂತರ)
4) ಕಾರ್ಯದರ್ಶಿ: ಅಪರ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು - ಇವರ ಆಪ್ತ ಸಹಾಯಕರಿಗೆ.
5) ಶಾಖಾ ರಕ್ಷಣ ಕಡತ: ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

**ಸಂಖ್ಯೆ ಮಮಅ 310 ಪಿಹೆಚ್‌ಪಿ 99 ದಿನಾಂಕ 26-11-99ರ**

**ಸರ್ಕಾರಿ ಆದೇಶಕ್ಕೆ ಅನುಬಂಧ**

**ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯ ಮಾರ್ಗಸೂಚಿಗಳು**

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದಲ್ಲಿ ಒಂದು ಸಮೀಕ್ಷೆಯ ಪ್ರಕಾರ ಶೇಕಡ 1.6ರಷ್ಟು ಅಂಗವಿಕಲತೆಯುಳ್ಳ ವ್ಯಕ್ತಿಗಳಿರಬಹುದೆಂದು ತಜ್ಞರು ಅಂದಾಜಿಸಿದ್ದಾರೆ. ಇದರ ಆಧಾರದ ಮೇಲೆ ರಾಜ್ಯದಲ್ಲಿ ಸುಮಾರು 20 ಲಕ್ಷ ಅಂಗವಿಕಲತೆಯುಳ್ಳ ವ್ಯಕ್ತಿಗಳಿರಬಹುದೆಂದು ಅಂದಾಜಿಸಲಾಗಿದೆ. ಈ ಪೈಕಿ ಶೇಕಡ 76ರಷ್ಟು ಗರಿಷ್ಠ ಅಂಗವಿಕಲರು ಗ್ರಾಮಾಂತರ ಪ್ರದೇಶದಲ್ಲಿದ್ದು ಇವರುಗಳಿಗೆ ಪ್ರಸ್ತುತ ದೊರಕುತ್ತಿರುವ ಪುನರ್ವಸತಿ ಸೌಲಭ್ಯಗಳ ಪ್ರಮಾಣವು ಬಹಳ ಕಡಿಮೆ ಅಂಗವಿಕಲತೆಯನ್ನು ಪ್ರಾರಂಭದಲ್ಲೆ ಗುರುತಿಸಿ ವೈದ್ಯಕೀಯ ನೆರವು, ಪುನರ್ವಸತಿ, ಶಿಕ್ಷಣ, ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶ ಮುಂತಾದವುಗಳನ್ನು ಒದಗಿಸುವ

ಮುಖಾಂತರ ಅಂಗವಿಕಲರು ಸಕ್ರಿಯವಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಭಾಗವಹಿಸುವಂತೆ ಮಾಡುವುದು ಅತ್ಯಗತ್ಯ ಹಾಗೂ ಅನಿವಾರ್ಯ. ಇದುವರೆಗೂ ಸಂಸ್ಥೆಯನ್ನು ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿತ್ತು. ಆದರೆ ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಕೇಂದ್ರಬಿಂದುವನ್ನಾಗಿಟ್ಟುಕೊಂಡು ಅನುಷ್ಠಾನ ಗೊಳಿಸುವುದು ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಅಂಗವಿಕಲರ ಸವರತೋಮುಖ ಅಭಿವೃದ್ಧಿಗಾಗಿ ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸುವುದು ಅತ್ಯಗತ್ಯವಾಗಿದೆ.

**2. ಯೋಜನೆಯ ಹೆಸರು:**

ಈ ಯೋಜನೆಯನ್ನು ಅಂಗವಿಕಲರ ಸಮುದಾಯ ಆಧಾರಿತ ಪುನರ್ವಸತಿ (ಸ್ವಯಂ ಸೇವಾ ಸಂಸ್ಥೆಗಳಿಗೆ) ಧನಸಹಾಯ ಯೋಜನೆ ಎಂದು ಕರೆಯಲಾಗುವುದು.

**3. ಉದ್ದೇಶ:**

ಈ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೊಳಿಸುತ್ತಿದ್ದು ಉದ್ದೇಶಗಳು ಕೆಳಕಂಡಂತಿವೆ.

(1) ರಾಜ್ಯದಲ್ಲಿರುವ ಎಲ್ಲ ಅಂಗವಿಕಲರಿಗೆ ಅವರ ವಾಸಸ್ಥಾನದಲ್ಲೇ ಸಾಮಾಜಿಕ ಮತ್ತು ಆರ್ಥಿಕ ಪುನರ್ವಸತಿ ಸೇವೆಯನ್ನು ಒದಗಿಸಲು ಅವಕಾಶ ಕಲ್ಪಿಸುವುದು.

(2) ಅಂಗವಿಕಲರು ವಾಸಿಸುವ ಸ್ಥಳದಲ್ಲಿನ ಮೂಲಭೂತ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಸಮಾಜದ ಸಂಪೂರ್ಣ ಭಾಗಿತ್ವದೊಡನೆ ಪುನರ್ವಸತಿ ಸೇವೆಯನ್ನು ಒದಗಿಸುವುದು.

(3) ಸಾಮಾನ್ಯ ಜನರಿಗೆ ಲಭ್ಯವಿರುವ ಆರೋಗ್ಯ ಶಿಕ್ಷಣ, ಸಮಾಜ ಕಲ್ಯಾಣ, ಗ್ರಾಮೀಣಾಭಿವೃದ್ಧಿ ವಾಣಿಜ್ಯ ಮತ್ತು ಕೈಗಾರಿಕೆ, ಪಶುಸಂಗೋಪನೆ, ಖಾದಿ ಗ್ರಾಮೋದ್ಯೋಗ ಮುಂತಾದ ಸೌಲಭ್ಯಗಳನ್ನು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೂ ಸಹ ಸಮಾನವಾಗಿ ಒದಗಿಸುವುದು.

(4) ಅಂಗವಿಕಲತೆಯುಳ್ಳ ವ್ಯಕ್ತಿಗಳು ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲ ವಾಗುವಂತೆ ಸೂಕ್ತ ವೈಜ್ಞಾನಿಕ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸುವುದು.

(5) ಅಂಗವಿಕಲತೆಯುಳ್ಳ ವ್ಯಕ್ತಿಗಳ ನಾಗರೀಕ ಹಾಗೂ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಿ ಅಭಿವೃದ್ಧಿ ಪಡಿಸುವುದು.

(6) ಸಮಾಜದಲ್ಲಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಬಗ್ಗೆ ಅರಿವು ಮೂಡಿಸಿ ಅವರಿಗಿರುವ ದೈಹಿಕ ಹಾಗೂ ಮಾನಸಿಕ ಕೀಳರಿಮೆಯನ್ನು ತೊಡೆದುಹಾಕುವುದು.

(7) ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜೊತೆಗೆ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಹಾಗೂ ಸಮಾಜವು ಸಹ ಸಕ್ರಿಯವಾಗಿ ಸಂಪೂರ್ಣವಾಗಿ ಭಾಗವಹಿಸುವುದರ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

(8) ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಅಂಗವಿಕಲರ ಬಗ್ಗೆ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಿಸಿರುವ ಎಲ್ಲ ಕಾರ್ಯಕ್ರಮಗಳಲ್ಲಿನ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಪ್ರೇರೇಪಿಸುವುದು. ಸ್ವಾವಲಂಬಿಗಳಾಗಿ ಬಾಳಲು ಅವಕಾಶ ಕಲ್ಪಿಸುವುದು.

**4. ಅಂಗವಿಕಲತೆಯ ವ್ಯಾಖ್ಯಾನ:**

ಈ ಯೋಜನೆಯ ಉದ್ದೇಶಕ್ಕಾಗಿ ಈ ಕೆಳಕಂಡ ಅಂಗವಿಲತೆಯುಳ್ಳ ವ್ಯಕ್ತಿಗಳು ಸೇರುತ್ತಾರೆ.

(1) **ದೈಹಿಕ ಅಂಗವಿಕಲತೆಯುಳ್ಳವರು:** ಮೂಳೆಗಳು, ಕೀಲುಗಳು ಹಾಗೂ ಮಾಂಸಖಂಡಗಳ ದೋಷದಿಂದಾಗಿ ಅವಯವಗಳ ಚಲನೆಗೆ ತೊಂದರೆ ಆಗುತ್ತಿರುವುದು, ಮೆದುಳಿನ ಪಾರ್ಶ್ವ ವಾಯುವಿಗೆ ಒಳಗಾಗಿ ಇಲ್ಲವೇ



Karnataka State Government Disabled Employees Association
Poulkaradhya S
Indresh K

ನರದೌರ್ಬಲ್ಯದಿಂದ ಚಲನೆಗೆ ತೊಂದರೆ ಉಂಟಾಗಿರುವುದು. (ಶೇಕಡ 40ಕ್ಕಿಂತಲೂ ಹೆಚ್ಚು ದೈಹಿಕ ಅಂಗವಿಕಲತೆಯುಳ್ಳ ವ್ಯಕ್ತಿಗಳು ಮಾತ್ರ)

(2) **ದೃಷ್ಠಿದೋಷವುಳ್ಳವರು:** ಪೂರ್ಣವಾಗಿ ದೃಷ್ಟಿಶಕ್ತಿ ಇಲ್ಲದಿರುವುದು ಅಥವಾ ಕನ್ನಡಕ ಹಾಕಿಕೊಂಡಾಗಲೂ ದೃಷ್ಟಿಶಕ್ತಿ 6/60 ಅಥವಾ 20/200 ಸೈಲನ್ನನ್ನು ಮೀರದ ದೃಷ್ಟಿಶಕ್ತಿ ಅಥವಾ 20 ಡಿಗ್ರಿ ಕೋನದಷ್ಟೇ ಕಾಣುತ್ತಿರುವುದು.

(3) **ಶ್ರವಣ ದೋಷವುಳ್ಳವರು:** ಪರಸ್ಪರ ಮಾತನಾಡುವ ಸಂದರ್ಭದಲ್ಲಿ 70ಡೆಸಿಬಲ್ ಅಥವಾ ಅದಕ್ಕಿಂತ ಹೆಚ್ಚು ಶ್ರವಣ ಸಾಮರ್ಥ್ಯವನ್ನು ಕಳೆದುಕೊಂಡಿರುವ ವ್ಯಕ್ತಿಗಳು.

(4) **ಬುದ್ಧಿ ಮಾಂದ್ಯರು:** ಮಾನಸಿಕ ಬೆಳವಣಿಗೆ ಕುಂಠಿತ ಅಥವಾ ಅಪೂರ್ಣವಾಗಿರುವ ಅಂದರೆ ಬುದ್ಧಿಶಕ್ತಿಯ ಮಟ್ಟ ಸಾಧಾರಣ ಮಟ್ಟಕ್ಕಿಂತಲೂ ಕಡಿಮೆ ಇರುವ ಸ್ಥಿತಿಯ ವ್ಯಕ್ತಿಗಳು.

(5) **ಕುಷ್ಠರೋಗ ನಿವಾರಿತ ಅಂಗವಿಕಲರು:** ಕುಷ್ಠ ರೋಗದಿಂದ ಅಂಗವಿಕಲರಾದವರು.

(6) **ಬಹು ಅಂಗವಿಕಲತೆಯುಳ್ಳವರು:** ಒಂದಕ್ಕಿಂತ ಹೆಚ್ಚು ಬಗೆಯ ಅಂಗವಿಕಲತೆಯುಳ್ಳವರು.

(7) ಮಾನಸಿಕ ಅಸ್ವಸ್ಥತೆಯುಳ್ಳವರು.

**5. ಸ್ವಯಂ ಸೇವಾ ಸಂಸ್ಥೆಗಳಿಗೆ ಇರಬೇಕಾದ ಅರ್ಹತೆಗಳು:**

(1) ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಕನಿಷ್ಠ 3 ವರ್ಷಗಳಾಗಿರಬೇಕು.

(2) ಕನಿಷ್ಠ 2 ವರ್ಷ ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಪಡೆದಿರುವ ಅನುಭವ.

(3) ಸಂಸ್ಥೆಯು ಸಾಕಷ್ಟು ಸಿಬ್ಬಂದಿ ವರ್ಗದೊಂದಿಗೆ ಅಗತ್ಯವಾದ ಸೌಲಭ್ಯ ಸಂಪನ್ಮೂಲ ಹಾಗೂ ಆರ್ಥಿಕವಾಗಿ ಸುಸ್ಥಿತಿಯುಳ್ಳ ಆಡಳಿತ ವರ್ಗವನ್ನು ಹೊಂದಿರಬೇಕು.

(4) ಸಂಸ್ಥೆಯು ಯಾವುದೇ ಓರ್ವ ವ್ಯಕ್ತಿಯ ಅಥವಾ ಒಂದು ಜನಾಂಗದ ಲಾಭಕ್ಕಾಗಿ ನಡೆಯುತ್ತಿರಬಾರದು.

(5) ಸಂಸ್ಥೆಯು ಅಧಿಕೃತವಾಗಿ ರಚಿತವಾಗಿರುವ ಆಡಳಿತ ಮಂಡಳಿಯನ್ನು ಹೊಂದಿದ್ದು ಆಡಳಿತ ವರ್ಗದ ಅಧಿಕಾರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಸ್ಪಷ್ಟ ಹಾಗೂ ಖಚಿತವಾಗಿ ಬರವಣಿಗೆಯಲ್ಲಿ ಸಂಸ್ಥೆಯ ಸಂವಿಧಾನದಲ್ಲಿ ನಿರೂಪಿತವಾಗಿರಬೇಕು.

(6) ಸಂಸ್ಥೆಯ ಸೇವೆಗಳು ಯಾವುದೇ ಜಾತಿ, ಪಂಥ, ಮತ ಮತ್ತು ಭಾಷೆಗಳನ್ನು ಪರಿಗಣಿಸದೇ ಎಲ್ಲರಿಗೂ ಲಭ್ಯವಿರಬೇಕು.

(7) ಈ ಯೋಜನೆಯನ್ನು ಕೈಗೊಳ್ಳುವ ಕ್ಷೇತ್ರ, ಪ್ರದೇಶ, ತಾಲ್ಲೂಕು, ಜಿಲ್ಲೆಗಳ ಸಂಪೂರ್ಣ ಪರಿಜ್ಞಾನವು ಸಂಸ್ಥೆಗಿರಬೇಕು.

(8) ಈ ಯೋಜನೆಯ ಉದ್ದೇಶಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳು ಯಾವುದೆಂದರೆ

(ಅ) ಇಂಡಿಯನ್ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1860ರ ಪ್ರಕಾರ (xxi of 1860)

(ಆ) ಯಾವುದೇ ಲಾಭದ ಉದ್ದೇಶವಿಲ್ಲದೇ ನೊಂದಣಿಯಾಗಿರುವ ಚಾರಿಟಬಲ್ ಕಂಪನಿ.

(ಇ) ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಣಿಯಾಗಿರುವ ಸಾರ್ವಜನಿಕ ಟ್ರಸ್ಟ್.

(ಈ) ನೋಂದಣಿಯಾಗಿರುವ ಸಮಾಜ ಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಗಳು.

(ಉ) 1960ರ ಕರ್ನಾಟಕ (ಮೈಸೂರು) ಸಂಘ ಸಂಸ್ಥೆಗಳ ಅಧಿನಿಯಮದ ಪ್ರಕಾರ ನೋಂದಣಿಯಾಗಿರುವ ಸಂಸ್ಥೆಗಳು.

Karnataka State Government Disabled Employees Association
Renukaradhya R
Radesh R

6. **ಯೋಜನೆಯ ಕಾರ್ಯಚಟುವಟಿಕೆಗಳು:**

(1) ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಗುರುತಿಸಿ ಅವರ ಅಗತ್ಯತೆಗಳನ್ನು ಅಂದಾಜು ಮಾಡುವುದು.

(2) ಅಂಗವಿಕಲತೆಯುಳ್ಳ ವ್ಯಕ್ತಿಗಳ ಕುಟುಂಬ ಮತ್ತು ಸಮಾಜದ ಸಹಯೋಗದೊಂದಿಗೆ ಅವರ ದೈನಂದಿನ ಚಟುವಟಿಕೆಗಳಿಗೆ ಅನುಕೂಲವಾಗುವ ತರಬೇತಿ ನೀಡುವುದು.

(3) ಅಂಗವಿಕಲತೆಯುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಸಮನ್ವಯ ಶಿಕ್ಷಣಕ್ಕೆ ಒಳಪಡಿಸುವುದು.

(4) ತೀವ್ರತರದ ಅಂಗವಿಕಲತೆಯುಳ್ಳ ವ್ಯಕ್ತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣಕ್ಕೆ ಒಳಪಡಿಸಲ್ಪಟ್ಟ ಸ್ವಯಂ ಸಹಾಯ ಗುಂಪುಗಳನ್ನು ರಚಿಸಿ ಅಂತಹವರಿಗೆ ಸಾಮಾನ್ಯ ಶಾಲೆಗಳಲ್ಲಿ ಸಮನ್ವಯ ಅಥವಾ ಸ್ವಯಂ ಉದ್ಯೋಗ ಕೈಗೊಳ್ಳಲು ಸಿದ್ಧಪಡಿಸುವುದು. ತೀವ್ರತರವಾದ ಅಂಗವೈಕಲ್ಯತೆಯುಳ್ಳ ಮಕ್ಕಳು ಮತ್ತು ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಿ ಪ್ರವೇಶ ಕಲ್ಪಿಸುವುದು.

(5) ಸರ್ಕಾರ/ಸರ್ಕಾರೇತರ ಸಂಸ್ಥೆಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ಒದಗಿಸುವುದು.

(6) ಜಿಲ್ಲಾಮಟ್ಟದಲ್ಲಿ ಸಾಧನ ಸಲಕರಣೆಗಳ ಕಾರ್ಯಾಗಾರಗಳನ್ನು ಏರ್ಪಡಿಸುವುದಲ್ಲದೆ ಸರಳವಾದ ಉಪಕರಣಗಳ ನಿರ್ವಹಣೆ ಹಾಗೂ ಪೂರೈಕೆಯು ತಾಲ್ಲೂಕು ಮಟ್ಟದಲ್ಲೇ ದೊರೆಯುವಂತೆ ಮಾಡುವುದು.

(7) ಸಮಾಜ, ಸರ್ಕಾರ ಹಾಗೂ ಸರ್ಕಾರೇತರದಲ್ಲಿ ಈಗಾಗಲೇ ಜಾರಿಯಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೈಗೊಳ್ಳಬಹುದಾದ ಪೂರಕ ವೃತ್ತಿಪರ ವಿಷಯಗಳ ಅಂದಾಜು ಮಾಡಿ ತರಬೇತಿ ನೀಡುವುದು.

(8) ಜಾರಿಯಲ್ಲಿರುವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿನ ಸವಲತ್ತುಗಳನ್ನು ಉಪಯೋಗಿಸಿಕೊಂಡು ವೃತ್ತಿಪರ ತರಬೇತಿ ನೀಡುವುದು.

(9) ಜಾರಿಯಲ್ಲಿರುವ ಗ್ರಾಮೀಣಾಭಿವೃದ್ಧಿ ಹಾಗೂ ಇತರೆ ಕಲ್ಯಾಣ ಯೋಜನೆಗಳಡಿಯಲ್ಲಿನ ಸವಲತ್ತುಗಳನ್ನು......

7. **ಸ್ವಯಂ ಸೇವಾ ಸಂಸ್ಥೆಗಳ ಪಾತ್ರ:**

ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸುತ್ತಿರುವುದರಿಂದ ಸಂಬಂಧಿಸಿದ ಸಂಸ್ಥೆಯು ಕ್ಷೇತ್ರದ ಸಂಪೂರ್ಣ ಪರಿಜ್ಞಾನವನ್ನು ಹೊಂದಿರತಕ್ಕದ್ದು. ಸಂಸ್ಥೆಯು ಸಾರ್ವಜನಿಕರು, ಅಂಗವಿಕಲತೆಯುಳ್ಳ ವ್ಯಕ್ತಿಗಳು, ಸಮಾಜದ ಗಣ್ಯವ್ಯಕ್ತಿಗಳು ಮತ್ತು ಸರ್ಕಾರದೊಂದಿಗೆ ಉತ್ತಮ ಬಾಂಧವ್ಯವನ್ನು ಕಲ್ಪಿಸಿ ಈ ಯೋಜನೆಯ ಸಂಪೂರ್ಣ ಲಾಭವು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅಗತ್ಯವಾಗಿರುವಂತೆ ಶ್ರಮಿಸತಕ್ಕದ್ದು. ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅಗತ್ಯವಾಗಿರುವ ಸಾಧನ ಸಲಕರಣೆಗಳು, ಸರ್ಕಾರ/ಸರ್ಕಾರೇತರ ಸಂಸ್ಥೆಗಳಲ್ಲಿ ದೊರೆಯುವ ಸೌಲಭ್ಯಗಳು, ಉದ್ಯೋಗದ ಅವಕಾಶ, ಪುನರ್ವಸತಿ ಸೇವೆಗಳು ಮುಂತಾದವುಗಳ ಸಂಪೂರ್ಣ ಜ್ಞಾನವನ್ನು ಸ್ವಯಂ ಸೇವಾ ಸಂಸ್ಥೆಯು ಹೊಂದಿರತಕ್ಕದ್ದು. ಕ್ಷೇತ್ರದಲ್ಲಿ ವ್ಯಾಪಕ ಪ್ರವಾಸ ಕೈಗೊಂಡು ಅಂಗವಿಕಲರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರೊಂದಿಗೆ ಅಂಗವಿಕಲರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಸ್ವಯಂ ಉದ್ಯೋಗ ಕೈಗೊಳ್ಳುವಂತೆ ಪ್ರೇರೇಪಿಸಿ ಪುನರ್ವಸತಿ ಸೇವೆಗಳನ್ನು ಒದಗಿಸತಕ್ಕದ್ದು. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲತೆಯುಳ್ಳ ವ್ಯಕ್ತಿಗಳು, ಸಮಾಜ ಮತ್ತು ಸರ್ಕಾರದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸತಕ್ಕದ್ದು. ಈ ಕ್ಷೇತ್ರದಲ್ಲಿ ಪರಿಜ್ಞಾನ ಹೊಂದಿರುವವರ ನಡುವೆ ಸಹ ಸಂಪರ್ಕವನ್ನಿರಿಸಿಕೊಂಡು ಅಂಗವಿಕಲರಿಗೆ ಅಗತ್ಯವಿರುವ ಎಲ್ಲ ಸೌಲಭ್ಯ ಮತ್ತು ಸವಲತ್ತುಗಳನ್ನು ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು. ಇಲಾಖೆ/ ಸರ್ಕಾರವು ಕಾಲಕಾಲಕ್ಕೆ ನೀಡುವ ಸಲಹೆ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.

Karnataka State Government Disabled Employees Association
Renukaradhya S
Nagesh R

**8. ಯೋಜನೆಯ ಕಾರ್ಯವಿಧಾನ:**

ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಸ್ವಯಂ ಸೇವಾ ಸಂಸ್ಥೆಯು ಗ್ರಾಮ (ಮಂಡಲ) ಪಂಚಾಯತಿ ಮಟ್ಟ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡವರನ್ನು ಒಳಗೊಂಡಂತೆ ಸಮಿತಿಗಳನ್ನು ರಚಿಸಿ ಅವರುಗಳ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನಗಳ ಪ್ರಕಾರ ಯೋಜನೆಯನ್ನು ಜಾರಿಗೊಳಿಸಬೇಕಾಗಿರುತ್ತದೆ.

(1) ಗ್ರಾಮ (ಮಂಡಲ) ಪಂಚಾಯಿತಿ ಮಟ್ಟದ ಸಮಿತಿ: ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

| | | |
|---|---|---|
| ಗ್ರಾಮ (ಮಂಡಲ) ಪಂಚಾಯಿತಿ ಕಾರ್ಯದರ್ಶಿ | - | ಅಧ್ಯಕ್ಷರು |
| ಪ್ರಾಥಮಿಕ ಶಾಲಾ ಶಿಕ್ಷಕರು | - | ಸದಸ್ಯರು |
| ಮಹಿಳಾ ಆರೋಗ್ಯ ಕಾರ್ಯಕರ್ತೆಯರು | - | ಸದಸ್ಯರು |
| ಪುರುಷ ಆರೋಗ್ಯ ಕಾರ್ಯಕರ್ತರು | - | ಸದಸ್ಯರು |
| ಅಧ್ಯಕ್ಷರಿಂದ ನೇಮಕವಾಗುವ ಇಬ್ಬರು ಅಂಗವಿಕಲತೆಯುಳ್ಳ ವ್ಯಕ್ತಿಗಳು | - | ಸದಸ್ಯರು |
| ಸ್ಥಳೀಯ ಕಾರ್ಯಕರ್ತರು | - | ಸದಸ್ಯ ಕಾರ್ಯದರ್ಶಿ |
| ಗ್ರಾಮ ಪಂಚಾಯತಿಯ | - | ಅಧ್ಯಕ್ಷರು/ಉಪಾಧ್ಯಕ್ಷರು/ ಸದಸ್ಯರು |

(2) ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿಯ ಕರ್ತವ್ಯಗಳು:

(ಅ) ಅಂಗವಿಕಲತೆಯುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ದಾಖಲು ಮಾಡಿ ಸಮನ್ವಯ ಶಿಕ್ಷಣಕ್ಕೆ ಒಳಪಡಿಸಲು ಸ್ವಯಂ ಸೇವಾ ಸಂಸ್ಥೆಗೆ ಸಹಕಾರ ನೀಡುವುದರೊಂದಿಗೆ ಕುಟುಂಬಗಳು ಹಾಗೂ ಸಮಾಜದಲ್ಲಿ ಈ ಬಗ್ಗೆ ಅರಿವು ಮೂಡಿಸಿ ಎಲ್ಲ ಅಂಗವಿಕಲ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಅಗತ್ಯ ಅನುಕೂಲ ಒದಗಿಸುವುದು.

(ಆ) ಅಂಗವಿಕಲತೆಯುಳ್ಳ ಮಕ್ಕಳು ಹಾಗೂ ವ್ಯಕ್ತಿಗಳ ಅಗತ್ಯಕ್ಕನುಗುಣವಾಗಿ ಜಾರಿಯಲ್ಲಿರುವ ಯೋಜನೆಗಳಡಿಯಲ್ಲಿ ಲಭ್ಯವಿರುವ ಸಾಧನ ಸಲಕರಣೆಗಳು ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲು ಸ್ವಯಂ ಸೇವಾ ಸಂಸ್ಥೆಗೆ ಸಹಕಾರ ನೀಡುವುದು.

(ಇ) ಅಂಗವಿಕಲತೆಯನ್ನು ಮೂಲದಲ್ಲೇ ಗುರುತಿಸಿ ಅಗತ್ಯವಿರುವ ವೈದ್ಯಕೀಯ ನೆರವು, ಚಿಕಿತ್ಸೆ ಮುಂತಾದುವುಗಳನ್ನು ಒದಗಿಸಿ ಅಂಗವಿಕಲತೆಯನ್ನು ತಡೆಗಟ್ಟಿ ಅಗತ್ಯ ಪುನರ್ವಸತಿಯನ್ನು ಕಲ್ಪಿಸಲು ಸ್ವಯಂ ಸೇವಾ ಸಂಸ್ಥೆಗೆ ಸಹಕಾರ ನೀಡುವುದು.

(ಈ) ಗ್ರಾಮಮಟ್ಟದಲ್ಲಿ ಅಂಗವಿಕಲತೆಯುಳ್ಳ ವ್ಯಕ್ತಿಗಳು ಹಾಲಿ ಜಾರಿಯಲ್ಲಿರುವ ಸರ್ಕಾರ/ಸರ್ಕಾರೇತರ ಸಂಸ್ಥೆಗಳಡಿಯಲ್ಲಿನ ಯೋಜನೆಗಳಡಿಯಲ್ಲಿ ಸ್ವಯಂ ಸೇವಾ ಉದ್ಯೋಗ ಕೈಗೊಳ್ಳಲು ಅವಕಾಶ ಕಲ್ಪಿಸಲು ಸ್ವಯಂ ಸೇವಾ ಸಂಸ್ಥೆಗೆ ಸಹಕರಿಸುವುದು.

(ಉ) ಯೋಜನೆಯ ಅನುಷ್ಠಾನದ ಬಗ್ಗೆ ನಿಗಾ ವಹಿಸಿ ಯೋಜನೆಯ ಸಂಪೂರ್ಣ ಲಾಭವು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ತಲುಪುವಂತೆ ಸ್ವಯಂ ಸೇವಾ ಸಂಸ್ಥೆ ಹಾಗೂ ಫಲಾನುಭವಿಗಳಿಗೆ ಅಗತ್ಯ ಅನುಕೂಲ ಕಲ್ಪಿಸುವುದು.

(3) ತಾಲ್ಲೂಕು ಮಟ್ಟದ ಸಮಿತಿ: ತಾಲ್ಲೂಕು ಮಟ್ಟದ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

Karnataka State Government Disabled Employees Association
Renukaradhya S
Indiresh P

ತಾಲ್ಲೂಕಿನ ತಹಶೀಲ್ದಾರರು - ಅಧ್ಯಕ್ಷರು

ತಾಲ್ಲೂಕು ಪಂಚಾಯತಿಯ - ಅಧ್ಯಕ್ಷರು ಸದಸ್ಯರುಗಳು

ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು - ಸದಸ್ಯ ಕಾರ್ಯದರ್ಶಿ

ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕದ ವೈದ್ಯರು - ಸದಸ್ಯರು

ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರು - ಸದಸ್ಯರು

ತಾಲ್ಲೂಕು ಪಂಚಾಯತಿ ಸಮಿತಿ ಕಾರ್ಯದರ್ಶಿಗಳು - ಸದಸ್ಯರು

ಅಧ್ಯಕ್ಷರಿಂದ ನೇಮಕವಾಗುವ ಇಬ್ಬರು ಅಂಗವಿಕಲತೆಯುಳ್ಳ ವ್ಯಕ್ತಿಗಳು - ಸದಸ್ಯರು

(4) ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯಗಳು:

(ಅ) ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿಗೆ ಅಗತ್ಯ ಮಾರ್ಗದರ್ಶನ ನೀಡುವುದು.

(ಆ) ವಿವಿಧೋದ್ದೇಶ ಕಾರ್ಯಕರ್ತರ ಕಾರ್ಯ ಚಟುವಟಿಕೆಗಳನ್ನು ಪರಾಮರ್ಶಿಸಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಶಿಕ್ಷಣ, ಆರೋಗ್ಯ ಪುನರ್ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

(ಇ) ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ವ್ಯವಸಾಯ ಮುಂತಾದ ಇಲಾಖೆಗಳ ಕಲ್ಯಾಣ ಯೋಜನೆಗಳಡಿಯಲ್ಲಿನ ಸವಲತ್ತುಗಳನ್ನು ಅಂಗವಿಕಲರಿಗೆ ಒದಗಿಸಲು ಅಗತ್ಯಕ್ರಮ ತೆಗೆದುಕೊಳ್ಳುವುದು.

(ಈ) ಅಂಗವಿಕಲತೆಯುಳ್ಳ ವ್ಯಕ್ತಿಗಳ ಅಗತ್ಯತೆಗಳಿಗನುಗುಣವಾಗಿ ಸೌಲಭ್ಯಗಳನ್ನು ಒದಗಿಸಿ ಅಗತ್ಯ ಸೇವೆ ಸಲ್ಲಿಸುವ ಸಲುವಾಗಿ ಸ್ಥಳೀಯ ಕಾರ್ಯಕರ್ತರನ್ನು (L.F.)ಗುರುತಿಸಿ ನೇಮಕ ಮಾಡಲು ಸ್ವಯಂ ಸೇವಾ ಸಂಸ್ಥೆಗೆ ಮಾರ್ಗದರ್ಶನ ಮಾಡುವುದು.

(ಉ) ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಗಳನ್ನು ಏರ್ಪಡಿಸಿ ಅಂಗವಿಕಲರಿಗೆ ಶಿಕ್ಷಣ, ಸ್ವಯಂ ಉದ್ಯೋಗ, ಮತ್ತಿತರ ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗೆ ಅವಕಾಶ ಕಲ್ಪಿಸುವುದು.

(ಊ) ನಿಯಮಿತವಾಗಿ ಗ್ರಾಮ(ಮಂಡಲ) ಪಂಚಾಯತಿ ಮಟ್ಟದ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಸಮಿತಿಗಳ ಸಭೆಗಳನ್ನು ಏರ್ಪಡಿಸಿ ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಅಗತ್ಯಕ್ರಮಗಳನ್ನು ತೆಗೆದುಕೊಳ್ಳುವುದು.

(ಋ) ಅಂಗವಿಕಲರ ಅಗತ್ಯತೆಗಳಿಗನುಗುಣವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸಾಧನ ಸಲಕರಣೆಗಳು ತಾಲ್ಲೂಕು ಮಟ್ಟದಲ್ಲೇ ದೊರೆಯುವಂತೆ ಮಾಡುವುದು.

(ೠ) ಸಮಾಜದ ಗಣ್ಯವ್ಯಕ್ತಿಗಳು, ಅಧಿಕಾರಿಗಳು, ಅಂಗವಿಕಲತೆಯುಳ್ಳ ವ್ಯಕ್ತಿಗಳು, ಜನ ಪ್ರತಿನಿಧಿಗಳು ಮುಂತಾದವರ ಸಭೆಗಳನ್ನು ಏರ್ಪಡಿಸಿ, ಸಮಾಜದಲ್ಲಿ ಅಂಗವಿಕಲರ ಬಗ್ಗೆ ಅರಿವು ಮೂಡಿಸಿ ಅವರಿಗಿರುವ ಕೀಳರಿಮೆಯನ್ನು ತೊಡೆದುಹಾಕುವುದು.

(ಎ) ತಾಲ್ಲೂಕಿನ ಸಾರ್ವಜನಿಕರ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸುವ ವೈದ್ಯಕೀಯ ಶಿಬಿರಗಳು ಮುಂತಾದೆಡೆಗಳಲ್ಲಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ, ನೆರವು, ಸರ್ಜರಿ ಮುಂತಾದುವುಗಳನ್ನು ಒದಗಿಸುವುದು. ಮತ್ತು ಇದೇ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಗ್ರಾಮಮಟ್ಟದ ಸಮಿತಿಗೆ ತಿಳಿಸುವುದು, ಸಹಕರಿಸುವುದು.

Karnataka State Government Disabled Employees Association
Renukaradhya S
Indresh R

(ಏ) ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ಶಿಬಿರಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗೆ ಅಗತ್ಯ ಅನುಕೂಲ ಕಲ್ಪಿಸುವುದು.

(5) ಜಿಲ್ಲಾ ಮಟ್ಟದ ಸಮಿತಿ: ಜಿಲ್ಲಾಮಟ್ಟದ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

| | | |
|---|---|---|
| ಜಿಲ್ಲಾಧಿಕಾರಿಗಳು | - | ಅಧ್ಯಕ್ಷರು |
| ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು | - | ಉಪಾಧ್ಯಕ್ಷರು |
| ಜಿಲ್ಲೆಯ ಲೀಡ್ ಬ್ಯಾಂಕ್ ವ್ಯವಸ್ಥಾಪಕರು | - | ಸದಸ್ಯರು |
| ಜಿಲ್ಲೆಯ ರೋಟರಿ/ಲಯನ್ಸ್ ಸಂಸ್ಥೆಯ ಪ್ರತಿನಿಧಿ | - | ಸದಸ್ಯರು |
| ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು | - | ಸದಸ್ಯರು |
| ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | - | ಸದಸ್ಯರು |
| ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿಗಳು | - | ಸದಸ್ಯ ಕಾರ್ಯದರ್ಶಿ |
| ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | - | ಸದಸ್ಯರು |
| ಜಿಲ್ಲಾಧಿಕಾರಿಗಳಿಂದ ನೇಮಕಗೊಂಡ ಇಬ್ಬರು ಅಂಗವಿಕಲತೆಯುಳ್ಳ ವ್ಯಕ್ತಿಗಳು | - | ಸದಸ್ಯರು |
| ಜಿಲ್ಲಾಧಿಕಾರಿಗಳಿಂದ ನೇಮಕಗೊಂಡ ಅಂಗವಿಕಲತೆಯುಳ್ಳ ವ್ಯಕ್ತಿಗಳ ಕ್ಷೇಮಕ್ಕಾಗಿ ಶ್ರಮಿಸುತ್ತಿರುವ ಒಂದು ಸಂಸ್ಥೆಯ ಪ್ರತಿನಿಧಿ | - | ಸದಸ್ಯರು |
| ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ | - | ಸದಸ್ಯರು |
| ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಯ ಪ್ರತಿನಿಧಿ/ಅಧ್ಯಕ್ಷರು/ಕಾರ್ಯದರ್ಶಿಗಳು | - | ಸದಸ್ಯರು |

**(6) ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು:**

(ಅ) ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯು ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಕಾಲಕಾಲಕ್ಕೆ ಪರಾಮರ್ಶಿಸಿ ಅಗತ್ಯ ಮಾರ್ಗದರ್ಶನ ನೀಡುವುದರೊಂದಿಗೆ ಯೋಜನೆಯ ಸಂಪೂರ್ಣ ಲಾಭವು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ದೊರೆಯುವಂತೆ ಮಾಡುವುದು.

(ಆ) ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಸಮಿತಿಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು.

(ಇ) ಜಿಲ್ಲೆಯಲ್ಲಿನ ಎಲ್ಲ ಅಂಗವಿಕಲತೆಯುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ದಾಖಲಾಗಿ ಸಮನ್ವಯ ಶಿಕ್ಷಣಕ್ಕೆ ಒಳಪಡುವಂತೆ ಕ್ರಮ ತೆಗೆದುಕೊಳ್ಳುವುದು.

(ಈ) ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅವರುಗಳ ವಾಸಸ್ಥಳದಲ್ಲೇ ಸುಲಭವಾಗಿ ಸಾಧನ ಸಲಕರಣೆಗಳು ದೊರೆಯುವಂತೆ ಮಾಡುವುದು.

(ಉ) ಜಾರಿಯಲ್ಲಿರುವ ಯೋಜನೆಗಳಡಿಯಲ್ಲಿ ಸ್ವಯಂ ಉದ್ಯೋಗವನ್ನು ಕೈಗೊಳ್ಳುವಂತೆ ಅಂಗವಿಕಲರಲ್ಲಿ ಜಾಗೃತಿ ಮೂಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

Karnataka State Government Disabled Employees Association
Renukaradhya S
Mukesh B

**9. ರಾಜ್ಯ ಮಟ್ಟದ ಸಮಿತಿ:**

ರಾಜ್ಯ ಮಟ್ಟದ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

| | | |
|---|---|---|
| ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ | - | ಅಧ್ಯಕ್ಷರು |
| ಉಪ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ | - | ಸದಸ್ಯ ಕಾರ್ಯದರ್ಶಿ |
| ಸಹಾಯಕ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ | - | ಸದಸ್ಯರು |
| ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರಿಂದ ನೇಮಕವಾಗುವ ಇಬ್ಬರು ಅಂಗವಿಕಲತೆಯುಳ್ಳ ವ್ಯಕ್ತಿಗಳು | - | ಸದಸ್ಯರು |
| ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರಿಂದ ನೇಮಕಗೊಳ್ಳುವ ಎರಡು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು | - | ಸದಸ್ಯರು |
| ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಕೈಗೊಳ್ಳುವ ಸಂಸ್ಥೆಯ ಪ್ರತಿನಿಧಿ/ಅಧ್ಯಕ್ಷರು/ಕಾರ್ಯದರ್ಶಿಗಳು | - | ಸದಸ್ಯರು |

**(1) ರಾಜ್ಯ ಮಟ್ಟದ ಸಮಿತಿಯ ಕರ್ತವ್ಯಗಳು:**

(ಅ) ಸ್ವಯಂ ಸೇವಾ ಸಂಸ್ಥೆಯು ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಕಾಲಕಾಲಕ್ಕೆ ಅಗತ್ಯ ತನಿಖೆ ಕೈಗೊಂಡು ಯೋಜನೆಯು ವ್ಯವಸ್ಥಿತವಾಗಿ ನಿಗದಿತ ಸಮಯದೊಳಗೆ ಜಾರಿಗೊಳ್ಳುವಂತೆ ಕ್ರಮ ತೆಗೆದುಕೊಳ್ಳುವುದು.

(ಆ) ಸರ್ಕಾರ/ಸರ್ಕಾರೇತರ ಸಂಸ್ಥೆಗಳಡಿ ಜಾರಿಯಲ್ಲಿರುವ ಯೋಜನೆಗಳಡಿಯಲ್ಲಿನ ಸೌಲಭ್ಯಗಳನ್ನು ಉಪಯೋಗಿಸಿ ಕೊಳ್ಳಲು ಸ್ವಯಂ ಸೇವಾ ಸಂಸ್ಥೆಗೆ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡುವುದು.

(ಇ) ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯು ಅನುಷ್ಠಾನಗೊಳ್ಳುವ ಎಲ್ಲ ಜಿಲ್ಲೆಗಳಲ್ಲಿ ಯೋಜನೆಯ ಮೇಲ್ವಿಚಾರಣೆ.

(ಈ) ಸ್ವಯಂ ಉದ್ಯೋಗ, ಸಮನ್ವಯ ಶಿಕ್ಷಣ, ಪುನರ್ವಸತಿ ಮುಂತಾದ ಕಾರ್ಯಕ್ರಮಗಳ ಮೇಲ್ವಿಚಾರಣೆ.

**10. ಸ್ಥಳೀಯ ಕಾರ್ಯಕರ್ತರು ಮತ್ತು ವಿವಿಧೋದ್ದೇಶ ಕಾರ್ಯಕರ್ತರ ಕರ್ತವ್ಯಗಳು:**

ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಪ್ರತಿ 5000 ಜನಸಂಖ್ಯೆಗೆ ಒಬ್ಬರಂತೆ ಸ್ಥಳೀಯ ಕಾರ್ಯಕರ್ತರನ್ನು ಪ್ರತಿ 50000 ಜನಸಂಖ್ಯೆಗೆ ಒಬ್ಬರಂತೆ ವಿವಿಧೋದ್ದೇಶ ಕಾರ್ಯಕರ್ತರನ್ನು ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಸೇವೆ ಸಲ್ಲಿಸಲು ತೊಡಗಿಸಬೇಕಾಗಿರುತ್ತದೆ. ಈ ಕಾರ್ಯಕರ್ತರು ಅಂಗವಿಕಲರಿಗೆ ಸೇವೆ ಸಲ್ಲಿಸಲು ತರಬೇತಿಯನ್ನು ಪಡೆದಿರುವವರಾಗಿರಬೇಕಾಗಿರುತ್ತದೆ. ಅಲ್ಲದೆ ಸ್ಥಳೀಯ ಕಾರ್ಯಕರ್ತರು ಆಯಾ ತಾಲ್ಲೂಕಿನ ನಿವಾಸಿಗಳಾಗಿ ಕ್ಷೇತ್ರದ ಸಂಪೂರ್ಣ ಪರಿಜ್ಞಾನವಿರುವುದು ಕಡ್ಡಾಯ. ವಿವಿಧೋದ್ದೇಶ ಕಾರ್ಯಕರ್ತರು ತರಬೇತಿ ಹೊಂದಿದವರಾಗಿದ್ದು ಸಂಬಂಧಿಸಿದ ಜಿಲ್ಲೆಯ ಸಂಪೂರ್ಣ ಪರಿಜ್ಞಾನ ಹಾಗೂ ನಿವಾಸಿಗಳಾಗಿರತಕ್ಕದ್ದು.

ವಿವಿಧೋದ್ದೇಶ ಕಾರ್ಯಕರ್ತರು ಕನಿಷ್ಠ 6 ತಿಂಗಳಿಂದ ಒಂದು ವರ್ಷದವರೆಗೆ ತರಬೇತಿಯನ್ನು ಪಡೆಯುವಂತೆ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಸಮಯದಲ್ಲಿ ಸ್ವಯಂ ಸೇವಾ ಸಂಸ್ಥೆಯವರು ಈ ತರಬೇತಿಯ ವ್ಯವಸ್ಥೆ ಮಾಡುವುದು, ಇದರ ಜೊತೆಗೆ ಇದೇ ಅವಧಿಯಲ್ಲಿ ಸ್ಥಳೀಯ ಕಾರ್ಯಕರ್ತರಿಗೂ ಸಂಚಿತ ಅವಧಿಯ ತರಬೇತಿಯನ್ನು ಹಮ್ಮಿಕೊಳ್ಳಲಾಗುವುದು. ಈ ಸಂಪೂರ್ಣ ಕಾರ್ಯಕ್ರಮ ಸಮುದಾಯ ಆಧಾರಿತ ಪುನಶ್ಚೇತನ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅನುಭವವಿರುವ, ಅಗತ್ಯವಿರುವ ತರಬೇತಿ ಹೊಂದಿದ



Karnataka State Government Disabled Employees Association
Renukaradhya S
Indresh R

ಕಾರ್ಯಕರ್ತರನ್ನು ಎಲ್ಲ ಹಂತಗಳಲ್ಲಿ ಇರುವುದಾಗಿ ಭಾವಿಸಿ ಸ್ವಯಂ ಸೇವಾ ಸಂಸ್ಥೆಗಳಿಗೆ ಕಾರ್ಯಕ್ರಮವನ್ನು ಜಾರಿಗೊಳಿಸಲು ವಹಿಸಲಾಗಿದೆ. ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ತರಬೇತಿಯ ಅವಶ್ಯಕತೆ ಕಂಡುಬಂದಲ್ಲಿ ಸೇವಾ-ಇನ್-ಆಕ್ಸನ್ ಸಂಸ್ಥೆಯವರ ಸಂಪರ್ಕವನ್ನಿಟ್ಟುಕೊಂಡು ತರಬೇತಿಯನ್ನು ವ್ಯವಸ್ಥೆಗೊಳಿಸುವುದು. ಈ ತರಬೇತಿಗೋಸ್ಕರ ಪ್ರತಿಯೊಂದು ಸ್ವಯಂ ಸೇವಾ ಸಂಸ್ಥೆಯವರು 50,000.00 ರೂ.ಗಳವರೆಗೆ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಖರ್ಚು ಮಾಡಬಹುದಾಗಿರುತ್ತದೆ. ಸ್ವಯಂ ಸೇವಾ ಸಂಸ್ಥೆಯವರಿಗೆ ನೀಡಿದ ಒಟ್ಟು ಹಣದಲ್ಲಿ ಈ ವೆಚ್ಚವನ್ನು ಭರಿಸಬಹುದಾಗಿರುತ್ತದೆ.

ಒಂದು ವೇಳೆ ಸ್ವಯಂ ಸೇವಾ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಲ್ಲಿ ಸೇವಾ-ಇನ್-ಆಕ್ಸನ್/ಸಿಬಿಆರ್ ಸಂಸ್ಥೆ/ಎನ್.ಎ.ಬಿ. ಸಹಯೋಗದಲ್ಲಿ ನಡೆಸಬಹುದಾಗಿರುತ್ತದೆ. ಇಲ್ಲವಾದಲ್ಲಿ ತರಬೇತಿಯನ್ನು ನೀಡಬಹುದಾಗಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ತರಬೇತಿಯ ಅವಧಿಯನ್ನು ಗರಿಷ್ಠ ಒಂದು ವರ್ಷಕ್ಕೆ ಸೀಮಿತಗೊಳಿಸುವುದು ಎಂದು ಭಾವಿಸಲಾಗಿದೆ.

ಸಮುದಾಯ ಆಧಾರಿತ ಪುನಶ್ಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ಎಲ್ಲ ಇಲಾಖೆಗಳನ್ನು ಸ್ವಯಂ ಸೇವಾ ಸಂಸ್ಥೆಗಳನ್ನು ಜನರ ಪ್ರತಿನಿಧಿಗಳನ್ನು ಸ್ವಯಂ ಸೇವಾ ಸಂಸ್ಥೆಯವರು ಭಾಗವಹಿಸುವಂತೆ ಮಾಡಿ ಅವರೆಲ್ಲರ ಸಲಹೆ ಮತ್ತು ಮಾರ್ಗದರ್ಶನ ಪಡೆದು ಅನುಷ್ಠಾನಗೊಳಿಸುವುದು.

ಈ ಯೋಜನೆಗೆ ಇಲಾಖೆಯ ಎಲ್ಲ ಯೋಜನೆಗಳನ್ನು ಮತ್ತು ಬೇರ ಬೇರೆ ಇಲಾಖೆಗಳ ಲಾಭವನ್ನು ಪಡೆದು ಅಂಗವಿಕಲ ಮಕ್ಕಳ ಮತ್ತು ವ್ಯಕ್ತಿಗಳಿಗೆ ಶಿಕ್ಷಣ ಮತ್ತು ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಿ ಕೊಡುವುದು, ವೈದ್ಯಕೀಯ ಚಿಕಿತ್ಸೆ, ಮಾರ್ಗದರ್ಶನ ಮತ್ತು ಮಾಹಿತಿಯನ್ನು ನೀಡುವುದು.

**10. ಸ್ಥಳೀಯ ಕಾರ್ಯಕರ್ತರ ಕರ್ತವ್ಯಗಳು:**

ಸ್ಥಳೀಯ ಕಾರ್ಯಕರ್ತರ ಕರ್ತವ್ಯಗಳು ಕೆಳಕಂಡಂತಿವೆ.

(1) ವಿವಿಧೋದ್ದೇಶ ಕಾರ್ಯಕರ್ತರು ಹಾಗೂ ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿಯ ಸಲಹೆ, ಸೂಚನೆ ಹಾಗೂ ಮೇಲ್ವಿಚಾರಣೆಗೆ ಒಳಪಟ್ಟ ಕರ್ತವ್ಯ ನಿರ್ವಹಿಸಬೇಕು.

(ಅ) ವಿವಿಧೋದ್ದೇಶ ಕಾರ್ಯಕರ್ತರು ಹಾಗೂ ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿಯ ಸಲಹೆ, ಸೂಚನೆ ಹಾಗೂ ಮೇಲ್ವಿಚಾರಣೆ ಒಳಪಟ್ಟು ಕರ್ತವ್ಯ ನಿರ್ವಹಿಸಬೇಕು.

(ಆ) ಗ್ರಾಮಗಳಲ್ಲಿರುವ ಅಂಗವಿಕಲ ಮಕ್ಕಳನ್ನು ಗುರುತಿಸಿ ಶಾಲೆಗಳಿಗೆ ದಾಖಲು ಮಾಡಿ ಸಮನ್ವಯ ಶಿಕ್ಷಣಕ್ಕೆ ಒಳಪಡಿಸಬೇಕು.

(ಇ) ಗ್ರಾಮಗಳಲ್ಲಿರುವ ಅಂಗವಿಕಲತೆಯುಳ್ಳ ಮಕ್ಕಳು ಹಾಗೂ ವ್ಯಕ್ತಿಗಳ ಅಗತ್ಯತೆಗಳನ್ನು ಅಂದಾಜು ಮಾಡಿ ಜಾರಿಯಲ್ಲಿರುವ ಯೋಜನೆಗಳಡಿ ಅಗತ್ಯವಿರುವ ಸಾಧನ ಸಲಕರಣೆಗಳನ್ನು ಅವರುಗಳ ವಾಸಸ್ಥಳಕ್ಕೆ ಪೂರೈಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

(ಈ) ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಅಗತ್ಯವಿರುವ ವೈದ್ಯಕೀಯ ನೆರವು, ಶಸ್ತ್ರಚಿಕಿತ್ಸೆ ಮುಂತಾದವುಗಳನ್ನು ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಘಟಕಗಳು, ತಾಲ್ಲೂಕಿನ ಆಸ್ಪತ್ರೆಗಳಲ್ಲಿ ದೊರಕಿಸಲು ಶ್ರಮಿಸತಕ್ಕದ್ದು.

(ಉ) ಗ್ರಾಮಗಳಲ್ಲಿನ ಸಂಪನ್ಮೂಲಗಳನ್ನು ಆಧರಿಸಿ ಜಾರಿಯಲ್ಲಿರುವ ಕಲ್ಯಾಣ ಯೋಜನೆಗಳಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಪ್ರೇರೇಪಿಸಿ ತೊಡಗಿಸಲು ಶ್ರಮಿಸತಕ್ಕದ್ದು.

(ಊ) ಪ್ರಾಥಮಿಕ ಶಾಲೆಗಳ ಶಿಕ್ಷಕರು, ಗ್ರಾಮ ಪಂಚಾಯತಿ ಅಧಿಕಾರಿಗಳು, ಆರೋಗ್ಯ ಕಾರ್ಯಕರ್ತರು ಹಾಗೂ

Karnataka State Government Disabled Employees Association
Renukaradhya S
Indresh R

ವೈದ್ಯರ ನಿಕಟ ಸಂಪರ್ಕ ಹೊಂದಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಇವರುಗಳ ಸೇವೆಯು ಸದಾ ಕಾಲವು ದೊರೆಯುವಂತೆ ಶ್ರಮಿಸೋಣ.

(ಋ) ಅಂಗವಿಕಲರ ಕಲ್ಯಾಣ ಇಲಾಖೆ, ವಿವಿಧೋದ್ದೇಶ ಕಾರ್ಯಕರ್ತರು, ಗ್ರಾಮ (ಮಂಡಲ) ಪಂಚಾಯತಿ ಮಟ್ಟದ ಸಮಿತಿ, ತಾಲ್ಲೂಕು ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ ಹಾಗೂ ರಾಜ್ಯ ಮಟ್ಟದ ಸಮಿತಿಯು ವಹಿಸುವ ಇನ್ನಿತರ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ವಿವಿಧೋದ್ದೇಶ ಕಾರ್ಯಕರ್ತರ ಕರ್ತವ್ಯಗಳು ಕೆಳಕಂಡಂತಿವೆ:

(ಅ) ಸ್ಥಳೀಯ ಕಾರ್ಯಕರ್ತರ ಕಾರ್ಯಚಟುವಟಿಕೆಗಳನ್ನು ಪರಾಮರ್ಶಿಸಿ ಅಗತ್ಯ ಮಾರ್ಗದರ್ಶನ ನೀಡುವುದಲ್ಲದೆ ಅವರುಗಳ ಮೇಲ್ವಿಚಾರಣೆ ಮಾಡಬೇಕು.

(ಆ) ಜಿಲ್ಲೆಯಲ್ಲಿ ವ್ಯಾಪಕ ಪ್ರವಾಸ ಕೈಗೊಂಡು ಸರ್ಕಾರ/ಸರ್ಕಾರೇತರ ಸಂಸ್ಥೆಗಳಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಜಾರಿಯಲ್ಲಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸಬೇಕು.

(ಇ) ಸಮಾಜದ ಗಣ್ಯ ವ್ಯಕ್ತಿಗಳು, ಗ್ರಾಮ (ಪಂಚಾಯತಿ) ಮಟ್ಟದ ಸಮಿತಿ, ತಾಲ್ಲೂಕು ಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳಿಗೆ ಅಂಗವಿಕಲರ ಅಗತ್ಯತೆಗಳ ಬಗ್ಗೆ ಮಾಹಿತಿಗಳನ್ನು ಒದಗಿಸುವುದಲ್ಲದೆ ಅಗತ್ಯ ಸೌಲಭ್ಯಗಳು ಹಾಗೂ ಸಾಧನ ಸಲಕರಣೆಗಳು ಸ್ಥಳೀಯವಾಗಿಯೇ ಪೂರೈಕೆಯಾಗುವಂತೆ ಶ್ರಮಿಸತಕ್ಕದ್ದು.

(ಈ) ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಶಿಕ್ಷಣ ಸಂಸ್ಥೆಗಳು ಮುಂತಾದವುಗಳನ್ನು ಸಂಪರ್ಕಿಸಿ, ಅಂಗವಿಕಲ ಮಕ್ಕಳು ಸಮನ್ವಯ ಶಿಕ್ಷಣಕ್ಕೆ ಒಳಪಡುವಂತೆ ಕ್ರಮ ತೆಗೆದುಕೊಳ್ಳತಕ್ಕದ್ದು.

(ಉ) ಜಿಲ್ಲಾ ಆಸ್ಪತ್ರೆಗಳು, ಆರೋಗ್ಯ ಶಿಬಿರಗಳು, ಮುಂತಾದವುಗಳಲ್ಲಿ ಅಂಗವಿಕಲರ ಅಗತ್ಯತೆಗಳಿಗನುಗುಣವಾಗಿ ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆ, ವೈದ್ಯಕೀಯ ಶುಶ್ರೂಷೆ ಮುಂತಾದವುಗಳನ್ನು ಸ್ಥಳೀಯ ಕಾರ್ಯಕರ್ತರ ನೆರವಿನೊಂದಿಗೆ ಮಾಡಿಸತಕ್ಕದ್ದು.

(ಊ) ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಅಂಗವಿಕಲರು ಸ್ವಯಂ ಉದ್ಯೋಗಿಗಳಾಗುವಂತೆ ಪ್ರೇರೇಪಿಸತಕ್ಕದ್ದು.

(ಋ) ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಸ್ವಸಹಾಯ ಗುಂಪುಗಳನ್ನಾಗಿ ವಿಂಗಡಿಸಿ ಸಮೂಹ ಉದ್ಯೋಗವನ್ನು ಕೈಗೊಳ್ಳುವಂತೆ ಪ್ರೇರೇಪಿಸತಕ್ಕದ್ದು.

**11. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ವಿಧಾನ:**

ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸುವ ಸ್ವಯಂ ಸೇವಾ ಸಂಸ್ಥೆಯು ಈ ಕೆಳಕಂಡ ದಾಖಲಾತಿಗಳೊಂದಿಗೆ ತ್ರಿಪತ್ರಿಯಲ್ಲಿ ಅರ್ಜಿಗಳನ್ನು (ಅನುಬಂಧ-1ರ ನಮೂನೆಯಲ್ಲಿ) ನಿರ್ದೇಶಕರು, ಅಂಗವಿಕಲರ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಬೇಕು.

(ಅ) ಈ ಯೋಜನೆಗೆ ಲಗತ್ತಿಸಿರುವ ಅನುಬಂಧ-2 ಮತ್ತು 3ರಲ್ಲಿರುವ ನಮೂನೆಗಳಲ್ಲಿ ತಾಲ್ಲೂಕಿನಲ್ಲಿರುವ ಎಲ್ಲ ಅಂಗವಿಕಲರ ಸಮೀಕ್ಷೆ.

(ಆ) ಸಂಸ್ಥೆಯ ಹಿಂದಿನ ಮೂರು ವರ್ಷಗಳ ಚಾರ್ಟರ್ಡ್ ಅಕೌಂಟೆಂಟರ ವರದಿಗಳು.

(ಇ) ಸಂಸ್ಥೆಯ ಹಿಂದಿನ ಮೂರು ವರ್ಷಗಳ ಕಾರ್ಯಚಟುವಟಿಕೆಗಳ ವರದಿಗಳು.

(ಈ) ಹಿಂದಿನ ಮೂರು ವರ್ಷಗಳಲ್ಲಿ ಇನ್ನಿತರ ಕಾರ್ಯಕ್ರಮಗಳಿಗಾಗಿ ಸರ್ಕಾರ/ಸರ್ಕಾರೇತರ/ವಿದೇಶದಿಂದ

Karnataka State Government Disabled Employees Association
Renuka Aradhya S
Indresh K

ಪಡೆದಿರುವ ಅನುದಾನದ ವಿವರಗಳು ಹಾಗೂ ಅದರ ಬಳಕೆಯ ಬಗ್ಗೆ ಚಾರ್ಟರ್ಡ್ ಅಕೌಂಟೆಂಟರ ಬಳಕೆ ಪ್ರಮಾಣ ಪತ್ರಗಳು.

(ಉ) ಸಮುದಾಯ ಆಧಾರಿತ ಪುನರ್ವಸತಿ ಯೋಜನೆಯ ಜಾರಿಗಾಗಿ ಸಂಸ್ಥೆಯಲ್ಲಿರುವ ತರಬೇತಿ ಹೊಂದಿದ ಸಿಬ್ಬಂದಿ ವರ್ಗದ ವಿವರಗಳು ಹಾಗೂ ಅವರುಗಳ ವೇತನದ ವಿವರಗಳು.

(ಊ) ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ.

(ಋ) ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರುಗಳ ಪಟ್ಟಿಯ ದೃಢೀಕೃತ ಪ್ರತಿ.

(ೠ) ಆಡಳಿತ ಮಂಡಳಿಯ ಪರವಾಗಿ ಸಹಿ ಮಾಡಲು ಅಧಿಕಾರ ಹೊಂದಿರುವ ವ್ಯಕ್ತಿಯ ಮಾದರಿ ಸಹಿಗಳು.

(ಎ) ಯೋಜನೆಯನ್ನು ಅನುಷ್ಠಾನಗೊಳಿಸಲು ಇಚ್ಛಿಸುವ ತಾಲ್ಲೂಕಿನ ಹೆಸರು.

(ಏ) ಯೋಜನೆಯ ಅನುಷ್ಠಾನಕ್ಕಾಗಿ ಕೋರಿರುವ ವೆಚ್ಚದ ಅಂದಾಜು ಪಟ್ಟಿ (ಸಂಪೂರ್ಣ ವಿವರಗಳ ಸಹಿತ)

(ಐ) ಯೋಜನೆಯು ಅನುಷ್ಠಾನದ ಉದ್ದೇಶಕ್ಕಾಗಿ ಪಡೆಯುವ ಅನುದಾನವನ್ನು ನಿಗದಿತ ಉದ್ದೇಶಕ್ಕಾಗಿಯೇ ಬಳಸಲಾಗುವುದೆಂದು ಹಾಗೂ ತಪ್ಪಿದಲ್ಲಿ ಪಡೆದಿರುವ ಮೊತ್ತವನ್ನು ಸರ್ಕಾರಕ್ಕೆ ಹಿಂತಿರುಗಿಸುವುದಲ್ಲದೇ ಸರ್ಕಾರದ ಅನುದಾನದ ದುರುಪಯೋಗದ ಆಪಾದನೆಯ ಮೇರೆಗೆ ಕ್ರಿಮಿನಲ್ ಮೊಕದ್ದಮೆಗೆ ಒಳಗಾಗಲು ಸಿದ್ಧರಿರುವುದಾಗಿ ಸಂಸ್ಥೆಯ ಆಡಳಿತ ಮಂಡಳಿಯು ರೂ.100.00 ಛಾಪಾ ಕಾಗದದಲ್ಲಿ ಮುಚ್ಚಳಿಕೆ.

(ಒ) ಇಲಾಖೆಯು ಕೋರುವ ಇನ್ನಿತರ ಮಾಹಿತಿ ಹಾಗೂ ದಾಖಲೆಗಳು.

**12. ಅರ್ಜಿಗಳನ್ನು ಪರಿಶೀಲಿಸುವ ವಿಧಾನ:**

ಸ್ವಯಂ ಸೇವಾ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳನ್ನು ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ ರವರು ಕೂಲಂಕುಷವಾಗಿ ಪರಿಶೀಲಿಸಿ ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡತಕ್ಕದ್ದು. ಈ ವಿಷಯದಲ್ಲಿ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರ ತೀರ್ಮಾನವೇ ಅಂತಿಮವಾಗಿರುವುದು. ಯೋಜನೆಯನ್ನು ಅನುಷ್ಠಾನಗೊಳಿಸುವ ತಾಲ್ಲೂಕನ್ನು ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರು ಆಯ್ಕೆ ಮಾಡತಕ್ಕದ್ದು.

**13. ಅನುದಾನ ದೊರೆಯುವ ಬಾಬತ್ತುಗಳು:**

ಯೋಜನೆಯನ್ನು ತಾಲ್ಲೂಕು ಅಥವಾ 100 ಹಳ್ಳಿಗಳನ್ನು ಒಂದು ಯೂನಿಟ್ ಎಂದು ಪರಿಗಣಿಸಿ ಮಂಜೂರು ಮಾಡಲಾಗುವುದು. ಇದರಂತೆ ಪ್ರತಿ ತಾಲ್ಲೂಕು ಅಥವಾ 100 ಹಳ್ಳಿಗಳಿಗೆ ಒಬ್ಬರಂತೆ ಸಂಘಟನೆಗಾರರು (ಕೋ ಆರ್ಡಿನೇಟರ್) ತಲಾ 5000 ಜನಸಂಖ್ಯೆಗೆ ಒಬ್ಬರಂತೆ ವಿವಿಧೋದ್ದೇಶ ಕಾರ್ಯಕರ್ತರು ತಲಾ 5000 ಜನಸಂಖ್ಯೆಗೆ ಒಬ್ಬರಂತೆ ಸ್ಥಳೀಯ ಕಾರ್ಯಕರ್ತರ ಗೌರವಧನವೂ ಸೇರಿದಂತೆ ಈ ಕೆಳಕಂಡ ಬಾಬತ್ತುಗಳಿಗಾಗಿ ಸಹಾಯಧನವು ಲಭ್ಯವಾಗುತ್ತದೆ.

| | | |
|---|---|---|
| ಅ. ತಾಲ್ಲೂಕಿಗೆ ಒಬ್ಬರಂತೆ ಸಂಘಟನೆಗಾರರು | : | ರೂ.6000-00 (ಪ್ರಮಾಣ ಭತ್ಯೆಯೂ ಸೇರಿದಂತೆ) |
| ಆ. 5000 ಜನಸಂಖ್ಯೆಗೆ ಒಬ್ಬರಂತೆ ಸ್ಥಳೀಯ ಕಾರ್ಯಕರ್ತರು | : | ಪ್ರಯಾಣ ಭತ್ಯೆಯು ಸೇರಿದಂತೆ ತಿಂಗಳಿಗೆ 800 ರೂ.ಗಳ ಗೌರವಧನ. |
| ಇ. 50000 ಜನಸಂಖ್ಯೆಗೆ ಒಬ್ಬರಂತೆ ವಿವಿಧೋದ್ದೇಶ ಕಾರ್ಯಕರ್ತರು | : | ಪ್ರಯಾಣ ಭತ್ಯೆಯು ಸೇರಿದಂತೆ ತಿಂಗಳಿಗೆ 2800 ರೂ.ಗಳ ಗೌರವಧನ. |

Karnataka State Government Disabled Employees Association
Renukaradhya S
Indrajit R

ಈ. ನಿವಾರಣಾ ಚಿಕಿತ್ಸೆ : ಸರ್ಕಾರಿ ಆಸ್ಪತ್ರೆ ಹಾಗೂ ಔಷಧಗಳ ವಾಸ್ತವಿಕ ವೆಚ್ಚ (ಬಿಲ್ಲುಗಳನ್ನು ವೈದ್ಯರು ದೃಢೀಕರಿಸಿರಬೇಕು)

ಉ. ನಿವಾರಣಾ ಚಿಕಿತ್ಸೆಗಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳ ಸಾರಿಗೆ ವೆಚ್ಚ : ವಾಸ್ತವಿಕ ವೆಚ್ಚಗಳು

ಊ. ಸ್ವಯಂ ಉದ್ಯೋಗ ಕೈಗೊಳ್ಳಲು ಅನುವಾಗುವಂತೆ ಏರ್ಪಡಿಸುವ 3 ಅಂಗವಿಕಲರ ಶಿಬಿರಗಳು : ಪ್ರತಿ ಶಿಬಿರಕ್ಕೆ ರೂ.2000.00

ಋ. ಅಂಗವಿಕಲರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಏರ್ಪಡಿಸುವ 3 ಶಿಬಿರಗಳು : ಪ್ರತಿ ಶಿಬಿರಕ್ಕೆ ರೂ.2000.00

ೠ. 3 ಆರೋಗ್ಯ ಶಿಬಿರಗಳು : ಪ್ರತಿ ಶಿಬಿರಕ್ಕೆ ರೂ.2000.00

ಎ. ಕೃತಕ ಅಂಗಾಂಗಗಳು, ಮತ್ತಿತರ ಸಾಧನ ಸಲಕರಣೆಗಳ 3 ಶಿಬಿರಗಳು : ಪ್ರತಿ ಶಿಬಿರಕ್ಕೆ ರೂ.2000.00

ಏ. ಅಂಗವಿಕಲತೆಯುಳ್ಳ ವ್ಯಕ್ತಿಗಳ ಕುಟುಂಬಗಳು, ಆರೋಗ್ಯ ಕಾರ್ಯಕರ್ತರು, ಪ್ರಾಥಮಿಕ ಶಾಲಾ ಶಿಕ್ಷಕರುಗಳ 3 ಶಿಬಿರಗಳು : ಪ್ರತಿ ಶಿಬಿರಕ್ಕೆ ರೂ.2000.00

ಐ. ತ್ರಿಚಕ್ರ ವಾಹನಗಳು, ಗಾಲಿ ಕುರ್ಚಿಗಳನ್ನು ಹೊರತುಪಡಿಸಿ, ಕೃತಕ ಅಂಗಾಂಗಗಳು, ಶ್ರವಣ ಸಾಧನಗಳು, ದೃಷ್ಟಿ ದೋಷ ಉಳ್ಳವರು ಉಪಯೋಗಿಸುವ ಬಿಳಿಕೋಲುಗಳು ಮುಂತಾದ ಸಾಧನ ಸಲಕರಣೆಗಳು (ಜಾರಿಯಲ್ಲಿರುವ ಯೋಜನೆಗಳಡಿ ಸಕಾಲದಲ್ಲಿ ಪೂರೈಕೆಯಾಗದಿದ್ದಲ್ಲಿ ಮಾತ್ರ) : ವಾಸ್ತವಿಕ ವೆಚ್ಚಗಳು

ಒ. ತರಬೇತಿ ವೆಚ್ಚ : ರೂ.50000.00

ಓ. ಆಡಳಿತ ವೆಚ್ಚಗಳು : ರೂ.10000.00

ಔ. ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರು ಯೋಜನೆ ಅನುಷ್ಠಾನಕ್ಕೆ ಅನಿವಾರ್ಯವೆಂದು ಪರಿಗಣಿಸುವ ಇನ್ನಿತರ ಬಾಬತ್ತುಗಳು : ಸಂದರ್ಭಕ್ಕೆ ತಕ್ಕಂತೆ

ಕ. ಅ ಇಂದ ಔ ವರೆಗಿನ ಬಾಬತ್ತುಗಳ ವೆಚ್ಚವನ್ನು ಹೊರತುಪಡಿಸಿ ಬಾಕಿ ಉಳಿದಿರುವ ಸಹಾಯಧನವನ್ನು ಸಂಪೂರ್ಣವಾಗಿ ಅಂಗವಿಕಲರ ಪುನರ್ವಸತಿಗಾಗಿ ಉಪಯೋಗಿಸತಕ್ಕದ್ದು.

**14. ಅನುದಾನ ಬಿಡುಗಡೆ ಮಾಡುವ ವಿಧಾನ:**

ಈ ಯೋಜನೆಯಡಿ ದೊರೆಯುವ ಅನುದಾನದ ಗರಿಷ್ಟ ಮಿತಿ ರೂ.5.00 ಲಕ್ಷಗಳು ಮಾತ್ರ. ಸಂಸ್ಥೆಯು ಪ್ರಸ್ತಾವದ ಜೊತೆಗೆ ಲಗತ್ತಿಸುವ ಅಂದಾಜು ವೆಚ್ಚದ ಶೇಕಡ 50ರಷ್ಟು ಮೊತ್ತವನ್ನು ಸ್ವಯಂ ಸೇವಾ ಸಂಸ್ಥೆಯನ್ನು ಆಯ್ಕೆ ಮಾಡಿದ ನಂತರ ಮೊದಲನೆಯ ಹಂತಕ್ಕಾಗಿ ಮಂಜೂರು ಮಾಡಲಾಗುವುದು. ಉಳಿದ ಶೇಕಡ 50ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಯು ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವ ಬಗ್ಗೆ ಮತ್ತು ಮೊದಲನೆ ಕಂತಿನ ಅನುದಾನವು ಸಂಪೂರ್ಣವಾಗಿ ವೆಚ್ಚವಾಗಿರುವ ಬಗ್ಗೆ ಸಂಬಂಧಿಸಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಮೌಲ್ಯಮಾಪನ

Karnataka State Government Disabled Employees Association
Renukaradhya S
Indesh R

ವರದಿಯನ್ನು ಪಡೆದ ನಂತರ ಮಂಜೂರು ಮಾಡಲಾಗುವುದು. ಯೋಜನೆಯು ಸಂಪೂರ್ಣವಾದ ಒಂದು ತಿಂಗಳ ಒಳಗಾಗಿ ಸ್ವಯಂ ಸೇವಾ ಸಂಸ್ಥೆಯು ಯೋಜನೆಯ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟರಿಂದ ವರದಿಗಳನ್ನು ಸಲ್ಲಿಸತಕ್ಕದ್ದು.

**15. ಯೋಜನೆಯ ಅವಧಿ:**

ಯೋಜನೆಯ ಅವಧಿಯು 12 ತಿಂಗಳುಗಳಾಗಿದ್ದು ಆಯ್ಕೆಯಾಗುವ ಸ್ವಯಂ ಸೇವಾ ಸಂಸ್ಥೆಯು ಮೊದಲನೇ ಕಂತಿನ ಅನುದಾನವು ಬಿಡುಗಡೆಯಾದ ದಿನಾಂಕದಿಂದ 12 ತಿಂಗಳ ಅವಧಿಯೊಳಗೆ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಅವಧಿಯನ್ನು ವಿಸ್ತರಿಸುವುದು ಅನಿವಾರ್ಯವೆಂದು ಮನವರಿಕೆಯಾದಲ್ಲಿ ಮಾತ್ರ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆರವರು ಈ ಅವಧಿಯನ್ನು ಯೋಜನೆಯು ಸಂಪೂರ್ಣವಾಗಿ ಅನುಷ್ಠಾನಗೊಳ್ಳುವವರೆಗೆ ವಿಸ್ತರಿಸಲು ಅಧಿಕಾರ ಹೊಂದಿರುತ್ತಾರೆ.

**16. ಯೋಜನೆಯ ಮೌಲ್ಯಮಾಪನ ವರದಿ:**

ಈ ಯೋಜನೆಗೆ ಲಗತ್ತಿಸಿರುವ ಅನುಬಂಧ-4ರಲ್ಲಿರುವಂತೆ ಮೌಲ್ಯಮಾಪನ ವರದಿಯನ್ನು ಸಂಬಂಧಿಸಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಂದ ಪಡೆದು ಎರಡನೇ ಕಂತಿನ ಅನುದಾನ ಬಿಡುಗಡೆಯ ಕೋರಿಕೆಯೊಂದಿಗೆ ಸ್ವಯಂ ಸೇವಾ ಸಂಸ್ಥೆಯು ಸಲ್ಲಿಸತಕ್ಕದ್ದು.

**17. ಅನುದಾನದ ಷರತ್ತುಗಳು:**

ಅ) ಅನುದಾನವನ್ನು ತನ್ನ ಸ್ವಂತ ಹಕ್ಕೆಂದು ಸಂಸ್ಥೆಯು ಕ್ಲೈಮು ಮಾಡುವಂತಿಲ್ಲ. ಹಣಕಾಸಿನ ಲಭ್ಯತೆಯ ಮಿತಿಗೆ ಒಳಪಟ್ಟು ಸರ್ಕಾರವು, ವಿವೇಚನಾಧಿಕಾರದಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡುವುದು.

ಆ) ಸಂಸ್ಥೆಯು ಫಲಾನುಭವಿಗಳಿಂದ ಯಾವುದೇ ವಿಧವಾದ ಶುಲ್ಕವನ್ನು ಸ್ವೀಕರಿಸತಕ್ಕದ್ದಲ್ಲ.

ಇ) ಅನುದಾನವನ್ನು ಯಾವುದೇ ಪ್ರಸಂಗದಲ್ಲಿ ಏರಿಸುವ, ಇಳಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಈ) ಇದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯ ಸರ್ಕಾರದ ಇತರ ಇಲಾಖೆಗಳಿಂದಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಿಂದಾಗಲೀ ಅಥವಾ ಸ್ವಯಂ ಸೇವಾ ಸಂಸ್ಥೆಗಳಿಂದಾಗಲೀ ಅಥವಾ ವಿದೇಶದಿಂದಾಗಲೀ ಸಂಸ್ಥೆಯು ಅನುದಾನವನ್ನು ಸ್ವೀಕರಿಸತಕ್ಕದ್ದಲ್ಲ.

ಉ) ಅನುದಾನವನ್ನು ಪೂರ್ವಾನ್ವಯವಾಗಿ ಮಂಜೂರು ಮಾಡುವಂತಿಲ್ಲ.

**18. ಸಂಸ್ಥೆಯು ನಿರ್ವಹಿಸಬೇಕಾದ ಲೆಕ್ಕಪತ್ರ ಮತ್ತಿತರ ದಾಖಲೆಗಳು:**

ಅ) ಈ ಯೋಜನೆಯಡಿ ಪ್ರಯೋಜನ ಹೊಂದುವ ಎಲ್ಲ ಫಲಾನುಭವಿಗಳ ಭಾವಚಿತ್ರ, ವೈದ್ಯಕೀಯ ಪ್ರಮಾಣ ಪತ್ರಕುಟುಂಬದ ವಾರ್ಷಿಕ ವರಮಾನ ಪ್ರಮಾಣ ಪತ್ರಗಳು ಮುಂತಾದವುಗಳನ್ನು ಒಳಗೊಂಡ ವೈಯಕ್ತಿಕ ಕಡತಗಳು.

ಆ) ಈ ಯೋಜನೆಗೆ ಸಂಬಂಧಿಸಿದಂತೆ ನಗದು ಪುಸ್ತಕ, ಬ್ಯಾಂಕ್ ಪುಸ್ತಕ, ವೋಚರು ಮುಂತಾದ ದಾಖಲೆಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.

ಇ) ಸಿಬ್ಬಂದಿಗಳ ಪ್ರವಾಸ ಕಾರ್ಯಕ್ರಮಗಳ ವಿವರಗಳು ಹಾಗೂ ದಿನಚರಿಗಳನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು.

ಈ) ಈ ಯೋಜನೆಯ ಅನುಷ್ಠಾನಕ್ಕಾಗಿ ಏರ್ಪಡಿಸಿದ ಶಿಬಿರಗಳು, ಭಾಗವಹಿಸಿದವರ ಸಂಪೂರ್ಣ ವಿವರಗಳು, ತಗುಲಿದ ವೆಚ್ಚ ಮುಂತಾದ ದಾಖಲೆಗಳು.

Karnataka State Government Disabled Employees Association
Renukaradhya S
Indresh R

ಉ) ಫಲಾನುಭವಿಗಳಿಗೆ ಒದಗಿಸಿದ ಸಾಧನ ಸಲಕರಣೆಗಳ ದಾಖಲೆಗಳು.

ಊ) ಫಲಾನುಭವಿಗಳಿಗೆ ಒದಗಿಸಿದ ನಿವಾರಣಾ ಶಸ್ತ್ರ ಚಿಕಿತ್ಸೆಯ ದಾಖಲೆಗಳು.

ಋ) ಇಲಾಖೆ/ಸರ್ಕಾರವು ಸೂಚಿಸುವ ಇನ್ನಿತರ ಲೆಕ್ಕಪತ್ರಗಳು.

ೠ) ಕರ್ನಾಟಕ ಆರ್ಥಿಕ ಸಂಹಿತೆ ಮತ್ತಿತ್ತರ ನಿಯಮಗಳ ಪ್ರಕಾರ ನಿರ್ವಹಿಸಬೇಕಾದ ಲೆಕ್ಕಪತ್ರಗಳು.

**19. ಇತರೆ ವಿಷಯಗಳು:**

ಅ) ಇಲಾಖೆ/ಸರ್ಕಾರದ ಅಧಿಕಾರಿಗಳಾಗಲೀ ಅಥವಾ ಅವರಿಂದ ನಿಯೋಜಿಸಲ್ಪಟ್ಟವರಾಗಲಿ ತನಿಖೆಗೆ ಬಂದಾಗ ಸ್ವಯಂ ಸೇವಾ ಸಂಸ್ಥೆಯು ದಾಖಲೆಗಳನ್ನು ಹಾಗೂ ಕೋರುವ ಮಾಹಿತಿಗಳನ್ನು ಒದಗಿಸತಕ್ಕದ್ದು.

ಆ) ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ತನಿಖಾಧಿಕಾರಿಗಳು ಅಥವಾ ಇಲಾಖೆ/ಸರ್ಕಾರದ ಅಧಿಕಾರಿಗಳು ನೀಡುವ ಸೂಚನೆ/ಆದೇಶ/ಸಲಹೆ ಮುಂತಾದವುಗಳನ್ನು ಸಂಸ್ಥೆಯು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಇ) ಈ ಯೋಜನೆಯ ಯಾವುದೇ ಕಂಡಿಕೆಯನ್ನು ಬದಲಾಯಿಸುವ, ತಿದ್ದುಪಡಿ ಮಾಡುವ, ಸೇರಿಸುವ ಅಥವಾ ರದ್ದುಪಡಿಸುವ ಸಂಪೂರ್ಣ ಅಧಿಕಾರವನ್ನು ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ರವರು ಹೊಂದಿರುತ್ತಾರೆ.

ಈ) ಈ ಯೋಜನೆಯನ್ನು ತರಬೇತಿ ಹೊಂದಿದ ಸಿಬ್ಬಂದಿಯನ್ನೊಳಗೊಂಡ ಸ್ವಯಂ ಸೇವಾ ಸಂಸ್ಥೆಯ ಮುಖಾಂತರ ನೇರವಾಗಿ ಜಾರಿಗೆ ತರುವಂತೆ ರೂಪಿಸಲಾಗಿದೆ. ಆದರೂ ಕೂಡ ತರಬೇತಿಗೆ ಅವಕಾಶವನ್ನು ಈ ಯೋಜನೆಯಲ್ಲಿ ಕಲ್ಪಿಸಲಾಗಿದೆ.

(ಹುಲಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Karnataka State Government Disabled Employees Association
Renukaradhya S
Indresh R

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ, ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಹೂಡಿಕೆಯ ರೂಪದಲ್ಲಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಬೆಂಗಳೂರು ಇವರ ಪತ್ರ ಸಂಖ್ಯೆ:ವಿಹಿನಾಸಇ/ಯೋಜನೆ/ವಿ.ವಿ/10/ 2013-14/1365, ದಿನಾಂಕ: 24-7-2013.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 24-7-2013ರ ಪತ್ರದಲ್ಲಿ, ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು, ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ:12-7-2013ರಂದು ಮಂಡಿಸಿರುವ 2013-14ನೇ ಸಾಲಿನ ಆಯವ್ಯಯ ಭಾಷಣದ ಕ್ರಮಸಂಖ್ಯೆ: 230ರಲ್ಲಿ, 'ವಿಕಲಚೇತನ ವ್ಯಕ್ತಿಗಳೊಡನೆ ವಿವಾಹ ಏರ್ಪಡುವ ಪ್ರಕರಣಗಳಲ್ಲಿ ಅವರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು ಹೂಡಿಕೆಯ ರೂಪದಲ್ಲಿ ನೀಡಲಾಗುವುದೆಂದು' ಘೋಷಣೆ ಮಾಡಿರುವರು.

ಇತ್ತೀಚಿನ ದಿನಗಳಲ್ಲಿ ವಿಕಲಚೇತನ ಯುವಕ/ಯುವತಿಯರನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾಗುವ ಬಗ್ಗೆ ನಿರ್ಲಕ್ಷತೆ ತೋರುತ್ತಿರುವರು. ಇದರಿಂದ ವಿಕಲಚೇತನರು ವೈವಾಹಿಕ ಜೀವನದಿಂದ ವಂಚಿತರಾಗುತ್ತಿದ್ದು ಇದರಿಂದ ಮಾನಸಿಕವಾಗಿ ತೊಂದರೆ ಅನುಭವಿಸುತ್ತಿರುವರು. ವಿಕಲಚೇತನರು ಸಹ ಸಾಮಾನ್ಯರಂತೆ ವೈವಾಹಿಕ ಜೀವನವನ್ನು ಸಾಗಿಸಲು ಸಾಧ್ಯವಾಗುತ್ತಿಲ್ಲ, ಈ ನಿಟ್ಟಿನಲ್ಲಿ ವಿಕಲಚೇತನ ಯುವಕ/ಯುವತಿಯರನ್ನು ಸಾಮಾನ್ಯ ವ್ಯಕ್ತಿಗಳು ಮದುವೆಯಾಗುವುದಕ್ಕೆ ಪ್ರೋತ್ಸಾಹ ನೀಡುವುದರಿಂದ ಹೆಚ್ಚು ಹೆಚ್ಚು ಸಾಮಾನ್ಯ ವ್ಯಕ್ತಿಗಳು ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗಲು ಮುಂದೆ ಬಂದು ವಿಕಲಚೇತನರು ವೈವಾಹಿಕ ಜೀವನ ಸುಗುಮವಾಗಿ ನಡೆಸಲು ಅನುಕೂಲವಾಗುತ್ತದೆ.

ಆದುದರಿಂದ 2013-14 ನೇ ಸಾಲಿನಿಂದ ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ಮದುವೆಯಾದ ಸಾಮಾನ್ಯ ವ್ಯಕ್ತಿ ಪಡೆಯಲು ಅನುವಾಗುವಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಮುಂದುವರೆಸುತ್ತಾ, ಪ್ರಸಕ್ತ ವರ್ಷದಲ್ಲಿ ಒಂದು ಪ್ರಕರಣಕ್ಕೆ ರೂ.50,000/-ಗಳಂತೆ 300 ವಿಕಲಚೇತನ ಯುವಕ/ಯುವತಿಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದ್ದು ಒಟ್ಟು ರೂ.150.00 ಲಕ್ಷಗಳ ಆಯವ್ಯಯದ ಅವಶ್ಯಕತೆ ಇದ್ದು, ಸದರಿ ಆಯವ್ಯಯವನ್ನು ಲೆಕ್ಕಶೀರ್ಷಿಕೆ:2235-02-101-0-52 ಯೋಜನೆ ಉಪ ಲೆಕ್ಕ ಶೀರ್ಷಿಕೆ 051 ರಡಿ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 261 ಪಿಹೆಚ್‌ಪಿ 2013, ಬೆಂಗಳೂರು**

**ದಿನಾಂಕ:28-8-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2013-14 ನೇ ಸಾಲಿನಿಂದ ವಿಕಲಚೇತನ ಯುವಕ/ ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ವ್ಯಕ್ತಿಯ ಹೆಸರಿನಲ್ಲಿ ರೂ.50,000/- ಗಳನ್ನು (ಐವತ್ತು ಸಾವಿರ ರೂಪಾಯಿಗಳನ್ನು ಮಾತ್ರ) ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ವಿಕಲಚೇತನರನ್ನು ಮದುವೆಯಾದ ಸಾಮಾನ್ಯ

..2

ಸಂಖ್ಯೆ 5256
ದಿನಾಂಕ 31.8.2013

Karnataka State Government Disabled Employees Association Renukaradhya S Indresh R

ವ್ಯಕ್ತಿ ಪಡೆಯುವ ಯೋಜನೆಗೆ ಅನುಬಂಧ-1 ರಲ್ಲಿ ವಿಧಿಸಿರುವ ಷರತ್ತು ಹಾಗೂ ಮಾರ್ಗಸೂಚಿಗಳಿಗೊಳಪಟ್ಟು ಮತ್ತು ಅನುಬಂಧ-2 ರಂತೆ ವಿಕಲಚೇತನ ವಿವಾಹ ದೃಢೀಕರಣ ಪತ್ರವನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

2013-14ನೇ (ಪರಿಷ್ಕೃತ) ಸಾಲಿಗೆ ಒಂದು ಪ್ರಕರಣಕ್ಕೆ ರೂ.50,000/-ಗಳಂತೆ 300 ವಿಕಲಚೇತನ ಯುವಕ/ಯುವತಿಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಿಸಿದ್ದು ಒಟ್ಟು ರೂ.150.00 ಲಕ್ಷಗಳ (ಒಂದು ನೂರ ಐವತ್ತು ಲಕ್ಷಗಳು ಮಾತ್ರ) ಆಯವ್ಯಯವನ್ನು ಲೆಕ್ಕಶೀರ್ಷಿಕೆ:2235-02-101-0-99 (ಯೋಜನೆ) ಉಪ ಲೆಕ್ಕ ಶೀರ್ಷಿಕೆ (100) ಧನಸಹಾಯ ಪರಿಹಾರದಡಿ ಭರಿಸತಕ್ಕದ್ದು. ಉದ್ದೇಶಿತ ಗುಂಪುಗಳಿಗೆ ಯೋಜನೆ ಕುರಿತಂತೆ ವ್ಯಾಪಕ ಪ್ರಚಾರ ನೀಡುವ ಸಂಬಂಧ ಇಲಾಖೆಯು ಪ್ರಚಾರಕ್ಕೆ ಅಗತ್ಯವಿರುವ ಹಣವನ್ನು ಈ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 40 ಐಎಂಎಂ 2013 ದಿನಾಂಕ:17.8.2013 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 562 ವೆಚ್ಚ-3 2013, ದಿನಾಂಕ:28.08.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4) ಎಲ್ಲಾ ಜಿಲ್ಲಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
5) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,ಜಿಲ್ಲಾ ಪಂಚಾಯತ್. (ನಿರ್ದೇಶಕರ ಮುಖಾಂತರ)
6) ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

Karnataka State Government Disabled Employees Association
Renukaradhya S
Indresh R

**ಸರ್ಕಾರದ ಆದೇಶ ಸಂಖ್ಯೆ: ಮಮಇ 261 ಪಿಹೆಚ್‌ಪಿ 2013, ದಿನಾಂಕ:28.08.2013 ಕ್ಕೆ ಅನುಬಂಧ-1**

**ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ ಈ ಕೆಳಗಿನಂತೆ ಷರತ್ತು ಹಾಗೂ ಮಾರ್ಗಸೂಚಿಗಳು.**

1. ವಿಕಲಚೇತನರು ಮತ್ತು ಸಾಮಾನ್ಯ ವ್ಯಕ್ತಿಗಳು ಭಾರತದ ಪ್ರಜೆಯಾಗಿರಬೇಕು. ಹಾಗೂ ಇವರು ಕರ್ನಾಟಕದಲ್ಲಿ ಕನಿಷ್ಠ ಹಿಂದಿನ 10 ವರ್ಷಗಳು ವಾಸವಾಗಿರಬೇಕು.
2. ವಿಕಲಚೇತನ ವ್ಯಕ್ತಿಗಳೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಯಾವುದೇ ಆದಾಯ ಮಿತಿ ಇರುವುದಿಲ್ಲ.
3. ವಿವಾಹವಾಗುವ ಯುವತಿಯರ ವಯಸ್ಸು 18 ಹಾಗೂ ಯುವಕರ ವಯಸ್ಸು 21 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.
4. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿಕಲಚೇತನ ವ್ಯಕ್ತಿಗಳು/ಸಾಮಾನ್ಯ ವ್ಯಕ್ತಿಗಳು 2ನೇ ಮದುವೆ ಮಾಡಿಕೊಂಡಲ್ಲಿ ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
5. ನೀಡಲಾಗುವ ಧನಸಹಾಯವನ್ನು ಐದು ವರ್ಷಗಳ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ರೂಪದಲ್ಲಿ ಇಡತಕ್ಕದ್ದು. ಹಾಗೂ ಈ ಠೇವಣಿಯಿಂದ ಬಂದ ಬಡ್ಡಿ ಹಣವನ್ನು ಯುವಕ/ಯುವತಿಯರು ಅವರ ಜೀವನ ನಿರ್ವಹಣೆಗೆ ಉಪಯೋಗಿಸತಕ್ಕದ್ದು. 5 ವರ್ಷದ ನಂತರ ಪೂರ್ಣ ಹಣ ಪಡೆಯಬಹುದು ಅಥವಾ ಮುಂದುವರೆಸುವುದು ಫಲಾನುಭವಿಯ ಇಚ್ಛೆಗೆ ಒಳಪಟ್ಟಿದೆ.
6. ವಿಕಲಚೇತನರ ಯುವಕ/ಯುವತಿಯರ ವಿಕಲಚೇತನತೆಯ ಪ್ರಮಾಣ ಶೇ.40%ಕ್ಕಿಂತ ಹೆಚ್ಚಾಗಿರತಕ್ಕದ್ದು.
7. ವಿವಾಹವಾಗುವ ಯುವಕ/ಯುವತಿಯರು ಕಡ್ಡಾಯವಾಗಿ ಸಂಬಂಧಪಟ್ಟವರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರ ನೀಡತಕ್ಕದ್ದು.
8. ವಿವಾಹವನ್ನು ವಿವಾಹ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಾಯಿಸತಕ್ಕದ್ದು.
9. ಪ್ರೋತ್ಸಾಹ ಧನವನ್ನು ಮಂಜೂರು ಮಾಡುವ ಪ್ರಾಧಿಕಾರವು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳದ್ದಾಗಿರುತ್ತದೆ.
10. ಈ ಸೌಲಭ್ಯವು ಆದೇಶ ಹೊರಡಿಸಿದ ದಿನಾಂಕದಿಂದ ಮದುವೆ ಆಗುವ ಪ್ರಕರಣಗಳಿಗೆ ಅನ್ವಯಿಸುವುದು.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
ವಿಕಲಚೇತನರ ವ್ಯಕ್ತಿಗಳನ್ನು ವಿವಾಹವಾಗುವ ಸಮಾನ್ಯ ವ್ಯಕ್ತಿಗಳಿಗೆ ಪ್ರೋತ್ಸಾಹ ಧನ ಮಂಜೂರಾತಿಗಾಗಿ ಅರ್ಜಿ

ನವ ದಂಪತಿಗಳ ಭಾವಚಿತ್ರ

ವರ್ಷ:20 –20

| | | |
|---|---|---|
| 1 | ವಿಕಲಚೇತನ ವ್ಯಕ್ತಿಯೊಡನೆ ವಿವಾಹವಾಗುವ ಸಾಮಾನ್ಯ ವ್ಯಕ್ತಿಯ ಹೆಸರು | |
| 2 | ಲಿಂಗ | |
| 3 | ಹುಟ್ಟಿದ ದಿನಾಂಕ | |
| 4 | ತಂದೆ/ತಾಯಿ/ಪೋಷಕರ ಹೆಸರು | |
| 5 | ಅಂಚೆ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 6 | ಖಾಯಂ ವಿಳಾಸ | ಗ್ರಾಮ/ಬೀದಿ<br>ತಾಲ್ಲೂಕು: ಜಿಲ್ಲೆ:<br>ಪಿನ್ |
| 7 | ವಿಕಲ ಚೇತನ ವ್ಯಕ್ತಿಯ ಹೆಸರು | |
| 8 | ಲಿಂಗ | |
| 9 | ಹುಟ್ಟಿದ ದಿನಾಂಕ | |
| 10 | ತಂದೆ/ತಾಯಿ/ಪೋಷಕರ ಹೆಸರು | |
| 11 | ಅಂಚೆ ವಿಳಾಸ | |
| 12 | ಖಾಯಂ ವಿಳಾಸ | |
| 13 | ಉದ್ಯೋಗ | ತಾಲ್ಲೂಕು: ಜಿಲ್ಲೆ:<br>ಪಿನ್ |
| 14 | ಕರ್ನಾಟಕದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತೀರಿ. | |
| 15 | ವಿವಾಹ ನೊಂದಣಿಯಾದ ಬಗ್ಗೆ ನೊಂದಣಿ ಅಧಿಕಾರಿಗಳ ದೃಢೀಕರಣ ಪತ್ರ ಸಂಖ್ಯೆ/ದಿನಾಂಕ (ದೃಢೀಕರಣ ಪ್ರತಿ ಲಗತ್ತಿಸುವುದು.) | |
| 16 | ವಿಕಲಚೇತನ ವ್ಯಕ್ತಿ/ ಬ್ಯಾಂಕ್ ಖಾತೆ ಸಂಖ್ಯೆ | |
| 17 | ಷೆಡ್ಯೂಲ್ ಬ್ಯಾಂಕಿನ ಹೆಸರು | |
| 18 | ಬ್ಯಾಂಕ್ ಶಾಖೆಯ ಹೆಸರು | |
| 19 | ಬ್ಯಾಂಕಿನ NEFT ಕೋಡ್ ಅಥವಾ IFSC: ಕೋಡ್: | NEFT ಕೋಡ್:<br>IFSC: ಕೋಡ್: |

Karnataka State Government Disabled Employees Association
Renukaradhya S
Indresh R

::ಘೋಷಣೆ::

ಶ್ರೀಮತಿ/ಶ್ರೀ________________ತಂದೆ/ತಾಯಿ/ಪೋಷಕರು________________ಆದ ನಾನು/ನಾವು ಪ್ರಮಾಣೀಕರಿಸುವುದೇನೆಂದತೆ, ಮೇಲಿನ ವಿಷಯಗಳು ನನಗೆ ತಿಳಿಸ ಮಟ್ಟಿಗೆ ಸತ್ಯವಾಗಿರುತ್ತದೆ. ಒಂದು ವೇಳೆ ಮೇಲೆ ತಿಳಿಸಿರುವ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಬಹುದು ಎಂಬುದಾಗಿ ಒಪ್ಪಿರುತ್ತೇನೆ.

ದಿನಾಂಕ:____________

ಫಲಾನುಭವಿಯ ಸಹಿ:

17/New Scheme 2013/J

# ಗೆಜೆಟೆಡ್ ಅಧಿಕಾರಿಯ ದೃಢೀಕರಣ

ಶ್ರೀಮತಿ/ಶ್ರೀ ತಂದೆ/ಪೋಷಕ ರವರು ನನಗೆ ಪರಿಚಿತರಾಗಿದ್ದು ಹಾಗೂ ಸಾಮಾನ್ಯ ವ್ಯಕ್ತಿಯಾಗಿದ್ದು ದಿನಾಂಕ: ರಂದು ಅಂಗವಿಕಲ ವ್ಯಕ್ತಿಯಾದ ಶ್ರೀ/ಶ್ರೀಮತಿ ರವರನ್ನು ವಿವಾಹವಾಗಿರುತ್ತಾರೆಂದು ದೃಢೀಕರಿಸಿದೆ.

ಸ್ಥಳ:

ದಿನಾಂಕ: ಗೆಜೆಟೆಡ್ ಅಧಿಕಾರಿಯ ಸಹಿ

ವಿವಾಹವಾಗುವ ಸಾಮಾನ್ಯ ವ್ಯಕ್ತಿಯ ಹೆಸರು:

Karnataka State Government Disabled Employees Association
Renukaradhya S
Indresh R

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 1, 2, 3ನೇ ತರಗತಿಯಲ್ಲಿ ವಿಶೇಷ ಶಿಕ್ಷಣ ಪಡೆಯುತ್ತಿರುವ ಶ್ರವಣದೋಷವುಳ್ಳ ವಿಕಲಚೇತನ ಮಕ್ಕಳಿಗೆ ಕಲಿಕೆಯ ಉನ್ನತೀಕರಣಕ್ಕಾಗಿ ಉಪಗ್ರಹ ಆಧಾರಿತ ಶಿಕ್ಷಣವನ್ನು 46 ವಿಶೇಷ ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಅನುದಾನ ಮಂಜೂರು ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಮಮಇ 166 ಪಿಹೆಚ್‌ಪಿ 2015, ದಿ:11.09.2015
2. ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ: ಇಸಿ/11/ಯೋಜನೆ/ಎಲ್‌ಜಿಡಿ/ ಹೈಸ್ಕೂಲ್/2014-15, ದಿ:03.02.2016
3. ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ: ಇಸಿ/11/ಯೋಜನೆ/ಎಲ್‌ಜಿಡಿ/ ಹೈಸ್ಕೂಲ್/2014-15/3962, ದಿ:23.02.2016

**ಪ್ರಸ್ತಾವನೆ:**

2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದ 46 ವಿಶೇಷ ಶಾಲೆಗಳಲ್ಲಿನ 5, 6, 7ನೇ ತರಗತಿಯ ಮಕ್ಕಳಿಗೆ ಕೇಂದ್ರ ಸರ್ಕಾರದ ರೂ. 2,03,36,000/- ಹಾಗೂ ರಾಜ್ಯ ಸರ್ಕಾರದ ರೂ. 1,38,92,000/- ಲಕ್ಷಗಳ ಸಹಯೋಗದೊಡನೆ ಒಟ್ಟು ರೂ. 3.63 ಕೋಟಿಗಳ ವೆಚ್ಚದಲ್ಲಿ ಉಪಗ್ರಹ ಆಧಾರಿತ ಶಿಕ್ಷಣವನ್ನು ಏರ್ಪಡಿಸುವ ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ: 2235-02-101-0-05 (ಯೋಜನೆ)ರಡಿಯಲ್ಲಿ ಒದಗಿಸಿದ ಅನುದಾನದ ಮಿತಿಯಲ್ಲಿಯೇ ಭರಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ಮೇಲೆ ಓದಲಾದ ಕ್ರ.ಸಂ. (1)ರ ಆದೇಶದಲ್ಲಿ ನೀಡಲಾಗಿರುತ್ತದೆ.

ಉಪಗ್ರಹ ಆಧಾರಿತ ಶಿಕ್ಷಣವನ್ನು 1, 2 ಮತ್ತು 3ನೇ ತರಗತಿಯ ಮಕ್ಕಳಿಗೆ ನೀಡುವಂತೆ ದಿ:08.01.2016ರಂದು ಕೇಂದ್ರ ಸರ್ಕಾರದ ಡಿ.ಎ.ಆರ್.ಪಿ.ಜಿ. ಇಲಾಖೆ, ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಸೂಚಿಸಿ, ಸದರಿ ಯೋಜನೆಗೆ 2015-16ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಾಲಿನ ರೂ. 1.00 ಕೋಟಿ ಅನುದಾನವನ್ನು ನೀಡುವುದಾಗಿ ತಿಳಿಸಿ, ರಾಜ್ಯ ಸರ್ಕಾರದ ಒಪ್ಪಿಗೆಯನ್ನು ತಿಳಿಸಲು ಕೋರಿದನ್ವಯ ಅದರಂತೆ ಒಪ್ಪಿಗೆಯನ್ನು ಸೂಚಿಸಿ, ಪರಿಷ್ಕೃತ ಪ್ರಸ್ತಾವನೆಯೊಂದಿಗೆ ಶಿಫಾರಸ್ಸು ಮಾಡಲು ಪ್ರಸ್ತಾವನೆಯನ್ನು ಮೇಲೆ ಓದಲಾದ ಕ್ರ.ಸಂ. (2)ರ ಪತ್ರದಲ್ಲಿ ಸಲ್ಲಿಸಲಾಗಿರುವ ಬಗ್ಗೆ ತಿಳಿಸಿ ಕೇಂದ್ರ ಸರ್ಕಾರದ ಸಭೆಯಲ್ಲಿ ತೀರ್ಮಾನಿಸಿದನ್ವಯ 1, 2 ಮತ್ತು 3ನೇ ತರಗತಿಯ ಮಕ್ಕಳಿಗೆ ತರಬೇತಿ ಹಮ್ಮಿಕೊಳ್ಳಲು ಹಾಗೂ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವ ಐ.ಐ.ಎಮ್. ರವರನ್ನು ನೇಮಕ ಮಾಡಿಕೊಳ್ಳಬಹುದೆಂದು ಹಾಗೂ ಐ.ಐ.ಎಮ್. ಗೆ ಕೆ.ಟಿ.ಪಿ.ಪಿ ಆಕ್ಟ್‌ನ 4(ಬಿ)ರಡಿ ವಿನಾಯಿತಿ ನೀಡುವಂತೆ ಕೋರಿ ಸದರಿ ಯೋಜನೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ. 1.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಮೇಲೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 16 ಪಿಹೆಚ್‌ಪಿ 2016, ಬೆಂಗಳೂರು, ದಿನಾಂಕ:14.03.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದ 46 ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳಲ್ಲಿನ 1, 2 ಮತ್ತು 3ನೇ ತರಗತಿಗಳಲ್ಲಿನ ಮಕ್ಕಳಿಗೆ ಉಪಗ್ರಹ ಆಧಾರಿತ ಶಿಕ್ಷಣ ನೀಡುವ ಯೋಜನೆಯನ್ನು ಐ.ಐ.ಎಂ. ರವರ ಮುಖಾಂತರ ಅನುಷ್ಠಾನಗೊಳಿಸಲು ಕೆ.ಟಿ.ಪಿ.ಪಿ ಆಕ್ಟ್ 4(ಬಿ)ರಡಿ ಒಬ್ಬರು ತಾಂತ್ರಿಕ ಪ್ರತಿನಿಧಿ ಹಾಗೂ ಶೈಕ್ಷಣಿಕ ಪ್ರತಿನಿಧಿಯೊಂದಿಗೆ ಕಿವುಡಕ್ಷೇತ್ರದಲ್ಲಿ ಅನುಭವಹೊಂದಿರುವ ಸಂಶೋಧನೆ

...2

Karnataka State Government Disabled Employees Association
Renukaradhya S
Indresh R

ಸಂಸ್ಥೆ ಪ್ರತಿನಿಧಿ ಒಳಗೊಂಡ ಮೂವರು ತಜ್ಞರ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಅನುಮೋದನೆಯೊಂದಿಗೆ ಕೆ.ಟಿ.ಪಿ.ಪಿ ಪ್ರಕ್ರಿಯೆ ಕೈಗೊಳ್ಳುವ ಹಾಗೂ ಅನುಬಂಧದಲ್ಲಿನ (ಲಗತ್ತಿಸಿದೆ) ಮಾರ್ಗಸೂಚಿಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಈ ಆರ್ಥಿಕ ವರ್ಷದಲ್ಲಿ ರೂ.1.00ಕೋಟಿ ಮೊತ್ತಕ್ಕೆ ಕೆ.ಟಿ.ಪಿ.ಪಿ ನಿಯಮ 4(ಬಿ)ರಡಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಹಾಗೂ ಈ ಯೋಜನೆಯನ್ನು 2015-16ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 2235-02-101-0-05 (ಯೋಜನೆ) ಉಪ ಶೀರ್ಷಿಕೆ 117ರಡಿಯಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಕಕಾ 18 ಆಂಆಸ 2016 ದಿನಾಂಕ:16.02.2016ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) 14/3/2016
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

Karnataka State Government Disabled Employees Association
Renukaradhya S
Indresh R

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖಿಕ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
5. ನಿರ್ದೇಶಕರು, ಪಿ.ಎಂ.ಐ. ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖಿಕ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
6. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
7. ಅಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
9. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 & 9), ವಿಧಾನ ಸೌಧ, ಬೆಂಗಳೂರು.
11. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
15. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
16. ಶಾಖಾ ಕಡತ/ ಒಡಿಪಿಸಿ/ ಹೆಚ್ಚುವರಿ ಪ್ರತಿಗಳು.

## ಷರತ್ತು ಮತ್ತು ನಿಬಂಧನೆಗಳು

- ಸದರಿ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುತ್ತಿರುವುದರಿಂದ 46 ಶಾಲೆಗಳಲ್ಲಿ ಮಾತ್ರ (ಪಟ್ಟಿ ಲಗತ್ತಿಸಿದೆ).
- ಅನುಷ್ಠಾನದ ಅವಧಿಯನ್ನು 01 ವರ್ಷಕ್ಕೆ ಕಡಿತಗೊಳಿಸುವುದು. ಹಾರ್ಡ್‌ವೇರ್ ಸಲಕರಣೆಗಳ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುವುದು.
- 1,2, ಮತ್ತು 3ನೇ ತರಗತಿಗಳಿಗೆ ಉಪಗ್ರಹ ಆಧಾರಿತ ಶಿಕ್ಷಣದಡಿ ನೀಡಲಾಗುವ ಶೈಕ್ಷಣಿಕ ಸೇವೆಗಳ ನಿಖರ ಮಾಹಿತಿಯನ್ನು ನೀಡುವುದು.
- ಅನುಷ್ಠಾನದ ವಿವಿಧ ಹಂತಗಳನ್ನು ನಿಖರವಾಗಿ ಗುರುತಿಸುವುದು.
- 01 ರಿಂದ 3ನೇ ತರಗತಿಯ ಶ್ರವಣದೋಷವುಳ್ಳ ಮಕ್ಕಳಿಗೆ ಯೋಜನೆಯ ಅನುಷ್ಠಾನದ ಕುರಿತು ಪರಿಶೀಲಿಸುವುದು.
- ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರುಗಳು ರಾಷ್ಟ್ರೀಯ ಪುನರ್ವಸತಿ ಮಂಡಳಿಯಿಂದ ಅನುಮೋದಿಸಲಾದ ಸಂಸ್ಥೆಗಳ ಮೂಲಕ ತರಬೇತಿಯನ್ನು ಹೊಂದಿರುವ ಬಗ್ಗೆ ಮತ್ತು ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳು ಅಂಗವಿಕಲರ ಅಧಿನಿಯಮದಡಿ ನೊಂದಣಿಯನ್ನು ಮಾಡಿರುವ ಬಗ್ಗೆ ಖಾತ್ರಿ ಪಡಿಸತಕ್ಕದ್ದು.
- ಅಭಿವೃದ್ಧಿ ಪಡಿಸುವ ಇ-ಕಂಟೆಂಟ್ ಮಾರ್ಗಸೂಚಿಗೆ ಅನುಗುಣವಾಗಿರತಕ್ಕದ್ದು.
- ಪಠ್ಯಕ್ರಮದ ಅಂಶಗಳು ಶ್ರವಣ ದೋಷವುಳ್ಳ ಮಕ್ಕಳ ಪಠ್ಯಕ್ರಮದ ನಿಯಮಾವಳಿಗಳಿಗೆ ಅನುಗುಣವಾಗಿರಬೇಕು.
- ಪಠ್ಯಕ್ರಮದ ಅಂಶಗಳು ಸಮುಚಿತ ಪ್ರಾಧಿಕಾರದಿಂದ ಅನುಮೋದನೆಗೊಂಡಿರಬೇಕು.

****

Karnataka State Government Disabled Employees Association
Renukaradhya S
Indresh R